*ಯೇಸು ಕ್ರಿಸ್ತನ*

# ಪ್ರಕಟನೆ

**ಲೇಖಕ:**

ಯೋಹಾನನು, ಕರ್ತನಾದ ಯೇಸು ಕ್ರಿಸ್ತನ ಮೂಲ ಅಪೋಸ್ತಲರಲ್ಲಿ ಒಬ್ಬನು

**ದಿನಾಂಕ:**

ಸುಮಾರು ಕ್ರಿ.ಶ. 96, ಆದರೆ ಕೆಲವು ಪಂಡಿತರು ಇದಕ್ಕಿಂತ ಮೂದಲೇ ಬರೆದಿರಬಹುದೆಂದು ಯೋಚಿಸುತ್ತಾರೆ.

**ವಿಷಯಗಳು:**

ಕ್ರಿಸ್ತನು ತನಗೆ ಪ್ರಕಟಿಸಿದ್ದನ್ನು ಯೋಹಾನನು ಬರೆದನು (1:1). ಇದು "ಪ್ರವಾದನೆ" (1:3). ಇದರಲ್ಲಿ ಕ್ರಿಸ್ತನು ತನ್ನ ಮಹಿಮೆಯಲ್ಲಿ ಕಾಣಿಸಿಕೊಳ್ಳುತ್ತಾನೆ. ಆತನು ಭೂರಾಜರನ್ನು ಆಳುವವನು (1:5), ಸಭೆಗಳಿಗೆ ನ್ಯಾಯತೀರಿಸುವನು (ಅಧ್ಯಾಯಗಳು 2,3), ಯೂದ ಕುಲದ "ಸಿಂಹ" (5:5), ಮಹಿಮೆಯನ್ನು ಹೊಂದಿದ ದೇವರ ಕುರಿಮರಿ (5:6), ದೇವರ ರಾಜ್ಯವನ್ನು ಆಳುವ ರಾಜನು (19:15), ಕರ್ತಾಧಿ ಕರ್ತನು (19:16), ಆದಿಯೂ ಮತ್ತು ಅಂತ್ಯವೂ, ಮೊದಲನೆಯವನೂ ಮತ್ತು ಕಡೆಯವನೂ (22:13). ಈ ಪುಸ್ತಕವು ಯೋಹಾನನು ಬರೆದ ಮೇಲೆ ಮುಂದೆ ಸಂಭವಿಸಲಿಕ್ಕಿರುವ ವಿಷಯಗಳನ್ನು ಈ ಪುಸ್ತಕವು ಒಳಗೊಂಡಿದೆ (1:1). ಇದರ ವಿಷಯ ಕ್ರಿಸ್ತನ ಎರಡನೆ ಬರೋಣ ಮತ್ತು ಅದರ ಮುಂಚೆ ಮತ್ತು ನಂತರದಲ್ಲಿ ಭೂಲೋಕದಲ್ಲಿ ಮತ್ತು ಪರಲೋಕದಲ್ಲಿ ನಡೆಯುವ ವಿಷಯಗಳಾಗಿವೆ. ಈ ಪುಸ್ತಕವು ಸಾಂಕೇತಿಕ ಭಾಷೆಯನ್ನೊಳಗೊಂಡಿದೆ, ಚಿನ್ಹೆಗಳು, ಭಾಷೆಯಲ್ಲಿ ಕೊಡುವ ಚಿನ್ಹೆಗಳು ಯಾವಾಗಲು ಅರ್ಥಮಾಡಿಕೊಳ್ಳಲು ಸುಲಭವಲ್ಲ. ಆದಾಗ್ಯೂ, ನಡೆಯುವ ವಿಷಯಗಳು ಸ್ಪಷ್ಟವಾಗಿದೆ – ಸಭೆಗಳ ಸಾಮಾನ್ಯ ಸ್ಥಿತಿ ಮತ್ತು ಯೇಸು ಕ್ರಿಸ್ತನು ಅವುಗಳಿಗೆ ಕೊಡುವ ವಾಗ್ದಾನ ಮತ್ತು ಎಚ್ಚರಿಕೆಗಳು, ಈ ಯುಗದ ಅಂತ್ಯದಲ್ಲಿ ಉಲ್ಬಣವಾಗಿ ಸಂಪೂರ್ಣತೆಗೆ ಬರುವ ದುಷ್ಟ ಕಾರ್ಯಗಳು, ಇಡೀ ಲೋಕದ ಮೇಲೆ ಕ್ರಿಸ್ತವಿರೋಧಿಯ ಆಳ್ವಿಕೆ ಮತ್ತು ದೇವರ ಜನರ ಕ್ರೂರ ಹಿಂಸೆ, ಕ್ರಿಸ್ತವಿರೋಧಿಯನ್ನು

ಹಿಂಬಾಲಿಸುವವರಿಗೆ ಆತನು ಕೊಡುವ ಶಿಕ್ಷೆ ಮತ್ತು ಭೂಮಿಯ ಮೇಲೆ ಆತನು ಕಳುಹಿಸುವ ಭಯಾನಕ ವಿಪತ್ತುಗಳು, ಭೂಲೋಕದ ಕೊಯಿಲು, ಮತ್ತು ಅಪಾರ ಶಕ್ತಿಯಿಂದ ಕೂಡಿದ ಕರ್ತನಾದ ಯೇಸುಕ್ರಿಸ್ತನ ಎರಡನೆ ಬರೋಣ ಮತ್ತು ಮಹಿಮೆಯೊಡನೆ ಈ ಲೋಕದ ಆಳ್ವಿಕೆ ಮತ್ತು ಆತನನ್ನು ಹಿಂಭಾಲಿಸುವವವರಿಗೆ ಕಾದಿರುವ ಮಹಿಯುಳ್ಳ ಭವಿಷ್ಯ. ಈ ಎಲ್ಲಾ ಪ್ರಕಟಣೆಗಳೊಂದಿಗೆ ದೇವರು ಕೊಡುವ ಅನೇಕ ವಾಗ್ದಾನಗಳು ಮತ್ತು ವಿಶ್ವಾಸಿಗಳನ್ನು ಪ್ರೋತ್ಸಾಹಿಸುವ ವಾಕ್ಯಗಳು ಮತ್ತು ಅವರನ್ನು ಸಂತೋಷಪಡಿಸುವ ಮತ್ತು ಸಮಾಧಾನವನ್ನು ನೀಡುವ ಪರಲೋಕದ ದರ್ಶನಗಳಿಂದ ಕೂಡಿದೆ.

ಈ ಪುಸ್ತಕದ ಪ್ರಧಾನ ವಿಷಯವು ಕ್ರಿಸ್ತನ ಎರಡನೆಯ ಬರೋಣ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳೆಂದು ಒಪ್ಪಿಕೊಳ್ಳಲು ಕೆಲವು ಸತ್ಯವೇದದ ಬೋಧಕರು ಒಪ್ಪದಿರುವುದು ಕೇವಲ ನ್ಯಾಯೋಚಿತವಾಗಿದೆ. ಈ ಪುಸ್ತಕದಲ್ಲಿ ಪ್ರಕಟವಾಗಿರುವ ವಿಷಯಗಳ ಬಗ್ಗೆ ಇವರ ವಿವರಣೆಯು ಮುಂದಿನ ಟಿಪ್ಪಣಿಯಲ್ಲಿ ವಿವರಿಸಿರುವ ವಿವರಣೆಗಳಿಗಿಂತಲೂ ಬೇರೆಯಾಗಿದೆ. ಯೋಹಾನನು ಕಂಡ ದರ್ಶನಗಳು ಮತ್ತು ಚಿನ್ಹೆಗಳು ಅವನ ಕಾಲಕ್ಕೆ ಸಂಬಂದಿತವಾದವುಗಳೆಂದು ಮತ್ತು ಅವುಗಳಲ್ಲಿ ಅನೇಕ ವಿಷಯಗಳು ಈಗಾಗಲೇ ನೆರವೇರಿದೆ ಎಂದು ಕೆಲವರು ಬೋಧಿಸುತ್ತಾರೆ. ಬೇರೆ ಕೆಲವರು, ಯೋಹಾನನ ಕಾಲದಲ್ಲಿ ನೆರವೇರಲು ಪ್ರಾರಂಭವಾಯಿತು ಮತ್ತು ನಿಧಾನವಾಗಿ ಮತ್ತು ಕ್ರಮೇಣವಾಗಿ ಈ ಯುಗದಲ್ಲಿ ನೆರವೇರಿತೆಂದು, ಸಭೆಗಳ ಪೂರ್ವ ಇತಿಹಾಸ ಬರೆಯಲ್ಪಟ್ಟ ಪುಸ್ತಕವೆಂದೂ ಬೋಧಿಸುತ್ತಾರೆ. ಇನ್ನೂ ಕೆಲವರು ಈ ಪುಸ್ತಕದಲ್ಲಿ ಬರೆದಿರುವ ದರ್ಶನಗಳು ಮತ್ತು ಸಾಂಕೇತಿಕ ಭಾಷೆಯನ್ನು ಅಕ್ಷರಶಃ ಘಟನೆಗಳಾಗಿ ಸೂಚಿಸಿಲ್ಲವೆಂದು, ಆದರೆ ಈ ಇಡೀ ಯುಗಕ್ಕೆ ಅನ್ವಯವಾಗುವ ಆತ್ಮೀಕ ತತ್ವಗಳನ್ನು ಮತ್ತು ಪಾಠಗಳನ್ನು ಪ್ರಕಟಿಸುತ್ತದೆ ಎಂದು ಬೋಧಿಸುತ್ತಾರೆ. ಈ ಟಿಪ್ಪಣಿಯ ಲೇಖಕನು ಈ ಪುಸ್ತಕದ ಪಠ್ಯದೊಂದಿಗೆ ಈ ಯಾವುದೇ ವಿಧಾನದ ವ್ಯಾಖ್ಯಾಯನವನ್ನು ಒಪ್ಪುವುದಿಲ್ಲ. ಹೌದು ಸತ್ಯವೇದದ ಪ್ರತಿಯೊಂದು ಭಾಗದಲ್ಲೂ ಆತ್ಮೀಯ ತತ್ವಗಳು ಮತ್ತು ಪಾಠಗಳು, ಅದು ಚರಿತ್ರೆಯಾಗಿರಬಹುದು, ಭವಿಷ್ಯದಲ್ಲಿ ನಡೆಯಬುಹುದಾದ ಘಟನೆಗಳಿರಬಹುದು, ಪದ್ಯ ಅಥವಾ ನೇರವಾದ ಸೂಚನೆಗಳನ್ನು ಕೊಡುವ ಭಾಗಗಳ ಹಾಗೆ ಈ ಪುಸ್ತಕದಲ್ಲಿಯೂ ಇದೆ. ಆದರೆ ಈ ಪುಸ್ತಕದಲ್ಲಿ ಪ್ರಕಟವಾಗಿರುವ ಕಾರ್ಯಗಳು ನಿಜವಾಗಿಯೂ ಭವಿಷ್ಯದಲ್ಲಿ ನಡೆಯಬಹುದಾದ ನಿಜ ಘಟನೆಗಳನ್ನು ಸೂಚಿಸುವದಿಲ್ಲವೆಂದಲ್ಲ. ನಿಜ ಘಟನೆಗಳನ್ನು ಸೂಚಿಸಲು ಚಿನ್ಹೆಗಳನ್ನು ಸತ್ಯವೇದದ ಇತರ ಭಾಗಗಳಲ್ಲಿಯೂ ಉಪಯೋಗಿಸಲಾಗಿದೆ ಮತ್ತು ಈ ಪುಸ್ತಕದಲ್ಲಿರುವುದು ನಿಜವಲ್ಲ ಎಂದು ಯೋಚಿಸಲು ಯಾವುದೇ ಉತ್ತಮ

ಕಾರಣವಿಲ್ಲ.

# 1₁

**1:1** ಪ್ರಕಟನೆ: ಈ ಪುಸ್ತಕವು ಮನುಷ್ಯರ ಆಮಂತ್ರಣವಲ್ಲ, ಇದು ಪರಲೋಕದ ಕೊಡುಗೆಯಾಗಿದೆ. ಇದರ ಮೂಲ ದೇವರು ತಾನೇ ಆಗಿದ್ದಾನೆ, ಯಾವ ಮನುಷ್ಯನ ಮೆದಳಿನಿಂದಲೂ ಬಂದದಲ್ಲ. ಯೋಹಾನನು ಚಿನ್ಹೆಗಳನ್ನು, ಚಿತ್ರಗಳನ್ನು ಮತ್ತು ಈ ಪುಸ್ತಕದ ವಾಕ್ಯಗಳನ್ನು ಬೇರೆ ಯಾವ ಪುಸ್ತಕಗಳಿಂದಲೂ ತೆಗೆದುಕೊಳ್ಳಲಿಲ್ಲ. ಕರ್ತನಾದ ಯೇಸು ಇದನ್ನೆಲ್ಲ ಅವನಿಗೆ ಪ್ರಕಟಿಸಿದನು.

*"ತೋರಿಸುವದಕ್ಕಾಗಿ"*– ಭವಿಷ್ಯದ ಕಾರ್ಯಗಳನ್ನು ಪ್ರಕಟಿಸಲು ದೇವರು ಈ ಪುಸ್ತಕವನ್ನು ಕೊಟ್ಟನು, ಅದನ್ನು ಮುಚ್ಚಿಡುವದಕ್ಕಾಗಿ ಅಲ್ಲ, ಇದನ್ನು ನಾವು ತಿಳಿದುಕೊಳ್ಳಬೇಕೆಂದು, ಇದರಿಂದ ನಾವು ಗೊಂದಲಕ್ಕೀಡಾಗಬೇಕೆಂದಲ್ಲ.

*"ಸೇವಕರು"*– ಕ್ರಿಸ್ತನಲ್ಲಿರುವ ವಿಶ್ವಾಸಿಗಳೆಲ್ಲರೂ ದೇವರ ಸೇವಕರು ಅಥವಾ "ದಾಸರು" ಎಂದು ಪೌಲನು ರೋಮಾ 6:17-22 ರಲ್ಲಿ ಹೇಳುತ್ತಾನೆ (ಗ್ರೀಕ್ ಪದವು ಎರಡು ಅರ್ಥವನ್ನೂ ಕೊಡುತ್ತದೆ).

*"ಬೇಗನೆ"*– ಈ ಪುಸ್ತಕವು ಯೋಹಾನನ ಕಾಲದಲ್ಲಿ ಅಥವಾ ನಂತರದ ಸಮೀಪದಲ್ಲಿ ನೇರವೇರಿತೆಂದು ಅಥವಾ ನೆರವೇರಲು ಪ್ರಾರಂಭವಾಯಿತೆಂದು ಇದರ ಅರ್ಥವಲ್ಲ. 22:7,12,20 ಹೋಲಿಸಿರಿ – ಮೂರು ಸಾರಿ ಯೇಸು ನಾನು "ಬೇಗನೆ ಬರುತ್ತೇನೆ" ಎಂದು ಹೇಳಿದನು, ಆದರೆ ಯೋಹಾನನ ದಿನಗಳಲ್ಲಿ ಬರಲಿಲ್ಲ ಅಥವಾ ನಂತರದ ದಿನಗಳಲ್ಲಿ ಬರಲಿಲ್ಲ ಅಥವಾ ನಮ್ಮ ದಿನಗಳಲ್ಲಿಯೂ ಬರಲಿಲ್ಲ. ಹಾಗಾದರೆ "ಬೇಗನೆ" ಇದರ ಅರ್ಥವೇನು? ವ್ಯಾಖ್ಯಾಯನಕಾರರು ವಿವಿಧ ವಿವರಣೆಗಳನ್ನು ಕೊಡುತ್ತಾರೆ. ದೇವರ ದೃಷ್ಟಿಯಲ್ಲಿ ಬೇಗನೆ ಎಂಬ ಪದವು (2 ಪೇತ್ರ 3:8 – ಯೋಹಾನನ ದಿನಗಳಿಂದ ನಮ್ಮ ದಿನಗಳವರೆಗೆ ಎರಡು ದಿನ ಕಡಿಮೆ. ಕೀರ್ತನೆ 90:4 ಟಿಪ್ಪಣಿ ನೋಡಿರಿ). ಅಥವಾ ಭಾಷಾಂತರವಾಗಿರುವ ಗ್ರೀಕ್ ಭಾಷೆಯ "ಬೇಗನೆ" ಎಂಬ ಪದವು "ಇದ್ದಕ್ಕಿಂದಂತೆ" ಎಂಬ ಅರ್ಥವನ್ನು ಕೊಡಬಹುದು (ನಡೆಯಬೇಕಾದ ಕಾರ್ಯಗಳು ನಡೆಯಲು ಪ್ರಾರಂಭವಾದಾಗ ಇದ್ದಕ್ಕಿಂದಂತೆ ಕಾರ್ಯಗಳು ನಡೆಯುವವು – 1 ಥೆಸ 5:2). ಅಥವಾ ಈ ಯುಗ

ಅಂತ್ಯವಾಗುವ ದರ್ಶನವನ್ನು ಯೋಹಾನನು ಮುಂಚೆಯೇ ಕಂಡನು – ಆ ದೃಷ್ಟಿಯಲ್ಲಿ ಕಾರ್ಯಗಳು ಬಹುಬೇಗ ನಡೆಯುವದಕ್ಕಿದ್ದವು. ಅಥವಾ ಈ ಪುಸ್ತಕದಲ್ಲಿರುವ ಸಂಗತಿಗಳು ಯಾವಾಗಲೂ ಸನ್ನಿಹಿತವಾಗಿದೆ ಎಂದು ಸೂಚಿಸಲು ದೇವರು “ಬೇಗನೆ” ಎಂಬ ಪದವನ್ನು ಉಪಯೋಗಿಸಿರಬಹುದು (“ಸಮಯವು ಸಮೀಪವಾಗಿದೆ” ವ.3) – ಅವು ಯಾವಾಗ ಬೇಕಾದರೂ ಪ್ರಾರಂಭವಾಗಬಹುದು ಮತ್ತು ಪ್ರತಿ ಯುಗದಲ್ಲಿನ ವಿಶ್ವಾಸಿಗಳು ಎಚ್ಚರಿಕೆಯಿಂದಿರಬೇಕು ಮತ್ತು ಕರ್ತನ ಬರೋಣಕ್ಕೆ ಸಿದ್ಧವಾಗಿರಬೇಕು (ಮತ್ತಾಯ 24:36,42-44).

*“ಸೂಚಿಸಲಾಗಿದೆ”*– ಇಂಗ್ಲಿಷ್ ಭಾಷೆಯಲ್ಲಿ ಈ ಪದದ ಅರ್ಥ ಮಾತಿನಿಂದ, ಚಟುವಟಿಕೆಯಿಂದ ಅಥವಾ ಸೂಚನೆಯಿಂದ ತಿಳಿಯಪಡಿಸುವುದು. ಪ್ರಕಟನೆಯ ಪುಸ್ತಕದಲ್ಲಿ ದೇವರು ನಮಗೆ ತಿಳಿಸಬೇಕಾದ ಪ್ರಕಟನೆಗಳನ್ನು ತಿಳಿಸಲು ಸರಳ ವಾಕ್ಯದ ವಿವರಣೆಯೊಂದಿಗೆ ಅನೇಕ ಸೂಚನೆ ಮತ್ತು ಚಿನ್ಹೆಗಳನ್ನು ಉಪಯೋಗಿಸಲಾಗಿದೆ.

*“ದೇವದೂತ”*– “ದೇವದೂತ” ಮತ್ತು “ದೇವದೂತರು” ಎಂಬ ಪದಗಳನ್ನು ಸುಮಾರು 80 ಸಾರಿ ಈ ಪುಸ್ತಕದಲ್ಲಿ ಉಪಯೋಗಿಸಲಾಗಿದೆ, ಮತ್ತು 300 ಸಾರಿ ಇಡೀ ಸತ್ಯವೇದದಲ್ಲಿ ಉಪಯೋಗಿಸಲಾಗಿದೆ. ಅವು ಸಾಧಾರಣವಾಗಿ ಮನುಷ್ಯರ ಕಣ್ಣಿಗೆ ಕಾಣದ ಆತ್ಮ ಜೀವಿಗಳು, ಆದರೆ ಅವು ಮನುಷ್ಯ ರೂಪದಲ್ಲಿ ಆಗ್ಗಾಗ್ಗೆ ಕಾಣಿಸಿಕೊಳ್ಳುತ್ತವೆ. ಅಸಂಖ್ಯಾತವುಳ್ಳ ದೂತರಿದ್ದಾರೆ – 5:11. **2**

**1:2** *“ದೇವರ ವಾಕ್ಯ” ಮತ್ತು “ಯೇಸು ಕ್ರಿಸ್ತನು ಹೇಳಿದ ಸಾಕ್ಷಿ”*–ಇಲ್ಲಿ ಪ್ರಕಟನೆಯ ಪುಸ್ತಕವನ್ನು ಸೂಚಿಸುತ್ತವೆ. ಕರ್ತನಾದ ಯೇಸುವು ದೇವರ ಕಡೇಯ ಪ್ರವಾದಿಯಾಗಿದ್ದನು – ಟಿಪ್ಪಣಿಗಾಗಿ ಧರ್ಮೋ 18:18-19; ಮತ್ತಾಯ 1:1; ಯೋಹಾನ 7:16; ಇಬ್ರಿ 1:2 ನೋಡಿರಿ. ಆತನು ಪ್ರಾರಂಭಿಸಿದ ಈ ಸೇವೆಯನ್ನು ಆತನು ಮುಂದುವರಿಸಿದನು. ಇದು ಆತನ ಸಂಪೂರ್ಣ ಅಧಿಕಾರದಿಂದ ಬರುತ್ತದೆ. **3**

**1:3** *“ಧನ್ಯರು”*– ಈ ಪುಸ್ತಕದಲ್ಲಿರುವ ಸತ್ಯಗಳನ್ನು ಓದಿ ಅದಕ್ಕೆ ವಿಧೇಯರಾಗುವವರಿಗೆ ಈ ಆಶೀರ್ವಾದಗಳು ಬರುತ್ತವೆ. ಕೇವಲ ದೇವರ ರಹಸ್ಯಗಳನ್ನು ತಿಳಿದುಕೊಳ್ಳಲು ಓದುವದರಿಂದ ಮತ್ತು ತಿಳಿದುಕೊಳ್ಳಲು ಪ್ರಯತ್ನಿಸುವದರಿಂದ ಆಶೀರ್ವಾದವು ಬರುವದಿಲ್ಲ. “ಧನ್ಯರು” –ಎಂಬ ಟಿಪ್ಪಣಿಗಾಗಿ ಆದಿ 12:1-3; ಸಂಖ್ಯಾ 6:22-27; ಕೀರ್ತನೆ 1:1-3; ಮತ್ತಾಯ 5:3-10 ನೋಡಿರಿ. ಈ ಪುಸ್ತಕದ ಮೇಲೆ ದೇವರು ವಿಶೇಷವಾದ

ಆಶೀರ್ವಾದವನ್ನು ವಾಗ್ದಾನ ಮಾಡಿರುವುದರಿಂದ ನಾವೆಲ್ಲರೂ ಈ ಪುಸ್ತಕವನ್ನು ಓದಲು ಮತ್ತು ಅದರಲ್ಲಿರುವ ಸತ್ಯಾಂಶವನ್ನು ನಮ್ಮ ಜೀವಿತಕ್ಕೆ ಅನ್ವಯಿಸಿಕೊಳ್ಳಲು ಉತ್ಸಾಹದಿಂದಿರಬೇಕು.

*"ಪ್ರವಾದನೆ"*– 19:10; 22:7,10,18,19. ಪ್ರವಾದನೆ ಎಂದು ಕರೆಸಿಕೊಳ್ಳುವ ಹೊಸ ಒಡಂಬಡಿಕೆಯ ಏಕ ಮಾತ್ರ ಪುಸ್ತಕವಾಗಿದೆ. (ಮತ್ತು ಇಡೀ ಸತ್ಯವೇದದಲ್ಲಿ) ಪ್ರತಿಯೊಂದು ಪುಸ್ತಕವು ದೇವಪ್ರೇರಿತವಾಗಿದೆ.

*"ಸಮಯವು ಸಮೀಪವಾಗಿದೆ"*– ಈ ಮಾತುಗಳು (ವ.1 ರಲ್ಲಿರುವ "ಬೇಗನೆ" ಎಂಬ ಪದದ ಹಾಗೆ) ಯೋಹಾನನು ತನ್ನ ಜೀವನದ ಕಡೇಯ ದಿನಗಳಲ್ಲಿ ಇವುಗಳನ್ನು ಬರೆದಾಗ ಪುಸ್ತಕದಲ್ಲಿ ಪ್ರಕಟವಾದ ಸಂಗತಿಗಳು ಇನ್ನು ಪ್ರಾರಂಭವಾಗಿರಲಿಲ್ಲ ಎಂಬುದನ್ನು ಸೂಚಿಸುತ್ತದೆ.

*"ಸಮೀಪಿಸಿದೆ"*– 22:10; ರೋಮಾ 13:12; ಮತ್ತಾಯ 24:33; 1 ಪೇತ್ರ 4:7; ಯೋವೇಲ 1:15 ಹೋಲಿಸಿರಿ. **4**

**1:4** *"ಯೋಹಾನ"*– ಮುನ್ನುಡಿಯನ್ನು ನೋಡಿರಿ.

*"ಏಳು ಸಭೆಗಳು"*– ವ.11. ಏಷ್ಯಾ ಸೀಮೆಯಲ್ಲಿ ಏಳಕ್ಕಿಂತಲೂ ಹೆಚ್ಚು ಸಭೆಗಳಿದ್ದವು (ಉದಾಹರಣೆಗಾಗಿ, ಕೊಲೊಸ್ಸೆಯಲ್ಲಿದ್ದ ಸಭೆ ಸಹ ಅಲ್ಲಿ ಇತ್ತು). ಆದರೆ ಎಲ್ಲಾ ಸಭೆಗಳನ್ನು ಪ್ರತಿನಿಧಿಸಲು ದೇವರು ಏಷ್ಯಾದ ಈ ಏಳು ಸಭೆಗಳನ್ನು ಆರಿಸಿಕೊಂಡನು (ಮತ್ತು ಸಂದೇಹವೇ ಬೇಡ, ಪ್ರಪಂಚದಾದ್ಯಂತ – ವ.20 ರ ಟಿಪ್ಪಣಿ).

*"ಏಷ್ಯಾ"*– ಅಪೊ 16:6 ರ ಟಿಪ್ಪಣಿ.

*"ಕೃಪೆ ಮತ್ತು ಶಾಂತಿ"*– ರೋಮಾ 1:7. ಕೃಪೆ ಮತ್ತು ಶಾಂತಿಯ ಮೂಲವು ತ್ರಯೈಕ ದೇವರದಾಗಿದೆ ಎಂದು ಯೋಹಾನನು ಸೂಚಿಸುತ್ತಾನೆ (ತ್ರಯೈಕತ್ವದ ವಿಷಯವಾದ ಟಿಪ್ಪಣಿಗಾಗಿ ಮತ್ತಾಯ 3:16-17 ನೋಡಿರಿ). "ವರ್ತಮಾನ ಭೂತ ಭವಿಷತ್ಕಾಲಗಳಲ್ಲಿರುವಾತನು" ಎಂದರೆ ತಂದೆಯಾದ ದೇವರು.

*"ಏಳು ಆತ್ಮಗಳು"*– 3:1; 4:5; 5:6. ಈ ಏಳು ಆತ್ಮಗಳು ತಂದೆ ಮತ್ತು ಮಗನೊಂದಿಗೆ ಈ ದೈವಿಕ ಆಶೀರ್ವಾದದೊಂದಿಗೆ ಜೋಡಿಸಲ್ಪಟ್ಟಿವೆ ಮತ್ತು ಸಭೆಗಳಿಗೆ ಕೃಪೆ ಮತ್ತು ಶಾಂತಿಯ ಮೂಲವಾಗಿ ಕಳುಹಿಸಲ್ಪಟ್ಟಿವೆ (2 ಕೊರಿಂಥ 13:14; ಮತ್ತಾಯ 28:19 ಹೋಲಿಸಿರಿ). ಆದ್ದರಿಂದ ಅವುಗಳು ದೇವರ ಪರಿಶುದ್ಧಾತ್ಮನನ್ನು ಸೂಚಿಸುತ್ತಿದೆ ಎಂದು

ನಾವು ನಿಶ್ಚಯವಾಗಿ ಹೇಳಬಹುದು (ಯೋಹಾನ 14:16-17). ಆತನು ಏಳುಪಾಲಿನ ಆತ್ಮನು. "ಏಳು" ಎಂಬ ಸಂಖ್ಯೆಯನ್ನು ಈ ಪುಸ್ತಕದಲ್ಲಿ ಅನೇಕ ಸಾರಿ ಪರಿಪೂರ್ಣತೆಯ, ಪೂರ್ಣತೆ, ಸಂಪೂರ್ಣತೆಯ ಚಿನ್ಹೆಯನ್ನಾಗಿ ಉಪಯೋಗಿಸಲ್ಪಟ್ಟಿದೆ (ವಚನಗಳು 11,12,16,20; 4:5; 5:1,6; 8:2; 10:3; 12:3; 13:1; 15:1,7 ಹೋಲಿಸಿರಿ). **5**

**1:5** *"ಯೇಸು ಕ್ರಿಸ್ತನಿಂದ"*– ಸತ್ಯವನ್ನು ತಿಳಿದವನು ಮತ್ತು ಅದನ್ನು ಪ್ರಕಟಿಸುವವನನ್ನು ಸಾಕ್ಷಿ ಎಂದು ಪರಿಗಣಿಸಲಾಗುತ್ತದೆ. ನಂಬಿಗಸ್ತನು ಸತ್ಯವನ್ನು ಯಾವುದೇ ರೀತಿಯಲ್ಲಿ ತಿರುಚುವದಿಲ್ಲ, ತಿಳಿಯಬೇಕಾಗಿರುವ ಯಾವುದನ್ನು ಬಚ್ಚಿಡುವದಿಲ್ಲ. ನಾವು ಯಾವುದನ್ನು ಸರಿಯಾಗಿ ಕೇಳಿಸಿಕೊಳ್ಳಬೇಕೆಂದು ಯೇಸು ಕ್ರಿಸ್ತನು ಹೇಳುತ್ತಾನೆ ಮತ್ತು ನಮ್ಮ ಒಳ್ಳೆಯದಕ್ಕಾಗಿರುವ ಯಾವುದನ್ನು ಹಿಂದಿಟ್ಟುಕೊಳ್ಳುವದಿಲ್ಲ.

*"ಸತ್ತವರೊಳಗಿಂದ ಮೊದಲು ಎದ್ದು ಬಂದವನು"*– "ಮೊದಲನೆಯವನು" ಎಂಬುದು ಪೂರ್ವಶ್ರೇಷ್ಠತೆ ಮತ್ತು ಪ್ರಾಬಲ್ಯವನ್ನು ಸೂಚಿಸುವ ಗೌರವಾನ್ವಿತ ಪದವಿ (ಕೊಲೊ 1:18; ಕೀರ್ತನೆ 89:27). "ಕ್ರಿಸ್ತನು ಸತ್ತವರೊಳಗಿಂದ ಎದ್ದಿದ್ದಾನೆ" – (ಮತ್ತಾಯ 28:6; 1 ಕೊರಿಂಥ 15:1-8) ಮತ್ತು ಇದುವರೆಗೆ ಎತ್ತಲ್ಪಟ್ಟ ಎಲ್ಲರಿಗಿಂತಲೂ ಅತ್ಯುನ್ನತ ಸ್ಥಾನವನ್ನು ಪಡೆದಿದೆ (ಫಿಲಿಪ್ಪಿ 2:9-11).

*"ಭೂರಾಜರ ಒಡೆಯನು"*– 19:16; ಜ್ಞಾನೋ 21:1; ದಾನಿ 4:34-35; 5:21. ಈ ಪುಸ್ತಕದ ಘಟನೆಗಳಲ್ಲಿರುವ ಭೂರಾಜರು ತಾವೇ ಈ ಭೂಮಂಡಲವನ್ನು ನಿಯಂತ್ರಿಸುತ್ತಿದ್ದೇವೆಂದು ಯೋಚಿಸುತ್ತಾರೆ ಆದರೆ ವಾಸ್ತವವಾಗಿ ಅವರಿಗೆ ಕಾಣದ ಒಡೆಯನಾದ ಕರ್ತನಾದ ಯೇಸು ಕ್ರಿಸ್ತನು ಅವರನ್ನು ನಿಯಂತ್ರಿಸುತ್ತಿದ್ದಾನೆ. ಯೋಹಾನ 17:2; ಮತ್ತಾಯ 28:18 ನೋಡಿರಿ.

*"ನಮ್ಮನ್ನು ಪ್ರೀತಿಸಿದನು"*– ರೋಮಾ 5:8; 8:37; ಗಲಾ 2:20; ಎಫೆ 3:18-19; 5:2. ಕೆಲವು ಗ್ರೀಕ್ ಹಸ್ತಪ್ರತಿಗಳಲ್ಲಿ ಕ್ರಿಯಾ ಪದವು ವರ್ತಮಾನ ಕಾಲದಲ್ಲಿದೆ.

*"ನಮ್ಮನ್ನು ತೊಳೆದನು"*– 1 ಕೊರಿಂಥ 6:11; 1 ಯೋಹಾನ 1:7.

*"ರಕ್ತ"*– ಮತ್ತಾಯ 26:28; ರೋಮಾ 3:25; ಇಬ್ರಿ 9:12; 10:19. **6**

**1:6** *"ರಾಜರು"*– 2:26-27; 3:21; 20:4; 2 ತಿಮೊ 2:12; ಮತ್ತಾಯ 19:28-30.

*“ಯಾಜಕರು”*– 5:10; 7:15; 1 ಪೇತ್ರ 2:5,9.

*“ಆತನಿಗೆ ಘನ ಮಹತ್ವಗಳಿರಲಿ”*– ಯೋಹಾನ 12:28; ರೋಮಾ 11:36; 16:27; ಯೂದ 25.

*“ಆಮೆನ್”*– ಈ ಪದವು ಸತ್ಯ ಎಂಬ ಅರ್ಥವನ್ನು ಕೊಡುವ ಇಬ್ರಿಯ ಭಾಷೆಯಿಂದ ಬಂದಿದೆ ಮತ್ತು “ಹಾಗೆಯೇ ಆಗಲಿ” ಎಂಬ ಅರ್ಥವನ್ನು ಕೊಡುತ್ತದೆ. **7**

**1:7** ಈ ಪುಸ್ತಕದ ಪ್ರಧಾನ ವಿಷಯವನ್ನು ಯೋಹಾನನು ಪ್ರಕಟಿಸುತ್ತಾನೆ – 2:25; 3:3,11; 11:15; 14:14-16; 16:15; 17:14; 19:11; 22:7,12,20.

*“ಆತನು ಬರುತ್ತಿದ್ದಾನೆ”*– ಮತ್ತಾಯ 16:27; ಯೋಹಾನ 14:3; ಅಪೊ 1:11.

*“ಮೇಘಗಳೊಂದಿಗೆ”*– ದಾನಿ 7:13; ಮತ್ತಾಯ 24:30; 26:64; 1 ಥೆಸ 4:16-17.

*“ಆತನನ್ನು ಇರಿದವರು”*– ಯೋಹಾನ 19:34,37; ಕೀರ್ತನೆ 22:16; ಜೆಕರ್ಯ 12:10.

*“ಎದೆಬಡಕೊಳ್ಳುವರು”*– ಮತ್ತಾಯ 24:30; ಜೆಕರ್ಯ 12:10-14. **8**

**1:8** *“ಆದಿಯೂ ಅಂತ್ಯವೂ”*– ಇಲ್ಲಿ ಕರ್ತನಾದ ದೇವರು ಮಾತನಾಡುತ್ತಾನೆ. 22:13 ರಲ್ಲಿ ಕರ್ತನಾದ ಯೇಸುವು ತನ್ನ ಬಗ್ಗೆ ಇದೇ ಪದಗಳನ್ನು ಉಪಯೋಗಿಸುತ್ತಾನೆ. ಆಲ್ಫ ಇದು ಗ್ರೀಕ್ ಭಾಷೆಯ ಮೊದಲ ಅಕ್ಷರ, ಒಮೇಗ ಕಡೆಯ ಅಕ್ಷರ. ದೇವರು ಪ್ರಾರಂಭವೂ (ಎಲ್ಲಾ ಜೀವಿಗಳಿಗೆ ಜೀವವನ್ನು ಕೊಟ್ಟಾತನು) ಮತ್ತು ಎಲ್ಲಾ ಜೀವಿಗಳ ಅಂತ್ಯ. ರೋಮಾ 11:36; ಯೆಶಾಯ 44:6 ಹೋಲಿಸಿರಿ. **9**

**1:9** ಈ ಲೋಕದಲ್ಲಿ ಕರ್ತನಾದ ಯೇಸುವಿನ ರಾಜ್ಯದಲ್ಲಿ ಯಾರು ಜೊತೆಗಿರುತ್ತಾರೆಂಬುದನ್ನು ಗಮನಿಸಿ.

*“ಹಿಂಸೆ”*– 2:9-10; 7:14; ಮತ್ತಾಯ 5:10; ಯೋಹಾನ 16:33; ಅಪೊ 14:22; ರೋಮಾ 8:17; 1 ಪೇತ್ರ 4:1,12.

*“ತಾಳ್ಮೆಯಿಂದ ಸಹಿಕೊಳ್ಳುವುದು”*– 2:2-3,19; 3:10; 13:10; 14:12; ರೋಮಾ 5:3-4; 2 ಕೊರಿಂಥ 1:6; 2 ತಿಮೊ 2:12; ಇಬ್ರಿ 6:12; 10:36; ಯಾಕೋಬ 1:3.

*“ಪತ್ಮೋಸ್”*– ಈಗಿನ ಕಾಲದ ಟರ್ಕಿ ದೇಶದ ಬಳಿಯಲ್ಲಿರುವ ಒಂದು ಚಿಕ್ಕ ದ್ವೀಪ, ಎಫೆಸದಿಂದ ನೈರುತ್ಯ ದಿಕ್ಕಿಗೆ 80 ಕಿ.ಮೀ. ವಿಶೇಷವಾಗಿ, ದೇವರ ವಾಕ್ಯವನ್ನು ಮತ್ತು ಕ್ರಿಸ್ತನ

ಸುವಾರ್ತೆಯನ್ನು ಸಾರುತ್ತಿದುದ್ದರಿಂದ ರೋಮನ್ ಅಧಿಕಾರಿಗಳು ಯೋಹಾನನ್ನು ಬಹಿಷ್ಕಾರ ಮಾಡಿದ್ದರು. **10**

**1:10** *"ದೇವರಾತ್ಮ ಪರವಶನಾಗಿ"*– 4:2; 17:3; 21:10. ದೇವರಾತ್ಮನು ಯೋಹಾನನಿಗೆ ಅಸಾಧಾರಣ ಆತ್ಮೀಕ ಅನುಭವವನ್ನು, ಕಾಣದ ದರ್ಶನವನ್ನು ಕೊಟ್ಟನು. ಯೆಹೆಜ್ಕೇಲ 1:1; ದಾನಿ 8:1; ಅಪೊ 10:10-11.

*"ಕರ್ತನ ದಿನ"*– ಭಾನುವಾರ, ವಾರದ ಮೊದಲನೆಯ ದಿನ, ಯೇಸು ಸತ್ತವರೊಳಗಿಂದ ಎದ್ದು ಬಂದ ದಿನ – ಮತ್ತಾಯ 28:1-6. **11**

**1:11** ವ.4 ರ ಟಿಪ್ಪಣಿ.

*"ಏಳು"*– ವ.4 ರ ಟಿಪ್ಪಣಿ. **12**

**1:12** *"ಚಿನ್ನದ ದೀಪಸ್ತಂಭಗಳು"*– ಏಳು ಸಭೆಗಳನ್ನು ಸೂಚಿಸುವ ಚಿನ್ಹೆ (ವ. 20; ಮತ್ತಾಯ 5:14). ವಿಮೋ 25:31-40 ಹೋಲಿಸಿರಿ. ಗ್ರೀಕ್ ಭಾಷೆಯ ಪದವಾದ "ಮೇಣದಬತ್ತಿ" ಎಂಬ ಪದಕ್ಕಿಂತಲೂ ನಿಖರವಾದ ಭಾಷಾಂತರ "ದೀಪಸ್ತಂಬಗಳು". **13**

**1:13** *"ಮನುಷ್ಯಕುಮಾರನು"*– ದಾನಿ 7:13; ಮತ್ತಾಯ 8:20 (ಟಿಪ್ಪಣಿ).

*"ನಿಲುವಂಗಿಯನ್ನು...ಚಿನ್ನದ ಪಟ್ಟಿ"*– ಬಹುಶಃ ಕ್ರಿಸ್ತನು ತನ್ನ ಜನರ ಮಹಾಯಾಜಕನೆಂದು ಮಾತಾಡುತ್ತಿರಬಹುದು. ವಿಮೋ 28:4 ಹೋಲಿಸಿರಿ. ಇಬ್ರಿ 2:17; 4:14; 8:1; 10:21-22 ನೋಡಿರಿ. **14**

**1:14** *"ಉಣ್ಣೆ"*– ದಾನಿ 7:9 ಹೋಲಿಸಿರಿ.

*"ಬೆಂಕಿಯ ಉರಿ"*– 2:18; 19:12; ದಾನಿ 10:6 – ಒಬ್ಬ ವ್ಯಕ್ತಿಯ ಕಣ್ಣುಗಳು ಅವನ ಬಗ್ಗೆ ಹೆಚ್ಚಿನ ವಿಷಯವನ್ನು ಹೇಳುತ್ತದೆ. ಇಲ್ಲಿ ಕ್ರಿಸ್ತನ ಕಣ್ಣುಗಳು ಆತನ ಗುಣಲಕ್ಷಣವಾದ ಉರಿಯುತ್ತಿರುವ ಪವಿತ್ರತೆಯ ಬಗ್ಗೆ ಮಾತನಾಡುತ್ತದೆ ಮತ್ತು ಮನುಷ್ಯನ ಎಲ್ಲಾ ರಹಸ್ಯಗಳನ್ನು ವಿವೇಚಿಸುವ ಸಾಮರ್ಥ್ಯವನ್ನು ಹೊಂದಿದೆ. **15**

**1:15** *"ತಾಮ್ರ"*– ದಾನಿ 10:6. ಸಭೆಗಳ ಮಧ್ಯಗಳಲ್ಲಿ ಓಡಾಡುತ್ತಿರುವ ಪಾದಗಳು ಉರಿಯುತ್ತಿರುವ ಪವಿತ್ರತೆಯನ್ನು ತೋರಿಸುತ್ತದೆ.

*"ಧ್ವನಿಯು ಜಲಪ್ರವಾಹದ ಘೋಷದಂತೆ"*– ಯೆಹೆಜ್ಕೇಲ 43:2. ಕ್ರಿಸ್ತನ ಧ್ವನಿಯು

ಶಕ್ತಿಯಿಂದ ಕೂಡಿದ ಮತ್ತು ಎದುರಿಸಲಾಗದ ಶಕ್ತಿಯಿಂದ ಕೂಡಿದ ಇಸ್ರಾಯೇಲ್ ದೇವರ ಧ್ವನಿಯಂತಿದೆ (ಕೀರ್ತನೆ 29:3-10). **16**

**1:16** *"ಏಳು ನಕ್ಷತ್ರಗಳು"*– ವ.20 ಟಿಪ್ಪಣಿ.

*"ಇಬ್ಬಾಯಿ ಕತ್ತಿ"*– 2:12,16; 19:15,21 – ದೇವರ ವಾಕ್ಯದ ಚಿನ್ಹೆ (ಇಬ್ರಿ 4:12; ಎಫೆ 6:17). ಇದು ದುಷ್ಟತ್ವದ ವಿರುದ್ಧ - ಆಕ್ರಮಣಕಾರಿ ಯುದ್ಧದ ಬಗ್ಗೆ ಮಾತನಾಡುತ್ತದೆ. ಕ್ರಿಸ್ತನು ಮಾತ್ರ ಮಾತನಾಡುತ್ತಾನೆ ಮತ್ತು ತೀರ್ಪು ಕಾರ್ಯಗತಗೊಳ್ಳುತ್ತದೆ.

*"ಸೂರ್ಯ"*– ಮತ್ತಾಯ 17:12. ಇದು ಕ್ರಿಸ್ತನ ಮಹಿಮೆ ಮತ್ತು ವೈಭವದ ಬಗ್ಗೆ ಮಾತನಾಡುತ್ತದೆ. ಆತನು ದೇವರ ಮಹಿಮೆಯ ಪ್ರಕಾಶವಾಗಿದ್ದಾನೆ (ಇಬ್ರಿ 1:3; 2 ಕೊರಿಂಥ 4:6). ಈ ಬೆಳಕೇ ದಮಸ್ಕದಿಂದ ತಾರ್ಸಿಸಿಗೆ ಹೋಗುವ ದಾರಿಯಲ್ಲಿ ಸೌಲನನ್ನು ಕುರುಡುಗೊಳಿಸಿದ್ದು (ಅಪೊ 9:3,8,9; 22:11). **17**

**1:17** *"ಆತನ ಪಾದಗಳ ಮುಂದೆ"*– ನಾವೆಲ್ಲರೂ ಇರಬೇಕಾದ ಸ್ಥಳ ಮತ್ತು ಯೋಹಾನನು ಕಂಡಂತೆ ನಾವು ಆತನನ್ನು ಕಂಡಿದ್ದರೆ ನಾವು ಆತನ ಪಾದಗಳ ಬಳಿ ಇರುತ್ತಿದ್ದೆವು. ಯೆಹೆಜ್ಕೇಲ 1:28 ಹೋಲಿಸಿರಿ.

*"ಹೆದರಬೇಡ"*– ಮತ್ತಾಯ 17:7; 14:27.

*"ಮೊದಲನೆಯವನೂ ಕಡೆಯವನೂ"*– ದೇವರು ಮಾತ್ರ ಈ ಮಾತುಗಳನ್ನಾಡಬಹುದು. ವ. 8; ಯೆಶಾಯ 44:6; 48:12-13 ಹೋಲಿಸಿರಿ. **18**

**1:18** *"ಬದುಕುವವನಾಗಿದ್ದೇನೆ"*– ಜೀವಿಸುವ ದೇವರ ಸೂಚನೆಯಾಗಿದೆ (ಕೀರ್ತನೆ 42:2; ಯೆರೆ 10:10; ಮತ್ತಾಯ 16:16; 2 ಕೊರಿಂಥ 6:16; 1 ಥೆಸ 1:9. ಯೋಹಾನ 8:24,58 ಹೋಲಿಸಿರಿ). ಇಲ್ಲಿ ಯೇಸು ತಾನೇ ಆತನಾಗಿದ್ದೇನೆಂದು ಹೇಳುತ್ತಿದ್ದಾನೆ.

*"ಸತ್ತ"*– ಮತ್ತಾಯ 27:50; ಮಾರ್ಕ 15:44-45; 1 ಕೊರಿಂಥ 15:3.

*"ಯುಗ ಯುಗಾಂತರಗಳಲ್ಲಿಯೂ ಜೀವಿಸುವವನಾಗಿದ್ದೇನೆ"*– 4:9; ಮತ್ತಾಯ 28:6; ಅಪೊ 1:3; ರೋಮಾ 6:9-10.

*"ಮರಣದ ಮತ್ತು ಪಾತಾಳದ ಬೀಗದ ಕೈಗಳು"*– ಸತ್ತವರ ಕಾಣದ ಲೋಕದ ಸಂಪೂರ್ಣ

ಅಧಿಕಾರವನ್ನು ಕ್ರಿಸ್ತನು ಹೊಂದಿದ್ದಾನೆ ಮತ್ತು ಬೇರೆಯಾರಿಗೂ ಯಾವ ಅಧಿಕಾರವೂ ಇಲ್ಲ. "ಪಾತಾಳ" ಎಂಬ ಗ್ರೀಕ್ ಪದದ ಟಿಪ್ಪಣಿಯನ್ನು ಲೂಕ 16:23 ರಲ್ಲಿ ನೋಡಿರಿ. **19**

**1:19** ಯೋಹಾನನ ಬರವಣಿಗೆಯ ಮೂರು ಭಾಗಗಳು:

*"ನೀನು ಕಂಡವುಗಳು"*– ಈ ಅಧ್ಯಾಯದಲ್ಲಿರುವ ಕ್ರಿಸ್ತನ ದರ್ಶನ "ಈಗ ನಡೆಯುತ್ತಿರುವವುಗಳು" – ಏಳು ಸಭೆಗಳಲ್ಲಿರುವ ಈಗಿನ ಸ್ಥಿತಿ (ಅಧ್ಯಾಯಗಳು 2 ಮತ್ತು 3).

*"ಮುಂದೆ ಆಗಬೇಕಾದವುಗಳು"*– ಸಭೆಗಳಲ್ಲಿರುವ ಈಗಿನ ಸ್ಥಿತಿಗಳ ನಂತರ ನಡೆಯುವ ಸಂಗತಿಗಳನ್ನು ಅವರು ಪೂರ್ಣವಾಗಿ ನಡೆಸಿದ್ದಾರೆ (4:1—22:5). **20**

**1:20** *"ಗೂಢಾರ್ಥ"*–ಮನುಷ್ಯರಿಗೆ ತಿಳಿಯದ ದೇವರಿಂದ ಪ್ರಕಟವಾದ ಸತ್ಯ.

*"ದೂತರು"*– ಈ ಗ್ರೀಕ್ ಪದವನ್ನು "ಸಂದೇಶಕರು" ಎಂಬುದಾಗಿ ಭಾಷಾಂತರಿಸಬಹುದು (ಮಾರ್ಕ 1:2; ಲೂಕ 7:24; 9:52 ರಲ್ಲಿದ್ದಂತೆ). ಇಲ್ಲಿ (ಮತ್ತು 2:1,8,12,18; 3:1,7,14) ಬಹುಶಃ ಇದರ ಅರ್ಥ ಇದಾಗಿರಬಹುದು: ಈ ಸಂದೇಶಕರ ಮೂಲಕ ಸಭೆಗಳಿಗೆ ಕರ್ತನು ಮಾತನಾಡುತ್ತಾನೆ, ಸಭೆಗಳ ಜವಾಬ್ದಾರಿಯುಳ್ಳ ಪ್ರತಿನಿಧಿಗಳು.

*"ಏಳು ಸಭೆಗಳು"*– ವಚನಗಳು 4,11. ಈ ಸಭೆಗಳು, ಅಧ್ಯಾಯ 2 ಮತ್ತು 3 ರಲ್ಲಿನ ಸಂದೇಶವನ್ನು ಹೊಂದಬೇಕಾಗಿದ್ದ ಯೋಹಾನನ ಕಾಲದಲ್ಲಿ ಚಾರಿತ್ರಿಕವಾಗಿ ನಿಜವಾದ ಸಭೆಗಳಾಗಿದ್ದವು. ಆದರೆ ಅವುಗಳನ್ನು ಬೇರೆ ರೀತಿಯಲ್ಲಿ ನೋಡಬೇಕಾಗಿದೆ – ಈ ದಿನಗಳ ಮತ್ತು ಆ ದಿನಗಳ ಎರಡೂ ಸಭೆಗಳನ್ನು ಪ್ರತಿನಿಧಿಸುವ ಸಭೆಗಾಗಿ. ಏಳು ಎಂಬ ಸಂಖ್ಯೆಯು ಗಮನಾರ್ಹವಾಗಿದೆ. ಇದು ಪರಿಪೂರ್ಣತೆಯನ್ನು ಮತ್ತು ಸಂಪೂರ್ಣತೆಯನ್ನು ಸೂಚಿಸುತ್ತದೆ. ಹೇಗೆ ಏಳು ಆತ್ಮಗಳು ಒಂದು ದೇವರಾತ್ಮನನ್ನು ಸೂಚಿಸುತ್ತದೋ (ವ.4), ಹಾಗೆಯೇ ಏಳು ಸಭೆಗಳು ಲೋಕದಲ್ಲಿನ ಒಂದು ಸಭೆಯನ್ನು ಸೂಚಿಸುತ್ತದೆ. ದೀಪಸ್ತಂಭಗಳ ನಡುವೆ ಏಳು ನಕ್ಷತ್ರಗಳನ್ನು ಹಿಡಿದುಕೊಂಡು ನಿಂತಿರುವ ಕ್ರಿಸ್ತನ ಚಿತ್ರವು ಸಹ ಇದನ್ನೇ ಸೂಚಿಸುತ್ತದೆ. ಕ್ರಿಸ್ತನ ಆರೈಕೆಯಲ್ಲಿ ಬರಿ ಏಳು ಸಭೆಗಳಿದ್ದವೋ? ಈಗ ಯಾವ ಸಭೆಗಳಿಲ್ಲವೋ? ಆ ಏಳು ದೀಪಸ್ತಂಭಗಳು ಏಳು ಸಭೆಗಳನ್ನು ಸೂಚಿಸುತ್ತದೆಂದು ಸ್ಪಷ್ಟವಾಗಿಲ್ಲವೋ? ಆದ್ದರಿಂದ ಈ ರೀತಿಯ ಏಳು ಸಭೆಗಳನ್ನು ನಮ್ಮ ದಿನಗಳಲ್ಲಿ ಕಾಣಲು ನಾವು ನಿರೀಕ್ಷಿಸಬಹುದು. ಕೆಲವು ವ್ಯಾಖ್ಯಾಯನಕಾರರು ಈ ಸಭೆಗಳಿಗೆ ಇನ್ನೂ ಮುಂದುವರಿದ ಅರ್ಥಗಳಿವೆ ಎಂದು

ಯೋಚಿಸುತ್ತಾರೆ. ಈ ಏಳು ಸಭೆಗಳು ಪ್ರಾರಂಭದಿಂದ ಅಂತ್ಯದವರೆಗೂ ಸಭೆಗಳಿಗೆ ಪ್ರವಾದನೆಯ ಹೊರ ನೋಟವನ್ನು ಕೊಟ್ಟಿದೆ ಎಂದು ಯೋಚಿಸುತ್ತಾರೆ. ಈ ದೃಷ್ಟಿಯಿಂದ ಈ ಏಳು ಸಭೆಗಳನ್ನು ಸರಿಯಾದ ಕ್ರಮದಲ್ಲಿ ಆರಿಸಿಕೊಳ್ಳಲಾಯಿತು ಎಫೆಸದಲ್ಲಿ ಪ್ರಾರಂಭವಾಗಿ ಲವೊದೊಕೀಯದಲ್ಲಿ ಅಂತ್ಯವಾಯಿತು ಇದು ಸೂಚಿಸುವದೇನೆಂದರೆ ಏಳು ಸತತ ಯುಗಗಳಲ್ಲಿ ಸಭೆಯು ಹಾದು ಹೋಗುವುದು. ಇದು ಸಂಭವನೀಯ ವ್ಯಾಖ್ಯಾಯನವಾಗಿದೆ ಮತ್ತು ಕುತೂಹಲವುಳ್ಳದ್ದಾಗಿದೆ. ಮತ್ತು ಪತ್ರಿಕೆಯಲ್ಲಿ ಮುಂದುವರಿದ ವಿಷಯಗಳು ಮತ್ತು ಸಭೆಯ ಇತಿಹಾಸದ ನಡವೆ ವಾಸ್ತವವಾಗಿ ಕೆಲವು ಒಪ್ಪಂದಗಳಿವೆ. ಆದರೆ ಈ ವ್ಯಾಖ್ಯಾಯನಕ್ಕೆ ಯಾವುದೆ ಪುರಾವೆಗಳಿಲ್ಲ. ಹೇಗಿದ್ದರೂ, ಈ ಪತ್ರಿಕೆಯು ವಯಕ್ತಿಕವಾಗಿ ನಮಗೆ ಮತ್ತು ನಾವು ಹೋಗುವ ಸಭೆಗಳಿಗೆ ಏನು ಹೇಳುತ್ತದೆಂಬುದರ ವಿಷಯವಾಗಿ ನಾವು ಕುತೂಹಲವುಳ್ಳವರಾಗಿರಬೇಕು.

# 2[1]

**2:1** *"ದೂತನು"*– 1:20.

*"ಎಫೆಸ"*– ಅಪೊ 18:19; 19:1-20; ಎಫೆ 1:1.

*"ಬರೆ"*– ಪ್ರತಿಯೊಂದು ಸಭೆಗೂ ಏನು ಬರೆಯಬೇಕೆಂದು ಕರ್ತನಾದ ಯೇಸುವು ನಿಖರವಾಗಿ ಯೋಹಾನನಿಗೆ ತಿಳಿಸಿದನು – ವಚನಗಳು 8,12,18; 3:1,7,14. ಆತನು ತಿಳಿಸಿದ ಯಾವುದನ್ನೂ ಯೋಹಾನನು ಕಲ್ಪಿಸಲಿಲ್ಲ. ಆತನು ಸಭೆಯ "ದೂತನಿಗೆ" ಬರೆದನು ಆದರೆ ಸಂದೇಶವು ಇಡೀ ಸಭೆಗಾಗಿತ್ತು.

*"ನಕ್ಷತ್ರಗಳು . . . . ದೀಪಸ್ತಂಬಗಳು"*– 1:12,16,20. [2]

**2:2** *"ಬಲ್ಲೆನು"*– ಪ್ರತಿಯೊಂದು ಸಭೆಗಳಿಗೂ ಕರ್ತನು ಇದನ್ನೇ ಹೇಳುತ್ತಾನೆ. ಕೀರ್ತನೆ 33:13-15; 139:1-4; ಜ್ಞಾನೋ 5:21; ಯೆರೆ 16:17; 23:24; ಇಬ್ರಿ 4:13 ಹೋಲಿಸಿರಿ. ವಯಕ್ತಿಕವಾಗಿ ಮತ್ತು ಸಭೆಯಾಗಿ ನಮ್ಮ ವಿಷಯವಾಗಿ ಆತನಿಗೆ ಎಲ್ಲಾ ತಿಳಿದಿದೆ ಮತ್ತು ಆಶೀರ್ವಾದವನ್ನು ಅಥವಾ ಶಿಕ್ಷೆಯನ್ನು ಕೊಡಲು ಆತನು ಸಿದ್ಧವಾಗಿ ನಿಂತಿದ್ದಾನೆ.

*"ದುಷ್ಟರನ್ನು ಸಹಿಸಲಾರಿ"*– ಕೀರ್ತನೆ 101:3-5; 1 ಕೊರಿಂಥ 5:13 ಹೋಲಿಸಿರಿ. ಎಫೆ 5:5-6 ರಲ್ಲಿರುವ ಅಪೋಸ್ತಲನಾದ ಪೌಲನ ಸೂಚನೆಯನ್ನು ಅವರು ಹಿಂಬಾಲಿಸಿದರು ಮತ್ತು ದುಷ್ಟತ್ವದೊಂದಿಗೂ ಮತ್ತು ದುಷ್ಟ ಜನರೊಂದಿಗೂ ಹೊಂದಾಣಿಕೆ

ಮಾಡಿಕೊಳ್ಳಲು ನಿರಾಕರಿಸಿದರು.

*"ಪರೀಕ್ಷಿಸಿ"*– 1 ಯೋಹಾನ 4:1; 1 ಥೆಸ 5:21; 1 ಕೊರಿಂಥ 14:29 ಹೋಲಿಸಿರಿ. ಇದು ಈ ದಿನಗಳಲ್ಲಿಯೂ ಬಹಳ ಮುಖ್ಯವಾಗಿದೆ.

*"ಸುಳ್ಳುಗಾರರು"*– ಮತ್ತಾಯ 7:15-20; 2 ಕೊರಿಂಥ 11:13-15; 2 ಪೇತ್ರ 2:1. ಅಪೊ 20:28-31 ರಲ್ಲಿ ಪೌಲನು ಎಫೆಸ ಸಭೆಯ ಹಿರಿಯರನ್ನು ಆ ರೀತಿಯ ಜನರಿಂದ ಎಚ್ಚರಿಸಿದ್ದನು. **3**

**2:3** *"ಪ್ರಯಾಸ"*– ವ.2 – ಅವರ ಪರಿಶ್ರಮದ ಪ್ರಯಾಸವನ್ನು ಸೂಚಿಸುವ ಎರಡನೇ ವಾಕ್ಯವಾಗಿದೆ ಅವರು ಕರ್ತನ ಸೇವೆಯಲ್ಲಿ ಚಟುವಟಿಕೆಯುಳ್ಳವರಾಗಿದ್ದರೆಂದು, ಆತನ "ಹೆಸರಿನ ನಿಮಿತ್ತ" ಪ್ರಯಾಸಪಡುವುದನ್ನು ಇದು ಸೂಚಿಸುತ್ತದೆ. ಪೌಲನು ಅವರೊಂದಿಗಿರುವಾಗ ಅವರಿಗೆ ಇದರ ಮಾದರಿಯುಳ್ಳವನಾಗಿದ್ದನು – ಅಪೊ 20:19-20,31,34; ಮತ್ತು "ಸಮಯವನ್ನು ಕಳಕೊಳ್ಳಬಾರದೆಂದು" –(ಎಫೆ 5:16) ಅವರಿಗೆ ಬರೆದಿದ್ದನು. ಇವುಗಳೆಲ್ಲವನ್ನೂ ಸ್ಪಷ್ಟವಾಗಿ ಅವರು ಕಾರ್ಯರೂಪದಲ್ಲಿ ಮಾಡಿದ್ದರು ಮತ್ತು ಅವುಗಳನ್ನು ಮಾಡಲು ಬಲಹೀನರಾಗದೆ ಅಥವಾ ಬೇಸರಗೊಳ್ಳದೆ ಮುಂದುವರಿಸಲು ಅವರಿಗೆ ಶಕ್ತಿ ಇತ್ತು. **4**

**2:4** *"ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ"*– ಕೆಲವು ರೀತಿಯಲ್ಲಿ ಅವರು ಮಾದರಿಯುಳ್ಳ ಸಭೆ ಯಾಗಿದ್ದರು, ಕಠಿಣ ಪರಿಶ್ರಮವುಳ್ಳವರು, ಸತತ ಪರಿಶ್ರಮವುಳ್ಳವರು, ದುಷ್ಟ ಜನರು ಮತ್ತು ದುಷ್ಟ ತತ್ವಗಳ ವಿಷಯವಾಗಿ ಎಚ್ಚರಿಕೆಯುಳ್ಳವರು ಆಗಿದ್ದರು. ಆದರೆ ಬಹಳ ಮುಖ್ಯವಾದ ವಿಷಯದಲ್ಲಿ ಅವರು ವಿಫಲರಾಗಿದ್ದರು – ಪ್ರೀತಿ. 1 ಕೊರಿಂಥ 13:1-3,13; ಮತ್ತಾಯ 22:37-40. ಅವರಲ್ಲಿ ಪ್ರೀತಿಯೇ ಇಲ್ಲವೆಂದು ದೇವರು ಹೇಳಲಿಲ್ಲ. ಸಭೆಯ ಆರಂಭದಲ್ಲಿ ಅವರಿಗಿದ್ದ ಪ್ರೀತಿ ಈಗ ಇಲ್ಲ ಎಂಬುದಾಗಿ ಇದರ ಅದರ ಅರ್ಥವಾಗಿದೆ. ಎಫೆ 3:16-19 ರಲ್ಲಿ ಪೌಲನು ಅವರಿಗೆ ಹೇಳಿದ ಮಾತುಗಳಿಂದ ಸ್ಪಷ್ಟವಾಗಿ ದೂರವಾಗಿದ್ದರು. **5**

**2:5** *"ಬಿದ್ದಿದ್ದೀಯ"*– ಒಬ್ಬರ ಮೊದಲ ಪ್ರೀತಿಯನ್ನು ಕಳಕೊಳ್ಳುವುದು ಪಾಪ, ಮತ್ತು ಅದು ಚಿಕ್ಕ ಪಾಪವಲ್ಲ. ಇದು ಬಹು ಪ್ರಮುಖ ವಿಷಯಗಳಲ್ಲಿನ ಕುಸಿತವಾಗಿದೆ. ಪಾಪವಿಲ್ಲದಿದ್ದರೆ ಪಶ್ಚಾತ್ತಾಪ ಪಡುವ ಅಗತ್ಯವಿಲ್ಲ.

*"ಆ ಸ್ಥಳದಿಂದ ತೆಗೆದು ಹಾಕುವೆನು"*– ಇದರ ಅರ್ಥ ಅವರು ಸಭೆಯಾಗಿರಲು

ನಿಂತುಹೋಗುತ್ತಾರೆ ಅಥವಾ ಸಭೆಯಾಗಿ ಅವರೊಂದಿಗೆ ಮಾಡಲು ಆತನಿಗೆ ಏನೂ ಇರುವದಿಲ್ಲ.

*"ತಿರುಗಿಕೊಳ್ಳದೆ ಹೋದರೆ"*– ಸಭೆಯಾಗಲೀ ಅಥವ ವಯಕ್ತಿಕ ವ್ಯಕ್ತಿಯಾಗಲೀ ಕ್ರಿಸ್ತನ ಅಪ್ಪಣೆಗೆ ಅವಿಧೇಯರಾಗಿ ಪಶ್ಚಾತ್ತಾಪ ಪಡದಿದ್ದರೆ ಅವರು ನ್ಯಾಯತೀರ್ಪಿಗಳೊಗಾಗುತ್ತಾರೆ. ಇದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳೋಣ ಪ್ರೀತಿಯು ಬೆಳೆಯಲು ಪ್ರಾರಂಭವಾಗುವಾಗ ಸಭೆಗಳಲ್ಲಿ ದೇವರ ಮೌಲ್ಯತೆಯು ಅದರೊಂದಿಗೆ ಬೆಳೆಯಲು ಪ್ರಾರಂಭಿಸುತ್ತದೆ.

*"ಪಶ್ಚಾತ್ತಾಪ"*– ವಚನಗಳು 16,22; 3:3,19. ಈ ವಾಕ್ಯದ ಮೂಲಕ ಯೇಸು ತನ್ನ ಸೇವೆಯನ್ನು ಈ ಲೋಕದಲ್ಲಿ ಪ್ರಾರಂಭಿಸಿದನು (ಮತ್ತಾಯ 4:17). ಈಗಲೂ ತನ್ನ ಜನರಿಗೆ ಸೇವೆ ಮಾಡಲು ಆತನು ಆ ವಾಕ್ಯಗಳೊಂದಿಗೆ ಮುಂದುವರಿದಿದ್ದಾನೆ. ಕಳೆದುಕೊಂಡ ಮೊದಲ ಪ್ರೀತಿಯನ್ನು ತಿರುಗಿ ಗಳಿಸಿಕೊಳ್ಳಬಹುದೆಂದು ಇದು ನಮ್ಮನ್ನು ಉತ್ಸಾಹಿಸುತ್ತದೆ. ಪಶ್ಚಾತ್ತಾಪದ ವಿಷಯವಾಗಿ ಟಿಪ್ಪಣಿಗಾಗಿ ಮತ್ತಾಯ 3:2 ನೋಡಿರಿ. **6**

**2:6** *"ನಿಕೊಲಾಯಿತರ"*– ವ.15. ಈ ಜನರು ಏನನ್ನು ನಂಬಿದ್ದರು ಮತ್ತು ಏನನ್ನು ಬೋಧಿಸುತ್ತಿದ್ದರು ಎಂಬುದನ್ನು ಸತ್ಯವೇದವು ಏನೂ ಹೇಳುವದಿಲ್ಲ, ಆದರೆ ಈ ವಿಷಯವಾಗಿ ಎರಡು ವ್ಯಾಖ್ಯಾಯನಗಳು ಸಾಧ್ಯವಿದೆ. ಕೆಲವರು ಹೇಳುತ್ತಾರೆ ಅವರು ನಿಕೊಲಸ್ ಎಂಬವನ ಹಿಂಬಾಲಕರಾಗಿದ್ದರು, ನಂತರ ಕ್ರೈಸ್ತತ್ವವನ್ನು ಅನುಸರಿಸಿದರು, ಅದರಲ್ಲಿ ತೀವ್ರವಾಗಿದ್ದರು ಮತ್ತು ಈ ಅನೈತಿಕ ಪಂಥದ ನಾಯಕರಾದರು. ಅವರು ಯಾರಾಗಿದ್ದರು ಎಂಬುದನ್ನು ತಿಳಿದುಕೊಳ್ಳಲು ನಾವು ನಿಕೊಲಾಯಿತ ಎಂಬ ಪದದ ಅರ್ಥವನ್ನು ನೋಡಬೇಕು ಎಂದು ಕೆಲವರು ಬೋಧಿಸುತ್ತಾರೆ ಈ ಹೆಸರನ್ನು ಎರಡು ಗ್ರೀಕ್ ಪದಗಳಿಂದ ಪಡೆಯಲಾಗಿದೆ – ನಿಕನ್, ಎಂದರೆ ಜಯಗಳಿಸು ಮತ್ತು ಲೊಸ್ ಎಂದರೆ ಜನರು. ಆದ್ದರಿಂದ ನಿಕೊಲಾಯಿತರು ಒಂದು ವೇಳೆ ಸಭೆಯಲ್ಲಿ ಅಧಿಕಾರವನ್ನು ಪಡೆದು ದೇವಜನರನ್ನು ಆಳಬೇಕೆಂದು ಪ್ರಯತ್ನಿಸುತ್ತಿದ್ದ ಜನರಾಗಿರಬಹುದು. ಒಂದು ವೇಳೆ ಪ್ರಾರಂಭದಲ್ಲಿದ್ದ ಯಾಜಕ ವರ್ಗದವರಿರಬಹುದು ಕ್ರಮೇಣವಾಗಿ ಅನೇಕ ಸಭೆಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದಿರಬಹುದು ಮತ್ತು ಕ್ರೈಸ್ತತ್ವದ ಮೇಲೆ ಹೆಚ್ಚಿನ ಹಿಡಿತವನ್ನು ಇಟ್ಟುಕೊಂಡಿದ್ದಿರಬಹುದು. ನಿಕೊಲಾಯಿತರು ಯಾರೇ ಆಗಿರಲಿ, ಅವರ ಎರಡೂ ಅಭ್ಯಾಸಗಳು ಮತ್ತು ಬೋಧನೆಗಳು ದೇವರ ವಾಕ್ಯಕ್ಕೆ ಮತ್ತು ಕರ್ತನಾದ ಯೇಸುವಿಗೆ ವಿರುದ್ಧವಾಗಿತ್ತು. **7**

**2:7** *"ಕೇಳಿಸಿಕೊಳ್ಳಲಿ"*– ಮತ್ತಾಯ 11:15; 13:9,43. ಈ ಮಾತನ್ನು ಏಳು ಸಭೆಯ ಪ್ರತಿಯೊಬ್ಬರಿಗೂ ಕೊಡಲ್ಪಟ್ಟಿದೆ ಮತ್ತು ಈ ದಿನದ ಎಲ್ಲಾ ಸಭೆಗಳಿಗೂ ಮತ್ತು ವಯಕ್ತಿಕ ವ್ಯಕ್ತಿಗಳಿಗೂ ಸಹ ಕೊಡಲ್ಪಟ್ಟಿದೆ.

*"ದೇವರಾತ್ಮನು"*– ಯೇಸು ಯೋಹಾನನಿಗೆ ದೇವರಾತ್ಮನ ಮೂಲಕ ಮಾತನಾಡಿದನು, ದೇವರಾತ್ಮನಿಂದ ತುಂಬಲ್ಪಟ್ಟವನಾಗಿ ಈ ವಾಕ್ಯಗಳನ್ನು ಬರೆದನು.

*"ಜಯಹೊಂದುತ್ತಾನೋ"*– ಸಭೆಗಳಿಗೆ ಬರೆದ ಪ್ರತಿಯೊಂದು ಪತ್ರದಲ್ಲಿ ಜಯಹೊಂದುವವರಿಗೆ ಇಲ್ಲಿ ಒಂದು ವಾಗ್ದಾನವಿದೆ. ಜಯಹೊಂದಿದವನಿಗೆ ಎಂಬ ವಿಷಯಕ್ಕಾಗಿ ಮತ್ತಾಯ 16:18; ಲೂಕ 10:19; ಯೋಹಾನ 16:33; ರೋಮಾ 8:37; 1 ಯೋಹಾನ 2:13-14; 4:4; 5:4-5; ಪ್ರಕ 21:7. ವಾಕ್ಯ ಎಂದರೆ ಎದಿರುಸುತ್ತಿರುವ ವಿರೋಧ ಶಕ್ತಿಗಳ ವಿರುದ್ಧವಾಗಿ ಜಯಹೊಂದುವುದು (ಕೀರ್ತನೆ 37:24; ಜ್ಞಾನೋ 24:16; ಮತ್ತಾಯ 6:12 ಟಿಪ್ಪಣಿ ನೋಡಿರಿ). ರೋಮಾ 7:18-25; 2 ಕೊರಿಂಥ 4:7-12; ಯಾಕೋಬ 3:2; 1 ಯೋಹಾನ 1:8-9 ರಲ್ಲಿ ಇದ್ದಂತೆ ಜಯಹೊಂದುವುದು ಅಂತಹ ಅನುಭವಕ್ಕೆ ಅನುಗಣವಾಗಿ ಸ್ಥಿರವಾಗಿರುತ್ತದೆ. ಜಯಹೊಂದುವುದೆಂದರೆ ಜೀವನದ ಅಂತ್ಯದವರೆಗೂ ಈ ಲೋಕವು, ಶರೀರವು ಮತ್ತು ಸೈತಾನನು ಎಸೆಯುವ ಯಾವುದೇ ರೀತಿಯ ತೊಂದರೆಗಳು, ಹಿಂಸೆಗಳು, ಕಷ್ಟಗಳು, ಶೋಧನೆಗಳು ಮತ್ತು ಕಿರುಕುಳಗಳು, ಬಂದರೂ ಕ್ರಿಸ್ತನನ್ನು ನಂಬುತ್ತಾ ಹೋಗುವುದು. ಜಯಹೊಂದುವವರು ನಂಬಿಕೆಯಲ್ಲಿ ಸ್ಥಿರವಾಗಿ ಹೋಗುತ್ತಿರುತ್ತಾರೆ ಮತ್ತು ತಮ್ಮ ಜೀವಿತದಲ್ಲಿ ನಂಬಿಕೆಯಿರುವ ಸಾಕ್ಷಿಯನ್ನು ತೋರಿಸುತ್ತಾರೆ (ಲೂಕ 22:32; ಇಬ್ರಿ 10:39; ಯಾಕೋಬ 2:14-17; 1 ಪೇತ್ರ 1:5). ಲೋಕದಲ್ಲಿರುವವನಿಗಿಂತ ಅವರಲ್ಲಿರುವಾತನು ಹೆಚ್ಚಿನವನಾಗಿರುವದರಿಂದ ಅವರು ಜಯಹೊಂದುವರು (1 ಯೋಹಾನ 4:4). ಅವರಲ್ಲಿರುವ ಕ್ರಿಸ್ತನು ತಾನೇ, ದೇವರಾತ್ಮನ ಜಯವೀರನಾಗಿದ್ದಾನೆ ಮತ್ತು ದೇವರು ತಾನೇ ಅವರೊಳಗೆ ಜೈಸುವ ಶಕ್ತಿಯನ್ನು ಇಟ್ಟಿದ್ದಾನೆ (ಇಬ್ರಿ 10:39—11:1).

*"ಜೀವದಾಯಕ ವೃಕ್ಷ"*– ಆದಿ 2:9; 3:22-24 ಹೋಲಿಸಿರಿ. ಪಾಪಿಗಳಾದ ಜನರು ಜೀವದಾಯಕ ವೃಕ್ಷದ ಬಳಿ ಹೋಗದಂತೆ ದೇವರು ಅವರನ್ನು ತಡೆದನು. ಕ್ಷಮಿಸಲ್ಪಟ್ಟ ಪಾಪಿಗಳು ಮತ್ತು ಜಯಹೊಂದುವವರು ಕಡೇಯಲ್ಲಿ ನಿತ್ಯಜೀವವನ್ನು ಪ್ರವೇಶಿಸುವರು. ಮನುಷ್ಯನು ಪಾಪದ ಮೂಲಕ ಕಳಕೊಂಡದ್ದನ್ನು ಕ್ರಿಸ್ತನ ಮೂಲಕ ಪಡಕೊಳ್ಳಬಹುದು.

ನಾವು ಆ ಜೀವದಾಯಕ ವೃಕ್ಷದ ಹಣ್ಣನ್ನು ತಿನ್ನುವವರಾಗಬೇಕೆಂದು (ಅಪೊ 5:30; ಗಲಾ 3:13; 1 ಪೇತ್ರ 2:24) ಮರಣದ ಕಂಬಕ್ಕೆ ಯೇಸುವನ್ನು ಮೊಳೆಗಳಿಂದ ಜಡಿದರು. ಈ ಮರವು ಕ್ರಿಸ್ತನನ್ನು ನಂಬಿದವರಿಗಾಗಿ ಮತ್ತು ನಂಬಿಕೆಯಲ್ಲಿ ಸ್ಥಿರವಾಗಿ ಮುಂದುವರಿಯುವವರಿಗೆ – ನಂಬಿಕೆಯಲ್ಲಿ ಮುಂದುವರಿಯುವದು ಎಂಬ ವಿಷಯಕ್ಕಾಗಿ ಕೊಲೊ 1:23; ಇಬ್ರಿ 3:6,14; 6:12; 10:38-39 ನೋಡಿರಿ.

*"ಪರದೈಸಿ"*– ಲೂಕ 23:43; 2 ಕೊರಿಂಥ 12:4 ನೋಡಿರಿ. **8**

**2:8** *"ದೂತನು"*– 1:20.

*"ಸ್ಮುರ್ನ"*– ಎಫೆಸದ ಉತ್ತರಕ್ಕೆ ಸುಮಾರು 60 ಕಿ.ಮೀ. ದೂರದಲ್ಲಿದ್ದ ಮತ್ತು ಅದರ ಸುಂದರತೆಗೆ ಹೆಸುರುವಾಸಿಯಾದ ಪಟ್ಟಣ. ಈ ದಿನದ ಟರ್ಕಿ ದೇಶದಲ್ಲಿ ಇದನ್ನು ಇಸ್ಮೀರ್ ಎಂದು ಕರೆಯಲಾಗುತ್ತದೆ.

*"ಆದಿ ಮತ್ತು ಅಂತ್ಯನು"*– 1:17.

*"ಸತ್ತವನಾಗಿದ್ದು ಜೀವಂತನಾಗಿ ಬಂದನು"*– 1:18; ಮತ್ತಾಯ 28:1-10. **9**

**2:9** *"ಬಲ್ಲೆನು"*– ವ.2.

*"ಸಂಕಟ"*– ಸ್ಮುರ್ನದ ಜನರು ಮತ್ತು ಯೆಹೂದ್ಯ ಸಮುದಾಯದ ಅನೇಕರು ಅಲ್ಲಿದ್ದ ಕ್ರೈಸ್ತರನ್ನು ಹಿಂಸಿಸುತ್ತಿದ್ದರು. ಪಟ್ಟಣವು ಸುಂದರವಾಗಿದ್ದರೂ ಅದರಲ್ಲಿದ್ದ ಪ್ರಜೆಗಳು ತಮ್ಮ ನಡೆತೆಯಲ್ಲಿ ದೇವರ ಜನರಿಗೆ ಕೆಟ್ಟವರಾಗಿದ್ದರು.

*"ಬಡತನ"*– ಇಲ್ಲಿದ್ದ ಅನೇಕ ಪಾಲು ಕ್ರೈಸ್ತರು ಸಮಾಜದಲ್ಲಿ ಬಹಳ ಬಡತನದ ವರ್ಗದಿಂದ ಬಂದವರೆಂದು ಇದರಿಂದ ತಿಳಿಯುತ್ತದೆ (ಅವರಲ್ಲಿ ಕೆಲವರು ಕ್ರಿಸ್ತನನ್ನು ಹಿಂಬಾಲಿಸುವದಕ್ಕೋಸ್ಕರ ಸ್ವಂತ ಚಿತ್ತದಿಂದ ಬಡವರಾಗಿದ್ದರು). ಯಾಕೋಬ 2:5; ಲೂಕ 6:20-22; 14:33.

*"ನೀನು ಐಶ್ವರ್ಯವಂತನೇ"*– 1 ಕೊರಿಂಥ 3:21-23; 2 ಕೊರಿಂಥ 8:9; ಎಫೆ 1:3 – ಭೌತಿಕ ವಸ್ತುಗಳಲ್ಲಿ ಬಡವರಾಗಿದ್ದರೂ, ಆತ್ಮೀಕವಾಗಿ ಐಶ್ವರ್ಯವಂತರಾಗಿದ್ದರು.

*"ತಮ್ಮನ್ನು ಯೆಹೂದ್ಯರೆಂದು ಹೇಳಿಕೊಳ್ಳುವವರು ಯೆಹೂದ್ಯರಲ್ಲ"*– ರೋಮಾ 2:28-29; ಫಿಲಿಪ್ಪಿ 3:2-3 ಹೋಲಿಸಿರಿ.

*"ಸೈತಾನನ ಸಮಾಜದವರು"*– 3:9. ಅವರು ಸಂಶಯವಿಲ್ಲದೆ ದೇವರ ಸಮಾಜದವರೆಂದು ನಂಬಿದ್ದರು. ಜನರು ಯಾವ ಒಂದು ಕಾರಣಕ್ಕಾಗಿ ಸಂಪೂರ್ಣವಾಗಿ ಮೋಸಹೋಗುತ್ತಾರೆಂದು ನೋಡಿರಿ ಯೆರೆ 17:9. ಸೈತಾನನ ವಿಷಯವಾಗಿ ಟಿಪ್ಪಣಿಯನ್ನು 12:9; 1 ಪೂರ್ವ 21:2; ಮತ್ತಾಯ 4:1-10; ಯೋಹಾನ 8:44. **10**

**2:10** *"ಸಂಭವಿಸುವದಕ್ಕಿರುವ ಬಾಧೆಗಳಿಗೆ ಹೆದರಬೇಡಿ"*– ಮತ್ತಾಯ 10:26-28,31; ಲೂಕ 12:32; ಯೋಹಾನ 14:27; 16:33; ಇಬ್ರಿ 13:5-6; ರೋಮಾ 8:28.

*"ಶೋಧಿಲ್ಪಟ್ಟಿದ್ದಿ"*– ಸೈತಾನನು ನಿಮ್ಮನ್ನು ಹಿಂಸಿಸಲು ಮತ್ತು ತುಳಿದು ಹಾಕಲು ಉದ್ದೇಶಿಸಿದ್ದಾನೆ; ದೇವರು ಇದನ್ನು ಶೋಧನೆ ಎಂದು ಪರಿಗಣಿಸುತ್ತಾನೆ. ಕೀರ್ತನೆ 66:10-12; 1 ಥೆಸ 2:4; 1 ಪೇತ್ರ 1:6-7; 2 ಪೇತ್ರ 2:9; ಯಾಕೋಬ 1:2-3.

*"ಹತ್ತು ದಿವಸಗಳು"*– ಯಾವುದೇ ಶೋಧನೆಯನ್ನು ಎಷ್ಟು ದಿನಗಳವರೆಗೆ ಮುಂದುವರಿಸಬೇಕೆಂದು ದೇವರಿಗೆ ಖಚಿತವಾಗಿ ಗೊತ್ತಿದೆ ಮತ್ತು ನಾವು ಸಹಿಸಲಾರದ ಶೋಧನೆಯನ್ನು ಸಹಿಸಿಕೊಳ್ಳಬೇಕೆಂದು ಆತನು ಕೇಳುವದಿಲ್ಲ.

*"ನಂಬಿಗಸ್ತನಾಗಿರು"*– ಹಿಂಸೆಯ ಮತ್ತು ಕಷ್ಟಗಳ ಮಧ್ಯದಲ್ಲಿಯೂ ಕ್ರಿಸ್ತನಿಗೆ ನಂಬು ಮತ್ತು ಆತನನ್ನು ಅಲ್ಲಗಳೆಯಬೇಡ.

*"ಜೀವವೆಂಬ ಜಯಮಾಲೆ"*– ಯಾಕೋಬ 1:12. "ಜಯಮಾಲೆ" ಎಂಬ ಟಿಪ್ಪಣಿಗಾಗಿ 2 ತಿಮೊ 4:8 ನೋಡಿರಿ. **11**

**2:11** *"ಕೇಳಲಿ"*– ವ.7.

*"ಜಯ ಹೊಂದುವವನಿಗೆ*– ವ.7.

*"ಎರಡನೆ ಮರಣ"*– 20:6,14; 21:8 ಇದರ ಅರ್ಥ ಅಂತಿಮವಾಗಿ ದೇವರಿಂದ ಬೇರ್ಪಡುವದು. 2 ಥೆಸ 1:8-9. **12**

**2:12** *"ದೂತನು"*– 1:20.

*"ಪೆರ್ಗಮ"*– ಅಥವಾ ಪೆರ್ಗಮಮ್ – ಆ ದಿನಗಳಲ್ಲಿ ಬಹಳ ಖ್ಯಾತಿಯುಳ್ಳ ಪಟ್ಟಣ, ಎಫೆಸದಿಂದ ಉತ್ತರಕ್ಕೆ ಸುಮಾರು 160 ಕಿ.ಮೀ. ದೂರದಲ್ಲಿತ್ತು.

*"ಇಬ್ಬಾಯಿಕತ್ತಿ"*– 1:16. ತನ್ನನ್ನು ಈ ಸಭೆಗೆ ಹೀಗೆ ಪರಿಚಯಿಸಿಕೊಳ್ಳುತ್ತಿದ್ದಾನೆಂದರೆ

ಆತನು ಅಲ್ಲಿ ವಿರೋಧಿಸುತ್ತಿದ್ದ ಅನೇಕ ಕಾರ್ಯಗಳಿತ್ತೆಂದು ಸೂಚಿಸುತ್ತದೆ. 13

**2:13** *"ಬಲ್ಲೆನು"*– ವ.2.

*"ಸೈತಾನನ ಸಿಂಹಾಸನವಿರುವ ಸ್ಥಳ"*– ಸೈತಾನನ ಸಿಂಹಾಸನವು ನರಕದಲ್ಲಿ ಇಲ್ಲ ಆದರೆ ಈ ಲೋಕದಲ್ಲಿದೆ. ಯೋಹಾನ 12:31; 14:30; 2 ಕೊರಿಂಥ 4:4; ಎಫೆ 6:12; 1 ಪೇತ್ರ 5:8; 1 ಯೋಹಾನ 5:19 ಹೋಲಿಸಿರಿ. ಆ ಸಮಯದಲ್ಲಿ ಪೆರ್ಗಮವನ್ನು ತನ್ನ ಮುಖ್ಯ ಕಛೇರಿಯನ್ನಾಗಿ ಮಾಡಿಕೊಂಡಿದ್ದನು, ತನ್ನ ಚಟುವಟಿಗಳ ಕೇಂದ್ರ. ಈಗ ಅದು ಬೇರೆ ಕಡೆಯಲ್ಲಿದೆ ಎನ್ನುವುದು ನಿಸ್ಸಂದೇಹವಾಗಿದೆ. ಪೆರ್ಗಮಮ್ ಆ ದಿನಗಳಲ್ಲಿ ಅದಕ್ಕಿದ್ದ ಸಂಪೂರ್ಣ ಮುಖ್ಯತ್ವವನ್ನು ಕಳೆದುಕೊಂಡಿದೆ. ಆಗ ಅದು ರೋಮನ್ ಚಕ್ರವರ್ತಿಯನ್ನು ಆರಾಧಿಸುವ ಏಷ್ಯಾದ ಕೇಂದ್ರವಾಗಿತ್ತು. ಮತ್ತು ಅದು ದೇವರು ಮೊದಲನೆ ಯುಗದಲ್ಲಿ ಅದ್ಭುತವಾಗಿ ಮುಗಿಸಿದ ಕೆಲಸದ ಹತ್ತಿರದಲ್ಲಿ ಸಹ ಇತ್ತು, ರೋಮ್ ಮತ್ತು ಯೆರೂಸಲೇಮಿನ ಸರಿಸಮಾನ ದೂರದಲ್ಲಿತ್ತು ಮತ್ತು ಪೌಲನು ಸ್ಥಾಪಿಸಿದ ಸಭೆಗಳಿಗೆ ಮತ್ತು ಏಷ್ಯಾದ ಮೈನರ್, ಮೆಕದೋನ್ಯ ಮತ್ತು ಗ್ರೀಸ್ ನಲ್ಲಿರುವ ಬೇರೆ ಸಭೆಗಳಿಗೆ ಹತ್ತಿರದಲ್ಲಿತ್ತು.

*"ನನ್ನಲ್ಲಿಟ್ಟಿರುವ ನಂಬಿಕೆಯನ್ನು ಮರೆಮಾಡಲಿಲ್ಲ"*– ಆತನನ್ನು ವಿರೋಧಿಸುವ ಕೇಂದ್ರ ಸ್ಥಳದಲ್ಲಿ ಕ್ರಿಸ್ತನನ್ನು ಕರ್ತನು ಮತ್ತು ರಕ್ಷಕನೆಂದು ಒಪ್ಪಿಕೊಳ್ಳಲು ಮುಂದುವರಿಸಿದರು. ಇದನ್ನು ಮಾಡಲು ಹೆಚ್ಚಿನ ಆತ್ಮೀಕ ಶಕ್ತಿಯ ಅವಶ್ಯವಿತ್ತು – ಎಫೆ 6:10.

*"ಅಂತಿಪನು"*– ಏಷ್ಯಾ ಪ್ರಾಂತ್ಯದಲ್ಲಿ ಕ್ರಿಸ್ತನ ಮೊದಲ ರಕ್ತಸಾಕ್ಷಿ. ಪೆರ್ಗಮದಲ್ಲಿದ್ದ ಸಭೆಯನ್ನು ಹಿಂಸಿಸುವದರ ಮೂಲಕ ನಾಶಮಾಡಬೇಕೆಂದು ಸೈತಾನನು ಪ್ರಯತ್ನಿಸಿದನು.

*"ನಂಬಿಗಸ್ತ ರಕ್ತಸಾಕ್ಷಿ" ಅಥವಾ "ಸಾಕ್ಷಿ"*– 1:5 ಹೋಲಿಸಿರಿ. ನಂಬಿಗಸ್ತ ಸಾಕ್ಷಿಯಾದ ಕ್ರಿಸ್ತನು ಅವನಲ್ಲಿ ಕಾರ್ಯಮಾಡಿದ್ದರಿಂದ ಅವನು ಸಹ ಆ ರೀತಿಯ ಸಾಕ್ಷಿಯಾದನು.

*"ಸೈತಾನನ ನಿವಾಸದಲ್ಲಿ"*– ಸೈತಾನನೇ ಈ ಲೋಕವನ್ನು ತನ್ನ ಮನೆಯನ್ನಾಗಿ ಮಾಡಿಕೊಂಡಿರುವ ಎಂಥಹ ಲೋಕವಿದು. ಪೆರ್ಗಮದ ಜನರು ವಿಶೇಷವಾದ ಸಂಪೂರ್ಣ ಹೃದಯದಿಂದ ಸ್ವಾಗತ ಮಾಡಿರಬಹುದು. 14

**2:14** *"ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ"*– (ನಿನ್ನ ವಿರುದ್ಧವಾಗಿ) ವ.4. ಕ್ರಿಸ್ತನು ತನ್ನ ಜನರಲ್ಲಿ ಕಾಣುವ ಒಳ್ಳೆತನವನ್ನು ಮೊದಲು ಪ್ರಶಂಸಿಸುತ್ತಾನೆ ಮತ್ತು ಆದಾದ ನಂತರ ಮಾತ್ರ ಅವರ ತಪ್ಪುಗಳ ಬಗ್ಗೆ ಮಾತನಾಡುತ್ತಾನೆ.

*“ಬಿಳಾಮನು”*– ಸಂಖ್ಯಾ 25:1-3; 31:16; 2 ಪೇತ್ರ 2:15; ಯೂದ 11.

*“ಬಾಲಾಕನು”*– ಸಂಖ್ಯಾ 22:1-6. ಕರ್ತನು ಇಲ್ಲಿ ಸೂಚಿಸುವ ಎರಡು ಕಾರ್ಯಗಳು ಕೊರಿಂಥದ ಸಭೆಯನ್ನು ಸಹ ತೊಂದರೆಪಡಿಸಿತು. 1 ಕೊರಿಂಥ 5:1-2; 6:9; 8:1-13 ನೋಡಿರಿ ಮತ್ತು ಅಪೊ 15:20,29 ಸಹ ನೋಡಿರಿ. ಸೈತಾನನು ಹಿಂಸೆಯ ಮೂಲಕ ಸಭೆಯನ್ನು ನಾಶ ಪಡಿಸಲು ಸಾಧ್ಯವಾಗದೆ, ಒಳಗಿನಿಂದ ಅದನ್ನು ಭ್ರಷ್ಟಗೊಳಿಸುವ ಮಾರ್ಗವನ್ನು ಪ್ರಯತ್ನಿಸಿದನು. ಮತ್ತು ಇದು ಹೆಚ್ಚಿನ ಅಪಾಯವಾಗಿತ್ತು. **15**

**2:15** *“ನಿಕೊಲಾಯಿತರ”*– ವ.6 ಹೋಲಿಸಿರಿ. ಅಭ್ಯಾಸಗಳೇ ಬೋಧನೆಗಳ ಮಾರ್ಗವಾಗುತ್ತದೆ. **16**

**2:16** *“ದೇವರ ಕಡೆಗೆ ತಿರುಗಿಕೋ”*– ವ.5.

*“ಯುದ್ಧ”*– ಯೆರೆ 21:5 ಹೋಲಿಸಿರಿ. ನಾವು ಬೋಧಿಸುವ ವಿಷಯಗಳಲ್ಲಿ ಮತ್ತು ತತ್ವಗಳಲ್ಲಿ ಎಚ್ಚರಿಕೆಯಾಗಿರಬೇಕು ಇಲ್ಲದಿದ್ದರೆ ಕರ್ತನು ತಾನೇ ನಮ್ಮ ವಿರುದ್ದವಾಗಿ ಯುದ್ಧಮಾಡುವದನ್ನು ನಾವು ಕಾಣಬೇಕಾಗುತ್ತದೆ. **17**

**2:17** *“ಕೇಳಲಿ . . . ಜಯಹೊಂದುತ್ತಾನೋ”*– ವ.7.

*“ಬಚ್ಚಿಟ್ಟಿರುವ ಮನ್ನ”*– ಕ್ರಿಸ್ತನು ತಾನೇ. ವಿಮೋ 16:14-16,31; ಯೋಹಾನ 6:35,48-51. ಅದನ್ನು ಈ ಲೋಕದಿಂದ ಮರೆಮಾಡಲಾಗಿದೆ.

*“ಬಿಳೀ ಕಲ್ಲು”*– ಆ ಕಾಲದಲ್ಲಿ ಕೆಲವು ಸಾರಿ ಬಿಳೀ ಕಲ್ಲುಗಳನ್ನು ಹಬ್ಬಗಳಿಗೆ ಅನುಮತಿಯ ಪತ್ರ (ಟಿಕೀಟು) ಗಳಾಗಿ ಉಪಯೋಗಿಸುತ್ತಿದ್ದರು. ಇಲ್ಲಿ ಇದರ ಅರ್ಥ ಇದಾಗಿರಬಹುದು – ಕುರಿಯಾದಾತನ ಮದುವೆಯ ಔತಣ ಕೂಟಕ್ಕೆ ಅನುಮತಿ (19:9).

*“ಹೊಸ ಹೆಸರು”*– ಕ್ರಿಸ್ತನು ಒಬ್ಬ ವ್ಯಕ್ತಿಗೆ ಕೊಡುವ ಹೆಸರು ಅವನು ಅಥವಾ ಅವಳು ಯಾರೆಂದು ಸ್ಪಷ್ಟವಾಗಿ ಸೂಚಿಸುತ್ತದೆ. ಆದಿ 17:5; 32:28 ಹೋಲಿಸಿರಿ. **18**

**2:18** *“ದೂತನು”*– 1:20.

*“ಥುವತೈರ”*– ಪೆರ್ಗಮದಿಂದ ಪೂರ್ವ ಆಗ್ನೇಯ ದಿಕ್ಕಿನಲ್ಲಿ ಸುಮಾರು 70 ಕಿ.ಮೀ. ದೂರದಲ್ಲಿದ್ದ ಒಂದು ಊರು.

*“ದೇವಕುಮಾರನು”*– ಮತ್ತಾಯ 1:18; 3:16; ಯೋಹಾನ 1:14; 3:16; 5:18-19

ಟಿಪ್ಪಣಿಯನ್ನು ನೋಡಿರಿ.

*"ಬೆಂಕಿ...ತಾಮ್ರ"*– 1:14-15. **19**

**2:19** *"ಬಲ್ಲೆನು"*– ವ.2.

*"ಪ್ರೀತಿ...ನಂಬಿಕೆ"*– ಗಲಾ 5:6 ಟಿಪ್ಪಣಿ ನೋಡಿರಿ.

*"ನಿನ್ನ ಕಡೆಯ ಕೃತ್ಯಗಳು ನಿನ್ನ ಮೊದಲಿನ ಕೃತ್ಯಗಳಿಗಿಂತ ಹೆಚ್ಚಾದವು"*– ಅವರು ಬೇರೆ ಅನೇಕ ಸಭೆಗಳಿಂತಿರಲಿಲ್ಲ ಅವರ ಕ್ರಿಸ್ತನ ಮೇಲಿನ ಆಸಕ್ತಿ ಮತ್ತು ಸೇವೆಯು ಕ್ರಮೇಣವಾಗಿ ಕಡಿಮೆಯಾಯಿತು. **20**

**2:20** *"ನಿನ್ನ ಮೇಲೆ"*– ವಚನಗಳು 4,14.

*"ನೀನು ಬಿಟ್ಟಿರುವದೇ"*– ವ.2 ಹೋಲಿಸಿರಿ. ದುಷ್ಟತ್ವವನ್ನು ಮತ್ತು ದುಷ್ಟ ಜನರನ್ನು ಸಭೆಯಲ್ಲಿ ಸಹಿಸಿಕೊಳ್ಳುವದು ನಿಜವಾಗಿಯೂ ಬಹಳ ಗಂಭೀರವಾದ ವಿಷಯ. ಇದು ಸಭೆಯು ಕ್ರಿಸ್ತನನ್ನು ವಿರೋಧಿಸುವಂತೆ ಮಾಡುತ್ತದೆ.

*"ಯೆಜೆಬೇಲಳು"*– ಸತ್ಯವೇದದ ಚರಿತ್ರೆಯಲ್ಲಿ ಯೆಜೆಬೇಲಳು ಅಕ್ಷರಶಃ ಬಹು ದುಷ್ಟ ಹೆಂಗಸಾಗಿದ್ದಳು 1 ಅರಸು 16:30-33; 18:4; 19:1-2; 21:1-23; 2 ಅರಸು 9:7,10,22,30-37 ನೋಡಿರಿ. ಥುವತ್ತೈರ ಸಭೆಯಲ್ಲಿ ದುಷ್ಟಳಾದ ಒಬ್ಬ ಹೆಂಗಸು ತಾನು ಕ್ರಿಸ್ತನ ಹಿಂಬಾಲಕಳೆಂದು ಮತ್ತು ದೇವರ ಪ್ರವಾದಿನಿ ಎಂದು ತನ್ನನ್ನು ಕರೆದುಕೊಂಡು ದೇವರಿಂದ ಸಂದೇಶಗಳು ಆಕೆಗೆ ಸಿಕ್ಕಿತೆಂದು ನಟಿಸುತ್ತಿದ್ದಳು. ಆಕೆಯು ಯೋಚಿಸಿದ್ದೆಲ್ಲವು ಪೆರ್ಗಮ ಸಭೆಯಲ್ಲಿ "ಬೀಳಾಮನ ಬೋಧನೆಗಳಿಗೆ" ಹೋಲುತ್ತಿತ್ತು – ವ.14. **21**

**2:21** *"ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ಸಮಯ"*– ರೋಮಾ 2:4; 2 ಪೇತ್ರ 3:9.

*"ಅವಳಿಗೆ ಇಷ್ಟವಿಲ್ಲ"*– 9:20; 16:9,11; ಮತ್ತಾಯ 23:37. **22**

**2:22** ಮಾನಸಾಂತರ ಪಡಲು ನಿರಾಕರಿಸಿದರೆ ದೇವರ ಶಿಕ್ಷೆಯನ್ನು ಯಾವಾಗಲೂ ಬರಮಾಡಿಕೊಳ್ಳುತ್ತೇವೆ, ಈಗ ಅಥವಾ ಇನ್ನೆಂದಿಗೂ ಇಲ್ಲ.

*"ವ್ಯಭಿಚಾರ"*– ಇದು ಅಕ್ಷರಶಃ ನಿಜವಾಗಿರಬಹುದು ಅಥವಾ ವ್ಯಭಿಚಾರದ ಚಿತ್ರಣವಾಗಿರಬಹುದು (ದೇವರಿಗೆ ನಿಷ್ಠೆಯಿಲ್ಲದ ನಡತೆ – ಯೆರೆ 2:2; 3:6-9; ಯೆಹೆಜ್ಕೇಲ 23:37; ಹೋಶೇಯ 1:2; 4:15), ಅಥವಾ ಇದು ಇವೆರಡನ್ನೂ ಅರ್ಥೈಸಬಹುದು. **23**

**2:23** *"ಅವಳ ಮಕ್ಕಳು"*– ಆಕೆಯ ಬೋಧನೆಯನ್ನು ಹಿಂಬಾಲಿಸಿದವರು.

*"ಮರಣ"*– ಮೋಶೆಯ ಧರ್ಮಶಾಸ್ತ್ರದಲ್ಲಿ ಈ ಎರಡು ರೀತಿಯ ವ್ಯಭಿಚಾರಗಳಿಗೆ ಇದು ಶಿಕ್ಷೆಯಾಗಿತ್ತು (ಯಾಜಕ 20:10; ಧರ್ಮೋ 22:22-24; ಯೆಹೆಜ್ಕೇಲ 16:38-40; 23:46-49). ಸಭೆಯಲ್ಲಿರುವ ದುಷ್ಟರಿಗೆ ಶಿಕ್ಷೆಯನ್ನು ವಿಧಿಸುವದರ ಮೂಲಕ ಬೇರೆ ಸಭೆಯವರು ಮುಖ್ಯವಾದ ಸತ್ಯಗಳನ್ನು ತಿಳಿದುಕೊಳ್ಳಬೇಕೆಂದು ದೇವರು ಅರ್ಥೈಸುತ್ತಾನೆ.

*"ಅಂತರಿಂದ್ರಿಯವನ್ನೂ ಮತ್ತು ಹೃದಯವನ್ನೂ ಪರೀಕ್ಷಿಸುತ್ತಾನೆ"*– 1 ಸಮು 16:7; 1 ಅರಸು 8:39; ಕೀರ್ತನೆ 139:1-2; ಜ್ಞಾನೋ 24:12; ಯೆರೆ 17:10; ಇಬ್ರಿ 4:13.

*"ಅವನವನ ಕೃತ್ಯಗಳಿಗೆ ತಕ್ಕ ಹಾಗೆ"*– 18:6; 20:12-13; 22:12; ಮತ್ತಾಯ 16:27; ರೋಮಾ 2:6. [24]

**2:24** – "ಸೈತಾನನ ಅಗಾಧತೆ" – ಯೆಜೆಬೇಲಳು ತನ್ನನ್ನು ಪ್ರವಾದಿನಿ ಎಂದು ಕರದುಕೊಂಡದ್ದರಿಂದ ಸಂದೇಹವೇ ಬೇಡ ತನ್ನ ಬೋಧನೆಯನ್ನು ದೇವರ ನಿಗೂಢ ರಹಸ್ಯಗಳೆಂದು ರವಾನಿಸಲು ಪ್ರಯತ್ನಿಸಿದಳು. ಆದರೆ ಆಕೆಯು ಸೈತಾನನ ದಾಸಳಾಗಿದ್ದಳು (2 ಕೊರಿಂಥ 11:14-15 ಹೋಲಿಸಿರಿ). ಮೊದಲನೆ ಶತಮಾನದಲ್ಲಿ ಸೈತಾನನ ರಹಸ್ಯಗಳನ್ನು ತಿಳಿದುಕೊಳ್ಳಲು ಕೆಟ್ಟದ್ದನ್ನು ಮಾಡಬೇಕೆನ್ನುವ ಮತ್ತು ಅವನನ್ನು ಸೋಲಿಸಲು ಅನುಭವವನ್ನು ಪಡೆದುಕೊಳ್ಳಬೇಕೆಂಬ ಬೋಧನೆ ಇತ್ತು. ಇದು ಸತ್ಯವನ್ನು ಸಂಪೂರ್ಣವಾಗಿ ತಲೆಕೆಳಗೆ ಮಾಡುತ್ತಿತ್ತು – ನಾವು ನಮ್ಮನ್ನು ಸೈತಾನನಿಗೆ ಒಪ್ಪಿಸಿಕೊಡುವುದರ ಮೂಲಕ ಅಥವಾ ಇನ್ನು ಹೆಚ್ಚಿನ ಪಾಪ ಮಾಡುವುದರ ಮೂಲಕ ಸೈತಾನನ್ನು ಜೈಸಲು ಸಾಧ್ಯವಿಲ್ಲ ಅಥವಾ ಲೌಕಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವದರ ಮೂಲಕ ಲೋಕವನ್ನು ಗೆಲ್ಲಲು ಸಾಧ್ಯವಿಲ್ಲ. ಆ ಮಾದರಿಗಳನ್ನು ನಾವು ಅನುಸರಿಸಿದರೆ ನಾವು ಗುಲಾಮರಾಗುತ್ತೇವೆ ಹೊರತು ಜಯಶಾಲಿಗಳಾಗುವದಿಲ್ಲ. ಆದರೆ ಸೈತಾನನ ಬೋಧನೆಗಳನ್ನು ಜನರು ಸ್ವೀಕರಿಸಿಕೊಳ್ಳುವ ಸಾಧ್ಯತೆಗಳಿವೆ ಮತ್ತು ಆ ಬೋಧನೆಗಳು ದೇವರಿಂದ ಬಂದವುಗಳೆಂದು ಯೋಚಿಸಲು ಸಾಧ್ಯವೇ? ಹೌದು, ಖಂಡಿತವಾಗಿ ಸಾಧ್ಯ. ಎಲ್ಲಾ ಕಡೆಯಲ್ಲಿಯೂ ನಾವು ಅದನ್ನು ಕಾಣುತ್ತೇವೆ. [25]

**2:25** ಈ ಸಭೆಯಿಂದ ಹೆಚ್ಚಾಗಿ ಏನನ್ನೂ ಕ್ರಿಸ್ತನು ಕೇಳಲಿಲ್ಲ ಅಥವಾ ಅವರ ಮೇಲೆ ಹೆಚ್ಚಿನ ಹೊರೆಯನ್ನು ಹೇರಲಿಲ್ಲ. (ಮತ್ತಾಯ 11:29-30 ಹೋಲಿಸಿರಿ). ದೇವರ ನಿಜವಾದ ಸೇವಕರ ಮೂಲಕ ಕೇಳಿಸಿಕೊಂಡ ಸತ್ಯವನ್ನು ಹಿಡಿದಿಟ್ಟುಕೊಂಡರೆ ಮತ್ತು ಸುಳ್ಳು

ಪ್ರವಾದಿಗಳನ್ನು ನಿರಾಕರಸಿದ್ದರೆ ಸಾಕಾಗಿತ್ತು. ಯೋಹಾನ 8:31-32; 1 ಕೊರಿಂಥ 15:2; 2 ಥೆಸ 2:15; 1 ತಿಮೊ 3:9; ತೀತ 1:9; ಇಬ್ರಿ 4:14 ಹೋಲಿಸಿರಿ.

*"ನಾನು ಬರುವ ತನಕ"*– ಕ್ರಿಸ್ತನ ಎರಡನೆ ಬರೋಣದ ಸಮಯದಲ್ಲಿ ಥುವತ್ತೈರದಲ್ಲಿ ವಾಸ್ತವವಾದ ಸಭೆಯು ಇರುವದಿಲ್ಲ, ಆದರೆ 1:20 ರ ಟಿಪ್ಪಣಿಯನ್ನು ನೋಡಿರಿ. ಥುವತ್ತೈರವನ್ನು ಪ್ರತಿಸಿಧಿಸುವ ಸಭೆಯು ಕ್ರಿಸ್ತನು ಬರುವಾಗ ಈ ಭೂಮಿಯ ಮೇಲೆ ಇರುತ್ತದೆ. **26**

**2:26** *"ಜಯಶಾಲಿಯಾದವನು"*– ವ.7 ರ ಟಿಪ್ಪಣಿ.

*"ಕಡೇವರೆಗೂ"*– ಮತ್ತಾಯ 24:13; ಇಬ್ರಿ 3:6,14; 6:11; 2 ತಿಮೊ 2:12. ನಂಬಿಕೆಯಲ್ಲಿ ಸ್ಥಿರತೆ ಮತ್ತು ಸೇವೆಯು ಬಹಳ ಮುಖ್ಯವಾದದ್ದಾಗಿದೆ. **27**

**2:27** *"ಅವನು ಅವರನ್ನು ಆಳುವನು"*– ಕೀರ್ತನೆ 2:8-9 ರಲ್ಲಿ ತಂದೆಯಾದ ದೇವರು ಕ್ರಿಸ್ತನಿಗೆ ಕೊಟ್ಟ ಅದೇ ವಾಗ್ದಾನವಾಗಿದೆ. ಈಗ ಅವರು ಆತನ ಕಷ್ಟದಲ್ಲಿ ಪಾಲುಗಾರರಾಗಿದ್ದಾರೆ, ಆದರೆ ಆತನು ಬಂದ ಮೇಲೆ ಆತನೊಂದಿಗೆ ಅವರು ಆಳುವರು – 3:21; 20:4,6; 2 ತಿಮೊ 2:12.

*"ನಾನು ನನ್ನ ತಂದೆಯಿಂದ ಹೊಂದಿದೆ"*– ಮತ್ತಾಯ 28:18; ಯೋಹಾನ 3:35; 17:2. **28**

**2:28** *"ಉದಯ ನಕ್ಷತ್ರ"*– ಕ್ರಿಸ್ತನು ತಾನೇ. 22:16 ನೋಡಿರಿ. **29**

**2:29** ವಚನ 7.

# 3 1

**3:1** *"ದೂತನು"*– 1:20.

*"ಸಾರ್ದಿಸ್"*– ಥುವತ್ತೈರದಿಂದ ದಕ್ಷಿಣಕ್ಕೆ ಸುಮಾರು 50 ಕಿಲೋಮೀಟರ್ ದೂರದಲ್ಲಿದ್ದ ಪ್ರಖ್ಯಾತಿಯುಳ್ಳ ಶ್ರೀಮಂತ ಪಟ್ಟಣ.

*"ಏಳು ಆತ್ಮಗಳು"*– 1:4.

*"ಏಳು ನಕ್ಷತ್ರಗಳು"*– 1:16,20.

*“ಬಲ್ಲೆನು”*– 2:2.

*“ನೀನು ಸತ್ತವನಾಗಿದ್ದಿ”*– ಆತ್ಮೀಕವಾಗಿ ಸತ್ತಿದ್ದಿ. ಜೀವವುಳ್ಳ ಸಭೆ ಎಂಬ ಗೌರವವು ಅವರಿಗೆ ಒಂದು ವೇಳೆ ಹಿಂದಿನ ಸಂತತಿ ವಿಶ್ವಾಸಿಗಳಿಂದ ಬಂದದ್ದಾಗಿರಬಹುದು ಅಥವಾ, ಒಂದು ವೇಳೆ, ಹೆಚ್ಚಿನ ಧಾರ್ಮಿಕ ಆಚರಣೆಯಿಂದಿರಬಹುದು. ಸಭೆಯಲ್ಲಿ ಹೆಚ್ಚಿನ ಸಂಖ್ಯೆಯ ಜನರನ್ನು ನೋಡಿ ಮತ್ತು ಸಭೆಯ ಆತ್ಮೀಕ ಜೀವಿತದ ಚಟುವಟಿಕೆಗಳನ್ನು ನೋಡಿ ಕೆಲವು ಸಾರಿ ಜನರು ತಪ್ಪಾಗಿ ಅರ್ಥಮಾಡಿಕೊಳ್ಳುತ್ತಾರೆ. **2**

**3:2** *“ಎಚ್ಚರವಾಗಿರು”*– ಎಫೆ 5:14 ಹೋಲಿಸಿರಿ. ಅವರು ಆತ್ಮೀಕವಾಗಿ ನಿದ್ರೆ ಮಾಡುತ್ತಿದ್ದರು ಮತ್ತು ಅವರ ನಿಜ ಆತ್ಮೀಕ ಸ್ಥಿತಿ ಅವರಿಗೆ ಗೊತ್ತಿರಲಿಲ್ಲ.

*“ಉಳಿದವುಗಳನ್ನು ದೃಢಪಡಿಸು”*– ಸಭೆಯು ಆಶಾರಹಿತವಾದ ಸ್ಥಿತಿಗೆ ಇನ್ನು ಬಂದಿರಲಿಲ್ಲ ಆದರೆ ಅವರಲ್ಲಿದ್ದ ಸತ್ಯ ಮತ್ತು ಬೆಳಕು ಸಾಯುವ ಸ್ಥಿತಿಯಲ್ಲಿತ್ತು. **3**

**3:3** *“ನೆನಪಿಗೆ ತಂದುಕೋ”*– 2:5.

*“ಹೊಂದಿದ ಮತ್ತು ಕೇಳಿದ”*– ದೇವರವಾಕ್ಯ.

*“ಅದನ್ನು ಕಾಪಾಡಿಕೋ”*– ಅದು ಇನ್ನೇನು ಅವರಿಂದ ಜಾರಿ ಹೋಗುವದರಲ್ಲಿತೆಂದು ಅನ್ನಿಸುತ್ತದೆ – ಅಥವಾ ಅವರು ಅದರಿಂದ ಜಾರಿ ಹೋಗುತ್ತಿದ್ದರು. ಇಬ್ರಿ 2:1 ಹೋಲಿಸಿರಿ. ಸತ್ಯವನ್ನು ಮೌಲ್ಯೀಕರಿಸಬೇಕು, ಹಿಡಿದುಕೊಳ್ಳಬೇಕು ಮತ್ತು ವಿಧೇಯರಾಗಬೇಕು. ಇಲ್ಲದಿದ್ದರೆ ಸಭೆಯು ಸಾವಿನಲ್ಲಿ ಮುಳುಗಿ ಹೋಗುತ್ತದೆ. ಒಂದು ಸಾರಿ ಸತ್ಯವು ಬಿಟ್ಟು ಹೋದರೆ, ಎಲ್ಲವೂ ಹೋದಂತೆ.

*“ದೇವರ ಕಡೆಗೆ ತಿರುಗಿಕೋ”*– 2:5,16,21.

*“ಕಳ್ಳನು”*– ಮತ್ತಾಯ 24:43-44; 1 ಥೆಸ 5:2-4. **4**

**3:4** *“ಸ್ವಲ್ಪ ಜನರು”*– ಅನೇಕ ವೇಳೆ ಸತ್ತಂತ ಸಭೆಗಳಲ್ಲಿ ಆತ್ಮೀಕವಾಗಿ ಜೀವವುಳ್ಳವರು ಮತ್ತು ಪರಿಶುದ್ಧತ್ವವನ್ನು ಹಿಂಬಾಲಿಸುವವರು ಇರುತ್ತಾರೆ (ಇಬ್ರಿ 12:14; 1 ಯೋಹಾನ 3:3).

*“ಶುಭ್ರವಸ್ತ್ರ”*– ವ.18; 4:4; 6:11; 7:9,13; 19:14.

*“ಯೋಗ್ಯರು”*– 2 ಥೆಸ 1:5. **5**

**3:5** *“ಜಯಶಾಲಿಗೆ”*– 2:7 ರ ಟಿಪ್ಪಣಿ.

*“ಜೀವಬಾಧ್ಯರ ಪಟ್ಟಿ”*– 13:8; 17:8; 20:12,15; 21:27; ಫಿಲಿಪ್ಪಿ 4:3. ವಿಮೋ 32:32-33; ಕೀರ್ತನೆ 69:28; ದಾನಿ 12:1 ಹೋಲಿಸಿರಿ. ಈ ಪುಸ್ತಕದಿಂದ ಯಾರನ್ನಾದರೂ ತೆಗೆದು ಹಾಕುತ್ತೇನೆಂದು ಕರ್ತನಾದ ಯೇಸುವು ಯಾರನ್ನೂ ಹೆದರಿಸುತ್ತಿಲ್ಲ, ಆದರೆ ನಿಜವಾದ ವಿಶ್ವಾಸಿಗಳ ಹೆಸರನ್ನು ಎಂದಿಗೂ ತೆಗೆದು ಹಾಕುವದಿಲ್ಲವೆಂದು ವಾಗ್ದಾನ ಮಾಡುತ್ತಿದ್ದಾನೆ.

*“ನಾನು ಅವನನ್ನು ಒಪ್ಪುವೆನು”*– ಮತ್ತಾಯ 10:32. **6**

**3:6** 2:7. **7**

**3:7** *“ದೂತನು”*– 1:20.

*“ಫಿಲದೆಲ್ಫಿಯ”*– ಸಾರ್ಧಿಸಿನಿಂದ ಆಗ್ನೇಯ ಭಾಗದಲ್ಲಿ ಸುಮಾರು 50 ಕಿ.ಮೀ ದೂರದಲ್ಲಿದ್ದ ಪಟ್ಟಣ. ಈ ಹೆಸರಿನ ಅರ್ಥ “ಸಹೋದರ ಪ್ರೀತಿ”.

*“ಪರಿಶುದ್ಧನೂ ಸತ್ಯವಂತನೂ”*– 6:10; 15:4; ಯೆಶಾಯ 1:4; ಕೀರ್ತನೆ 31:5; ಯೋಹಾನ 14:6.

*“ದಾವೀದನ ಬೀಗದ ಕೈಯುಳ್ಳವನೂ”*– ಯೆಶಾಯ 22:22. ಕ್ರಿಸ್ತನು ದೇವರ ಮನೆಯ, ಮನವಾರ್ತೆಯವನು, ದೇವರ ರಾಜ್ಯದ ಜ್ಞಾನ ಮತ್ತು ಕೃಪೆ ಮತ್ತು ಆತ್ಮೀಕ ವರಗಳ ಮತ್ತು ಶಕ್ತಿಯ ಉಗ್ರಾಣದ ಬೀಗದ ಕೈಯನ್ನು ಹೊಂದಿರುವ ಖಜಾಂಜಿ.

*“ಮುಚ್ಚುವವನೂ...ತೆರೆಯುವವನೂ”*– ದೇಶಗಳ ಮತ್ತು ಸಭೆಗಳ ವ್ಯವಹಾರಗಳಲ್ಲಿ ಕ್ರಿಸ್ತನಿಗೆ ಸಂಪೂರ್ಣ ಅಧಿಕಾರವಿದೆ. ಮತ್ತಾಯ 28:18; ಯೋಹಾನ 17:2 ಹೋಲಿಸಿರಿ. ಆತನು ಲೋಕದಲ್ಲಿ ಎಲ್ಲಿಯಾದರೂ ಬಾಗಿಲುಗಳನ್ನು ತರೆಯಬಹುದು ಅಥವಾ ಮುಚ್ಚಬಹುದು ಮತ್ತು ಅದನ್ನು ಪರಿಪೂರ್ಣ ಜ್ಞಾನದಿಂದ ಮಾಡುವನು. **8**

**3:8** *“ಬಲ್ಲೆನು”*– 2:2.

*“ಬಾಗಿಲನ್ನು ತೆರೆದಿಟ್ಟಿದ್ದೇನೆ”*– ಅಪೊ 14:27; 1 ಕೊರಿಂಥ 16:9.

*“ಶಕ್ತಿ ಕೊಂಚವಾಗಿದ್ದರೂ”*– ಎಫೆ 1:18-19; 6:10; ಕೊಲೊ 1:11. ಅವರಿಗಿದ್ದ ಶಕ್ತಿಗಿಂತಲೂ ಹೆಚ್ಚಿನ ಶಕ್ತಿ ಹೊಂದಿರಬಹುದಾಗಿತ್ತೆಂದು ಸ್ಪಷ್ಟವಾಗಿ ತೋರುತ್ತದೆ.

*“ನನ್ನ ವಾಕ್ಯವನ್ನು ಕಾಪಾಡಿದ್ದರಿಂದ”*– ಸಾರ್ಡಿಸಿನಲ್ಲಿರುವ ಕ್ರೈಸ್ತರು ಇದನ್ನು ಮಾಡಲು ಒತ್ತಾಯಿಸಲ್ಪಟ್ಟರು – ವ.3.

*“ನನ್ನ ಹೆಸರನ್ನು ಅಲ್ಲಗಳೆಯಲಿಲ್ಲ”*– 2:13. ಕರ್ತನಾದ ಯೇಸುವಿನ ವಾಕ್ಯವನ್ನು ಕಾಪಾಡಿಕೊಳ್ಳಲು ಮತ್ತು ಆತನ ಹೆಸರನ್ನು ಅಲ್ಲಗಳೆಯದಿರಲು “ಸ್ವಲ್ಪ” ಆತ್ಮೀಯ ಶಕ್ತಿಯು ಬೇಕಾಗುತ್ತದೆ. ಒಂದು ವೇಳೆ ನಿಜವಾದ ಆತ್ಮೀಕ ಜೀವಿನವಿದ್ದಿದ್ದರೆ ಅಲ್ಲಿ ಹೆಚ್ಚಿನ ಶಕ್ತಿ ಇರುತ್ತಿತ್ತು. ಒಂದು ವೇಳೆ ವಿಶ್ವಾಸಿಗಳು “ಎಲ್ಲಾ ಶಕ್ತಿಯಿಂದ ಬಲಗೊಂಡರೆ” ಏನು ಮಾಡಬಹುದೆಂದು ಯೋಚಿಸಿರಿ (ಕೊಲೊ 1:11; ಎಫೆ 3:16). 9

**3:9** *“ಸೈತಾನನ ಸಮಾಜ”*– 2:9.

*“ಸುಳ್ಳು”*– ದೈಹಿಕ ವಂಶಾವಳಿಯಿಂದ ಅವರು ಯೆಹೂದ್ಯರಾಗಿದ್ದರು, ಆದರೆ ಯೆಹೂದ್ಯರು ಹೇಗಿರಬೇಕೆಂದು ದೇವರು ಯೋಜಿಸಿದನೋ ಅವೆಲ್ಲಕ್ಕೂ ಅವರು ತದ್ವಿರುದ್ಧವಾಗಿದ್ದರು, ಆದ್ದರಿಂದ ಅವರು ಸುಳ್ಳು ಜೀವಿತವನ್ನು ಜೀವಿಸುತ್ತಿದ್ದರು (ರೋಮಾ 2:28-29 ಹೋಲಿಸಿರಿ).

*“ನಿನ್ನ ಪಾದಗಳ ಮುಂದೆ ಬೀಳುವಂತೆ”*– ಯೆಶಾಯ 45:14; 49:23; 60:14.

*“ನಾನು ನಿನ್ನನ್ನು ಪ್ರೀತಿಸಿದ್ದೇನೆ”*– ಆತನ ದೃಷ್ಟಿಯಲ್ಲಿ ವಿಶೇಷವಾದ ಸಭೆಗೆ ಆತನ ವಿಶೇಷವಾದ ಪ್ರೀತಿ. ಯೋಹಾನ 14:21,23 ಹೋಲಿಸಿರಿ. 10

**3:10** *“ಸಹನೆ”*– ರೋಮಾ 12:12; 2 ಥೆಸ 3:5; 1 ಪೇತ್ರ 2:20-21.

*“ತಪ್ಪಿಸಿ ಕಾಪಾಡುವೆನು”*– ಗ್ರೀಕ್ ಭಾಷೆಯಲ್ಲಿ ಇದರ ಅರ್ಥ ಬರುವಂತ ಶೋಧನೆಯಿಂದ ಅವರನ್ನು ಸಂಪೂರ್ಣವಾಗಿ ದೂರಮಾಡುವೆನು, ಅಥವಾ ಅವರ ಸುತ್ತಲೂ ಇರುವ ಶೋಧನೆಗಳಿಂದ ಸುರಕ್ಷಿತವಾಗಿ ತಪ್ಪಿಸಿ ಕಾಪಾಡುವೆನು.

*“ಶೋಧನೆಯ ಸಮಯದಲ್ಲಿ”*– ಇದು ಎರಡು ಕಾರ್ಯಗಳನ್ನು ಸೂಚಿಸಬಹುದು – ಆದಿ ಸಭೆಗಳಲ್ಲಿ ಬಂದ ಶೋಧನೆ ಮತ್ತು ಈ ಯುಗದ ಅಂತ್ಯದಲ್ಲಿ ಬರುವ ಶೋಧನೆ (ಬಹುಶಃ 7:14 ಮತ್ತು ಮತ್ತಾಯ 24:21 ರಲ್ಲಿ ಹೇಳಿರುವ ಮಹಾ ಸಂಕಟದ ಸಮಯದಲ್ಲಿರಬಹುದು. ದಾನಿ 12:1 ಸಹ ನೋಡಿರಿ). ಈ ಸಂದರ್ಭದಲ್ಲಿ, ವಿಶ್ವಾಸಿಗಳು ಆ ಸಮಯದಲ್ಲಿ ವಿಶ್ವಾಸಿಗಳನ್ನು ಕಾಪಾಡುವ ವಾಗ್ದಾನವು ಈ ಎರಡು ಸಮಯಕ್ಕೂ ಅನ್ವಯಿಸುತ್ತದೆ. ಆದಿ ಸಭೆಗೆ ಬಂದ ಹಿಂಸೆಯ ಸಮಯದಲ್ಲಿ ಮತ್ತು ಮಹಾ ಸಂಕಟದ

ಸಮಯದಲ್ಲಿ, ಈ ವಾಗ್ದಾನವು ನೆರವೇರದ ಹೊರತು ಈ ಲೋಕದಿಂದ ನಿಜವಾಗಿಯೂ ಫಿಲದೆಲ್ಫಿಯ ಸಭೆಯು ಎತ್ತಲ್ಪಡಲಿಲ್ಲ, ಆ ಸಮಯದಲ್ಲಿ ಅದು ಕಾಪಾಡಲ್ಪಟ್ಟಿತು. ಯೇಸುವಿನ ವಾಗ್ದಾನವು ಒಂದು ವಿಧದಲ್ಲಿ ನೆರೆವೇರುತ್ತದೆ, ಮತ್ತು ಈ ಯುಗದ ಅಂತ್ಯದಲ್ಲಿ ಒಟ್ಟಾಗಿ ಬೇರೆ ರೀತಿಯಲ್ಲಿ ನೆರವೇರುತ್ತದೆಂದು ನಾವು ಯೋಚಿಸಬಹುದಾ? 11

**3:11** *"ಬೇಗನೆ"*– 1:1,3; 22:7,12,20.

*"ನಿನಗಿರುವದನ್ನು ಹಿಡಿದುಕೊಂಡಿರು"*– 2:25.

*"ನಿನ್ನ ಜಯಮಾಲೆಯನ್ನು"*– ಬಹುಶಃ ಇಲ್ಲಿ ಇದು ನಂಬಿಗಸ್ತ ಸೇವೆಗಾಗಿ ಕೊಡುವ ಪ್ರತಿಫಲವನ್ನು ಸೂಚಿಸುತ್ತದೆ. 2:10; 1 ಕೊರಿಂಥ 9:24-27; ಫಿಲಿಪ್ಪಿ 4:1; 2 ತಿಮೊ 2:5; 4:8; ಯಾಕೋಬ 1:12; 1 ಪೇತ್ರ 5:4; 2 ಯೋಹಾನ 8 ಹೋಲಿಸಿರಿ. 12

**3:12** *"ಯಾವನು ಜಯ ಹೊಂದುತ್ತಾನೋ"*– 2:7.

*"ಸ್ತಂಭ"*– ದೇವರು ಈಗ ಕಟ್ಟುತ್ತಿರುವ ಆತ್ಮೀಕ ಕಟ್ಟಡದಲ್ಲಿ ಪ್ರತಿಯೊಬ್ಬ ವಿಶ್ವಾಸಿಗಳಿಗೂ ಒಂದು ಪಾತ್ರವಿದೆ (ಎಫೆ 2:19-22; 1 ಕೊರಿಂಥ 3:17; 6:19). "ಸ್ತಂಭ" ವಾಗಿರುವುದು ಈ ಆಲಯದಲ್ಲಿ ಮುಖ್ಯವಾದ ಮತ್ತು ಶಾಶ್ವತ ಸ್ಥಾನವನ್ನು ಸೂಚಿಸುತ್ತದೆ.

*"ಹೆಸರು"*– 2:17. ಜಯ ಹೊಂದುವವರ ಮೇಲೆ ಮೂರು ಹೆಸರುಗಳನ್ನು ಬರೆಯಲಾಗಿರುತ್ತದೆ.

*"ದೇವರು"*– ದೇವರ ಪರಶುದ್ಧ ಗುಣವನ್ನು ಅವರ ಮೇಲೆ ಮುದ್ರೆ ಹಾಕಲ್ಪಟ್ಟಿರುತ್ತದೆ, ದೇವರ ಮಾಲಿಕತ್ವದ ಗುರುತು. ಅವರು ದೇವರ ಸ್ವಾಭಾವದೊಂದಿಗೆ ಸಂಪೂರ್ಣವಾಗಿ ಒಂದಾಗಿರುತ್ತಾರೆ.

*"ಪಟ್ಟಣ"*– 21:2-27. ಜಯ ಹೊಂದಿದವರು ಪ್ರಕಾಶವುಳ್ಳ, ಹೊಳೆಯುವ, ಚಿನ್ನದ, ಮಹಿಮೆಯುಳ್ಳ ಸ್ಥಳದಲ್ಲಿ ವಾಸಿಸಲು ಸಂಪೂರ್ಣವಾಗಿ ಅರ್ಹರಾಗಿರುತ್ತಾರೆ.

*"ನನ್ನ ಹೊಸ ಹೆಸರು"*– 19:12 ಹೋಲಿಸಿರಿ. ಈ ಹೊಸ ಹೆಸರು ಏನಾಗಿರಬಹುದೆಂದು ನಮಗೆ ಗೊತ್ತಿಲ್ಲ, ತಿಳಿಯದ ಆತನ ಆದ್ಭುತವನ್ನು ನಾವು ನಂತರದಲ್ಲಿ ಕಾಣುವವರಾಗಿದ್ದೇವೆ. 13

**3:13** 2:7 ನೋಡಿರಿ. **14**

**3:14** *“ದೂತನು”*– 1:20.

*“ಲವೊದಿಕೀಯ”*– ಲವೊದಿಕೀಯ ಪಟ್ಟಣವು ಫಿಲದೆಲ್ಫಿಯದ ಆಗ್ನೇಯ ದಿಕ್ಕಿಗೆ ಸುಮಾರು 80 ಕಿ.ಮೀ. ಮತ್ತು ಎಫೆಸದ ಪೂರ್ವಕ್ಕೆ ಸುಮಾರು 150 ಕಿ.ಮೀ ದೂರದಲ್ಲಿತ್ತು.

*“ಆಮೆನ್ ಎಂಬಾತನು”*– 1:7. ಇಲ್ಲಿ ಈ ಪದವು ಸತ್ಯ, ನಂಬಿಗಸ್ತ, ವಿಶ್ವಾಸಾರ್ಹತೆ ಎಂಬ ಅರ್ಥವನ್ನು ಕೊಡುತ್ತದೆ. ಯೆಶಾಯ 65:16 ರಲ್ಲಿ ಇದು ದೇವರಿಂದ ಉಪಯೋಗಿಸಲ್ಪಟ್ಟಿದೆ (ಇಬ್ರಿಯ ಭಾಷೆಯಲ್ಲಿ “ಆಮೆನ್ ಎಂಬಾತನು ದೇವರು” ಎಂದಿದೆ. ಅದರ ಅರ್ಥ ದೇವರು ತಾನು ಹೇಳಿದ್ದನ್ನು ಹಾಗೆಯೇ ಮಾಡುತ್ತಾನೆ).

*“ಸಾಕ್ಷಿ”*– 1:5.

*“ಮೂಲನೂ”*– ಇದು ದೇವರು ಸೃಷ್ಟಿಸಿದವರಲ್ಲಿ ಆತನು ಮೊದಲನೆಯವನು ಎಂದು ಅರ್ಥವಲ್ಲ. ಆತನು ತ್ರಯೈಕ ದೇವರಲ್ಲಿ ಒಬ್ಬನಾಗಿದ್ದನು ಮತ್ತು ಎಂದಿಗೂ ಸೃಷ್ಟಿಮಾಡಲ್ಪಟ್ಟವನಲ್ಲ. ಗ್ರೀಕ್ ಭಾಷೆಯಲ್ಲಿ ಇದರ ಅರ್ಥ ಆತನ ಮೂಲಕ ಸೃಷ್ಟಿ ಅಸ್ತಿತ್ವಕ್ಕೆ ಬಂದಿತು, ಮೂಲನೂ, ಸೃಷ್ಟಿಯ ಮೂಲನು. ಯೋಹಾನ 1:3; ಕೊಲೊ 1:16-17. **15**

**3:15** *“ಬಲ್ಲೆನು”*– 2:2.

*“ತಣ್ಣಗೆ”*– ಆತ್ಮೀಕವಾಗಿ ತಣ್ಣಗೆ. ಇಲ್ಲಿ ಇದರ ಅರ್ಥ ಕ್ರಿಸ್ತನ ಸುವಾರ್ತೆಯನ್ನು ಸಂಪೂರ್ಣವಾಗಿ ನಿರಾಕರಿಸುವುದು ಅಥವಾ ಬಹಿರಂಗವಾಗಿ ಅದನ್ನು ವಿರೋಧಿಸುವುದು. “ಬೆಚ್ಚಗೆ” ಇದರ ಅರ್ಥ ಸುವಾರ್ತೆಯನ್ನು ಪ್ರೀತಿಸುವುದು ಮತ್ತು ಕ್ರಿಸ್ತನಿಗಾಗಿ ಅತೀ ಉತ್ಸಾಹದಿಂದಿರುವುದು. **16**

**3:16** *“ಉಗುರುಬೆಚ್ಚಗಿರುವುದು”*– ಇದರ ಅರ್ಥ ಸುವಾರ್ತೆಗಾಗಿ ಹೆಚ್ಚಾಗಿಲ್ಲದಿರುವುದು ಅಥವಾ ಅದರ ವಿರುದ್ಧವಾಗಿಯೂ ಇಲ್ಲದಿರುವುದು, ಅಂದರೆ, ದೈವಭಕ್ತಿಗೆ ಶಕ್ತಿಯ ಕೊರತೆ (2 ತಿಮೊ 3:5), ಕ್ರಿಸ್ತನಿಗಾಗಿ ಹೃದಯವಿಲ್ಲದಿರುವುದು ಆದರೆ ಕ್ರೈಸ್ತಧರ್ಮವನ್ನು ಸಂಪೂರ್ಣವಾಗಿ ಬಿಡದಿರುವುದು. ಇದು ರೋಮಾ 12:11; 1 ಕೊರಿಂಥ 15:58 ಕ್ಕೆ ವಿರುದ್ಧವಾಗಿದೆ. ದೇವರಿಗಾಗಿ ಉತ್ಸಾಹದಿಂದಿದ್ದವರು, ಈ ರೀತಿಯ ಆತ್ಮೀಕ ಸ್ಥಿತಿಯಲ್ಲಿರುವುದು ಕ್ರಿಸ್ತನಿಗೆ ಅಸಹ್ಯಕರವಾಗಿದೆ.

*"ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು"*– ಅವರು ಪಶ್ಚಾತ್ತಾಪ ಪಡದಿದ್ದರೆ (ವ.19), ಆತನಿಗೆ ಅವರೊಂದಿಗೆ ಮಾಡಲು ಏನೂ ಇರುವದಿಲ್ಲ; ಅವರು ವಾಕ್ಯದ ಪ್ರಕಾರವಾಗಿ ಸಭೆಯಾಗಲು ಸ್ಥಗಿತಗೊಳ್ಳುತ್ತಾರೆ (ಅವರು ತಮ್ಮ ಕೂಟಗಳನ್ನು, ಸಮಾರಂಭಗಳನ್ನು, ಮುಂತಾದವುಗಳನ್ನು ನಡೆಸಲು ಮುಂದುವರಿಸಿದರು ಸಹ) ಕ್ರಿಸ್ತನ ಬಾಯಿಂದ ಕಾರಲ್ಪಟ್ಟ ಸಭೆಗಳು ಹೆಚ್ಚು ಕಡಿಮೆ ಎಥಾಪ್ರಕಾರವಾಗಿ ಏನು ಆಗಲಿಲ್ಲವೆಂಬಂತೆ ಮೊದಲಿನಂತೆಯೇ ಮುಂದುವರೆದುಕೊಂಡು ಹೋಗಲು ಸಾಧ್ಯವಿದೆ! 17

**3:17** ಆ ಕ್ರೈಸ್ತರ ಬಗ್ಗೆ ಕ್ರಿಸ್ತನ ದೃಷ್ಟಿಕೋನ ಮತ್ತು ಅವರ ಅಲೋಚನೆಗಳ ನಡುವೆ ಎಷ್ಟು ವ್ಯತ್ಯಾಸವಿದೆ! ಅವರ ಸ್ಥಿತಿ ಆತನಿಗೆ ಅಸಹ್ಯವಾಯಿತು; ಅದು ಅವರಿಗೆ ತೃಪ್ತಿಯ ಮೂಲ ಮತ್ತು ಹೆಮ್ಮೆಯ ವಿಷಯವಾಗಿತ್ತು. ಲೂಕ 16:15 ಹೋಲಿಸಿರಿ.

*"ಒಂದರಲ್ಲಿಯೂ ಕೊರತೆಯಿಲ್ಲದವನು"*– ಹೋಶೇಯ 12:8; ಲೂಕ 18:11-12; 1 ಕೊರಿಂಥ 4:8 ಹೋಲಿಸಿರಿ.

*"ತಿಳಿಯದೆ ಇದ್ದೀ"*– ಸ್ವಯಂ ವಂಚನೆ ಮತ್ತು ಸ್ವಯಂ ಅಜ್ಞಾನ ಎಷ್ಟು ಅಪಾಯಕರವಾಗಿದೆ ಮತ್ತು ಲೋಕದಲ್ಲಿಯೂ ಮತ್ತು ಸಭೆಯಲ್ಲಿಯೂ ಅವು ಎಷ್ಟು ಸಾಮಾನ್ಯವಾಗಿದೆ. ಅದಕ್ಕೆ ಕಾರಣವೇನು? ಯೆರೆ 17:9; 2 ಕೊರಿಂಥ 4:4; 2 ಥೆಸ 2:10; ಇಬ್ರಿ 3:13. 18

**3:18** – "ಕೊಂಡುಕೋ" – ಹಣ ಅಥವಾ ಒಳ್ಳೆಯ ಕೆಲಸಗಳಿಂದಲ್ಲ. ಯೆಶಾಯ 55:1; ಮತ್ತಾಯ 13:44-46.

*"ನನ್ನಿಂದ"*– ನಿಜವಾದ ಆತ್ಮೀಕ ಜೀವಿತಕ್ಕೆ ಬೇಕಾದವುಗಳೆಲ್ಲದರ ಮತ್ತು ಸಂತೋಷವುಳ್ಳ ನಿತ್ಯತ್ವಕ್ಕೆ ಯೇಸುವು ಮಾತ್ರ ಮೂಲವಾಗಿದ್ದಾನೆ. ಬೇರೆಕಡೆಯಿಂದ ಅವುಗಳನ್ನು ಕೊಂಡುಕೊಳ್ಳುವುದಕ್ಕೆ ಪ್ರಯತ್ನಪಡುವುದರಿಂದ ಯಾವುದೇ ಪ್ರಯೋಜನವಿಲ್ಲ.

*"ಚಿನ್ನ"*– ಇಲ್ಲಿ ಇದು ಹೆಚ್ಚಿನ ಆತ್ಮೀಕ ಮೌಲ್ಯ, ಸತ್ಯ ಮತ್ತು ದೈವಿಕ ಐಶ್ವರ್ಯವನ್ನು ಸೂಚಿಸುತ್ತದೆ.

*"ಬಿಳೀವಸ್ತ್ರಗಳು"*– ಅಂದರೆ ನೀತಿ (ಯೆಶಾಯ 61:10 ಹೋಲಿಸಿರಿ).

*"ಅಂಜನ"*– ಆತ್ಮೀಕ ಕುರುತನಕ್ಕೆ ಕ್ರಿಸ್ತನ ಪರಿಹಾರ, ಆತನ ಶಕ್ತಿಯು ಆತ್ಮೀಕ ತಿಳುವಳಿಕೆಯನ್ನು ಕೊಡುತ್ತದೆ. 19

**3:19** *“ನಾನು ಪ್ರೀತಿಸುತ್ತೇನೆ”*– ಅವರು ಉಗುರುಬೆಚ್ಚಗಿರುವುದು ಆತನನ್ನು ಅಸಹ್ಯಪಡಿಸಿತು ಆದರೆ ಅದಕ್ಕಾಗಿ ಪ್ರೀತಿಸುವ ಆತನ ಹೃದಯವು ಬದಲಾಗಲಿಲ್ಲ.

*“ಶಿಸ್ತು”*– ಇಬ್ರಿ 12:5-11; 1 ಕೊರಿಂಥ 11:32; ಜ್ಞಾನೋ 3:11,12.

*“ಪಶ್ಚಾತ್ತಾಪ” – ದೇವರ ಕಡೆಗೆ ತಿರುಗಿಕೋ – ಏಳು ಸಭೆಗಳಲ್ಲಿ ಐದು ಸಭೆಗಳಿಗೆ ದೇವರ ಕಡೆಗೆ ತಿರುಗಿಕೊಳ್ಳುವಂತೆ ಯೇಸುವು ಹೇಳುತ್ತಾನೆ (*2:5,16,21,22; 3:3). ನಮ್ಮ ಕಾಲದಲ್ಲಿರುವ ಅನೇಕ ಸಭೆಗಳು ಸಹ ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು ಇದು ಸೂಚಿಸುವದಿಲ್ಲವೋ? **20**

**3:20** ಅಲ್ಲಿರುವ ಸಭೆಯು ಕ್ರಿಸ್ತನನ್ನು ಸಂಪೂರ್ಣವಾಗಿ ಹೊರಗೆ ಹಾಕಿದ್ದರು, ಮತ್ತು ಅದರ ಸದಸ್ಯರ ಹೃದಯದ ಒಳಗೆ ಹೋಗಲು ಆತನು ಅವರ ಹೃದಯದ ಬಾಗಿಲನ್ನು ತಟ್ಟಬೇಕಾಯಿತು. ಸಭೆಯ ಸದಸ್ಯರೆಲ್ಲರೂ ಸಂಪೂರ್ಣವಾಗಿ ಅಪನಂಬಿಕೆಯುಳ್ಳವರಾಗಿದ್ದರೆಂದು ಸೂಚಿಸುತ್ತದೆ (2 ಕೊರಿಂಥ 13:5 ಹೋಲಿಸಿರಿ).

*“ನಾನು ನಿಂತುಕೊಂಡು”*– ಈ “ನಾನು” ಎಂಬುದು ಯಾರು? ಸಭೆಗಳಿಗೆ ಆತನು ತನ್ನನ್ನು ಹೇಗೆ ಪರಿಚಯಿಸುತ್ತಾನೆಂದು ವ.14 ನೋಡಿರಿ: ಸೃಷ್ಟಿಗೆ ಮೂಲನೂ, ನಂಬತಕ್ಕ ವಾಕ್ಯವುಳ್ಳವನೂ, ಸರ್ವ ಅಧಿಕಾರವುಳ್ಳವನೂ. ದೀನನಾದ ರಕ್ಷಕನು ಬಾಗಿಲ ಬಳಿಯಲ್ಲಿ ನಿಂತಿರುವ ಚಿತ್ರವನ್ನು ಕೆಲವೊಮ್ಮೆ ನಾವು ನೋಡಿದ್ದೇವೆ. ಆತನು ರಕ್ಷಕನು ಮತ್ತು ಸಾರ್ವತ್ರಿಕವಾಗಿ ಸಾರ್ವಭೌಮನಾಗಿದ್ದರೂ ಸಹ, ಆದರೆ ಈ ಸನ್ನಿವೇಶದಲ್ಲಿ ನೋಡುವುದಾರೆ ಅದು ಸತ್ಯವಲ್ಲ. (ಅಪೊ 22:10 ಟಿಪ್ಪಣಿಯನ್ನು ನೋಡಿರಿ).

*“ನಾನು ಒಳಗೆ ಬಂದು”*– ಇದು ಸುಳ್ಳಾಡದ ಮಹಿಮೆಯುಳ್ಳ ಕರ್ತನ ವಾಗ್ದಾನ. ನಾವೆಲ್ಲರೂ ಇದನ್ನು ನಂಬೋಣ, ಆತನನ್ನು ಸ್ವೀಕರಿಸೋಣ ಮತ್ತು ಸತ್ಯ ದೇವರ ಮಕ್ಕಳಾಗೋಣ (ಯೋಹಾನ 1:12-13). ನಿತ್ಯಜೀವವನ್ನು ಪಡೆದುಕೊಳ್ಳಲು ಮತ್ತು ದೇವರೊಂದಿಗೆ ನಿಜವಾದ ಆತ್ಮೀಕ ಜೀವತವನ್ನು ಪ್ರಾರಂಭಿಸಲು ನಮಗೆ ಬೇಕಾಗಿರುವುದು ಕ್ರಿಸ್ತನು ನಮ್ಮ ಹೃಯದಲ್ಲಿರುವುದಾಗಿದೆ. ಆತನನ್ನು ನಮ್ಮ ಹೃದಯದಿಂದ ಹೊರಗಿಟ್ಟರೆ ನಾವು ನಿತ್ಯಕ್ಕೂ ನಾಶವಾಗುತ್ತೇವೆ. **21**

**3:21** *“ಜಯಹೊಂದುವವನು”*– 2:7.

*“ನನ್ನೊಡನೆ ಕೂತುಕೊಳ್ಳುವೆ”*– ಅಂದರೆ ಆತನ ಅಧಿಕಾರ ಮತ್ತು ಆಳ್ವಿಕೆಯನ್ನು

ಹಂಚಿಕೊಳ್ಳುವುದು – 2:26-27.

*"ನನ್ನ ಸಿಂಹಾಸನ"*– 5:10; 20:4,6; 2 ತಿಮೊ 2:12.

*"ನಾನು ಜಯಹೊಂದುವೆನು"*– 5:5; ಇಬ್ರಿ 2:17; 4:15; 12:2,3; ಮತ್ತಾಯ 4:1-10.

*"ಆತನ ಸಿಂಹಾಸನ"*– ದೇವರ ಶಾಶ್ವತವಾದ ಸಿಂಹಾಸನ. ಯೇಸುವಿನ ಸಿಂಹಾಸನವು ಬೇರೆ (ಲೂಕ 1:32-33). ಇನ್ನು ಆತನು ಎತ್ತಲ್ಪಡಲಿಲ್ಲ – 2:7; ಮತ್ತಾಯ 19:28; 25:31.

# 4:1

**4:1** *"ನೋಡಿದಾಗ"*– ಗ್ರೀಕ್ ಭಾಷೆಯಲ್ಲಿ ಇದರ ನಿಜವಾದ ಅರ್ಥ "ಇಗೋ", "ನೋಡು", "ದೃಷ್ಟಿಯಿಡು" ಆದಿ 1:31; ಮತ್ತಾಯ 1:23 ಟಿಪ್ಪಣಿಯನ್ನು ನೋಡಿರಿ.

*"ತೆರೆದಿದ್ದ ಬಾಗಿಲು"*– ಪರಲೋಕದ ರಹಸ್ಯಗಳ ಸತ್ಯಗಳನ್ನು ಯೋಹಾನನಿಗೆ ದೇವರು ಪ್ರಕಟಿಸುವವನಾಗಿದ್ದಾನೆ ಎಂದು ಇದು ಸೂಚಿಸುತ್ತದೆ.

*"ವಾಣಿ"*– ತೂತೂರಿಯಲ್ಲ, ಆದರೆ ಒಂದು ಧ್ವನಿ – 1:10; 1 ಕೊರಿಂಥ 15:52 ಧ್ವನಿ ಮಾತ್ರವಲ್ಲದೆ, ತುತೂರಿಯ ಬಗ್ಗೆ ಮಾತನಾಡುತ್ತದೆ.

*"ಇಲ್ಲಿಗೆ ಏರಿ ಬಾ"*– ಯೋಹಾನನು ಪರಲೋಕಕ್ಕೆ ಏರಿ ಹೋಗುವದನ್ನು ಕೆಲವು ವ್ಯಾಖ್ಯಾಯನಕಾರರು ಸಭೆಯು ಎತ್ತಲ್ಪಡುವದನ್ನು ಸೂಚಿಸುತ್ತದೆ ಎಂದು ಬೋಧಿಸುತ್ತಾರೆ (1 ಥೆಸ 4:16-17). ಇದು ಅಸಂಭವವೆಂದು ತೋರಿದರೂ ದೇವರ ವಾಕ್ಯದ ಅನೇಕ ವಿದ್ಯಾರ್ಥಿಗಳಿಗೆ, ಇದು ನಿಜವೆಂದು ತೋರುತ್ತದೆ. ಆದರೆ ಇದಕ್ಕೆ ನಿಜವಾದ ಪುರಾವೆಗಳಿಲ್ಲ. ಮತ್ತು ಧರ್ಮಾಂಧವಾಗಿ ಸರಿಯಾದ ಪುರಾವೆಗಳಿಲ್ಲದಿರುವುದನ್ನು ಬೋಧಿಸದಿರಲು ನಾವೆಲ್ಲರೂ ಎಚ್ಚರದಿಂದಿರಬೇಕು. ಅಧ್ಯಾಯ 10 ಮತ್ತು 11 ರಲ್ಲಿ ಯೋಹಾನನು ಮತ್ತೊಮ್ಮೆ ಭೂಮಿಯ ಮೇಲಿರುತ್ತಾನೆ (10:1,4,7,9,10; 11:1-3), ಆದಾಗ್ಯೂ ಯಾವ ವ್ಯಾಖ್ಯಾಯನಕಾರರು ಪರಲೋಕದಿಂದ ಹಿಂತಿರುಗಿದ ಯೋಹಾನನು ಸಭೆಯನ್ನು ಪ್ರತಿನಿಧಿಸಿದನೆಂದು ಹೇಳುವದಿಲ್ಲ. ಕೆಲವು ವ್ಯಾಖ್ಯಾಯನಕಾರರು ಹೀಗೆ ಸಹ ಹೇಳುತ್ತಾರೆ ಮುಂದಿನ ದರ್ಶನಗಳಲ್ಲಿ, ಭೂಲೋಕದಲ್ಲಿ ಸಭೆಯನ್ನು ಹೆಸರಿನಿಂದ ಸೂಚಿಸುವಂತೆ ಸೂಚಿಸಿಲ್ಲ ಆದ್ದರಿಂದ ಅದು ಪರಲೋಕವಿರಬಹದುದೆಂದು ಹೇಳುತ್ತಾರೆ. ಆದರೆ ಮುಂದಿನ

ದರ್ಶನಗಳಲ್ಲಿ ಇದು ಸಹ ನಿಜವಾಗಿದೆ ಸಭೆಯು ಪರಲೋಕದಲ್ಲಿದೆ ಎಂದು ಹೆಸರಿನಿಂದ ಉಲ್ಲೇಖಿಸಿಲ್ಲ. ಆದ್ದರಿಂದ ನಾವು ಅದು ಭೂಮಿಯ ಮೇಲಿದೆ ಎಂದು ನಾವು ವಾದಿಸಬಹುದೇ? ಒಂದು ವಾದವು ಇನ್ನೊಂದಕ್ಕಿಂತ ಒಳ್ಳೆಯದು.

*"ಮುಂದೆ ಆಗಬೇಕಾದವುಗಳನ್ನು"*– 1:19 – ಬಹುಶಃ ಇದರ ಅರ್ಥ ಅಧ್ಯಾಯ 2 ಮತ್ತು 3 ರಲ್ಲಿನ ಸಭೆಗಳ ಸ್ಥಿತಿಯ ನಂತರ ಆಗುವ ಕಾರ್ಯಗಳಿರಬಹುದು ಅಥವಾ ಈ ಯುಗದ ಅಂತ್ಯಕ್ಕೆ ಅವರ ಪೂರ್ಣ ಬೆಳವಣಿಗೆಯನ್ನು ಹೊಂದುತ್ತಾರೆ. 2

**4:2** *"ದೇವರಾತ್ಮವಶನಾದೆನು"*– 1:10.

*"ಪರಲೋಕದಲ್ಲಿ ಒಂದು ಸಿಂಹಾಸನ"*– 1 ಅರಸು 22:19; ಕೀರ್ತನೆ 9:4; 47:2; 123:1. ದೇವರು ಈ ಲೋಕವನ್ನು ಆಳುವವನಾಗಿದ್ದಾನೆ ಮತ್ತು ಈ ಪುಸ್ತಕದಲ್ಲಿರುವ ಎಲ್ಲಾ ಘಟನೆಗಳು ಆತನ ನಿಯಂತ್ರಣದಲ್ಲಿದೆ ಮತ್ತು ಅವುಗಳ ಮೂಲಕ ಆತನು ತನ್ನ ಉದ್ದೇಶವನ್ನು ನೆರವೇರಿಸುತ್ತಿದ್ದಾನೆ. 19:6 ನೋಡಿರಿ. ದೇವರ ಸಿಂಹಾನವನ್ನು ಈ ಪುಸ್ತಕದಲ್ಲಿ 40 ಸಾರಿ ಉಲ್ಲೇಖಿಸಲಾಗಿದೆ. ನಾವು ಇದನ್ನು ಪ್ರಕಟನೆ ಪುಸ್ತಕದ ಕೇಂದ್ರ ವಿಷಯವೆಂದು ಕರೆಯಬಹದು. 3

**4:3** *"ಮುಗಿಲುಬಿಲ್ಲು"*– ದೇವರ ಮಹಿಮೆ ಮತ್ತು ನಂಬಿಗಸ್ತಿಕೆಯನ್ನು ಸೂಚಿಸುತ್ತದೆ (ಆದಿ 9:13-16; ಯೆಹೆಜ್ಕೇಲ 1:28).

*"ಕಣ್ಣಿಗೆ ಕಾಣುವುದು"*– ಆತ್ಮೀಕ ಅಸ್ತಿತ್ವದಲ್ಲಿ (ಸಾರ) ದೇವರನ್ನು ಯಾರೂ ಕಂಡಿಲ್ಲ (ಯೋಹಾನ 1:18; 1 ತಿಮೊ 6:16). ಯೋಹಾನನು ಆತನ ವೈಭವದ ದೃಷ್ಯವು ಅಮೂಲ್ಯ ರತ್ನಗಳಲ್ಲಿ ಪ್ರತಿಫಲಿಸುವದನ್ನು ಮಾತ್ರ ಕಂಡನು. ಇಲ್ಲಿ ಭಾಷಾಂತರಿಸಲಾಗಿರುವ ಗ್ರೀಕ್ ಪದ ಸೂರ್ಯಕಾಮ್ತಮಣಿ (ಪದ್ಮರಾಗ) ವಜ್ರದಂತೆ ಪಾರದರ್ಶಕವಾಗಿರುವದನ್ನು ಸೂಚಿಸುತ್ತದೆ (2:11). ಸಾರ್ಡಿಸ್ ಕಲ್ಲು (ಮಂದಗೆಂಪಿನ ಕಲ್ಲು) ಕೆಂಪಾಗಿರುತ್ತದೆ. 4

**4:4** *"ಹಿರಿಯರು"*– ವಚನಗಳು 9-11; 5:5,8-10; 7:11-14; 11:16; 14:3; 19:4. ಅವರು ಸಾಧಾರಣ ದೇವದೂತರು (7:11) ಮತ್ತು ಪರಲೋಕದಲ್ಲಿರುವ ದೇವಜನರು (5:8-10; 7:9-11,13,14; 19:4-7) ಇವರಿಬ್ಬರಿಗಿಂತಲೂ ಬೇರೆಯಾಗಿದ್ದರೆಂದು ತೋರುತ್ತದೆ. ಆದರೆ ಅವರು ಒಂದು ವೇಳೆ ಉನ್ನತ ಸ್ಥಾನದಲ್ಲಿದ್ದ ವಿಶೇಷ

ದೇವದೂತರಾಗಿರಬಹುದು (ಎಫೆ 1:21; 3:10; ಕೊಲೊ 1:16; 2:10 ಹೋಲಿಸಿರಿ). ಇವರು ಯೋಹಾನನು ಅಲ್ಲಿಗೆ ಸೇರುವ ಮುಂಚೆಯೇ, ಮತ್ತು ಏಳನೆಯ ತುತೂರಿಯು ಊದಲ್ಪಡುವ ಮುಂಚೆಯೇ, ಪರಲೋಕದಲ್ಲಿ ಆಳುತ್ತಿರುವ ಮತ್ತು ಈಗಾಗಲೆ ಪ್ರತಿಫಲವನ್ನು ಪಡೆದ ಸಭೆಯನ್ನು ಪ್ರತಿನಿಧಿಸುತ್ತಾರೆ ಎನ್ನುವುದು ಅಸಂಭವವೆಂದು ಈ ಟಿಪ್ಪಣಿಗಳ ಲೇಖಕರಿಗೆ ತೋರುತ್ತದೆ (11:15-18; 1 ಕೊರಿಂಥ 15:52). 7:9 ರಲ್ಲಿ ರಕ್ಷಿಸಲ್ಪಟ್ಟ ಜನರು ಸಿಂಹಾಸನದ ಮೇಲೆ ಕುಳಿತಿಲ್ಲ ಆದರೆ "ಸಿಂಹಾಸನದ ಮುಂದೆ ನಿಂತಿದ್ದರು". ಮತ್ತು ಕುರಿಯಾದಾತನ ಮದುವೆಯು ನಡೆಯುವದಕ್ಕೆ ಮುಂಚಿತವಾಗಿಯೇ ಅಥವಾ ಕ್ರಿಸ್ತನ ಮದಲಗಿತ್ತಿಯಾದ ಸಭೆಯು ಪರಲೋಕದ ಸಿಂಹಾಸನದ ಮೇಲೆ ಕುಳಿತುಕೊಳ್ಳಲು (19:7-8) ಅಥವಾ ಕ್ರಿಸ್ತನು ತಾನು ಹಿಂದಿರುಗಿ ಬಂದು ತನ್ನ ಸಿಂಹಾಸನವನ್ನೇರುವ ಮುಂಚೆಯೇ ಸಾಧ್ಯವೆಂದು ನಾವು ಯೋಚಿಸಬಹುದೋ ? [5]

**4:5** *"ಮಿಂಚುಗಳೂ…ಗುಡುಗುಗಳೂ"*– 8:5; 11:19; 16:18. ವಿಮೋ 19:16-19; 1 ಸಮು 2:20; ಯೋಬ 36:29-30; ಕೀರ್ತನೆ 18:12-13; 29:3; 77:18 ಹೋಲಿಸಿರಿ.

*"ಏಳು ಆತ್ಮಗಳು"*– 1:4. [6]

**4:6** *"ಗಾಜಿನ ಸಮುದ್ರ"*– 15:2. 2 ಪೂರ್ವ 4:2,6,10 ಹೋಲಿಸಿರಿ. ಸಲೊಮೋನನ ದೇವಾಲಯದಲ್ಲಿ "ಸಮುದ್ರವು" ಯಾಜಕರು ತೊಳೆದುಕೊಳ್ಳುವ ಸ್ಥಳವಾಗಿತ್ತು. ಪರಲೋಕದಲ್ಲಿಯೂ ಒಂದು ದೇವಾಲಯವಿದೆ – 7:15; 11:19; 14:15,17. ಆದರೆ ಆ "ಸಮದ್ರುದಲ್ಲಿ" ಯಾರಿಗೂ ತೊಳೆದುಕೊಳ್ಳುವ ಅವಶ್ಯವಿಲ್ಲ ಯಾಕಂದರೆ ಅಲ್ಲಿರುವ ಎಲ್ಲಾ ಜನರು ತಮ್ಮ ಎಲ್ಲಾ ಪಾಪಗಳಿಂದ ಮತ್ತು ಅಪವಿತ್ರತೆಯಿಂದ ಈಗಾಗಲೇ ತೊಳೆಯಲ್ಪಟ್ಟಿದ್ದಾರೆ (1:5; ಯೋಹಾನ 1:9; ಇಬ್ರಿ 10:19-20). ಆದ್ದರಿಂದ ಪರಲೋಕದಲ್ಲಿರುವ "ಸಮುದ್ರವು" –ಘನಸ್ಥಿತಿಯಲ್ಲಿದೆ.

*"ನಾಲ್ಕು ಜೀವಿಗಳು"*– ಯೆಹೆಜ್ಕೇಲ 1:5-14; 10:20; ಯೆಶಾಯ 6:2-3 ಹೋಲಿಸಿರಿ. ಆದಿ 3:24 ಸಹ ನೋಡಿರಿ. ಸ್ಪಷ್ಟವಾಗಿ ಈ "ಜೀವಿಗಳು" ಕೆರೂಬಿಯರು ಮತ್ತು ಸೆರಾಫಿಯರಿಗೆ ಹೋಲುತ್ತಾರೆ. ಇದರ ಬಗ್ಗೆ ಊಹಾಪೋಹಗಳಿವೆ, ಆದರೆ ಪರಲೋಕದಲ್ಲಿ ಅವು ಸಭೆಯನ್ನು ಪ್ರತಿನಿಧಿಸುತ್ತದೆ ಎಂಬುದಕ್ಕೆ ಯಾವ ಪುರಾವೆಗಳಿಲ್ಲ. ಈ ಮೇಲಿನ ವಚನಗಳು ಅಂತಹ ದೃಷ್ಟಿಕೋನಕ್ಕೆ ಸಮಂಜಸವಾಗಿಲ್ಲ.

*“ತುಂಬಾ ಕಣ್ಣುಗಳಿದ್ದವು”*– ಯೆಹೆಜ್ಕೇಲ 1:18; 10:12 ನೋಡಿರಿ. ಬಹುಶಃ ಅಧಿಕವಾದ ಬುದ್ಧಿಶಕ್ತಿಯ ಮತ್ತು ಹಿಚ್ಚಿನ ಜಾಗರೂಕತೆಯ ಬಗ್ಗೆ ಮಾತನಾಡುತ್ತಿರಬಹುದು. 7

**4:7** *“ಸಿಂಹ...ಗರುಡಪಕ್ಷಿ”*– ಯೆಹೆಜ್ಕೇಲ 1:10 ನೋಡಿರಿ. 8

**4:8** *“ಆರು ರೆಕ್ಕೆಗಳು... ಪರಿಶುದ್ಧ, ಪರಿಶುದ್ಧ, ಪರಿಶುದ್ಧ”*– ಯೆಶಾಯ 6:2-3.

*“ಬರಲಿರುವ”*– 1:4. 9

**4:9** *“ಪ್ರಭಾವ ಮಾನ ಕೃತಜ್ಞಾತಾಸ್ತುತಿ”*– 5:12-13. ಈ ಲೋಕದಲ್ಲಿರುವ ವಿಶ್ವಾಸಿಗಳು ಅವರು ಪರಲೋಕದೊಂದಿಗೆ ಸಾಮರಸ್ಯವುಳ್ಳವರಾಗಿದ್ದರೆ ಇದನ್ನೇ ಮಾಡಬೇಕಾಗಿದೆ ಮತ್ತು ಮಾಡುತ್ತಾರೆ (1:6; ಯೋಹಾನ 5:23; ರೋಮಾ 11:36; 16:27; 1 ಕೊರಿಂಥ 6:20; 10:31; ಎಫೆ 1:12; 5:20; 1 ಥೆಸ 5:18; 1 ತಿಮೊ 1:7; 6:16; ಇಬ್ರಿ 13:15).

*“ಯುಗಯುಗಾಂತರಗಳಲ್ಲಿ ಜೀವಿಸುವವನು”*– 1:18. 10

**4:10** *“ತಮ್ಮ ಕಿರೀಟಗಳನ್ನು ಸಿಂಹಾಸನದ ಮುಂದೆ ಹಾಕಿ”*– ಅವರ ಸಿಂಹಾಸನಕ್ಕಿರುವ ಅಧಿಕಾರ ಮತ್ತು ಶಕ್ತಿಯು ಸರ್ವೋಚ್ಚ ಅಧಿಕಾರಿಯಾದ ದೇವರಿಂದ ಬರುತ್ತದೆಂದು ಅವರು ವಿನಯದಿಂದ ಅಂಗೀಕರಿಸುತ್ತಿದ್ದಾರೆ. 11

**4:11** ಈ ಬ್ರಹ್ಮಾಂಡದ ಸೃಷ್ಟಿಕರ್ತನೆಂದು ಅವರು ಆತನನ್ನು ಸ್ತೋತ್ರಿಸುತ್ತಿದ್ದಾರೆ (10:6; ಆದಿ 1:1; ಯೋಬ 38:4-7; ಕೀರ್ತನೆ 19:1; ಯೆಶಾಯ 40:25-26; ಅಪೊ 14:15; 17:24-28; ರೋಮಾ 11:36).

*“ನಿನ್ನ ಚಿತ್ತದಿಂದಲೇ”*– ಅಥವಾ “ನಿನ್ನ ಚಿತ್ತದಂತೆ” – ಗ್ರೀಕ್ ಭಾಷೆಯಿಂದ ಭಾಷಾಂತರಗೊಂಡ “ಸಂತೋಷ” ಎಂಬ ಪದವನ್ನು ಸಾಧಾರಣವಾಗಿ “ಚಿತ್ತ” ಅಥವಾ “ಆಸೆ” ಎಂಬುದಾಗಿ ಭಾಷಾಂತರಿಸಲಾಗಿದೆ.

# 5 1

**5:1** *“ಸಿಂಹಾಸನದ ಮೇಲೆ ಕುಳಿತಿರುವಾತನು”*– ತಂದೆಯಾದ ದೇವರು.

*“ಸುರುಳಿ”*– ಕಾಗದದ ಸುರುಳಿಯಂತೆ ಸುತ್ತಿರುವ ಬರೆಯುವ ವಸ್ತು. ಯೆಹೂದ್ಯರು ತಮ್ಮ ಸಭಾಮಂದಿರಗಳಲ್ಲಿ ಸುರುಳಿಗಳನ್ನು ಉಪಯೋಗಿಸುತ್ತಿದ್ದರು – ಲೂಕ 4:17; ಇಬ್ರಿ

10:7.

*"ಏಳು ಮುದ್ರೆಗಳು"*– ಅಂದರೆ ಸಂಪೂರ್ಣವಾಗಿ ಸುರಕ್ಷಿತವಾಗಿದೆ, ಸಂಪೂರ್ಣವಾಗಿ ಮುಚ್ಚಲಾಗಿದೆ. **2**

**5:2** *"ದೇವದೂತನು"*– ಪರಲೋಕದ ದೇದೂತರ ವಿಷಯವಾಗಿ ಈ ಪುಸ್ತಕದ 80 ಉಲ್ಲೇಖಗಳಲ್ಲಿ ಒಂದು.

*"ಯಾವನು ಯೋಗ್ಯನು"*– ಈ ಮುದ್ರೆಗಳನ್ನು ಒಡೆಯಲು ಮತ್ತು ಬಿಚ್ಚಿ ಅದರಲ್ಲಿರುವ ವಿಷಯವನ್ನು ನೋಡಲು ಬೇಕಾದ ಶಕ್ತಿ ಅಥವಾ ಬಲವಲ್ಲ ಆದರೆ ಯೋಗ್ಯತೆ. **3**

**5:3** *"ಯಾವನೂ ಅಲ್ಲ"*– ಅಬ್ರಹಾಮನಲ್ಲ, ದೇವರ ಸ್ನೇಹಿತನು; ಮೋಶೆಯಲ್ಲ, ಪ್ರಬಲವಾದ ಧರ್ಮಶಾಸ್ತ್ರವನ್ನು ಕೊಟ್ಟವನು, ದಾವಿದನಲ್ಲ, ಇಸ್ರಾಯೇಲ್ಯರ ಅರಸನು, ಯಾವ ಪ್ರವಾದಿಗಳಲ್ಲ, ಯಾವ ಹಿರಿಯರಲ್ಲ ಅಥವಾ ಪರಲೋಕದಲ್ಲಿರುವ ಬದುಕುವ ಪ್ರಾಣಿ ಅಥವಾ ದೇವದೂತರಲ್ಲ. ಪರಲೋಕದಲ್ಲಿರುವವರು ಮತ್ತು ಭೂಲೋಕದಲ್ಲಿರುವವರು ಮತ್ತು ವಿಶ್ವದೆಲ್ಲಡೆಯಲ್ಲಿರುವ ಎಲ್ಲರೂ ಆ ಸುರುಳಿಯನ್ನು ಒಡೆಯುವ ಯೋಗ್ಯತೆ ತಮಗೆ ಇಲ್ಲವೆಂದು ಒಪ್ಪಿಕೊಳ್ಳಬೇಕಾಯಿತು. ಆ ಸುರುಳಿಯನ್ನು ತೆಗೆದುಕೊಳ್ಳಲು ಸಿಂಹಾಸನದ ಬಳಿಗೆ ಹೋಗಲು ಯಾರಿಗೂ ಧೈರ್ಯವಿರಲಿಲ್ಲ. **4**

**5:4** ಆ ಸುರುಳಿಯಲ್ಲಿ ಮುಖ್ಯವಾದದ್ದೇನೋ ಇದೆ ಎಂದು ಯೋಹಾನನು ಸ್ಪಷ್ಟವಾಗಿ ಅರಿತುಕೊಂಡನು ಮತ್ತು ಅದರಲ್ಲಿರುವದನ್ನು ತಿಳಿದುಕೊಳ್ಳಲು ಹಾತೊರೆದನು. **5**

**5:5** *"ಯೂದ ಕುಲದ ಸಿಂಹ"*– ಕ್ರಿಸ್ತನ ಶಿರೋನಾಮೆ. ಆದಿ 49:8-10 ಹೋಲಿಸಿರಿ. ಆತನ ದೊರೆತನವನ್ನು, ದಾವೀದನ ಸಿಂಹಾಸನಕ್ಕೆ ಆತನ ಹಕ್ಕಿನ ಬಗ್ಗೆ ಮಾತನಾಡುತ್ತದೆ (ಲೂಕ 1:32-33).

*"ದಾವೀದನ ಅಂಕುರದವನು"*– ಯೆಶಾಯ 11:10; 53:2; ರೋಮಾ 15:12 ನೋಡಿರಿ. (ಇಷಯನು ದಾವೀದನ ತಂದೆ).

*"ಜಯಹೊಂದಿದನು"*–ಗ್ರೀಕ್ ಭಾಷೆಯಲ್ಲಿರುವ ಅದೇ ಕ್ರಿಯಾ ಪದ 3:21 ರಲ್ಲಿದೆ.

*"ಸುರುಳಿಯನ್ನೂ ಅದರ ಏಳು ಮುದ್ರೆಗಳನ್ನೂ ಬಿಚ್ಚುವದಕ್ಕೆ ಜಯಹೊಂದಿದನು"*– ಯಾಕಂದರೆ ಆತನು ತನ್ನ ಯೋಗ್ಯತೆಯನ್ನು ಪ್ರದರ್ಶಿಸಿದ್ದಾನೆ (ವ.9). **6**

**5:6** *"ಸಿಂಹಾಸನದ ಮಧ್ಯದಲ್ಲಿ"*– ವಿಶ್ವದ ಸಾರ್ವಭೌಮತ್ವದ ಆಳ್ವಿಕೆಯಲ್ಲಿ ಕರ್ತನಾದ

ಯೇಸುವು ಕೇಂದ್ರದಲ್ಲಿದ್ದಾನೆ. ಆತನಿಗೆ ಇಡೀ ಭೂಮಂಡಲದ ಮೇಲೆ ಅಧಿಕಾರವಿದೆ (1:5; ಮತ್ತಾಯ 28:18; ಯೋಹಾನ 17:2).

*"ಕುರಿ"*– ವ.5 ದಲ್ಲಿರುವ ರಾಜ ಸಿಂಹನು ಕುರಿಯಾದಾತನೂ ಆಗಿದ್ದಾನೆ (ಯೋಹಾನ 1:29,36). ಕ್ರಿಸ್ತನನ್ನು ಸೂಚಿಸಲು ಒಂದು ಚಿನ್ಹೆಯು ಸಾಲದು.

*"ಕೊಯ್ಯಲ್ಪಟ್ಟವನು"*– ಯೆಶಾಯ 53:7-8; ಮತ್ತಾಯ 27:35,50; ಯೋಹಾನ 20:25-27; ಅಪೊ 2:23; 3:15. "ಹಾಗೆ ಕಾಣಿಸಿಕೊಂಡನು" ಎಂಬ ಪದಗಳು ಆತನ ಗಾಯದ ಗುರುತುಗಳು ಕಾಣಿಸುವುದನ್ನು ಸೂಚಿಸುತ್ತದೆ. ಯೋಹಾನ 20:25-27 ಹೋಲಿಸಿರಿ.

*"ಏಳು ಕೊಂಬುಗಳು"*– ಹಳೆಯ ಒಡಂಬಡಿಕೆಯಲ್ಲಿ ಕೊಂಬುಗಳು ಕೆಲವು ಸಾರಿ ಶಕ್ತಿಯ, ಸಾಮರ್ಥ್ಯದ ಅಥವಾ ಅಧಿಕಾರದ ಪ್ರತೀಕವಾಗಿತ್ತು (ಧರ್ಮೋ 33:17; ಕೀರ್ತನೆ 89:17; ಜೆಕರ್ಯ 1:18-19). ಕ್ರಿಸ್ತನು ಸಂಪೂರ್ಣನಾಗಿದ್ದಾನೆಂದು ಈ ಏಳು ಕೊಂಬುಗಳು ಸೂಚಿಸುತ್ತವೆ. ಕುರಿಮರಿಯು ಅಕ್ಷರಶಃ ಬಹಳ ಬಲಹೀನವಾಗಿವೆ ಮತ್ತು ಅಧಿಕಾರ ಮತ್ತು ಶಕ್ತಿಯನ್ನು ಹೊಂದಿಲ್ಲ. ಆದರೆ ಈ ಕುರಿಯಾದಾತನು ಸಿಂಹವೂ ಆಗಿದ್ದಾನೆ.

*"ಏಳು ಕಣ್ಣುಗಳು"*– ಜೆಕರ್ಯ 4:7.

*"ಏಳು ಆತ್ಮಗಳು"*– 1:4 ರ ಟಿಪ್ಪಣಿ. ಆ ಏಳು ಆತ್ಮಗಳು ಎರಡು ಕಡೆಯಲ್ಲಿ, ದೇವರ ಸಿಂಹಾಸನದ ಮುಂದೆ ಇದೆ (4:5) ಮತ್ತು ಭೂಲೋದೆಲ್ಲೆಡೆಯಲ್ಲಿಯೂ ಇದೆ. ದೇವರಾಗಿರುವುದರಿಂದ, ಒಂದೇ ಸಮಯದಲ್ಲಿ ಒಂದಕ್ಕಿಂತಲೂ ಹೆಚ್ಚು ಸ್ಥಳದಲ್ಲಿರಬಹುದು. ಕ್ರಿಸ್ತನಲ್ಲಿ ಆ "ಏಳು ಆತ್ಮಗಳಿದೆ" – ಅಂದರೆ, ಆತನಲ್ಲಿ ದೇವರಾತ್ಮನು ಸಂಪೂರ್ಣ ಪ್ರಮಾಣದಲ್ಲಿದ್ದಾನೆ (ಯೋಹಾನ 3:34). ದೇವರಾತ್ಮನು ಕ್ರಿಸ್ತನ ಆತ್ಮನೇ ಆಗಿದ್ದಾನೆ. ರೋಮಾ 8:9. 7

**5:7** ಸತ್ಯವೇದದಲ್ಲಿ ಇದು ಅದ್ಭುತವಾದ ಒಂದು ಘಟನೆ. ಸುರುಳಿಯನ್ನು ಬಿಚ್ಚಲು ಯೋಗ್ಯ ವ್ಯಕ್ತಿಯು ಸಿಕ್ಕದ ಕಾರಣ ಪರಲೋಕದಲ್ಲಿ ಮೌನವು ಆವರಿಸಿತು. ಏನು ನಡೆಯುತ್ತದೆಂದು ನೋಡಲು ಇಡೀ ಲೋಕವೇ ಕಾಯುತ್ತಿದೆ. ಆಗ ಕುರಿಯಾದಾತನು, ಸಾದು ಮತ್ತು ದೀನನಾದವನು, ಪೂರ್ಣ ಭರವಸದಿಂದ ಪ್ರಕಾಶಮಾನವಾಗಿ ಹೊಳೆಯುತ್ತಿರುವ

ಸಿಂಹಾಸನರೂಢನಾದ ಸರ್ವಶಕ್ತನ ಬಳಿ ಬಂದನು ಮತ್ತು ಆ ಸುರುಳಿಯನ್ನು ಆತನ ಬಲಗೈಯಿಂದ ತೆಗೆದುಕೊಂಡನು. ತಕ್ಷಣವೇ ಪರಲೋಕವು ಸ್ತೋತ್ರಗಳಿಂದ ತುಂಬಿತು. 8

**5:8** *"ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದರು"*– ಇದು ಆರಾಧನೆಯ ಭಾವನೆಯಾಗಿದೆ. ಪರಲೋಕದಲ್ಲಿ, ತಂದೆಯಾದ ದೇವರ ಪ್ರಸನ್ನತೆಯಲ್ಲಿ, ಯೇಸುವನ್ನು ಆರಾಧಿಸಿದರು (ಇಬ್ರಿ 1:6). ಯೇಸುವು ದೇವರ ಅವತಾರವಾಗಿರದಿದ್ದರೆ, ದೇವರ ದೈವಿಕ ಸ್ವಭಾವನ್ನು ಹಂಚಿಕೊಳ್ಳದಿದ್ದಲ್ಲಿ ಇದು ಸಾಧ್ಯವಾಗುತ್ತಿರಲಿಲ್ಲ. ಸತ್ಯವೇದದುದ್ದಕ್ಕೂ ಆತನನ್ನಲ್ಲದೆ ಬೇರೆಯಾವುದನ್ನಾಗಲೀ ಅಥವಾ ಯಾರನ್ನೇ ಆಗಲೀ ಆರಾಧಿಸುವುದನ್ನು ನಿಷೇಧಿಸುತ್ತಾನೆ. ವಿಮೋ 20:3-5; ಧರ್ಮೋ 6:13; ಮತ್ತಾಯ 4:10 ನೋಡಿರಿ. ಭೂಲೋಕದಲ್ಲಿ ಅನೇಕರು ಕಲಿಯದ ವಿಷಯವನ್ನು ಪರಲೋಕದಲ್ಲಿರುವವರು ತಿಳಿದುಕೊಂಡಿದ್ದಾರೆ – ಯೋಹಾನ 5:23 ರ ಸತ್ಯವನ್ನು (ಫಿಲಿಪ್ಪಿ 2:6 ರಲ್ಲಿರುವ ಮತ್ತು ಇತರ ವಾಕ್ಯಗಳಲ್ಲಿರುವ ಕ್ರಿಸ್ತನ ದೈವತ್ವವನ್ನು ನೋಡಿರಿ).

*"ವೀಣೆ"*– 14:2; 15:2

*"ಧೂಪ"*– ವಿಮೋ 30:1,7,34-38; ಕೀರ್ತನೆ 141:2.

*"ಪ್ರಾರ್ಥನೆ"*– ಆತನ ಜನರ ಪ್ರಾರ್ಥನೆಗಳು ದೇವರಿಗೆ ಸುಗಂಧವಾಸನೆಯಾಗಿದೆ ಮತ್ತು ಅವುಗಳನ್ನು ಪರಲೋಕದಲ್ಲಿಟ್ಟಲ್ಪಟ್ಟಿರುತ್ತವೆ ಮತ್ತು ಅದನ್ನು ದೇವರಿಗೆ ಅರ್ಪಿಸುತ್ತಾರೆ (8:3). ಆ ಮುದ್ರೆ ಹಾಕಿರುವ ಏಳು ಪುಸ್ತಕಗಳನ್ನು ತರೆಯುವ ಕಾರ್ಯದಲ್ಲಿ ಯಾವುದೋ ಒಂದು ಮುಖ್ಯ ಕಾರಣವಿರುವದರಿಂದ ಅವರನ್ನು ಇಲ್ಲಿ ಸೂಚಿಸಲಾಗಿದೆ. 9

**5:9** *"ಹೊಸ ಹಾಡು"*– 14:3; ಕೀರ್ತನೆ 33:3; 40:3; 96:1; 144:9; 149:1; ಯೆಶಾಯ 42:10.

*"ಯೋಗ್ಯನೇ ನೀನು ಯಜ್ಞಾರ್ಪಿತನಾಗಿದ್ದಿ"*– ಸುರುಳಿಯನ್ನು ಬಿಚ್ಚುವದಕ್ಕೆ ಕರ್ತನಾದ ಯೇಸುವು ಮಾತ್ರ ಯೋಗ್ಯನಾಗಿದ್ದಾನೆಂದು ನೋಡಿರಿ. ಯಾಕಂದರೆ ಆತನು ನಮ್ಮ ಪಾಪಗಳನ್ನು ಕ್ಷಮಿಸಲು ರಕ್ತಬಲಿಯಾಗಿ ತನ್ನನ್ನೇ ಅರ್ಪಿಸಿದನು. 1:5; ಮತ್ತಾಯ 26:28 ನೋಡಿರಿ. ಎಂದೂ ಈ ರೀತಿಯಾಗಿ ಯಾರು ಸಹ ಮಾಡಲಿಲ್ಲ (ಇಬ್ರಿ 10:4 ಟಿಪ್ಪಣಿಯನ್ನು ನೋಡಿರಿ).

*"ಬಿಡಿಸಿದನು"*– ಇದು ಸಂಪೂರ್ಣವಾಗಿಯೂ ಸತ್ಯವಾಗಿದೆ ಕ್ರಿಸ್ತನು ತನ್ನ ಜನರನ್ನು

ಬಿಡಿಸಿದನು – ಗಲಾ 3:13; 4:5; ಎಫೆ 1:17. ಆದರೆ ಇಲ್ಲಿ ಗ್ರೀಕ್ ಪದದ ಮೂಲ ಅರ್ಥ "ಕೊಂಡುಕೊಂಡನು" ಅಥವಾ "ಖರೀದಿಸಿದನು". ಅಪೊ 20:28; 1 ಕೊರಿಂಥ 6:20.

*"ನಮಗೆ"*– ಕೆಲವು ಗ್ರೀಕ್ ಹಸ್ತಪ್ರತಿಗಳಲ್ಲಿ (ಸುವಾರ್ತಾ ಪಂಡಿತರು ಉತ್ತಮವಾದ ಹಸ್ತಪ್ರತಿ ಎಂದು ಪರಿಗಣಿಸುವ) "ನಾವು" ಎಂಬ ಪದವನ್ನು ಇಲ್ಲಿ ಕಾಣವುದಿಲ್ಲ. NASB ಭಾಷಾಂತರವು "ಮನುಷ್ಯರು" ಎಂಬ ಪದ, ಮೂಲ ಪ್ರತಿಯಲ್ಲಿ ಇದು ಇಲ್ಲ ಎಂದು ಸೂಚಿಸಲು ಓರೆ ಅಕ್ಷರದಲ್ಲಿ ಬರೆದರು. ಬೇರೆ ಭಾಷಾಂತರಕಾರರು "ಕೆಲವು" ಎಂಬ ಪದವನ್ನು ಓರೆ ಅಕ್ಷರದಲ್ಲಿ ಬಳಸಲು ಇಚ್ಚಿಸಿದರು. ಯೋಹಾನನು ಈ ವಾಕ್ಯಗಳಲ್ಲಿ "ನಮಗೆ" ಎಂದು ಬರೆದಿರುವುದೇಯಾದರೆ, ಅದರ ಅರ್ಥ ಹಿರಿಯರು (ಮತ್ತು ಜೀವಿಸುವ ಪ್ರಾಣಿಗಳು), ಇತರ ಪುರಾವೆಗಳು ಇದನ್ನು ಮಾಡುವ ಸಾಧ್ಯತೆ ಇಲ್ಲ, ಇವರು ಬಿಡುಗಡೆ ಹೊಂದಿದ ಮನುಷ್ಯರು (4:4 ರ ಟಿಪ್ಪಣಿಯನ್ನು ನೋಡಿರಿ). ಇದು ಹಾಗಿದ್ದರೂ ಸಹ, ಈ ದರ್ಶನದ ಸಮಯದಲ್ಲಿ ವಿಶ್ವಾಸಿಗಳ ಪುನುರುತ್ಥಾನವು ಆಗಲೇ ನಡೆದಿತ್ತು ಎಂದು ಅರ್ಥೈಸುವದಿಲ್ಲ; ಅವರು ಸತ್ತು ಪರಲೋಕಕ್ಕೆ ಹೋದ ವಿಶ್ವಾಸಿಗಳ ಆತ್ಮಗಳ ಪ್ರತಿನಿಧಿಗಳಾದ್ದಿರಬಹುದು (2 ಕೊರಿಂಥ 5:8; ಫಿಲಿಪ್ಪಿ 1:23; ಇಬ್ರಿ 12:22-24).

*"ಸಕಲ ಕುಲ ಭಾಷೆ...ಜನಾಂಗಗಳು"*– 7:9; ಮತ್ತಾಯ 28:19; ಮಾರ್ಕ 16:15; ಲೂಕ 24:27. ಕ್ರಿಸ್ತನ ಸುವಾರ್ತೆಯು ಎಲ್ಲಾ ಜನಾಂಗದವರಿಗಾಗಿದೆ ಮತ್ತು ಎಲ್ಲರಲ್ಲಿಯೂ ಫಲವನ್ನು ಕೊಡುತ್ತದೆ. **10**

**5:10** *"ರಾಜರನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ; ಅವರು ಭೂಮಿಯ ಮೇಲೆ ಆಳುವರು"*– ಕೆಲವು ಗ್ರೀಕ್ ಹಸ್ತಪ್ರತಿಯ ಪ್ರಕಾರವಾಗಿ "ಅವರನ್ನು ನಮ್ಮ ದೇವರಿಗೆ ರಾಜರನ್ನಾಗಿಯೂ ಮತ್ತು ಯಾಜಕರನ್ನಾಗಿಯೂ ಮಾಡಿದನು ಮತ್ತು ಅವರು ಆಳುವರು" –ಎಂಬುದಾಗಿದೆ.

*"ಭೂಮಿಯ ಮೇಲೆ"*– 3:21; 20:4,6; 2 ತಿಮೊ 2:12; ಮತ್ತಾಯ 19:28; ಲೂಕ 22:29-30. **12**

**5:12** *"ವಧಿತನಾದ"*– ವ.9. ಪಾಪಿಗಳಿಗಾಗಿ ಕ್ರಿಸ್ತನು ಸತ್ತದ್ದು ಪರಲೋಕದಲ್ಲಿ ಆತನನ್ನು ಸ್ತುತಿಸಲು ಒಂದು ಮಹತ್ತಾದ ವಿಷಯವಾಗಿದೆ.

*"ಸಾಮರ್ಥ್ಯ…ಸ್ತೋತ್ರ"*– 4:11; 5:12; ಯೋಹಾನ 5:23 ಹೋಲಿಸಿರಿ. ತಂದೆಯಾದ ದೇವರಿಗೆ ಸಲ್ಲಿಸುವ ಸ್ತುತಿಘನಮಾನಗಳಿಗೆ ಯೇಸುವು ಕೂಡ ಯೋಗ್ಯನಾಗಿದ್ದಾನೆ. **13-14**

**5:13-14** ಈ ಜಗತ್ತಿನಲ್ಲಿರುವ ಎಲ್ಲಾ ಜೀವಿಗಳ ಸ್ತುತಿ ಸ್ತೋತ್ರಗಳಿಗೆ ತಂದೆಯಾದ ದೇವರೊಂದಿಗೆ ಕರ್ತನಾದ ಯೇಸುವು ಸಮಾನವಾಗಿ ಯೋಗ್ಯನಾಗಿದ್ದಾನೆಂದು ಮತ್ತೊಮ್ಮೆ ಸ್ಪಷ್ಟವಾಗಿದೆ. ಈ ವಾಕ್ಯ ಭಾಗದಲ್ಲಿ ಪ್ರಾಥಮಿಕ ವ್ಯತ್ಯಾಸವು ಆದಾಮನ ಮೂಲ ಪಾಪ ಮತ್ತು ದೇವರ ಕೃಪೆಯ ನಡುವಿನ ವ್ಯತ್ಯಾಸವಾಗಿದೆ. ಉಳಿದ ವಾಕ್ಯಗಳಲ್ಲಿ ಸರಳವಾಗಿ ಹೇಳಿರುವಂತೆ ಆದಾಮನ ಪಾಪದ ಪ್ರತಿಫಲಕ್ಕೆ ಸಂಬಂಧಿಸಿದಂತೆ "ಅನೇಕ" ಎಂಬ ಪದವು ಎಲ್ಲಾ ವ್ಯಕ್ತಿಗಳನ್ನೂ ಸೂಚಿಸುತ್ತದೆ. ಅಷ್ಟೇ ಸ್ಪಷ್ಟವಾಗಿ ಉಳಿದ ವಾಕ್ಯದಲ್ಲಿ "ಅನೇಕ" ಎಂಬ ಪದವು ಕೃಪೆಯ ಮೂಲಕ ರಕ್ಷಿಸಲ್ಪಟ್ಟು ಸುವಾರ್ತೆಯನ್ನು ನಂಬಿ ಕ್ರಿಸ್ತನ ನಂಬಿಕೆಯಲ್ಲಿರುವವರನ್ನು ಸೂಚಿಸುತ್ತದೆ. ಏದೇನ್ ತೋಟದಲ್ಲಿ ಆದಾಮನು ಮಾಡಿದ ಪಾಪದಿಂದಾಗಿ ಎಲ್ಲರೂ ಸಾಯುತ್ತಾರೆ. ಅನೇಕ-ಬಹುಜನರ ಗುಂಪು- ದೇವರ ಕೃಪೆಯಿಂದ ಯೇಸು ಕ್ರಿಸ್ತನ ಪ್ರಾಯಶ್ಚಿತ್ತದ ಮೂಲಕ ರಕ್ಷಿಸಲ್ಪಟ್ಟಿದ್ದಾರೆ ಅವರು ಆತನನ್ನು ನಂಬಿದಾಗ ಮತ್ತು ಸಂಪೂರ್ಣವಾಗಿ ಆತನ ಮೇಲೆ ನಂಬಿಕೆಯಿಟ್ಟಾಗ ಅವರಿಗೆ ರಕ್ಷಣೆಯಾಯಿತು.

# 6 1

**6:1** *"ಏಳು ಮುದ್ರೆಗಳು"*– ಸುರುಳಿಗಳು (5:1) ಯಾವ ರೀತಿಯಲ್ಲಿ ಮುದ್ರೆ ಹಾಕಲ್ಪಟ್ಟಿತ್ತೆಂದರೆ ಮುದ್ರೆಯನ್ನು ಒಡೆದಾಗ ಸುರುಳಿಯ ಒಡೆದ ಭಾಗವು ಬಿಚ್ಚಿಕೊಳ್ಳುತ್ತದೆ. ಆ ಸುರುಳಿಯಲ್ಲಿ ಈ ಪುಸ್ತಕದ ಮುಂದಿನ ಅಧ್ಯಾಯಗಳು ಇತ್ತು. ಯೋಹಾನನು ಬಿಚ್ಚಲ್ಪಡಬೇಕೆಂದು ಹಾತೊರೆಯುತ್ತಿದ್ದ ಮತ್ತು ಅದನ್ನು ಬಿಚ್ಚಿದಾಗ ಪರಲೋಕದಲ್ಲಿ ಮಹಾ ಸಂತೋಷವೂ ಮತ್ತು ಸ್ತುತಿ ಸ್ತೋತ್ರಗಳು ಉಂಟಾಗುವಂತೆ ಮಾಡಿದ ಸುರುಳಿಗಳು ಈಗ ನಮ್ಮ ಮುಂದೆ ತರೆಯಲ್ಪಟ್ಟಿವೆ. ಯೂದರಲ್ಲಿ ಆಸ್ತಿಯ ಶಿರ್ಷಿಕೆ ಪತ್ರಗಳು ಮುದ್ರೆ ಹಾಕಲ್ಪಟ್ಟ ದಾಖಲೆಗಳಾಗಿದ್ದವು (ಯೆರೆ 32:9-14 ನೋಡಿರಿ), ಮತ್ತು ಮುದ್ರೆ ಹಾಕಲ್ಪಟ್ಟ ಸುರುಳಿಗಳು ಭೂಲೋಕಕ್ಕೆ ಕ್ರಿಸ್ತನ ಶಿರ್ಷಿಕೆಯ ಪತ್ರವಾಗಿದೆ, ಆತನು ಅದನ್ನು ಸ್ವಾಧೀನ ಪಡಿಸಿಕೊಳ್ಳುವದಕ್ಕೂ ಮತ್ತು ಅದನ್ನು ಆಳುವುದಕ್ಕೂ ಯೋಗ್ಯನಾಗಿದ್ದಾನೆ (ಯಾಜಕ 25:24-31; ರೂತಳು 2:20; ಯೆರೆ 32:11). ಈ ಯುಗದ ಅಂತ್ಯದಲ್ಲಿ, ಆತನು ತನ್ನ ಆಸ್ತಿ, ತನ್ನ ಸ್ವಾಸ್ತ್ಯವನ್ನು ಪಡೆಯಲು ಹಿಂದಿರುಗುತ್ತಾನೆ (ಮತ್ತಾಯ 21:38; ಇಬ್ರಿ 1:2,13; 10:13),ಮತ್ತು ಅದನ್ನು ತನ್ನ ಜನರೊಂದಿಗೆ

ಹಂಚಿಕೊಳ್ಳುವವನು (ರೋಮಾ 8:17). ಅಧ್ಯಾಯ 19 ಮತ್ತು 20 ರಲ್ಲಿರುವವದನ್ನು ಈ ಕ್ರಿಸ್ತನು ಮಾಡುತ್ತಾನೆ. ಈ ಕಾರ್ಯಗಳ ಅಂತ್ಯದ ಸ್ವಲ್ಪ ಮುಂಚಿತವಾಗಿ ನಡೆದ ಘಟನೆಗಳನ್ನು ಅಧ್ಯಾಯ 6-18 ರಲ್ಲಿ ಕೊಡಲಾಗಿದೆ. ಮುದ್ರೆಗಳು, ತುತೂರಿಗಳು ಮತ್ತು ಪಾತ್ರೆಗಳು ಇವೆಲ್ಲವೂ ಬರುವಂತಹ ನಾಶನಗಳನ್ನು ಸೂಚಿಸಿದರೂ ಬಿಡುಗಡೆಯ ಕ್ರಿಸ್ತನು ಈ ಎಲ್ಲಾ ಘಟನೆಗಳ ಮೇಲ್ವಿಚಾರಕನೆಂಬುದನ್ನು ನಾವು ಮರೆಯಬಾರದು.

*“ಬಂದು ನೋಡು”*– ವಚಗಳು 3,5,7. ಆ ಸುರುಳಿಯಲ್ಲಿದ್ದ ಸಂಗತಿಗಳನ್ನು ನೋಡಲು ಯೋಹಾನನಿಗೆ ಅನುಮತಿ ಸಿಕ್ಕಿತು ( ಮತ್ತು ನಮಗೂ ಸಹ). **2**

**6:2** *“ಬಿಳಿ ಕುದುರೆ”*– ಕ್ರಿಸ್ತನು ಸಹ “ಬಿಳಿ ಕುದುರೆಯ” –ಮೇಲೆ ಬರುತ್ತಾನೆ (19:11), ಆದರೆ ಆತನು ಬರುವುದು ಈ ಘಟನೆಗಳ ನಂತರ, ಎಲ್ಲಾ ಮುದ್ರೆಗಳು ತೆರೆದ ಮೇಲೆ. ಈ ಬಿಳಿ ಕುದುರೆ ಮೇಲಿರುವವನು ಬರುವಾಗ ಕ್ರಿಸ್ತನು ಇನ್ನು ಪರಲೋಕದಲ್ಲಿ ಮುದ್ರೆಗಳನ್ನು ತೆರೆಯುತ್ತಿದ್ದಾನೆ. ಬಿಳಿ ಬಣ್ಣವು ಒಂದು ವೇಳೆ ಯಾರೋ ಒಬ್ಬರು ಕ್ರಿಸ್ತನ ಸ್ಥಳವನ್ನು ತೆಗೆದುಕೊಂಡು ಮತ್ತು ಈ ಭೂಮಿಯ ಮೇಲೆ ತನ್ನ ಹಕ್ಕನ್ನು ಸಾಧಿಸಲು ಪ್ರಯತ್ನಿಸುತ್ತಿರುವವದನ್ನು ಸೂಚಿಸುತ್ತಿರಬಹುದು. ಇದು ಬೇರೆ ಯಾರು ಅಲ್ಲದೆ ಆ ಮಹಾ ವಂಚಕ, ಕ್ರಿಸ್ತವಿರೋಧಿಯಾಗಿರಬಹುದೋ? (ಅಧ್ಯಾಯ 13).

*“ಅದರ ಮೇಲೆ ಕುಳಿತ್ತಿದ್ದವನಿಗೆ”*– ಬೇರೆ ಕುದುರೆಗಳು ಮತ್ತು ಅದರ ಮೇಲೆ ಕುಳಿತ್ತಿದ್ದವರು (ಮತ್ತು ಬೇರೆ ಎಲ್ಲಾ ಮುದ್ರೆಗಳು ಮತ್ತು ತುತೂರಿಗಳು ಮತ್ತು ಪಾತ್ರೆಗಳು) ಬರುವ ಕಷ್ಟಗಳನ್ನು ಅಥವಾ ನಾಶನಗಳನ್ನು ಪ್ರತಿನಿಧಿಸುತ್ತವೆ, ಇದು ಸಹ ಹಾಗೆಯೇ ಎಂದು ತೋರುತ್ತದೆ.

*“ಜಯಿಸುವದಕ್ಕೋಸ್ಕರ ಹೊರಟನು”*– ಈ ಯುಗದ ಅಂತ್ಯಕ್ಕೆ ಈ ಭೂಮಿಯನ್ನು ಜಯಿಸುವದಕ್ಕಾಗಿ ಯಾರೋ ಒಬ್ಬರು ನಿಶ್ಚಯವಾಗಿ ಪ್ರಯತ್ನಿಸುವರೆಂದು ಇದರಿಂದ ತಿಳಿಯುತ್ತದೆ. “ಜಯಮಾಲೆ” ಸೂಚಿಸುವದೇನೆಂದರೆ ಅವನು ಸಫಲವಾಗುವನು. 13:7 ಹೋಲಿಸಿರಿ. **3-4**

**6:3-4** ಈ ಯುಗದ ಅಂತ್ಯದಲ್ಲಿ ಅನೇಕ ಯುದ್ಧಗಳು ನಡೆಯುತ್ತವೆ (ಮತ್ತಾಯ 24:6-8 ಹೋಲಿಸಿರಿ). “ಭೂಮಿಯೊಳಗಿಂದ ಸಮಾಧಾನವನ್ನು ತೆಗೆದುಬಿಡು” – ಸೂಚಿಸುವದೇನಂದರೆ ಇಡೀ ಪ್ರಪಂಚವು ಅಧಿಕಾರವನ್ನು ಪಡೆದುಕೊಳ್ಳುವ ಹೋರಾಟದಲ್ಲಿರುವದು. **6**

**6:6** *“ಒಂದು ಸೇರು”*– ಗ್ರೀಕ್ ಪದವು ಒಂದು ಲೀಟರಿಗೆ ಸಮನಾದ ಒಣ ಅಳತೆಯನ್ನು

ಸೂಚಿಸುತ್ತದೆ.

*“ಒಂದು ದಿನದ ಕೂಲಿ”*– ಗ್ರೀಕ್ ಭಾಷೆಯಲ್ಲಿ “ದಿನಾರಿಯ” – ಒಂದು ದಿನ ಕೆಲಸಕ್ಕೆ ಸಿಕ್ಕುವ ಕೂಲಿ (ಮತ್ತಾಯ 20:2). ಇದು ಬರಗಾಲದಲ್ಲಿ ಸಾಮಾನ್ಯ ಜನರ ಸ್ಥಿತಿಯನ್ನು ಸೂಚಿಸುತ್ತದೆ (ಮತ್ತಾಯ 24:7). ಅವನ ಕೂಲಿ ಎಲ್ಲವೂ ಒಂದು ಸೇರು ಗೋದಿ ಕೊಂಡುಕೊಳ್ಳಲು ಹೋದರೆ ಬೇರೆ ಖರ್ಚುಗಳಿಗೆ ಏನು ಮಾಡುತ್ತಾನೆ? “ಎಣ್ಣೆ ಮತ್ತು ಗೋದಿ” ಮೂಲಭೂತ ಅವಶ್ಯಕತೆಗಳಿಲ್ಲದ ವಿಷಯಗಳನ್ನು ಸೂಚಿಸುತ್ತದೆ. ಎಂದಿನಂತೆ ಶ್ರೀಮಂತರು ಎಲ್ಲವನ್ನೂ ಸಾಕಷ್ಟು ಹೊಂದಿರುತ್ತಾರೆ. **8**

**6:8** *“ಪಾತಾಳ”*– ಮತ್ತಾಯ 16:18; ಲೂಕ 16:23 ಟಿಪ್ಪಣಿ ನೋಡಿರಿ.

*“ಭೂಮಿಯ ಕಾಲು ಭಾಗ”*– ಇದು ಭೂಮಿಯ ಭೌಗೋಳಿಕ ಭಾಗವನ್ನು ಅಥವಾ ಬಹುತೇಕ, ಕೊಲ್ಲಲ್ಪಟ್ಟ ಜನಸಂಖ್ಯೆಯನ್ನು ಸೂಚಿಸುತ್ತಿರಬಹುದು (8:7; 9:18 ಹೋಲಿಸಿರಿ). ಈ ಯುಗದ ಅಂತ್ಯದಲ್ಲಿ ಎಂದೂ ಕಂಡಿರದ ಅಂಧಕಾರದ ಶಕ್ತಿಯು ಈ ಭೂಮಿಯ ಮೇಲೆ ಸಡಿಲಗೊಳ್ಳುತ್ತದೆ.

*“ಕತ್ತಿ-ಕಾಡುಮೃಗಗಳು”*– ಯೆಹೆಜ್ಕೇಲ 14:21 ರಲ್ಲಿ ಇದನ್ನು ದೇವರ “ನಾಲ್ಕು ಘೋರವಾದ ನ್ಯಾಯತೀರ್ಪು” ಎಂದು ಕರೆಯಲಾಗಿದೆ. ಈ ತೀರ್ಪು ಲೋಕದ ಕೆಲವು ಜನರ ಮೇಲೆ ಆಗ್ಗಾಗ್ಗೆ ಬಂದಿದೆ, ಆದರೆ ಇದಕ್ಕಿಂತಲೂ ಘೋರವಾದದ್ದನ್ನು ಈ ಯುಗದ ಅಂತ್ಯದಲ್ಲಿ ನಾವು ಕಾಣುವವರಾಗಿದ್ದೇವೆ. **9-11**

**6:9-11** ಈ ದೃಶ್ಯವು ಕ್ರಿಸ್ತನ ಸೇವಕರ ಹಿಂಸೆ ಮತ್ತು ರಕ್ತಸಾಕ್ಷಿಗಳನ್ನು ಸೂಚಿಸುತ್ತದೆ ಮತ್ತು ಒಂದು ವೇಳೆ “ಮಹಾ ಸಂಕಟ” ಅಥವಾ “ಮಹಾ ಯಾತನೆ” ಈ ಯುಗದ ಅಂತ್ಯದಲ್ಲಿ ಕಾಣಬಹುದು – 7:17; ಮತ್ತಾಯ 24:21. **9**

**6:9** *“ಯಜ್ಞವೇದಿ”*– ವಿಮೋ 27:1-8. ಕ್ರಿಸ್ತನಿಗಾಗಿ ರಕ್ತಸಾಕ್ಷಿಯಾದವರು ತಮ್ಮ ಜೀವಿತವನ್ನು ಯಜ್ಞವಾಗಿ ಅರ್ಪಿಸಿಕೊಂಡಂತೆ (ಫಿಲಿಪ್ಪಿ 2:17; 2 ತಿಮೊ 4:6; ಯಾಜಕ 1:5,11,15). **10**

**6:10** *“ನಮ್ಮ ರಕ್ತಕ್ಕಾಗಿ ಪ್ರತಿದಂಡನೆ”*– ಈ ಲೋಕದಲ್ಲಿ ಜೀವಿಸುವಾಗ ಕ್ರಿಸ್ತನ ಸೇವಕರು ತಮ್ಮ ವೈರಿಗಳ ಪ್ರತಿದಂಡನೆಗಾಗಿ ಪ್ರಾರ್ಥಿಸಬಾರದು. ಮತ್ತಾಯ 5:44; ಅಪೊ 7:60;

ರೋಮಾ 12:14. ಆದರೆ ಈ ಯುಗದ ಅಂತ್ಯದಲ್ಲಿ ಒಂದು ಸಮಯ ಬರುತ್ತದೆ ದೇವರು ಈ ಲೋಕದ ಮೇಲೆ ಮುಯ್ಯಿತೀರಿಸುವನು – 2 ಥೆಸ 2:6-9; ಕೀರ್ತನೆ 94:1-3; ಧರ್ಮೋ 32:35; ದೇವರ ಪ್ರತಿದಂಡನೆ ಎಂಬ ವಿಷಯದ ಟಿಪ್ಪಣಿಗಾಗಿ ಸಂಖ್ಯಾ 31:1-3. ಆಗ ಸತ್ತು ಹೋದವರ ಪ್ರಾರ್ಥನೆಗಳು ದೇವರ ಉದ್ದೇಶಕ್ಕೆ ಸಾಮರಸ್ಯವಾಗಿರುತ್ತವೆ. ಸತ್ತು ಹೋದವರಿಗೆ ಪ್ರಜ್ಞೆಯಿರುತ್ತದೆ ಮತ್ತು ಅವರು ಪ್ರಾರ್ಥಿಸಬಹುದೆಂಬುದನ್ನು ಗಮನಿಸಿ. **11**

**6:11** *"ಬಿಳಿ ನಿಲುವಂಗಿಗಳು"*– 3:5,18; 4:4; 7:9,13; 19:14.

*"ಸ್ವಲ್ಪ ಕಾಲ ವಿಶ್ರಮಿಸಿಕೊ"*– ಮಹಾ ಸಂಕಟದ ದಿನಗಳು ಬಂದಿದೆ, ಆದರೆ ದೇವರ ಪ್ರತಿದಂಡನೆಯ ದಿನ ಬರಲಿಲ್ಲ. ಆ ದಿನವು ಬರುವುದನ್ನು ಮುಂದೆ ಈ ಪುಸ್ತಕದಲ್ಲಿ ನೋಡುತ್ತೇವೆ – 14:17-20; 15—16 ಅಧ್ಯಾಯಗಳು; 19:11-15. **12-17**

**6:12-17** ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ ಬದಲಾವಣೆಗಳನ್ನು ಮತ್ತಾಯ 24:29 ರೊಂದಿಗೆ ಹೋಲಿಸಿರಿ. ಈ ಘಟನೆಗಳು "ಮಹಾ ಸಂಕಟ" ಮುಗಿದ ನಂತರ ಕ್ರಿಸ್ತನು ಮತ್ತಾಯ 24:21 ರಲ್ಲಿ ಹೇಳಿದಂತೆ ಸಂಭವಿಸುವವು. ಇದರ ಅರ್ಥ ಮಹಾಸಂಕಟದ ದಿನಗಳು ಮೊದಲ ಐದು ಮುದ್ರೆಗಳನ್ನು ತೆರೆಯುವ ಸಮಯದಲ್ಲಿ ಅಂದರೆ ಆರನೆಯ ಮುದ್ರೆಯನ್ನು ತೆರೆಯುವ ಮುಂಚಿತವಾಗಿ ಸಂಭವಿಸುವುದು. ಆದರೆ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ ಬದಲಾವಣೆಗಳು "ಕರ್ತನ ದಿನದ" ಮುಂಚಿತವಾಗಿ ಸಂಭವಿಸುವುದು. ಅಪೊ 2:19-20 ನೋಡಿರಿ. ಆದ್ದರಿಂದ ಕರ್ತನ ದಿನವು ಮತ್ತು ಮಹಾಸಂಕಟದ ದಿನವು ಒಂದೇ ಅಲ್ಲ. ಲೋಕದ ಜನರ ವಿರುದ್ಧವಾಗಿ ಪ್ರತಿದಂಡನೆ – ವಚನಗಳು 10,16,17; 1 ಥೆಸ 5:2-3; 1 ಪೇತ್ರ 3:10; ಯೆಶಾಯ 13:6-13. ಮಹಾಸಂಕಟ ಎಂದರೆ ಈ ಯುಗದ ಅಂತ್ಯದಲ್ಲಿ ಸೈತಾನನು ಮತ್ತು ದುಷ್ಟ ಜನರು ದೇವರ ಜನರನ್ನು ಹಿಂಸಿಸುವುದು – 12:12; 13:7. ಸೂರ್ಯ, ಚಂದ್ರ ಮತ್ತು ನಕ್ಷತ್ರಗಳಲ್ಲಾಗುವ ಬದಲಾವಣೆಗಳ ಸೂಚನೆಯು ಮಹಾ ಸಂಕಟದ ದಿನ ಮತ್ತು ಕರ್ತನ ದಿನವನ್ನು ನಿಸ್ಸಂದೇಹವಾಗಿ ಬೇರ್ಪಡಿಸಿದೆ. ಒಂದು ಈ ಸೂಚನೆಗಳ ಮುಂಚಿತವಾಗಿ ಬರುತ್ತದೆ, ಇನ್ನೊಂದು ಅದರ ನಂತರ. ಇದನ್ನು ನೋಡುವುದು ಬಹಳ ಮುಖ್ಯ. ಮಹಾ ಸಂಕಟದ ದಿನ ಮತ್ತು ಕರ್ತನ ದಿನವು ನಿಖರವಾಗಿ ಅದೇ ಸಮಯದಲ್ಲಿ ನಡೆಯತ್ತದೆಂದು ಮತ್ತು ಅವೆರಡೂ ಒಂದೇ ಎಂದು ನಾವು ಯೋಚಿಸಬಾರದು. ದೇವರು ಬೇರ್ಪಡಿಸಿರುವ ಈ ಎರಡು ವಿಷಯಗಳು ಗೊಂದಲಕ್ಕೀಡು ಮಾಡುತ್ತದೆ. ಈ ಎರಡು

ಅವಧಿಗಳ ನಡುವೆ ವ್ಯತ್ಯಾಸವನ್ನು ಗುರುತಿಸದವರು ಅಂತ್ಯ ಸಮಯದ ಬಗ್ಗೆ ಆತನು ನಮಗೆ ನೀಡಿದ ಕೆಲವು ಪ್ರಮುಖ ಮಾಹಿತಿಯನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ ಅವರು ಪ್ರಕಟನೆಯ ಪುಸ್ತಕವನ್ನು ವ್ಯಾಖ್ಯಾಯನಿಸುವಾಗ ಅನಿವಾರ್ಯವಾಗಿ ತಪ್ಪುಗಳನ್ನು ಮಾಡುತ್ತಾರೆ. **12**

**6:12** *"ತಕ್ಷಣ"*– ಅಕ್ಷರಶಃ "ನೋಡು".

*"ಭೂಕಂಪ"*– ಯೆಶಾಯ 24:19-20; ಇಬ್ರಿ 12:26-28. **15-17**

**6:15-17** ಯೆಶಾಯ 2:9-21 ನೋಡಿರಿ ಇದು ಕರ್ತನ ದಿನದ ಬಗ್ಗೆಯೂ ಮಾತಾಡುತ್ತದೆ. **16**

**6:16** *"ಕೋಪ"*– ಇದು ಪಾಪದ ಮತ್ತು ಮಾನಸಾಂತರ ಪಡದವರ ಮೇಲೆ ದೇವರ ನೀತಿಯುಳ್ಳ ಕೋಪವಾಗಿದೆ. ಸಂಖ್ಯಾ 25:3; ಧರ್ಮೋ 4:25; ಕೀರ್ತನೆ 90:7-11; ಯೋಹಾನ 3:36; ರೋಮಾ 1:18; 2:5 ಟಿಪ್ಪಣಿಗಳನ್ನು ನೋಡಿರಿ. ಈ ಕೋಪದಿಂದಲೇ ದೇವರು ವಿಶ್ವಾಸಿಗಳನ್ನು ರಕ್ಷಿಸುತ್ತಾನೆ – 1 ಥೆಸ 1:10; 5:9.

*"ಯಜ್ಞದ ಕುರಿಯಾದಾತನ ಕೋಪ"*– ಕುರಿಮರಿಯು ಸೌಮ್ಯ ಮತ್ತು ಸಾಧು ಪ್ರಾಣಿಯಾಗಿದೆ. ಆದರೆ ಈ ಕುರಿಮರಿಯು ಯೂದ ಕುಲದ ಸಿಂಹವಾಗಿದೆ (5:5). ಆತನು ಸೌಮ್ಯವುಳ್ಳವನು (ಮತ್ತಾಯ 11:29), ಆದರೆ ಲೋಕವನ್ನು ಅದರ ದುಷ್ಟತ್ವಗಳಿಗಾಗಿ ಶಿಕ್ಷಿಸಲು ಮಹಾ ರೌದ್ರದಿಂದ ಏಳುವವನಾಗಿದ್ದಾನೆ. ದೇವರ ಕೋಪವು ಕರ್ತನ ದಿನದ ಪ್ರಾರಂಭದಲ್ಲಿ ಅದರ ಸೂಚನೆಯ ನಂತರ, ಮಹಾ ಸಂಕಟದ ದಿನಗಳು ಮುಗಿದನಂತರ ಬರುವದನ್ನು ಗಮನಿಸಿರಿ. ಪ್ರಕಟನೆ ಪುಸ್ತಕದ ನಮ್ಮ ವ್ಯಾಖ್ಯಾಯನವು ಸರಿಯಾಗಿರಬೇಕಾದರೆ ನಾವು ಇದನ್ನು ನೋಡುವುದು ಬಹಳ ಮುಖ್ಯವಾಗಿದೆ.

# 7 1-17

**7:1-17** ಕುರಿಯಾದಾತನು ಏಳನೆಯ ಮುದ್ರೆಯನ್ನು ತೆರೆಯುವದಕ್ಕಿಂತ ಮುಂಚೆ ನಿರೂಪಣೆಯಲ್ಲಿ ವಿರಾಮವಿದೆ. ಇಲ್ಲಿ ಕ್ರಿಸ್ತನು ಆರನೆಯ ಮುದ್ರೆಯು ತೆರೆಯುವಾಗ ಆಗುವ ಘಟನೆಗಳನ್ನು ವಿವರಿಸಲು ಸಹಾಯವಾಗುವ ಹಾಗೆ ಯೋಹಾನನಿಗೆ ದರ್ಶನಗಳನ್ನು ಕೊಡುತ್ತಾನೆ. ಈ ರೀತಿಯ ವಿವರಣಾತ್ಮಕ ದರ್ಶನಗಳನ್ನು ಈ ಪುಸ್ತಕದ ಬೇರೆ

ಕಡೆಯಲ್ಲಿಯೂ ಕಂಡುಬರುತ್ತದೆ – 7:1-17; 10:1—11:14; 12:1—14:20; 17:1—19:11. ಇಲ್ಲಿ ನಾವು ಸ್ಪಷ್ಟವಾಗಿ ಕಾಣುವುದೇನೆಂದರೆ ಮುದ್ರೆಗಳು, ತುತೂರಿಗಳು ಮತ್ತು ಪಾತ್ರೆಗಳು ಮುಖ್ಯ ನಿರೂಪಣೆಯನ್ನು ಪರಿಪೂರ್ಣ ಕ್ರಮ ಮತ್ತು ಅನುಕ್ರಮದಲ್ಲಿ ನೇರವಾಗಿ ಅಂತ್ಯಕ್ಕೆ ಕೊಂಡೊಯ್ಯುತ್ತದೆ. ಈ ವಿವರಣಾತ್ಮಕ ದರ್ಶನಗಳನ್ನು ಉಪವಾಕ್ಯ ಅಥವಾ ಆವರಣಗಳಲ್ಲಿ ಕೊಡಲಾಗಿದೆ. ಇದು ಈ ಟಿಪ್ಪಣಿಯ ಲೇಖಕನ ದೃಷ್ಟಿಕೋನವಾಗಿದೆ. ಎಲ್ಲಾ ವಿದ್ವಾಂಸರು ಇದನ್ನು ಒಪ್ಪುವದಿಲ್ಲ. ಈ ಪ್ರಸ್ತುತ ಭಾಗದಲ್ಲಿ ಎರಡು ವಿಭಿನ್ನ ಜನರ ಗುಂಪನ್ನು ನೋಡುತ್ತೇವೆ, ಒಂದು ಭೂಲೋಕದಲ್ಲಿ, ಮತ್ತೊಂದು ಪರಲೋಕದಲ್ಲಿ. ಮೊದಲನೆಯ ಗುಂಪು ಮಿತಿಯುಳ್ಳ ಸಂಖ್ಯೆಯಿಂದ ಕೂಡಿದೆ, ಎರಡನೆಯ ಗುಂಪು ಒಬ್ಬ ವ್ಯಕ್ತಿಯು ಎಣಿಸಲಾರದಷ್ಟು ದೊಡ್ಡ ಗುಂಪಾಗಿದೆ. ಮೊದಲನೆಯ ಗುಂಪು ಆರು ಮುದ್ರೆಗಳು ತೆರೆದ ನಂತರ ಆದ ಘಟನೆಗಳಿಗೆ ಸಂಬಂಧಿಸಿದ ಗುಂಪಾಗಿದೆ. ಎರಡನೆಯ ಗುಂಪು ಮೊದಲ ಐದು ಮುದ್ರೆಗಳು ತೆರೆಯುವ ಸಮಯದಲ್ಲಿ ಆದ ಘಟನೆಗಳಿಗೆ ಸಂಬಂದಿಸಿದ್ದಾಗಿದೆ. ಮೊದಲ ಗುಂಪಿನವರು ಏಳನೆಯ ಮುದ್ರೆಯು ತರೆದ ನಂತರ ಬರುವ ನ್ಯಾಯತೀರ್ಪಿನಿಂದ ರಕ್ಷಿಸಲ್ಪಡಬೇಕಾಗಿದೆ. ಎರಡನೆಯ ಗುಂಪು ಆರನೆಯ ಮುದ್ರೆಯು ತೆರೆಯುವದಕ್ಕಿಂತ ಮುಂಚಿತವಾಗಿ ಇದ್ದ "ಮಹಾ ಸಂಕಟದ" ದಿನಗಳನ್ನು ಈಗಾಗಲೇ ದಾಟಿ ಬಂದಿದ್ದಾರೆ. **1**

**7:1** *"ಚತುರ್ದಿಕ್ಕುಗಳ ಗಾಳಿ"*– ಇವು ಪಾಪಿಗಳಾದ ಮನುಷ್ಯರನ್ನು ದೇವರು ಕಳುಹಿಸಿದ ನಾಶಮಾಡುವ ಶಕ್ತಿಗಳನ್ನು ಸೂಚಿಸುತ್ತವೆ. ಯೆರೆ 49:36-38. **2-3**

**7:2-3** ಇಲ್ಲಿನ ದೇವರು ಮುದ್ರೆಯು ದೇವರ ಮಾಲಿಕತ್ವವನ್ನು ಸೂಚಿಸುತ್ತದೆ. 2 ಕೊರಿಂಥ 1:21-22; ಎಫೆ 1:13. "ಹಣೆಯ ಮೇಲಿರುವ" ಮುದ್ರೆ ಇಲ್ಲಿ ಬರುವ ನ್ಯಾಯತೀರ್ಪಿನಿಂದ ಮತ್ತು ನಾಶನದಿಂದ ಅವರನ್ನು ಕಾಪಾಡುವದಕ್ಕಾಗಿ ಅವರನ್ನು ಗುರುತಿಸುವುದು ಎಂದರ್ಥ. ಯೆಹೆಜ್ಕೇಲ 9:3-6. **4-8**

**7:4-8** "ದೇವರ ಸೇವಕರು"(ವ.3) – ಇಸ್ರಾಯೇಲ್ ದೇಶವು ಈ ಯುಗದ ಅಂತ್ಯದಲ್ಲಿ ದೇವರ ಮುದ್ರೆಯಿಂದ ಮುದ್ರಿಸಲ್ಪಡುವುದು. ಇಸ್ರಾಯೇಲ್ ಕುಲದ ಸುಮಾರು ಮೂವತ್ತು ಪಟ್ಟಿಗಳು ಸತ್ಯವೇದದಲ್ಲಿದೆ. ಎಲ್ಲರೂ ಎಂದು ಹೇಳುವಾಗ ಅಕ್ಷರಶಃ ಈ ಪಟ್ಟಿಯಲ್ಲಿರುವ ಇಸ್ರಾಯೇಲ್ಯರು. ಈ ಒಂದು ಸ್ಥಳದಲ್ಲಿ ಮಾತ್ರ ಕುಲದ ಹೆಸರುಗಳು ಅಕ್ಷರಶಃ ಇಸ್ರಾಯೇಲ್ಯರನ್ನು ಸೂಚಿಸದಿದ್ದರೆ ಅದು ತುಂಬಾ ವಿಚಿತ್ರವೆನಿಸುತ್ತದೆ. ಆದಾಗ್ಯೂ, ಇಲ್ಲಿ

ಅವರು ಸೇವಕರೆಂದು ಕರೆಯಲ್ಪಡುತ್ತಾರೆಯೇ ಎಂಬುದು ಸ್ಪಷ್ಟವಾಗಿಲ್ಲ ಏಕೆಂದರೆ ಅವರು ವಿಶೇಷವಾದ ಸೇವೆಯನ್ನು ಮಾಡುತ್ತಾರೆ ಅಥವಾ ಅವರನ್ನು ಸಾಧಾರಣವಾಗಿ ವಿಶ್ವಾಸಿಗಳೆಂದು ಗುರುತಿಸುತ್ತಿದೆಯೋ ಇದು ಸ್ಪಷ್ಟವಾಗಿಲ್ಲ (1:1; 2:20; 6:11; 10:7; 19:2; 22:3,6 ಹೋಲಿಸಿರಿ. ರೋಮಾ 6:16-18 ನೋಡಿರಿ). ಈ ಯುಗದ ಅಂತ್ಯದಲ್ಲಿ ಇಸ್ರಾಯೇಲ್ ಜನರು ದೇಶವಾಗಿ ದೇವರ ಕಡೆಗೆ ತಿರುಗಿಕೊಳ್ಳುತ್ತಾರೆಂದು ದೇವರ ವಾಕ್ಯದ ಮೂಲಕ ಸ್ಪಷ್ಟವಾಗಿ ತಿಳಿಯುತ್ತದೆ. ಈಗ, ರಾಷ್ಟ್ರವಾಗಿ, ಅವರು ಕ್ರಿಸ್ತನನ್ನು ಅವರ ಮೆಸ್ಸೀಯನೆಂದು ಅಪನಂಬಿಕೆಯಲ್ಲಿ ತಿರಸ್ಕರಿಸುತ್ತಿದ್ದಾರೆ. ಆದರೆ ಅದು ಬದಲಾಗುತ್ತದೆ. ರೋಮಾ 11:11,25-32; ಯೆರೆ 23:5-8; 31:31-37; 32:37-40; ಯೆಹೆಜ್ಕೇಲ 20:40-44; 37:21-28; ದಾನಿ 12:1; ಹೋಶೇಯ 3:4-5; ಜೆಕರ್ಯ 10:10-12; 12:9-14; 13:1,9. 144,000 ಎಂಬ ಸಂಖ್ಯೆಯು (ವ.4) ಪರಿಪೂರ್ಣತೆಯನ್ನು ಸೂಚಿಸುವ ಸಾಕೇತಿಕ ಸಂಖ್ಯೆಯಾಗಿರಬಹುದು. 144,000 ಅನ್ನುವದು 12 X 12 X 1000. ಸತ್ಯವೇದದಲ್ಲಿ ಹನ್ನೆರಡು ಎಂಬ ಸಂಖ್ಯೆಯು ಪರಿಪೂರ್ಣತೆಯನ್ನು ಸೂಚಿಸುವ ಸಂಖ್ಯೆಯಾಗಿದೆ – ಇಸ್ರಾಯೇಲ್ಯರ ಹನ್ನೆರಡು ಕುಲಗಳು, ಹನ್ನೆರಡು ಅಪೋಸ್ತಲರು, ಹನ್ನೆರಡು ಹೆಬ್ಬಾಗಿಲುಗಳು ಮತ್ತು ಹನ್ನೆರಡು ಅಸ್ತಿವಾರ ಮತ್ತು ಹನ್ನೆರಡು ತರಹದ ಫಲಗಳು (21:12,14; 22:2). ಒಂದು ವೇಳೆ ಒಂದು ಸಾವಿರವು 10 X 10 X 10 – ಸಂಪೂರ್ಣವಾದ ಘನಾಕೃತಿಯು ಸಂಪೂರ್ಣತೆಯನ್ನು ಅಥವಾ ಪರಿಪೂರ್ಣತೆಯನ್ನು ಸೂಚಿಸುತ್ತದೆ. ಅಥವಾ 144,000 ಸಾಕಷ್ಟು ದೊಡ್ಡ ಆದರೆ ಸೀಮಿತ ಸಂಖ್ಯೆಯ ಜನರನ್ನು ಸೂಚಿಸಲು ಈ ಸಂಖ್ಯೆಯನ್ನು ಬಳಸಿರಬಹುದು. ಅಥವಾ ಬಹುಶಃ, ಕೆವಲರು ಯೋಚಿಸುವಂತೆ ಅಕ್ಷರಶಃ ಇದು ಸಂಖ್ಯೆಯಾಗಿರಬಹುದು. ಅನೇಕ ಚಿನ್ಹೆಗಳನ್ನು ಹೊಂದಿರುವ ಪುಸ್ತಕದಲ್ಲಿ ಅನುಮಾನಾಸ್ಪದ ವಿಷಯಗಳ ಬಗ್ಗೆ ನಾವು ತತ್ವಾತ್ಮಕರಾಗದಂತೆ ಎಚ್ಚರಿಕೆಯಿಂದಿರಬೇಕು. ಕೆಲವೊಮ್ಮೆ ಅವು ಕೆಲಸ ಮಾಡುವ ರೀತಿಯಂತೆ, ಚಿನ್ಹೆಗಳನ್ನು ವಿವರಿಸಿದರೆ, ಆಗ ಅವುಗಳ ಅರ್ಥವನ್ನು ತಿಳಿದುಕೊಳ್ಳಬಹುದು. ಇಲ್ಲದಿದ್ದರೆ, ನಮ್ಮ ಹೇಳಿಕೆಯ ಬಗ್ಗೆ ನಾವು ಎಚ್ಚರಿಕೆಯಿಂದಿರಬೇಕು. ಆಗ "ಬಹುಶಃ", "ಒಂದು ವೇಳೆ", "ಬಹುತೇಕ" ಅಥವಾ "ಇರಬಹುದು", ಎಂಬ ಪದಗಳು ಇಂಥಹ ಪ್ರಕರಣಕ್ಕೆ ಸೂಕ್ತ ಭಾಷೆ ಎಂದು ತೋರುತ್ತದೆ. **8**

**7:8** *"ಯೋಸೇಫನು"*– ಮನಸ್ಸೆ (ವ.6) ಯೋಸೇಫನ ಮಗ. ಎಫ್ರಾಯೀಮನು ಅವನ

ಇನ್ನೊಬ್ಬ ಮಗ. ಈ ಕುಲದ ಪಟ್ಟಿಯಲ್ಲಿ ಎಫ್ರಾಯೀಮನ ಕುಲದ ಹೆಸರು ಇಲ್ಲದಿರುವದರಿಂದ ಯೋಸೇಫನು ಎಫ್ರಾಯೀಮನನ್ನು ಪ್ರತಿನಿಧಿಸಬೇಕು. ದಾನ್ ಕುಲವು ಈ ಪಟ್ಟಿಯಲ್ಲಿ ಇಲ್ಲ. 9

**7:9** ಈ ದೊಡ್ಡ ಜನಸಮೂಹವನ್ನು ವ.4 ರಲ್ಲಿ 144,000 ಎಂದು ವ್ಯತಿರಿಕ್ತವಾಗಿ ತೋರಿಸಲಾಗಿದೆ. ಅವರು ಇಸ್ರಾಯೇಲ್ಯರ ಕುಲದವರು; ಇವರು ಪ್ರತಿಯೊಂದು ಕುಲ ಮತ್ತು ಜನಾಂಗದವರು. ಅವರು ತುಲನಾತ್ಮಕವಾಗಿ ಕಡಿಮೆ ಸಂಖ್ಯೆಯಲ್ಲಿದ್ದಾರೆ; ಇವರು ಅಸಂಖ್ಯಾತರಾಗಿದ್ದಾರೆ.

*“ಎಲ್ಲಾ ಜನಾಂಗಕುಲ...ಭಾಷೆಗಳನ್ನಾಡುವರು”*– 5:9; 10:11; 11:9; 13:7; 14:6; 17:15. ಈ ಯುಗದ ಅಂತ್ಯದೊಳಗಾಗಿ ಸುವಾರ್ತೆಯು ಭೂಲೋಕದ ಎಲ್ಲಾ ಮೂಲೆಗಳಿಗೂ ತಲುಪುತ್ತದೆನ್ನುವುದಕ್ಕೆ ಇದು ಸಾಕ್ಷಿಯಾಗಿದೆ. ಮತ್ತಾಯ 24:14 ಹೋಲಿಸಿರಿ.

*“ಸಿಂಹಾಸನದ ಮುಂದೆ”*– 4:2.

*“ಬಿಳೀ ನಿಲುವಂಗಿಗಳು”*– 6:11.

*“ಖರ್ಜೂರದ ಗರಿ”*– ಯಾಜಕ 23:40; ಯೋಹಾನ 12:13 – ಸಂತೋಷ ಪಡುವ ಮತ್ತು ಸ್ತೋತ್ರ ಮಾಡುವ ಚಿನ್ಹೆಯಾಗಿದೆ. 10

**7:10** *“ರಕ್ಷಣೆ”*– 19:1; ಕೀರ್ತನೆ 3:8; 37:39; 62:1; ಯೆಶಾಯ 43:11; ಹೋಶೇಯ 13:4; ಯೋನ 3:9; ರೋಮಾ 1:16; ಎಫೆ 2:8-9.

*“ಕುರಿಯಾದಾತನಿಗೂ”*– 5:13; 14:4; 22:1-3. 11

**7:11** *“ಹಿರಿಯರು ನಾಲ್ಕು ಜೀವಿಗಳು”*– 4:4,6-8.

*“ಅಡ್ಡಬಿದ್ದರು”*– 5:8. 12

**7:12** 5:12 ಹೋಲಿಸಿರಿ.

*“ಕೃತಜ್ಞತಾ ಸ್ತುತಿ”*– ಯಾಜಕ 7:12-13; ಕೀರ್ತನೆ 7:17; 50:14-15; 56:12; ಎಫೆ 5:20; 1 ಥೆಸ 5:18. 14

**7:14** *“ಮಹಾ ಹಿಂಸೆ”*– ಮತ್ತಾಯ 24:21 ನೋಡಿರಿ. “ಆ” ಎಂಬ ಪದವು ಇಲ್ಲಿ ಗ್ರೀಕ್

ಭಾಷೆಯಲ್ಲಿದೆ, ಆದರೆ ಯಾವುದೋ ವಿಚಿತ್ರ ಕಾರಣಕ್ಕಾಗಿ KJV ಭಾಷಾಂತರದಲ್ಲಿ ಅದನ್ನು ಬಿಟ್ಟುಬಿಟ್ಟಿದ್ದಾರೆ. ಮಹಾ ಹಿಂಸೆಯು "ಆ ಮಹಾ ಹಿಂಸೆ" ಎಂದು ಕರೆಯಲ್ಪಡುವ ಈ ಸಮಯವು ಈ ಯುಗದ ಅಂತ್ಯದಲ್ಲಿ ಬರುವ ತೊಂದರೆಗಳ ಅಸಾಧಾರಣ ಸಮಯವಾಗಿದೆ. ಇದು ವಿಶ್ವಾಸಿಗಳು ಸಾಧಾರಣವಾಗಿ ಈ ಲೋಕದಲ್ಲಿ ಎದುರಿಸುವ ಕಷ್ಟಗಳಂತಿರುತ್ತವೆ (ಯೋಹಾನ 16:33; ಅಪೊ 14:22; 1 ಥೆಸ 3:3-4. ಗ್ರೀಕ್ ಭಾಷೆಯ ಅದೇ ಪದವನ್ನು "ಮಹಾ ಹಿಂಸೆ" ಎಂದು ಇಲ್ಲಿ ಪ್ರಕ 7:14 ರಲ್ಲಿ ಭಾಷಾಂತರಿಸಲಾಗಿದೆ. 1 ಪೇತ್ರ 4:12-13 ಹೋಲಿಸಿರಿ). ಆದರೆ ಯುಗದ ಅಂತ್ಯದಲ್ಲಿ ಬರುವ ಹಿಂಸೆಯು ಘೋರವಾಗಿಯೂ, ವ್ಯಾಪಕವಾಗಿಯೂ ಇರುತ್ತದೆ (13:7-8). "ಹೊರ ಬರುವದು" –ಎಂದರೆ ಪಾರಾಗುತ್ತಾರೆ ಎಂದು ಯೋಚಿಸಲು ಯಾವುದೇ ಕಾರಣವಿಲ್ಲ. 13:7,15 ರ ಪ್ರಕಾರ, ಅವರ ನಂಬಿಕೆಗಾಗಿ ಮರಣದಂಡನೆ ಹೊಂದುವುದೇ ಅದರ ಮೂಲಕ ಹೊರ ಬರುವ ಮಾರ್ಗವಾಗಿದೆ.

*"ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಯನ್ನು ತೊಳೆದು..."*– ಇದು ಅವರ ನಂಬಿಕೆಯು ಕ್ರಿಸ್ತನ ಸುವಾರ್ತೆಯ ಮೇಲಿದೆ ಎಂದು ಸೂಚಿಸುತ್ತದೆ. 1 ಯೋಹಾನ 1:7 ಹೋಲಿಸಿರಿ. 15

**7:15** *"ಆತನ ಸೇವೆಮಾಡಿದರು"*– 22:3 ನೋಡಿರಿ. ವಿಶ್ವಾಸಿಗಳು ಭೂಲೋಕದಿಂದ ಪರಲೋಕಕ್ಕೆ ಹೋದ ಮೇಲೆ ಅವರ ಸೇವೆಯು ನಿಂತು ಹೋಗುವದಿಲ್ಲ.

*"ಹಗಲಿರುಳು"*– ಪರಲೋಕದಲ್ಲಿ ಅವರ ಸೇವೆಯು ಹೆಚ್ಚಾಗುತ್ತದೆ, ಯಾಕಂದರೆ ಅಲ್ಲಿ ನಿದ್ರೆ ಮಾಡಬೇಕಾಗಿಲ್ಲ.

*"ದೇವಾಲಯ"*– ಗ್ರೀಕ್ ಭಾಷೆಯಲ್ಲಿ ಇದರ ಅರ್ಥ ದೇವಾಲಯದ ಗರ್ಭಗುಡಿ, ಅತೀ ಪರಿಶುದ್ಧ ಸ್ಥಳ. ವಿಮೋ 26:31-35; ಇಬ್ರಿ 9:3 ನೋಡಿರಿ. ದೇವಾಲಯದಲ್ಲಿ ವಿಶ್ವಾಸಗಳ ಈ ಸೇವೆಯು ತೋರಿಸುವದೇನಂದರೆ ಅವರು ದೇವರ ಯಾಜಕರು (1:6; 1 ಪೇತ್ರ 2:9). ಅವರ ಸ್ತೋತ್ರದ "ಯಜ್ಞಗಳು" ಪರಲೋಕಕ್ಕೆ ಅವರು ಸೇರಿದ ನಂತರವೂ ನಿಂತುಹೋಗುವದಿಲ್ಲ.

*"ಆತನೊಂದಿಗೆ ವಾಸಿಸುವರು"*– ಬಹಳ ಹತ್ತಿರದ ಸಂಪರ್ಕದಲ್ಲಿದ್ದುಕೊಂಡು ಅನ್ಯೋನ್ಯತೆಯಲ್ಲಿ ಜೀವಿಸುವದನ್ನು ಮತ್ತು ಅವರಿಗೆ ಹಾನಿಯನ್ನುಂಟುಮಾಡುವ ಎಲ್ಲಾದರಿಂದ ಸಂಪೂರ್ಣವಾದ ರಕ್ಷಣೆಯನ್ನು ತೋರಿಸುತ್ತದೆ (ವ.16). 21:3; ವಿಮೋ

25:8 ಹೋಲಿಸಿರಿ. 16

**7:16** *"ಅವರಿಗೆ ಹಸಿವೆ ಇಲ್ಲ, ಬಾಯಾರಿಕೆ ಇಲ್ಲ"*– ಯೆಶಾಯ 49:10; ಯೋಹಾನ 4:13-14; 6:35,58 ಹೋಲಿಸಿರಿ. ಮಹಾ ಸಂಕಟದ ಸಮಯದಲ್ಲಿ ಅನೇಕ ವಿಶ್ವಾಸಿಗಳು ನಿಜವಾಗಿಯೂ ಹಸಿವೆಯನ್ನು ಅನುಭವಿಸುತ್ತಾರೆ (13:16-17), ಇನ್ನು ಕೆಲವರು ಈ ಯುಗದ ಉದುದ್ದಕ್ಕೂ (1 ಕೊರಿಂಥ 4:11; 2 ಕೊರಿಂಥ 6:5; 11:27; ಲೂಕ 6:21). ಪರಲೋಕದಲ್ಲಿ ಆ ರೀತಿಯ ಕಾರ್ಯಗಳು ಇರುವದಿಲ್ಲ.

*"ಬಿಸಿಲಾದರೂ ಯಾವ ಝಳವಾದರೂ"*– 16:8 ಹೋಲಿಸಿರಿ. 17

**7:17** *"ಸಿಂಹಾಸನದ ಮಧ್ಯದಲ್ಲಿ"*– 5:6 ಟಿಪ್ಪಣಿ.

*"ಕುರುಬನು"*– ಇದು ಗ್ರೀಕ್ ಪದವಾದ "ಮೇಯಿಸು" ಎಂಬ ಭಾಷಾಂತರಕ್ಕಿಂತಲೂ ನಿಖರವಾಗಿದೆ. ವಿಶ್ವಾಸಿಗಳು ಪರಲೋಕವನ್ನು ಸೇರಿದ ನಂತರ ಕುರುಬನಾಗಿ ಕ್ರಿಸ್ತನ ಕೆಲಸವು ನಿಂತು ಹೋಗುವದಿಲ್ಲ. ಆತನು ನಿತ್ಯಕ್ಕೂ ಅವರ ಮಹಾ ನಾಯಕನಾಗಿರುವನು.

*"ಅವರನ್ನು ನಡೆಸುತ್ತಾನೆ"*– ಭೂಲೋಕದಲ್ಲಿ ವಿಶ್ವಾಸಿಗಳು ಆತನನ್ನು ಹಿಂಬಾಲಿಸುತ್ತಾರೆ (ಯೋಹಾನ 10:3-4,27) ಮತ್ತು ಪರಲೋಕದಲ್ಲಿಯೂ ಆತನನ್ನು ಹಿಂಬಾಲಿಸುತ್ತಾರೆ. ಒಬ್ಬನಿಲ್ಲದೆ ಇನ್ನೊಬ್ಬನಿಲ್ಲ.

*"ಜೀವಜಲದ ಒರತೆ"*– ಯೋಹಾನ 4:10; 7:38-39. ವಿಶ್ವಾಸಿಗಳು ಈ ಒರತೆಯಿಂದ ಈಗ ಕುಡಿಯುತ್ತಿದ್ದಾರೆ ಮತ್ತು ಇದರಿಂದ ಕುಡಿಯುವುದನ್ನು ಪರಲೋಕದಲ್ಲಿಯೂ ನಿಲ್ಲಿಸುವದಿಲ್ಲ. ಕ್ರಿಸ್ತನು, ಇಲ್ಲಿ ಈ ಆತ್ಮಿಕ ಜೀವದ ಮೂಲವಾಗಿರುವವನು, ಅವರಿಗೆ ಅಲ್ಲಿಯೂ ಇದರ ಮೂಲವಾಗಿರುವನು.

*"ಕಣ್ಣೀರನ್ನೆಲ್ಲಾ"*– ಈ ಲೋಕದಲ್ಲಿರುವಾಗ ಕಣ್ಣೀರಿಗೆ ಅನೇಕ ಕಾರಣಗಳುಂಟು (2 ಅರಸು 20:5; ಯೋಬ 16:20; ಕೀರ್ತನೆ 6:6; 42:3; 56:8; 119:136; 126:5; ಯೆರೆ 9:1; ಮತ್ತಾಯ 26:75; ಲೂಕ 7:38; ಅಪೊ 20:19,31; ಫಿಲಿಪ್ಪಿ 3:18; 2 ತಿಮೊ 1:4). ಇದ್ಯಾವುದು ಪರಲೋಕದಲ್ಲಿರುವದಿಲ್ಲ – 21:4; ಯೆಶಾಯ 25:8; 35:10.

**8**1

**8:1** *"ಏಳನೆಯ ಮುದ್ರೆ"*–ಏಳು-ಮುದ್ರೆಗಳಲ್ಲಿ ಹೆಚ್ಚಿನ ಮುದ್ರೆಗಳು 6ನೇ ಅಧ್ಯಾಯದಲ್ಲಿ ತೆರೆಯಲ್ಪಟ್ಟವು. ಕೊನೆಯ ಈಗ ತೆರೆಯಲ್ಪಟ್ಟಿದೆ ಮತ್ತು ಈ ಕಡೆಯ ಮುದ್ರೆಯ ಮೂಲಕ ಏಳು ತುತೂರಿಗಳು ಮತ್ತು ಏಳು ರೌದ್ರದ ಪಾತ್ರೆಗಳು ಬಂದವು. 6ನೇ ಮುದ್ರೆಯನ್ನು ತೆರೆಯುವದಕ್ಕಿಂತ ಮುಂಚಿತವಾಗಿ ಮಹಾ ಸಂಕಟದ ಸಮಯವು ಅಂತ್ಯವಾಗುತ್ತದೆ (ಟಿಪ್ಪಣಿಗಾಗಿ 6:12-17 ನೋಡಿರಿ). ಈಗ ಈ ಅಧ್ಯಾಯದಲ್ಲಿ ಈ ಯುಗದ ಅಂತ್ಯದಲ್ಲಿ ದುಷ್ಟ ಜನರ ಮೇಲೆ ದೇವರ ನ್ಯಾಯತೀರ್ಪು ಪ್ರಾರಂಭವಾಗುವದನ್ನು ತುತೂರಿಗಳು ಸಾರುತ್ತವೆ. ಮತ್ತು ಪ್ರಾತ್ರೆಗಳಿಂದ (ಅಧ್ಯಾಯಗಳು 15,16) ದೇವರ ರೌದ್ರವು ಸಂಪೂರ್ಣವಾಗಿ ಅವರ ಮೇಲೆ ಸುರಿಯಲ್ಪಡುತ್ತದೆ.

*"ನಿಶಬ್ದ"*– 4:8-11; 5:9-14; 7:10-12 ಹೋಲಿಸಿರಿ. ನಿರಂತರ ಸ್ತೋತ್ರದ ನಂತರ ನಿಶಬ್ದವಾಗುವುದು ಏನೋ ಬಹಳ ಗಮನಾರ್ಹವಾದ ಕಾರ್ಯವು ನಡೆಯಲಿಕ್ಕಿರುವದನ್ನು ತೋರಿಸುತ್ತದೆ. ಅದು ದೊಡ್ಡ ಬಿರುಗಾಳಿ ಬೀಸುವದಕ್ಕಿಂತ ಮುಂಚೆ ಇದ್ದ ನಿಶಬ್ದದಂತೆ. ಜೆಫ 1:7 ನೋಡಿರಿ. ಆ "ಕರ್ತನ ದಿನ", ಆತನ ಉಗ್ರ ಕೋಪವನ್ನು ಲೋಕದ ಮೇಲೆ ಸುರಿಯುವ ಸಮಯವು ಬಹಳ ಹತ್ತಿರವಾಗಿದೆ, ಮತ್ತು ತುತೂರಿಗಳ ಮೂಲಕ ಆತನು ತನ್ನ ನ್ಯಾಯತೀರ್ಪನ್ನು ಪ್ರಕಟಿಸುತ್ತಾನೆ. ತುತೂರಿಯು ಊದಿದಾಗ ಬಂದ ಕಷ್ಟಗಳು ರೌದ್ರದ ಪಾತ್ರೆಗಳಿಂದ ಬಂದ ಕಷ್ಟಗಳಿಗಿಂತಲೂ ತೀವ್ರವಾಗಿರಲಿಲ್ಲ. ತುತೂರಿಗಳಿಂದ ಬಂದ ಕಷ್ಟಗಳು ಹೆಚ್ಚು ಕಡಿಮೆ ಎಚ್ಚರಿಕೆಯನ್ನು ಕೊಡುವಂತಿದೆ ಮತ್ತು ಮುಂದೆ ಕಷ್ಟಗಳು ಬರುತ್ತದೆಂದು ಸಾರುವುದಾಗಿದೆ. **2**

**8:2** *"ಏಳು"*– ಇದು ಸಂಪೂರ್ಣತೆಯ ಅಥವಾ ಪರಿಪೂರ್ಣತೆಯ ಸಂಖ್ಯೆಯಾಗಿದೆ.

*"ತುತೂರಿಗಳು"*– ತುತೂರಿಗಳ ಶಬ್ದಗಳ ಪ್ರಾಮುಖ್ಯತೆಯನ್ನು ಸತ್ಯವೇದದ ಇತರ ಭಾಗಗಳಲ್ಲೂ ಕಾಣುತ್ತೇವೆ. ವಿಮೋ 19:16; ಯಾಜಕ 23:13-25; ಸಂಖ್ಯಾ 10:1-8,9; ಯೆರೆ 4:19; 1 ಅರಸು 1:34,39; 2 ಅರಸು 9:13; ಯೆಹೋ 6:13-16 ನೋಡಿರಿ. ಆದ್ದರಿಂದ ಈ ಪುಸ್ತಕದಲ್ಲಿ ಏಳು ತುತೂರಿಗಳು ಊದಲ್ಪಡುವಾಗ ನಾವು ಕೆಳಗಿನವುಗಳನ್ನು ನಿರೀಕ್ಷಿಸಬಹುದು. ದೇವರ ಸರ್ವಭೌಮತ್ವದ ಪ್ರದರ್ಶನ, ಯುದ್ಧ, ದೇವರ ಜನರನ್ನು ಕೂಡಿಸುವುದು, ರಾಜನಾಗಿ ಕಾಣಿಸಿಕೊಳ್ಳುವುದು ಮತ್ತು ದೇವರ ವೈರಿಗಳು ದೊಬ್ಬಲ್ಪಡುವುದು. ಇವೆಲ್ಲವೂ ತುತೂರಿಯು ಊದಲ್ಪಡುವಾಗ ಮತ್ತು ನಂತರ ಕಾಣಲ್ಪಡುತ್ತವೆ. **3**

**8:3** *“ಧೂಪಾರತಿ”*– ಧೂಪಾರತಿಯು ಧೂಪವನ್ನು ಸುಡಲು ಬಿಸಿ ಕೆಂಡವನ್ನೊಳಗೊಂಡ ಲೋಹದ ಬಟ್ಟಲು (ಯಾಜಕ 16:12).

*“ಧೂಪ”*– ವಿಮೋ 30:1-9,34-38.

*“ದೇವಜನರ ಪ್ರಾರ್ಥನೆಗಳು”*– ಮುದ್ರೆಗಳನ್ನು ತೆರೆಯುವದರಲ್ಲಿ ದೇವಜನರ ಪ್ರಾರ್ಥನೆಗಳು ತಮ್ಮದೇ ಆದ ಮುಖ್ಯತ್ವವನ್ನು ಹೊಂದಿದೆ (5:8). ತುತೂರಿ ಊದುವಾಗಲೂ ನಾವು ಇಲ್ಲಿ ಅದನ್ನೇ ನೋಡುತ್ತೇವೆ. ಇಲ್ಲಿ ನಡೆಯುವಂಥದ್ದನ್ನು ನೋಡಿದರೆ ಇದು ಅವರ ಪ್ರಾರ್ಥನೆಗಳಿಗೆ ಉತ್ತರವೆನಿಸುತ್ತದೆ (ವಿಶೇಷವಾಗಿ, ಒಂದುವೇಳೆ, 22:20; ಮತ್ತಾಯ 6:10 ರೀತಿಯ ಪ್ರಾರ್ಥನೆಗಳು). ನಿಜವಾದ ಪ್ರಾರ್ಥನೆಯು ಬಹಳ ಶಕ್ತಿಯುಳ್ಳದ್ದಾಗಿದೆ – ಯಾಕೋಬ 5:16 (ಕೀರ್ತನೆ 18:6-9 ಹೋಲಿಸಿರಿ).

*“ಚಿನ್ನದ ಯಜ್ಞವೇದಿ”*– ವಿಮೋ 30:1-6; ಇಬ್ರಿ 8:5; 9:4. **5**

**8:5** *“ಗುಡುಗುಗಳೂ…ಭೂಕಂಪವೂ”*– 4:5 ರ ಟಿಪ್ಪಣಿ. ಈ ಟಿಪ್ಪಣಿಗಳ ಲೇಖಕರು ತುತೂರಿಯ ಶಬ್ದದ ನಂತರ ನಡೆಯುವ ವಿಪತ್ತುಗಳು ಈ ಯುಗದ ಅಂತ್ಯದಲ್ಲಿ ನಡೆಯುತ್ತದೆಂದು ನಂಬುತ್ತಾರೆ. ಇಲ್ಲಿ ಇವು ಚಿನ್ಹೆ ಮತ್ತು ಸಾಕೇತಿಕ ಭಾಷೆಗಳಲ್ಲಿವೆ, ಆದರೆ ಅವರು ಅಕ್ಷರಶಃ ಕೆಲವು ವಿಪತ್ತುಗಳ ವಿಷಯವಾಗಿ ಮಾತನಾಡುತ್ತಿದ್ದಾರೆ. ವಿವರವಾಗಿ ಇವುಗಳೆಲ್ಲವನ್ನು ವ್ಯಾಖ್ಯಾನಮಾಡುವುದು ಕಷ್ಟಕರವಾಗಿದೆ ಮತ್ತು ಈ ರೀತಿಯ ಸಂಕ್ಷಿಪ್ತವಾದ ಟಿಪ್ಪಣಿಗಳಲ್ಲಿ ಅಸಾಧ್ಯವಾಗಿದೆ. **7**

**8:7** ವಿಮೋ 9:22-26 ಹೋಲಿಸಿರಿ. ಒಂದು ದೇಶದಲ್ಲಿ (ಐಗುಪ್ತ) ಏನು ನಡೆಯಿತೋ ಅದು ವ್ಯಾಪಕವಾಗಿ ಇಡೀ ಲೋಕದಲ್ಲಿ ನಡೆಯುತ್ತದೆ. ಮತ್ತು ಇದು ಬಹು ಕೆಟ್ಟ ವಿಪತ್ತಾಗಿರುತ್ತದೆ – ಬೆಂಕಿ ಮತ್ತು ರಕ್ತದಲ್ಲಿ ಕಲಸಿದ ಆನೆಕಲ್ಲಿನ ಮಳೆ ಮತ್ತು ಮಿಂಚುಗಳೊಡನೆ ಕೂಡಿರುತ್ತದೆ. ಯೆಹೆಜ್ಕೇಲ 38:22; ಯೋವೇಲ 2:30; ಅಪೊ 2:19 ಸಹ ನೋಡಿರಿ. **8-9**

**8:8-9** ವಿಮೋ 7:19,21 ಹೋಲಿಸಿರಿ. **10-11**

**8:10-11** ಈ ಉರಿಯುವ ನಕ್ಷತ್ರವು ಯಾವುದಾದರು ಧೂಮಕೇತು ಅಥವಾ ಕ್ಷುದ್ರಗ್ರಹ ಅಥವಾ ದೊಡ್ಡ ಉಲ್ಕೆಯಾಗಿರಬಹುದೇ? ಬಹುಶಃ ಹೌದು, ಆದರೆ ನಾವು ಯಾವುದೇ ನಿಶ್ಚಿತತೆಯಿಂದ ಹೇಳಲು ಆಗುವದಿಲ್ಲ. 9:1-2 ರಲ್ಲಿ “ನಕ್ಷತ್ರವು” ಜೀವಿಸುವವರನ್ನು

ಸೂಚಿಸುತ್ತದೆ. ಒಂದು ವೇಳೆ ಭೂಮಿಯ ನೀರಿನ ಮೂಲದ ಮೂರರಲ್ಲಿ ಒಂದು ಭಾಗವನ್ನು ಕಹಿ ಮಾಡುವ ಅಧಿಕಾರವನ್ನು ಹೊಂದಿದ ಈ ನಕ್ಷತ್ರವು ಒಬ್ಬ ದೇವದೂತನಾಗಿರಬಹುದೇ? ನಮಗೆ ಗೊತ್ತಿಲ್ಲ. “ಮಾಚಿಪತ್ರೆ” ಎಂದರೆ ಕಹಿ. 12

**8:12** 6:12-13; ಯೆಶಾಯ 10:12-23; 13:10; ಯೋವೇಲ 2:2; ಆಮೋಸ 5:18 ಹೋಲಿಸಿರಿ. 13

**8:13** ಕೆಟ್ಟ ವಿಪ್ಪತ್ತುಗಳು ಬರುವವು ಎಂದು ಅವುಗಳನ್ನು ಕಳುಹಿಸುದಕ್ಕಿಂತ ಮುಂಚೆಯೇ ದೇವರು ಎಚ್ಚರಿಸುತ್ತಿದ್ದಾನೆ.

*“ಅಯ್ಯೋ”*– ಈ ಗ್ರೀಕ್ ಪದವು ಒಂದು ರೀತಿಯ ಬಹು ದುಃಖದ ಅಥವಾ ನೋವಿನ ಕಾರಣವನ್ನು ಸೂಚಿಸುತ್ತದೆ. ಮೂರರಲ್ಲಿ ಎರಡು “ಅಯ್ಯೋ” 9ನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. ಮೂರನೆಯದು, ಏಳನೆಯ ತುತೂರಿಯು ಊದಿದ ನಂತರ ಬರುತ್ತದೆ (11:5), ಮತ್ತು ಕೊನೆಯ ತುತೂರಿಯ ಅಡಿಯಲ್ಲಿ ನಡೆಯುವ 16ನೇ ಅಧ್ಯಾಯದಲ್ಲಿ ವಿವರಿಸಿರುವ ಏಳು ರೌದ್ರ ಪಾತ್ರೆಗಳಿಂದ ಸುರಿಯುತ್ತಿರುವಂತೆ ತೋರುತ್ತದೆ.

# 9 1-2

**9:1-2** ಇಲ್ಲಿ “ನಕ್ಷತ್ರ” ಎನ್ನುವುದು ಅಕ್ಷರಶಃ ನಕ್ಷತ್ರವಲ್ಲ ಆದರೆ ಜೀವಿಸುವ ಪ್ರಾಣಿ ಎಂದು ಅವನಿಗೆ ಸಂಬಂಧಿಸಿದ ಭಾಷೆಯಿಂದ ನೋಡಬಹುದು. ಅವನು ಬಹುಶಃ ದೇವದೂತನಿರಬಹುದು. 1

**9:1** *“ಬೀಗದಕೈ”*– 20:1,3 ಹೋಲಿಸಿರಿ. ಲೂಕ 8:31 ಕೂಪವು ಆತ್ಮಗಳ ಅಧೋಲೋಕದಲ್ಲಿ ಶಿಕ್ಷಿಸುವ ಮತ್ತು ದೆವ್ವಗಳು (2 ಪೇತ್ರ 2:4) ಭಯಪಡುವ ಸ್ಥಳವನ್ನು ಸೂಚಿಸುತ್ತದೆ. ರೋಮಾ 10:7 ಇದೇ ಗ್ರೀಕ್ ಪದವನ್ನು ಉಪಯೋಗಿಸಲ್ಪಟ್ಟಿದೆ ಮತ್ತು ಇದು ಸತ್ತವರ ಕ್ಷೇತ್ರವೆಂದು ಅರ್ಥೈಸುತ್ತದೆ. 2

**9:2** *“ಹೊಗೆ”*– 8:4 ಕ್ಕೆ ತದ್ವಿರುದ್ಧ. ಪರಲೋಕದಲ್ಲಿರುವ ಹೊಗೆಯು ನರಕದ ಹೊಗೆಗಿಂತಲೂ ಸಾಕಷ್ಟು ಬಿನ್ನವಾಗಿದೆ. 3

**9:3** *“ಮಿಡಿತೆ”*– “ಮಿಡಿತೆಗಳು” –ಕೂಪದಿಂದ ಬಂದವು ಎಂದು ಸ್ಪಷ್ಟವಾಗಿ ಹೇಳಲಿಲ್ಲ, ಆದರೆ ಕೂಪದಿಂದ ಬರುವ ಹೊಗೆಯ ಮೂಲಕ ಬಂದವು ಎನ್ನಲಾಗಿದೆ, ಆದರೆ ಅವು

ನೇರವಾಗಿ ಕೂಪದಿಂದ ಬಂದಿರಬಹುದು. ಅವುಗಳ ವಿವರಣೆಯನ್ನು ನೋಡುವುದಾದರೆ ಅವು ಅಕ್ಷರಶಃ ಮಿಡಿತೆಗಳಲ್ಲ ಎಂದು ತಿಳಿಯುತ್ತದೆ (ಮಿಡಿತೆಗಳು ಕುಪ್ಪಳಿಸುವ ಮಿಡಿತೆಗಳಂತೆಯೇ ಇರುತ್ತದೆ, ಆದರೆ ಅವು ಒಂದೇ ಆಗಿರುವದಿಲ್ಲ. ಚೇಳಿನಂತೆ ಯಾವುದೂ ಇರುವದಿಲ್ಲ). **4**

**9:4** ಹುಲ್ಲು, ಗಿಡಗಳು ಮತ್ತು ಮರಗಳನ್ನು ನಿಜವಾದ ಮಿಡಿತೆಗಳು ತಿನ್ನುತ್ತವೆ.

*"ದೇವರ ಮುದ್ರೆ"*– ಇಸ್ರಾಯೇಲ್ಯರ ವಿಷಯವಾಗಿ ಇದನ್ನು 7:3 ರಲ್ಲಿ ಉಪಯೋಗಿಸಲಾಗಿದೆ. ಆದರೆ ವಿಶ್ವಾಸಿಗಳೆಲ್ಲರೂ ದೇವರ ಮುದ್ರೆಯನ್ನು ಹೊಂದಿದ್ದಾರೆ – 22:4; ಎಫೆ 1:13. ಯೆಹೆಜ್ಕೇಲ 9:4-6 ಹೋಲಿಸಿರಿ. 5ನೇ ತೂತೂರಿಯು ಊದಲ್ಪಡುವಾಗ ಕೆಲವರು ಈ ಭೂಮಿಯಲ್ಲಿ ಬಿಡಲ್ಪಟ್ಟಿರಬಹುದು. ಇದು ಮಹಾಹಿಂಸೆಯ ಸಮಯದ ನಂತರ ನಡೆಯುತ್ತದೆ ಅವರಲ್ಲಿ ಅನೇಕರು ಸಾಯುತ್ತಾರೆ – 7:9-14; 13:15 ನೋಡಿರಿ.

*"ಅವರ ಹಣೆಯ ಮೇಲೆ"*– ದೇವರ ಮಾಲಿಕತ್ವನ್ನು ಸೂಚಿಸುವ ಸಾಂಕೇತಿಕ ಭಾಷೆ. ತನ್ನವರು ಯಾರೆಂದು ಕರ್ತನಿಗೆ ಗೊತ್ತಿದೆ ಮತ್ತು ಅವರನ್ನು ಕಾಪಾಡುತ್ತಾನೆ. **5**

**9:5** *"ಐದು ತಿಂಗಳು"*– ಇದನ್ನು ಸಹ ಒಂದು ಚಿನ್ಹೆ ಎಂದು ತೆಗೆದುಕೊಳ್ಳುವ ಅವಶ್ಯವಿಲ್ಲ. ಯಾಕಂದರೆ ಈ ಪುಸ್ತಕದಲ್ಲಿ ಅನೇಕ ಚಿನ್ಹೆಗಳು ಉಪಯೋಗಿಸಲ್ಪಟ್ಟಿದೆ ಅದರಲ್ಲಿರುವ ಚಿನ್ಹೆಗಳು ಬೇರೆಯದರ ಸಂಕೇತವಾಗಿದೆ ಎಂದು ಅರ್ಥವಲ್ಲ. ಭಾಷೆಯಲ್ಲಿ ಅಥವಾ ಸನ್ನಿವೇಶದಲ್ಲಿ ಒಂದು ಸುಳಿವು ಇರುತ್ತದೆ ಅಥವಾ ಆ ಚಿನ್ಹೆಯ ವಿವಣೆಯನ್ನು ನೀಡಲಾಗಿರುತ್ತದೆ. (2:28; ನ್ನು 22:16; 12:5; ನ್ನು 19:15; 12:14; ನ್ನು 12:6; 12:9; 13:11; ನ್ನು 16:13-14; 17:15,18 ಹೋಲಿಸಿರಿ). **6**

**9:6** 6:16; ಯೆರೆ 8:3 ಹೋಲಿಸಿರಿ – ಸಾಯಲು ಬಯಸುತ್ತಾರೆ ಆದರೆ ಆತ್ಮಹತ್ಯೆ ಮಾಡಿಕೊಳ್ಳಲು ಭಯ. **7-10**

**9:7-10** ಈ "ಮಿಡತೆಗಳು" ಭೂಮಿಯ ಮೇಲೆ ಕಾಣಿಕೊಂಡ ವಿಚಿತ್ರ ಜೀವಿಗಳು, ಬಹುತೇಕ ವರ್ಣಿಸಲಾರದಾಗಿದೆ. "ಕುದುರೆಗಳು ಮತ್ತು ರೆಕ್ಕೆಗಳು" ವೇಗವನ್ನು ಸೂಚಿಸುತ್ತದೆ. "ಕಿರೀಟಗಳು" ಅವರು ಮಾಡುವದನ್ನು ಮಾಡಲು ಅವರಿಗಿರುವ ಅಧಿಕಾರವನ್ನು ಸೂಚಿಸುತ್ತದೆ. "ಮನುಷ್ಯರ ಮುಖಗಳು" ವ್ಯಕ್ತಿತ್ವವನ್ನು ಮತ್ತು ಬುದ್ಧಿವಂತಿಕೆಯನ್ನು ತೋರಿಸುತ್ತದೆ. ಈ "ಮಿಡತೆಗಳು" ಏನನ್ನು ಸಂಕೇತಿಸುತ್ತವೆ? ಅವು ಪಾತಾಳದಿಂದ ಬಂದದ್ದೇ ಆದರೆ (ವಚನಗಳು 2,3) ಇವು ದುಷ್ಟ ಆತ್ಮ, ದೆವ್ವಗಳಾಗಿರಲು ಸಾಧ್ಯತೆ ಇದೆ. ಅವು

ಕೂಪದಿಂದ ಹೊಗೆಯಿಂದ ಉತ್ಪತ್ತಿಯಾಗಿದ್ದರೆ, ಅದು ಒಂದು ವೇಳೆ ಸೈತಾನನಿಂದ ಮತ್ತು ಜನಾಂಗಗಳಲ್ಲಿ ಅವನಿಗೆ ಸಹಾಯ ಮಾಡುತ್ತಿರುವವರಿಂದ ಬಂದ ಬೇರೆ ರೀತಿಯ ಪಿಡುಗು ಆಗಿರಬಹುದು. **11**

**9:11** ಅಬದ್ದೋನ್ ಮತ್ತು ಅಪಲ್ಲುವೋನ್ ಇವರಿಬ್ಬರ ಅರ್ಥ "ನಾಶಮಾಡುವವನು". ಕೆಲವರು ಇವನನ್ನು ಸೈತಾನನು ಎಂದು ಯೋಚಿಸುತ್ತಾರೆ, ಇದ್ದರೂ ಇರಬಹುದು. ಸೈತಾನನು ಮನುಷ್ಯರನ್ನು ನಾಶಮಾಡುವವನೆಂದು ನಮಗೆ ಗೊತ್ತು – ಯೋಹಾನ 8:44; ಇಬ್ರಿ 2:14; 1 ಪೇತ್ರ 5:8. ಆದರೂ, ಅವನನ್ನು ಕೂಪದಲ್ಲಿ "ಮಿಡತೆ" ಗಳೊಂದಿಗೆ ಬಂಧಿಸಿಟ್ಟಿದ್ದರೆ ಅವನು ಸೈತಾನನಾಗಿರಲು ಸಾಧ್ಯವಿಲ್ಲ. ಕ್ರಿಸ್ತನು ಹಿಂದಿರುಗಿ ಬರುವವರೆಗೂ ಸೈತಾನನು ಕೂಪಕ್ಕೆ ದೊಬ್ಬಲ್ಪಡುವದಿಲ್ಲ – 20:1-3. ನಾವು ಗಮನಿಸಬೇಕಾದ ವಿಷಯ ಇನ್ನೊಂದು ಇದೆ, ಈ ದೊಡ್ಡ "ಮಿಡತೆಗಳ" ಗುಂಪು ಮನುಷ್ಯರನ್ನು ಕೊಲ್ಲುವದಿಲ್ಲ (ವ.5). **12**

**9:12** *"ಇನ್ನೂ ಎರಡು ವಿಪತ್ತುಗಳು"*– ವಚನಗಳು 13-19; 16:1. **13**

**9:13** *"ಯಜ್ಞವೇದಿ"*– 8:3-4. ಕೊಂಬುಗಳು ಮೂಲೆಗಳಾಗಿವೆ ಅವುಗಳನ್ನು ಮೇಲ್ಮುಖವಾಗಿ ಯೋಜಿಸಲಾಗಿದೆ. **14**

**9:14** *"ನಾಲ್ಕು ಮಂದಿ ದೂತರನ್ನು ಬಿಚ್ಚಿಬಿಡು"*– ಸ್ಪಷ್ಟವಾಗಿ 7:1 ರಲ್ಲಿ ಕಂಡ ಅದೇ ದೇವದೂತರಲ್ಲ.

*"ಕಟ್ಟಿರುವ"*– ದೇವರು ಅವರಿಗೆ ಅಪ್ಪಣೆಕೊಡುವ ತನಕ ಕಾರ್ಯ ಮಾಡಲಾರರು ಎಂಬುದನ್ನು ಬಹುಶಃ ಸೂಚಿಸಬಹುದು.

*"ಯೂಫ್ರೇಟೀಸ್"*– 16:12 ಸಹ ನೋಡಿರಿ. ಟರ್ಕಿಯಿಂದ ಸಿರಿಯಾ ಮತ್ತು ಇರಾಕ್ ಮೂಲಕ ಹರಿದು ಪರ್ಷಿಯನ್ ಕೊಲ್ಲಿಯನ್ನು ಸೇರುತ್ತದೆ. **15**

**9:15** *"ಅದೇ ವರುಷ...ತಾಸಿಗೆ"*– ಎಲ್ಲಾ ಕಾರ್ಯಗಳು ದೇವರ ಹತೋಟಿಯಲ್ಲಿದೆ ಮತ್ತು ಎಲ್ಲಾ ಕಾರ್ಯಗಳಿಗೂ ಆತನಿಗೆ ಒಂದು ನಿಗಧಿತ ಸಮಯವಿದೆ. ಅಪೊ 1:7 ನೋಡಿರಿ.

*"ಕೊಲ್ಲುವದಕ್ಕೆ"*– ವಚನಗಳು 16-19 ರಿಂದ ಈ ದೇವದೂತರು ಈ ಫಲಿತಾಂಶವನ್ನು ಪಡೆಯಲು ಯಾವುದೋ ಒಂದು ಸೈನ್ಯವನ್ನು ಉಪಯೋಗಿಸಿರಬಹುದೆಂದು ತಿಳಿಯುತ್ತದೆ. ಇದು ನಾಲ್ಕು ದೇವದೂತರು ತಾವೇ ಅನೇಕ ಜನರನ್ನು ಕೊಲ್ಲಲು ಸಾಧ್ಯವಿಲ್ಲವೆಂದು

ಸೂಚಿಸುವುದಿಲ್ಲ. 2 ಪೂರ್ವ 32:21 ನೋಡಿರಿ. **16-19**

**9:16-19** ಯೋವೇಲ 2:2-11 ಹೋಲಿಸಿರಿ. ಇಪ್ಪತ್ತು ಕೋಟಿ (ಇನ್ನೂರು ಮಿಲಿಯನ್) ಎಂಬುದು ಖಂಡಿತವಾಗಿಯೂ ಒಂದು ದೊಡ್ಡ ಸೈನ್ಯ. ಈಗ ಪ್ರಸ್ತುತವಾಗಿ ಇಡೀ ಪ್ರಪಂಚದಲ್ಲಿರುವ ಎಲ್ಲಾ ದೇಶಗಳ ಸೈನ್ಯಗಳನ್ನು ಕೂಡಿಸಿದರೂ ಈ ಸಂಖ್ಯೆಯಷ್ಟು ಆಗಲು ಸಾಧ್ಯವಿಲ್ಲ. **16**

**9:16** *"ಆ ಸಂಖ್ಯೆಯು ನನಗೆ ಕೇಳಿಸಿತು"*– ವ.16 – ಆ ಸಂಖ್ಯೆ ಆಶ್ಚರ್ಯಕರವಾಗಿ ಹೆಚ್ಚಿತ್ತು ಎಂದು ಅವನಿಗೆ ತಿಳಿದಿತ್ತು ಮತ್ತು ಅವನು ಅದನ್ನು ಉತ್ಪ್ರೇಕ್ಷಿಸಬಾರದೆಂದು ಒತ್ತಾಯಿಸಿದರು. ಆದರೆ ಈ ಆಶ್ಚರ್ಯವಾದ ಮತ್ತು ಭಯಾನಕ ಕುದುರೆಗಳು ಅವುಗಳ ಸವಾರರೊಂದಿಗೆ ಏನನ್ನು ಸೂಚಿಸುತ್ತವೆ? ಭಯಾನಕ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಅಗಾಧವಾದ ಮಾನವ ಸೇನೆಗಳು? ಸಡಿಲಗೊಂಡ ದೆವ್ವಗಳ ಗುಂಪು ಭೂಮಿಯ ಮೇಲೆ? ಯಾವುದೇ ನಿಶ್ಚಿತತೆಯೊಂದಿಗೆ ಯಾರು ಹೇಳಬಲ್ಲರು? ಭವಿಷ್ಯ ಘಟನೆಗಳ ಇತರ ಪ್ರಾವಾದನೆಗಳಂತೆ, ಈ ಘಟನೆಗಳು ನಡೆಯುವವರೆಗೂ ಇವು ನಿಖರವಾಗಿ ನೆರವೇರುವ ವಿಧಾನವು ತಿಳಿದಿಲ್ಲ. ಮತ್ತು ಅದಕ್ಕೂ ಮುಂಚೆಯೇ ನಮಗೆ ತಿಳಿಯುವುದು ಅವಶ್ಯಕ ಎಂದು ನಾವು ಭಾವಿಸಬಹುದೇ? **18**

**9:18** *"ಮನುಷ್ಯರಲ್ಲಿ ಮೂರನೆಯ ಭಾಗವು"*– ಅಂತಹ ಅಗಾಧ ಸಂಖ್ಯೆಯ ಜನರ ಸಾವು ಒಂದು ಅಥವಾ ಇನ್ನೊಂದು ರೀತಿಯ ಭಯಂಕರ ವಿನಾಶದ ಬಗ್ಗೆ ಹೇಳುತ್ತದೆ. 21ನೇ ಶತಮಾನದ ಪ್ರಾರಂಭದಲ್ಲಿ ಪ್ರಪಂಚದ ಜನಸಂಖ್ಯೆಯು ಸುಮಾರು ಆರು ಸಾವಿರ ಮಿಲಿಯನ್ (6 ಬಿಲಿಯನ್, 600 ಕೋಟಿ). ಆದರೆ 4ನೆ ಮುದ್ರೆಯ ಅಡಿಯಲ್ಲಿ ಜನಸಂಖ್ಯೆಯ ನಾಲ್ಕನೇ ಒಂದು ಭಾಗ ನಾಶವಾಗುತ್ತದೆ. **20**

**9:20** *"ಅವರು ದೇವರ ಕಡೆಗೆ ತಿರುಗಲಿಲ್ಲ"*– 16:9,11; ಮತ್ತಾಯ 3:2,8; ಲೂಕ 13:3-5; ಅಪೊ 17:30. ನೋವಿನ, ವಿಪತ್ತಿನ ಮತ್ತು ನಾಶನದ ಮಧ್ಯದಲ್ಲಿಯೂ ಎಲ್ಲಾ ರೀತಿಯ ಜನರು ತಮ್ಮ ಮೇಲೆ ನ್ಯಾಯತೀರ್ಪನ್ನು ತರುವ ತಮ್ಮ ಪಾಪಗಳನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಳ್ಳಲು ನಿರಾಕರಿಸುತ್ತಾರೆ. ತಮ್ಮ ಸುತ್ತಲೂ ಅನೇಕ ಜನರು ಗಾಯಗೊಂಡು ಸಾಯುತ್ತಿದ್ದರೂ ಅವರು ತಮ್ಮ ವಿಗ್ರಹಗಳನ್ನು ಮತ್ತು ತಮ್ಮ ಪಾಪ ಸ್ವಭಾವಗಳನ್ನು ಪ್ರೀತಿಸುವರು ಮತ್ತು ಅವುಗಳನ್ನು ಬಿಡುವುದಿಲ್ಲ. ಅವರು ಯಾವ ರೀತಿಯ

ಪಾಪಕ್ಕೆ ಇಜೊಞ್ಞಡಾಗಿದ್ದಾರೆಂದು ಗಮನಿಸಿ, ಈ ಯುಗದ ಅಂತ್ಯದಲ್ಲಿ ಸ್ಪಷ್ಟವಾಗಿ ಪಾಪವು ಬಹಳ ಸಾಧಾರಣವಾದ ಕಾರ್ಯವಾಗಿರುತ್ತದೆ.

*"ದೆವ್ವಗಳನ್ನು ಪೂಜಿಸುವರು"*– ಧರ್ಮೋ 32:17; 1 ಕೊರಿಂಥ 10:20 (ಮನುಷ್ಯರು ಅವುಗಳನ್ನು ದೇವರೆಂದು ಕರೆಯುವರು ಮತ್ತು ಅವುಗಳನ್ನು ದೇವರೆಂದು ಭಾವಿಸುವರು).

*"ವಿಗ್ರಹಗಳು"*– ಧರ್ಮೋ 4:28; ಕೀರ್ತನೆ 115:3-8; ಯೆಶಾಯ 40:18-22; 44:12-20. **21**

**9:21** *"ಕೊಲೆ"*– ಮಾನವನು ಪಾಪದಲ್ಲಿ ಬಿದ್ದ ಮೇಲೆ, ಮಾನವ ಕುಲದ ಮೊದಲನೆಯ ಕುಟುಂಬದಿಂದ ಹಿಡಿದು, ಕೊಲೆಗಳು ಈ ಭೂಮಿಯನ್ನು ನಿರಂತರವಾಗಿ ರಕ್ತದಿಂದ ಕಲೆಮಾಡುತ್ತಿದೆ. ಕಡೆಯ ದಿನಗಳಲ್ಲಿ ಈ ಕೃತ್ಯವು ಹೆಚ್ಚಾಗುತ್ತದೆ.

*"ಮಾಟ"*– ಅಪೊ 8:9-11; 19:17-20; ವಿಮೋ 7:11-12,22; 8:7,18,19; ಧರ್ಮೋ 18:10-12; ಪ್ರಕ 21:8; 22:15.

*"ಜಾರತ್ವ"*– ಮನುಷ್ಯರ ಹೃದಯಗಳನ್ನು ಬಹಳ ಬಲವಾಗಿ ಹಿಡಿಯುವ ಪಾಪ (ಜ್ಞಾನೋ 2:16-19). ಆ ರೀತಿಯ ದುಷ್ಟ ಜೀವಿತದ ವಿಷಯವಾಗಿ ಸತ್ಯವೇದವು ಸ್ಪಷ್ಟವಾಗಿ ಪ್ರಕಟಿಸುತ್ತದೆ – 1 ಕೊರಿಂಥ 6:9-10; ಎಫೆ 5:3-7; ಇಬ್ರಿ 13:4; ಪ್ರಕ 21:8; 22:15.

*"ಕಳ್ಳತನ"*– ವಿಮೋ 20:15; ಯೆರೆ 7:9-10; ಮತ್ತಾಯ 15:19; ರೋಮಾ 2:21; ಎಫೆ 4:28. ಈ ಪಾಪವು ಕೆಲವು ಜನರ ಮಧ್ಯದಲ್ಲಿ ಸರ್ವಸಾಧಾರಣವಾಗಿದೆ ಅದನ್ನು ಬಹುತೇಕ ನೈಸರ್ಗಿಕವಾದ ಚಾಣಾಕ್ಷ ವರ್ತನೆ ಎಂದು ಪರಿಗಣಿಸಲಾಗಿದೆ. ದೇವರು ಈ ವಿಷಯವನ್ನು ಬೇರೆ ದೃಷ್ಟಿಕೋನದಿಂದ ನೋಡುವವನಾಗಿದ್ದಾನೆ – 1 ಕೊರಿಂಥ 6:10.

# 10 1-3

**10:1-3** ಈ ಬಲಿಷ್ಠನಾದ ದೇವದೂತನ ವಿವರಣೆಯು ಕರ್ತನಾದ ಯೇಸುವನ್ನು ಸೂಚಿಸುತ್ತದೆ. ಈ ಪುಸ್ತಕದಲ್ಲಿ ಮೋಡ ಮತ್ತು ಮುಗಿಲುಬಿಲ್ಲು ಇವೆರಡೂ ದೈವಿಕ ಪ್ರಸನ್ನತೆಗೆ ಸಂಬಂಧಿಸಿದೆ – 1:7; 4:3; 14:14. "ಮುಖವು ಸೂರ್ಯನೋಪಾದಿಯಲ್ಲಿತ್ತು", "ಪಾದಗಳು ಬೆಂಕಿಯ ಕಂಬಗಳಂತಿದ್ದವು" ಇದು 1:15-16

ರಲ್ಲಿ ಕ್ರಿಸ್ತನ ದರ್ಶನವನ್ನು ಜ್ಞಾಪಕಪಡಿಸುತ್ತದೆ. "ಸಿಂಹ" ಎಂಬ ಪದವು (ವ.3) ಯೂದ ಕುಲದ ಸಿಂಹವನ್ನು ಸೂಚಿಸುತ್ತದೆ (5:5). 1

**10:1** 6 ನೇ ಮತ್ತು 7 ನೇ ಮುದ್ರೆಗಳ ನಡುವೆ ಇದ್ದ ಹಾಗೆಯೇ ಇಲ್ಲಿ 6 ನೇ ಮತ್ತು 7 ನೇ ತುತೂರಿಗಳ ನಡುವೆ ನಿರೂಪಣೆಯ ನಡುವೆ ನಮಗೆ ವಿರಾಮವಿದೆ. 6ನೇ ತುತೂರಿಯಿಂದ ನೇರವಾಗಿ ಉಂಟಾಗದ ವಿಷಯಗಳನ್ನು ಪ್ರಕಟಿಸಲು ತೆಗೆದುಕೊಂಡ ವಿರಾಮವಾಗಿದೆ, ಈ ಯುಗದ ಅಂತ್ಯದಲ್ಲಿ ನಡೆಯುವ ಇತರ ಘಟನೆಗಳನ್ನು ನೋಡಲು ಆವರಣದ ವಾಕ್ಯವಾಗಿದೆ. ಈ ವಿವರಣಾತ್ಮಕ ದರ್ಶನಗಳ ಈ ವಿರಾಮವು 11:15 ತನಕ ಮುಂದುವರಿಯುತ್ತದೆ. ವಾಸ್ತವವಾಗಿ ನೋಡುವುದಾದರೆ ಈ ಘಟನೆಗಳು ತುತೂರಿಗಳು ಊದುವದಕ್ಕಿಂತ ಮುಂಚಿತವಾಗಿ ನಡೆಯುತ್ತವೆ ಅಥವಾ 6ನೇ ಮತ್ತು 7ನೇ ಮುದ್ರೆಗಳು ತೆರೆಯುವ ಮುಂಚಿತವಾಗಿ ನಡೆಯುತ್ತದೆ. 2

**10:2** *"ಚಿಕ್ಕ ಸುರುಳಿ"*– ಇದು 5:1 ರಲ್ಲಿರುವ ಮುದ್ರೆ ಹೊಂದಿರುವ ಏಳು ಸುರುಳಿಗಳ ಹಾಗೆ ಖಂಡಿತವಾಗಿಯೂ ಇರಲು ಸಾಧ್ಯವಿಲ್ಲ. ಇದು "ಆ" ಸುಳಿಯಲ್ಲ, ಆ ಸುರುಳಿಯಾಗಿದ್ದರೆ ಹಿಂದೆ ವಿವರಿಸಲಾದ ಏಳು ಮುದ್ರೆಗಳೊಂದಿಗೆ ಇದನ್ನು ಸಹ ವಿವರಿಸಲಾಗುತಿತ್ತು. ಮತ್ತು ಇದನ್ನು "ಸುರುಳಿ" ಎಂದು ಕರೆಯಲಾಗಿಲ್ಲ ಆದರೆ "ಚಿಕ್ಕ ಸುರುಳಿ" –ಎಂದು ಕರೆಯಲಾಗಿದೆ. ಮೇಲಾಗಿ 5:1 ರಲ್ಲಿರುವ ಸುರುಳಿಗಳು ಪರಲೋಕದಲ್ಲಿದ್ದವು ಮತ್ತು ಅವುಗಳು ಸಂಪೂರ್ಣವಾಗಿ ಬಿಚ್ಚಿರಲಿಲ್ಲ. ಆದರೆ ದೇವದೂತನು ಯೋಹಾನನಿಗೆ ಈ ಚಿಕ್ಕ ಸುರುಳಿಯನ್ನು ತಿನ್ನಲು ಹೇಳುತ್ತಾನೆ. ಈ ಚಿಕ್ಕ ಸುರುಳಿಯು ಒಂದು ವೇಳೆ ಹೆಚ್ಚಿನ ದರ್ಶನಗಳನ್ನು ಮತ್ತು ಪ್ರವಾದನೆಗಳನ್ನು ಒಳಗೊಂಡಿರಬಹುದೆಂದು ಕಾಣುತ್ತದೆ. (12 ರಿಂದ 14 ಮತ್ತು 17,18 ಅಧ್ಯಾಯಗಳಲ್ಲಿರುವಂತೆ), ಅದು ಕ್ರಮವಾಗಿ ತೆರೆಯಲ್ಪಟ್ಟ ಮುದ್ರೆ ಅಥವಾ ಊದಲ್ಪಟ್ಟ ತುತೂರಿಗಳ ಅಥವಾ ಹೊಯ್ಯಲ್ಪಟ್ಟ ಪಾತ್ರೆಗಳ ಅಡಿಯಲ್ಲಿ ಬರುವದಿಲ್ಲ. ಆ ಸುರುಳಿಯನ್ನು ಯೋಹಾನನು ತಿಂದ ಮೇಲೆ ದೇವದೂತನು ಏನು ಹೇಳಿದನೆಂದು ನೋಡಿರಿ – ವ.11.

*"ಬಲಗಾಲನ್ನು... ಇಟ್ಟು"*– ಈ ವಾಕ್ಯವು ಜಯಶೀಲಿಯಾಗಿ ಸ್ಥಾನವನ್ನು ಪಡೆಯುವದನ್ನು ಸೂಚಿಸುತ್ತದೆ. ಧರ್ಮೋ 11:24; ಯೆಹೋ 1:3 ಹೋಲಿಸಿರಿ. ಇಲ್ಲಿ ಇದರ ಅರ್ಥವು ಅದೇ

ಆಗಿದ್ದರೆ (ಕೆಲವು ಪಂಡಿತರು ಒಪ್ಪುವುದಿಲ್ಲ), ಮತ್ತೊಮ್ಮೆ ಈ ದೇವದೂತನು ಕ್ರಿಸ್ತನಾಗಿರಬಹುದೆಂದು ನಾವು ಯೋಚಿಸುವಂತಾಗುತ್ತದೆ. ಈ ಲೋಕವನ್ನು ತನ್ನ ಸ್ವಾತಂತ್ರ್ಯವನ್ನಾಗಿ ಮಾಡಿಕೊಳ್ಳುವ ಹಕ್ಕು ಆತನಿಗಲ್ಲದೆ ಬೇರೆ ಯಾರಿಗಿರಲು ಸಾಧ್ಯ? ಆದರೆ ಈ ಪುಸ್ತಕದಲ್ಲಿ ಬೇರೆ ಎಲ್ಲಾದರು ಕ್ರಿಸ್ತನನ್ನು ದೇವದೂತನೆಂದು ಕರೆಯಲಾಗಿದೆಯಾ? ಇಲ್ಲ, ಆದರೆ ಆತನನ್ನು ದೇವದೂತನೆಂದು (ಅದರ ಅರ್ಥ "ಸಂದೇಶಕನು") ಸತ್ಯವೇದದ ಬೇರೆ ಕಡೆಯಲ್ಲಿ ಹೀಗೆ ಕರೆಯಲಾಗಿದೆ – ಆದಿ 16:7 ನೋಡಿರಿ. ಆದಾಗ್ಯೂ, ಕ್ರಿಸ್ತನನ್ನು ಕೇವಲ "ಇನ್ನೊಬ್ಬ ಬಲಿಷ್ಠನಾದ ದೇವದೂತನು" ವ.1. ಎಂದು ಸೂಚಿಸಲು ಸಾಧ್ಯವೇ" ಹಾಗೆ ಕರೆಯಲು ಸಾಧ್ಯವಿಲ್ಲ, ಆದ್ದರಿಂದ ಆ ದೇವದೂತನು ಕ್ರಿಸ್ತನೆಂದು ಸ್ಪಷ್ಟವಾಗಿ ನಾವು ಹೇಳಲು ಸಾಧ್ಯವಿಲ್ಲ. ಆತನು 5:2 ರ ಬಲಿಷ್ಠನಾದ ದೇವದೂತನಾಗಿರಬಹುದು (ಅಥವಾ ಆಗದಿರಬಹುದು). **4**

**10:4** ಈ ಏಳು ಗುಡುಗುಗಳು ಏನು ಹೇಳಿದವು? ಯಾವ ಮನುಷ್ಯನಿಗೂ ಗೊತ್ತಿಲ್ಲ, ಮತ್ತು ಅದರ ವಿಷಯವಾಗಿ ಊಹಿಸುವುದು ವ್ಯರ್ಥ. ಧರ್ಮೋ 29:29.

*"ಗುಪ್ತವಾಗಿಡು"*– ದಾನಿ 12:4,9 ಹೋಲಿಸಿರಿ. **5-6**

**10:5-6** ಬಹಳ ಗಂಭೀರವಾದ ಈ ಪುಸ್ತಕದಲ್ಲಿ ಇದು ಒಂದು ಗಂಭೀರ ಕ್ಷಣವಾಗಿದೆ. ಈ ಪುಸ್ತಕ ಮತ್ತು ಇದರಲ್ಲಿರುವ ಘಟನೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ದೇವದೂತನು ಏನು ಹೇಳುತ್ತಾನೆ ಎಂಬುದು ಬಹಳ ಮಹತ್ವದ್ದಾಗಿದೆ ಎಂದು ಅದು ಸೂಚಿಸುತ್ತದೆ. **6**

**10:6** *"ಇನ್ನು ಸಾವಕಾಶವಿರುವುದಿಲ್ಲ"*– 6:10-11 ರಲ್ಲಿ ಸ್ವಲ್ಪ ವಿಶ್ರಾಂತಿಯನ್ನು ಘೋಷಿಸಿತ್ತು. ಇಲ್ಲಿ ವಿಶ್ರಾಂತಿ ಮುಗಿದಿದೆ – ಭೂಲೋಕದ ಜೀವಿಗಳಿಗೆ ದೇವರು ನ್ಯಾಯತೀರಿಸುವ ಮತ್ತು ತನ್ನ ಜನರ ರಕ್ತಕ್ಕಾಗಿ ಮುಯ್ಯಿತೀರಿಸಿಕೊಳ್ಳುವ ಸಮಯ ಬಂದಿದೆ. **7**

**10:7** 7ನೇ ತುತೂರಿಯ ದಿನಗಳಲ್ಲಿ ಈ ಯುಗವು ತನ್ನ ಅಂತ್ಯ ದಿನಗಳಿಗೆ ಬರುತ್ತದೆ. "ದಿನಗಳು" ಎಂಬ ಪದವು ಸ್ವಲ್ಪ ಸಮಯವನ್ನು ಸೂಚಿಸುತ್ತದೆ – ವರುಷಗಳಲ್ಲ ಅಥವಾ ಅನಿರ್ದಿಷ್ಟವಾದ ಧೀರ್ಘಾವಧಿಯಲ್ಲ. ಈ "ದಿನಗಳು" ರೌದ್ರದ ಪಾತ್ರೆಗಳಿಂದ ಹೊಯ್ಯುವ ಸಮಯವಾಗಿರುತ್ತದೆ (ಅಧ್ಯಾಯಗಳು 15,16).

*"ದೇವರ ರಹಸ್ಯ"*– ಹೊಸ ಒಡಂಬಡಿಕೆಯಲ್ಲಿ ರಹಸ್ಯವೆಂದರೆ ದೇವರು ಪ್ರಕಟಿಸಿದ ಸತ್ಯ

ಮತ್ತು ಆತನು ಅದನ್ನು ಪ್ರಕಟಿಸದಿದ್ದಿದ್ದರೆ ಯಾವನೂ ಸಹ ಅದನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆ ರೀತಿಯ ಹಲವು ರಹಸ್ಯಗಳನ್ನು ಹೊಸ ಒಡಂಬಡಿಕೆಯಲ್ಲಿ ಪ್ರಕಟಿಸಲಾಗಿದೆ. ಮತ್ತಾಯ 13:11; ರೋಮಾ 11:25; 1 ಕೊರಿಂಥ 15:51-52; ಎಫೆ 3:3-10; 5:22; ಕೊಲೊ 1:24-27; 2 ಥೆಸ 2:7; 1 ತಿಮೊ 3:16. ಇದರಲ್ಲಿ ಯಾವ ರಹಸ್ಯವು 7ನೇ ತುತೂರಿಯ ಸಮಯದಲ್ಲಿ ಅಂತ್ಯಗೊಳ್ಳುತ್ತದೆ? ಅಥವಾ ಅವುಗಳಲ್ಲಿ ಕೆಲವು ಈ ವಾಕ್ಯಗಳಲ್ಲಿ ಸೇರಿಸಿರುವ "ದೇವರ ರಹಸ್ಯಗಳು"? ಬಹುಶಃ ಅವರು ಹೆಚ್ಚಿನ ಮತ್ತು ಹೆಚ್ಚು ಅಂತರ್ಗತವಾದ ರಹಸ್ಯಗಳನ್ನು ಒಟ್ಟುಗೂಡಿಸಿದ್ದಾರಾ – ಎಫೆ 1:9-10 ರಲ್ಲಿ ಪೌಲನು ಬರೆದದ್ದೋ? ಬಹುಶಃ ಇದ್ದರೂ ಇರಬಹುದು; 7ನೇ ತುತೂರಿಯು ಊದಲ್ಪಡುವಾಗ ನಡೆಯುವ ಘಟನೆಗಳನ್ನು ನೋಡಿರಿ – 11:15-18. **9**

**10:9** *"ತಿಂದುಬಿಡು"*– ಯೆಹೆಜ್ಕೇಲ 3:1-2.

*"ಸಿಹಿ…ಕಹಿ"*– ಅದು ರುಚಿಗೆ ಸಿಹಿಯಾಗಿತ್ತು ಯಾಕಂದರೆ ಅದು ದೇವರ ವಾಕ್ಯವನ್ನೊಳಗೊಂಡಿತ್ತು. ಕೀರ್ತನೆ 19:9-10; 119:103; ಯೆರೆ 15:16; ಯೆಹೆಜ್ಕೇಲ 3:3 ಹೋಲಿಸಿರಿ. ಅದು ಹೊಟ್ಟೆಯೊಳಗೆ ಕಹಿಯಾಗಿತ್ತು – ಪ್ರವಾದನೆಗಳು ಮತ್ತು ಬರುವ ನ್ಯಾಯತೀರ್ಪನ್ನು ಅರ್ಥಮಾಡಿಕೊಂಡು ಜೀರ್ಣಿಸಿಕೊಳ್ಳುವುದಾದರೆ ಪ್ರೀತಿ ಮತ್ತು ಸಹಾನುಭೂತಿ ಇರುವ ಹೃದಯಗಳಿಗೆ ಇದು ನೋವನ್ನುಂಟು ಮಾಡುತ್ತದೆ. ಯೆಹೆಜ್ಕೇಲ 21:6,12; ಯೆರೆ 9:1; 10:19; 13:17; ಯೆಶಾಯ 22:4; ಕೀರ್ತನೆ 119:5,136 ಹೋಲಿಸಿರಿ. ಇದು ದೇವರ ನಿಜವಾದ ಪ್ರವಾದಿಗಳ ಗುಣಲಕ್ಷಣವಾಗಿದೆ. 11

**10:11** *"ಪ್ರವಾದನೆ"*– 1:2,3.

*"ಮತ್ತೊಮ್ಮೆ"*– ಯೋಹಾನನು ಮುಂಚೆ ಸಂಕ್ಷಿಪ್ತವಾಗಿ ಮಾಡಿದ ಕಾರ್ಯವನ್ನು ಮತ್ತೊಮ್ಮೆ ಮಾಡಬೇಕೆಂದು ಮತ್ತು ಅದೇ ಜನರಿಗೆ ಮತ್ತು ಅದೇ ಘಟನೆಗಳ ಮುಂದಿನ ಪ್ರವಾದನೆಗಳನ್ನು ಅವರಿಗೆ ಪ್ರವಾದಿಸಬೇಕೆಂದು ಇದರ ಅರ್ಥವಾಗಿರಬಹುದು (ವ.2 ಟಿಪ್ಪಣಿ).

# 11 1

**11:1** *"ಅಳತೇ ಕೋಲು"*– ಕಾಪಾಡುವದಕ್ಕೆ ಅಥವಾ ನಾಶಮಾಡುವದಕ್ಕೆ ಒಂದು ಸ್ಥಳವನ್ನು ಗುರುತಿಸುವದನ್ನು ಸೂಚಿಸುವ ಚಿನ್ಹೆಯಾಗಿದೆ 2 ಅರಸು 21:13; ಯೆಶಾಯ 34:11; ಪ್ರಲಾ 2:8; ಜೆಕರ್ಯ 2:1-5.

*"ದೇವಾಲಯ"*– ಪರಲೋಕದಲ್ಲಿರುವುದಲ್ಲ (7:15). ಆದರೆ ಭೂಮಿಯ ಮೇಲಿರುವುದು. ಅದು ಯೆರೂಸಲೇಮಿನಲ್ಲಿದೆ "ಪರಿಶುದ್ಧ ಪಟ್ಟಣ". (ವ. 8; ಮತ್ತಾಯ 4:5; 27:53). ದೇವರಿಗೆ ಸಮರ್ಪಿಸಿದ ಯೆಹೂದ್ಯರ ದೇವಾಲಯ ಆದ್ದರಿಂದ ಅದು ದೇವರ ದೇವಾಲಯ. ಅನ್ಯರು (ಯೆಹೂದ್ಯರಲ್ಲದ ಜನರನ್ನು ಕರೆಯಲು ಸತ್ಯವೇದವು ಉಪಯೋಗಿಸುವ ಪದ) ಹೊರ ಅಂಗಳವನ್ನು ಆಕ್ರಮಿಸಿಕೊಂಡಿರುವುದು ಒಳಗಿನ ಭಾಗದಲ್ಲಿ ಇರುವ ಆರಾಧಕರು ಯೆಹೂದ್ಯರೆಂದು ಸೂಚಿಸುತ್ತದೆ. ಈ ದಿನ ಯೆರೂಸಲೇಮಿನಲ್ಲಿ ಯೆಹೂದ್ಯರ ದೇವಾಲಯವಿಲ್ಲ ಮತ್ತು ಯೋಹಾನನ ಅಂತಿಮ ವರ್ಷಗಳಲ್ಲಿಯೂ ದೇವಾಲಯವು ಇರಲಿಲ್ಲ. ಕ್ರಿಸ್ತನ ಸಮಯದಲ್ಲಿ ಭೂಮಿಯ ಮೇಲಿದ್ದ ದೇವಾಲಯವು ಕ್ರಿ.ಶ. 70 ರಲ್ಲಿ ನಾಶವಾಯಿತು (ಮತ್ತಾಯ 24:2; ಲೂಕ 19:41-44). ಈ ಯುಗದ ಅಂತ್ಯದೊಳಗಾಗಿ ಹೊಸ ದೇವಾಲಯವು ಯೆರೂಸಲೇಮಿನಲ್ಲಿ ಕಟ್ಟಲ್ಪಡುವುದೆಂಬ ಸಂದೇಶವನ್ನು ಯೋಹಾನನಿಗೆ ತಿಳಿಸುವ ಸೂಚನೆಯಾಗಿದೆ. ಮತ್ತಾಯ 24:15; 2 ಥೆಸ 2:4 ಸಹ ನೋಡಿರಿ. **2**

**11:2** *"ಅದು ಅನ್ಯಜನರಿಗಾಗಿ ಕೊಟ್ಟಿದೆ"*– 1967 ರಿಂದ ಯೆಹೂದ್ಯರು ಯೆರೂಸಲೇಮನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದಾರೆ. ಆದರೆ ಇಲ್ಲಿನ ತೀರ್ಪಿನ ಪ್ರಕಾರ ಈ ಯುಗದ ಅಂತ್ಯದಲ್ಲಿ ಸ್ವಲ್ಪ ಸಯಯಕ್ಕೆ ಬೇರೆ ಜನರು ಈ ಪಟ್ಟಣವನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳುವರು. ಯೆಹೆಜ್ಕೇಲ 14:2.

*"ನಲ್ವತ್ತೆರಡು ತಿಂಗಳು"*– 13:5. ಇದೇ ಸಮಯವನ್ನು 1260 ದಿನಗಳೆಂದು ಹೇಳಲ್ಪಟ್ಟಿದೆ (ವ.3; 12:6), ಅಲ್ಲಿ ಒಂದು ಕಾಲ, ಎರಡು ಕಾಲ ಅರ್ಧಕಾಲ (12:14. ಇದರ ಅರ್ಥ 3 ½ ವರ್ಷಗಳು), ಮತ್ತು "ಒಂದು ಗಂಟೆ" (17:12). ಈ ಸಮಯವು ಬಹಳ ಮಿತಿಯುಳ್ಳ ಸಮಯವೆಂದು ಸ್ಪಷ್ಟವಾಗಿ ತೋರುತ್ತದೆ. ಈ ಟಿಪ್ಪಣಿಯ ಲೇಖಕರು 42 ತಿಂಗಳುಗಳನ್ನು ಅಕ್ಷರಶಃ ತೆಗೆದುಕೊಳ್ಳದಿರಲು ಸತ್ಯವೇದದಲ್ಲಿ ಯಾವುದೇ ಕಾರಣವಿಲ್ಲ. ದಾನಿ 7:25; 9:27; 12:7. **3**

**11:3** *"ಎರಡು ಸಾಕ್ಷಿಗಳು"*– ಈ ಎರಡು ಸಾಕ್ಷಿಗಳು ಯುಗದ ಅಂತ್ಯದ ಮಹಾ ಹಿಂಸೆಯ ಕಾಲದಲ್ಲಿ ಸಾಕ್ಷಿಗಳಾಗಿದ್ದ ಯೆಹೂದ್ಯ ಜನರ ಗುಂಪನ್ನು ಸೂಚಿಸುತ್ತದೆ ಎಂದು ಕೆಲವರು ಬೋಧಿಸುತ್ತಾರೆ. "ಎರಡು ದೀಪಸ್ತಂಭ" –ಎಂದು ಅವರನ್ನು ಕರೆದದ್ದರಿಂದ ಅವು ಸಾಕ್ಷಿಯಾಗಿರುವ ಸಭೆಗಳನ್ನು ಸೂಚಿಸುತ್ತದೆ ಎಂದು ಕೆಲವರು ಯೋಚಿಸುತ್ತಾರೆ (1:20 ಹೋಲಿಸಿರಿ). ಇನ್ನೂ ಕೆಲವರು ಇವರು ಇಬ್ಬರು ವ್ಯಕ್ತಿಗಳೆಂದು ಬೋಧಿಸುತ್ತಾರೆ. ವಚನಗಳು 5-12 ರ ಭಾಷೆಯು ಈ ಕಡೆಯ ನೋಟವನ್ನು ಹೆಚ್ಚು ಸಾಧ್ಯತೆಯನ್ನಾಗಿ ಮಾಡುತ್ತದೆ. ಕೆಲವು ಸತ್ಯವೇದದ ಬೋಧಕರು ಇವರು ಖಂಡಿತವಾಗಿಯೂ ಮೋಶೆ ಮತ್ತು ಎಲೀಯ ಎಂಬುದಾಗಿ ನಂಬುತ್ತಾರೆ (ಕ್ರಿಸ್ತನು ಮರುರೂಪ ಹೊಂದಿದಾಗ ಇವರು ಆತನೊಂದಿಗೆ ಒಟ್ಟಾಗಿದ್ದರು – ಮತ್ತಾಯ 17:3). ಮೋಶೆಯು ಮರಣ ಹೊಂದಲು ತಿರುಗಿ ಈ ಲೋಕಕ್ಕೆ ಬರುವನೆಂಬುದಾಗಿ ಸತ್ಯವೇದದಲ್ಲಿ ಯಾವ ವಾಕ್ಯಗಳೂ ಇಲ್ಲ. ಎಲೀಯನ ಬಗ್ಗೆ (ಅವನು ಸಾಯಲಿಲ್ಲ – 2 ಅರಸು 2:11) ಮಲಾಕಿ 4:5; ಮತ್ತಾಯ 17:11 ನೋಡಿರಿ. ಚರಿತ್ರೆಯಲ್ಲಿ ಮರಣ ಹೊಂದದೆ ಪರಲೋಕಕ್ಕೆ ಹೋದ ಇನ್ನೊಬ್ಬ ವ್ಯಕ್ತಿ ಎಂದರೆ ಅವನು ಹನೋಕನು (ಇಬ್ರಿ 11:5) ಇವನು ಅಂತ್ಯದಿನಗಳ ಬಗ್ಗೆ ಪ್ರವಾದಿಸಿದನು (ಯೂದ 14,15). ಅವನು ಮತ್ತೊಮ್ಮೆ ಈ ಭೂಮಿಗೆ ಬಂದು ಇಲ್ಲಿ ಸಾಯುತ್ತಾನೋ? ಇದನ್ನು ಖಚಿತವಾಗಿ ಯಾರು ಹೇಳಬಲ್ಲರು? **4**

**11:4** *"ಎರಡು ಎಣ್ಣೆಯ ಮರಗಳು"*– ಜೆಕರ್ಯ 4:3-14.

*"ಎರಡು ದೀಪ ಸ್ತಂಭಗಳೂ"*– ಏಳು ದೀಪಸ್ತಂಭಗಳು ಏಳು ಸಭೆಗಳಾಗಿವೆ (1:20); ಆದಾಗ್ಯೂ, ಈ ಎರಡು ದೀಪಸ್ತಂಭಗಳು ಸಾಕ್ಷಿಗಳ ಗುಂಪುಗಳನ್ನೂ ಅಥವಾ ಸಭೆಗಳನ್ನು ಹೊರತುಪಡಿಸಿ ಬೇರೆ ವ್ಯಕ್ತಿಗಳನ್ನು ಉಲ್ಲೇಖಿಸುವುದು ಅಸಾಧ್ಯವೆಂದು ತೋರುತ್ತಿಲ್ಲ. ದೇವರಿಗೆ ಬೆಳಕಾಗಿ ಜೀವಿಸುವವರನ್ನು ಮತ್ತು ಬೆಳಕಾಗಿರುವ ಕ್ರಿಸ್ತನನ್ನು ತೋರಿಸುವವರನ್ನು ದೀಪಸ್ತಂಭಗಳು ಸೂಚಿಸುತ್ತವೆ. **5**

**11:5** *"ಇವರ ಬಾಯೊಳಗಿಂದ ಬೆಂಕಿ ಹೊರಡುತ್ತದೆ"*– ಇದು ಸಹಜವಾಗಿ ಒಂದು ಚಿನ್ಹೆಯಾಗಿದೆ, ಹಾಗಾದರೆ, ಯಾವುದರ ಚಿನ್ಹೆ? 2 ಅರಸು 1:9-12 ಹೋಲಿಸಿರಿ. ಆದರೆ ಅವರು ಮಾತಾಡಬೇಕಾಗಿದೆ ಮತ್ತು ದೇವರು ಅವರ ರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತಾನೆ.

*"ಇವರ ಶತ್ರುಗಳನ್ನು ದಹಿಸಿಬಿಡುವುದು"*– ಆ ಎರಡು ಸಾಕ್ಷಿಗಳು ಈ ಕಾಲದ ಸಭೆಗಳೆಂದು

ಹೇಳುವ ವ್ಯಾಖ್ಯಾಯನವನ್ನು ಇದು ತಳ್ಳಿ ಹಾಕುತ್ತದೆ. ಶತ್ರುಗಳನ್ನು ನಾಶಮಾಡುವುದು ಸಭೆಗಳ ಕೆಲಸವಲ್ಲ. 6

**11:6** *"ಆಕಾಶವನ್ನು ಮುಚ್ಚುವ" ಅಥವಾ "ಪರಲೋಕವನ್ನು ಮುಚ್ಚುವ"*– 1 ಅರಸು 17:1; ಯಾಕೋಬ 5:17.

*"ನೀರು ರಕ್ತವಾಗುವಂತೆ... ಉಪದ್ರವಗಳು"*– ವಿಮೋ 7:20; 8:5-6,16. ಈ ಕಾರ್ಯಗಳು ಚರಿತ್ರೆಯಲ್ಲಿ ಅಕ್ಷರಶಃ ನಡೆದದ್ದರಿಂದ ಅವು ಮತ್ತೊಮ್ಮೆ ನಡೆಯುವುದಿಲ್ಲವೆನ್ನುವುದಕ್ಕೆ ಯಾವುದಾದರು ವಾಕ್ಯದ ಆಧಾರವಿದೆಯೋ? 7

**11:7** *"ಇವರು ತಮ್ಮ ಸಾಕ್ಷಿಯನ್ನು ಹೇಳಿ ಮುಗಿಸಿದ ನಂತರ"*– ದೇವರು ಅವರ ಕೆಲಸಕ್ಕಾಗಿ ಒಂದು ನಿರ್ಧಿಷ್ಟ ಸಮಯವನ್ನು ನಿಗಧಿಪಡಿಸುತ್ತಾನೆ ಮತ್ತು ಆ ಕೆಲಸವು ಮುಗಿಯುವವರೆಗೆ ಅವರನ್ನು ಕಾಪಾಡುತ್ತಾನೆ. ಒಂದು ಸಾರಿ ಒಬ್ಬ ಭಾರತೀಯ ದೇವರ ಸೇವಕರು ಹೀಗೆ ಹೇಳಿದರು, "ಆತನು ತನ್ನ ಕೆಲಸವನ್ನು ನನಗೆ ಕೊಟ್ಟಿದ್ದರೆ ನಾನು ಸಾಯಲು ಸಾಧ್ಯವಿಲ್ಲ. ಇದು ಸತ್ಯವಾದ ಮಾತು.

*"ಮೃಗವು"*– 13:1-8; 17:3,7-11 ನೋಡಿರಿ. 2 ಥೆಸ 2:3-4; 1 ಯೋಹಾನ 2:18 ಹೋಲಿಸಿರಿ.

*"ಅಧೋಲೋಕ"*– 9:1 ರ ಟಿಪ್ಪಣಿ. "ಅಧೋಲೋಕದಿಂದ ಬರುವ" ಸೂಚಿಸುವದೇನೆಂದರೆ "ಮೃಗವು" ಸತ್ತವರ ಸ್ಥಳವಾದ ಅಧೋಲೋಕದಿಂದ ಬರುತ್ತದೆ. 13:3; 17:8 ನೋಡಿರಿ.

*"ಇವರನ್ನು ಕೊಲ್ಲುವುದು"*– 13:7 ಹೋಲಿಸಿರಿ. ಕ್ರಿಸ್ತವಿರೋಧಿಗೆ ("ಮೃಗಕ್ಕೆ ಇನ್ನೊಂದು ಹೆಸರು) ಅಧಿಕವಾದ ಶಕ್ತಿ ಇರುತ್ತದೆ ಮತ್ತು ಅನೇಕ ದೇವರ ಮಕ್ಕಳನ್ನು ಕೊಲ್ಲುವದಕ್ಕೆ ಅಪ್ಪಣೆಯನ್ನು ಪಡೆದಿರುತ್ತದೆ ಆದರೆ ದೇವರಿಗೆ ತನ್ನ ಪ್ರಪಂಚದ ಮೇಲೆ ಇನ್ನೂ ನಿಯಂತ್ರಣವಿರುತ್ತದೆ ಮತ್ತು ನಡೆಯುವ ಎಲ್ಲಾದರಲ್ಲಿಯೂ ಆತನ ಜ್ಞಾನವುಳ್ಳ ಉದ್ದೇಶವಿರುತ್ತದೆ. ಯೆರೂಸಲೇಮಿನಲ್ಲಿರುವ ಇರುವ ಎರಡು ಸಾಕ್ಷಿಗಳು ಮತ್ತು "ಮೃಗವು" ಅವರನ್ನು ಕೊಲ್ಲುವ ವಿಷಯವು, ಅದುವರೆಗೂ ಅವನು ತನ್ನ ಮುಖ್ಯ ಕಛೇರಿಯನ್ನು ಯೆರೂಸಲೇಮಿನಲ್ಲಿ ಹೊಂದಿದ್ದನೆಂಬುವುದಕ್ಕೆ ಸಾಕ್ಷಿಯಾಗುವುದಿಲ್ಲ (17:9-10,18 ಟಿಪ್ಪಣಿಗಳನ್ನು ನೋಡಿರಿ). ಅವನು ಸ್ವಲ್ಪ ದೂರಲ್ಲಿರಬಹುದು ಮತ್ತು ಅವರನ್ನು ಕೊಂದಿರಬಹುದು. ಅಥವಾ ಈ ಸಮಯದಲ್ಲಿ ವಯಕ್ತಿಕವಾಗಿ ಯೆರೂಸಲೇಮಿಗೆ ಬಂದಿರಬಹುದು. 8

**11:8** ಈ ಮಾತುಗಳು ಸ್ಪಷ್ಟವಾಗಿ ಮಹಾ ನಗರವಾದ ಯೆರೂಸಲೇಮನ್ನು ಗುರುತಿಸುತ್ತದೆ. ಹೌದು, ಅಲ್ಲಿಯೇ, ಕರ್ತನಾದ ಯೇಸುವನ್ನು ಕ್ರೂಜೆಗೆ ಹಾಕಿದ ಪಟ್ಟಣ. ಮತ್ತು ಯೆಶಾಯ 1:8-10 ರಲ್ಲಿ ಯೆರೂಸಲೇಮನ್ನು ಸಾಂಕೇತಿಕವಾಗಿ ಸೋದೋಮ್ ಎಂದು ಕರೆಯಲಾಗಿದೆ. ಸತ್ಯವೇದದಲ್ಲಿ "ಐಗುಪ್ತ" ವನ್ನು ಸಂಕೇತಿಕವಾಗಿ ಆತ್ಮೀಕ ಗುಲಾಮತನಕ್ಕೆ ಹೋಲಿಸಲಾಗುತ್ತದೆ. ಮತ್ತು ಅದನ್ನೇ ಯೆರೂಸಲೇಮು ಸಹ ಅದನ್ನೇ ಪ್ರತಿನಿಧಿಸುತ್ತದೆ (ಗಲಾ 4:25). 9

**11:9** ಈ ಕಾರ್ಯವನ್ನು ಇಷ್ಟು ಮಿತಿಯುಳ್ಳ ಸಮಯದಲ್ಲಿ ಅನೇಕರು ನೋಡಲು ಹೇಗೆ ಸಾಧ್ಯ? ದೂರದರ್ಶನವಿರುವ ಈ ಕಾಲದಲ್ಲಿ ಇದು ಕಷ್ಟವೆಂದು ನಾವು ಯೋಚಿಸಬಹುದೇ? "ಸತ್ತ ಶವಗಳು" ಮತ್ತು "ಸಮಾಧಿಯಲ್ಲಿ ಇಡಗೊಳಿಸುವುದಿಲ್ಲ" ಎಂಬ ಈ ಮಾತುಗಳನ್ನು ನೋಡಿದರೆ ಅಕ್ಷರಶಃ ಇಬ್ಬರು ವ್ಯಕ್ತಿಗಳು ಸಾಯುವದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. 10

**11:10** ಮನುಷ್ಯನ ಸ್ವಾಭಾವಿಕವಾದ ಸ್ವಭಾವವನ್ನು ಇಲ್ಲಿ ನೋಡಿರಿ. ದೇವರ ಪ್ರವಾದಿಗಳ ಮರಣವು ಶುಭ ಸಂದೇಶ. ಸಾಧಾರಣವಾಗಿ ಮನುಷ್ಯರಿಗೆ ದೇವರ ಸತ್ಯವು ಬೇಡವಾಗಿದೆ. ಅದು ಅವರನ್ನು ಹಿಂಸಿಸುತ್ತದೆ ಮತ್ತು ಅವರು ಅದನ್ನು ಕೇಳಿಸಿಕೊಳ್ಳದಿದ್ದರೆ ಮಾತ್ರ ಅವರಿಗೆ ಸಮಾಧಾನವಾಗುತ್ತದೆ. ಯೋಹಾನ 3:19-20; ರೋಮಾ 8:5-8 ಹೋಲಿಸಿರಿ. 11

**11:11** ದುಷ್ಟ ಮನುಷ್ಯರ ದೆವ್ವದ ಸಂತೋಷವು ಅಲ್ಪಕಾಲಿಕವಾಗಿರುತ್ತದೆ (ಯೋಬ 20:5 ಹೋಲಿಸಿರಿ). ದೈಹಿಕ ಪುನುರುತ್ಥಾನವನ್ನು ಈ ಭಾಷೆಯು ಸ್ಪಷ್ಟವಾಗಿ ಅರ್ಥೈಸುತ್ತದೆಂದು ತೋರುತ್ತದೆ, ಸತ್ತ ದೇಹಗಳು ಜೀವಂತವಾಗುತ್ತವೆ. 12

**11:12** ಇದು ಸಹ, ಸ್ಪಷ್ಟವಾಗಿ ಒಂದು ನಿಜವಾದ ಘಟನೆಯ ಬಗ್ಗೆ ಮಾತಾಡುತ್ತದೆಂದು ತೋರುತ್ತದೆ, ಸತ್ತವರು ತಿರುಗಿ ಜೀವಂತವಾಗಿ ಆರೋಹಣವಾಗುವುದು.

*"ಮೇಘ"*– ಅಪೊ 1:9 ಹೋಲಿಸಿರಿ. 13

**11:13** ಈ ಮಹಾ ಭೂಕಂಪವು "ಪಟ್ಟಣದಲ್ಲಿದ್ದ" 7,000 ಜನರನ್ನು ಮಾತ್ರ ಕೊಂದಿತು ಎಂದು ಹೇಳುವಾಗ ಇದು ಅಕ್ಷರಶಃ ಯೆರೂಸಲೇಮ್ ಪಟ್ಟಣವನ್ನು (ವ.2,8) ಸೂಚಿಸುತ್ತದೆಂದು ಸ್ಪಷ್ಟವಾಗುತ್ತದೆ. ಈ ಭೂಕಂಪವು ವಿಶ್ವವ್ಯಾಪ್ತಿಯಾದ ವಿಪತ್ತಲ್ಲ

ಆದರೆ ಸ್ಥಳೀಯವಾದದ್ದಾಗಿದೆ. ಜೀವಂತವಾಗಿ ಉಳಿದವರ ಮೇಲೆ ಇದು ಒಳ್ಳೆಯ ಪ್ರಭಾವವನ್ನು ಬೀರುತ್ತದೆ (16:9,11 ಹೋಲಿಸಿ). **14**

**11:14** *"ಎರಡನೆಯ ವಿಪತ್ತು"*– 6ನೇ ತುತೂರಿಯ ಅಡಿಯಲ್ಲಿ ನಡೆಯುವ ಘಟನೆ. 8:13; 9:12 ನೋಡಿರಿ.

*"ಇಗೋ"*– ಅಕ್ಷರಶಃ, "ನೋಡು".

*"ಮೂರನೆಯ"*– ವಿವರಣೆಯಲ್ಲಿ 10:1 ರಲ್ಲಿ ಪ್ರಾರಂಬವಾದ ದೀರ್ಘ ವಿರಾಮವು ಮುಕ್ತಾಯವಾಯಿತು. 7ನೇ ತುತೂರಿಯು ಊದಲ್ಪಡುವದರಲ್ಲಿದೆ, ಮತ್ತು 7ನೇ ತುತೂರಿಯಿಂದ 7 ರೌದ್ರ ಪಾತ್ರೆಗಳು ಬಂದವು. ಅವು ಮೂರನೆಯ (ಮತ್ತು ಕಡೆಯ) "ವಿಪತ್ತು". **15**

**11:15** ಈ ಸರಣಿಯಲ್ಲಿ 7ನೇ ತುತೂರಿಯು ಕಡೆಯ ತುತೂರಿಯಾಗಿದೆ, ಈ ಪುಸ್ತಕದಲ್ಲಿ ಕಡೆಯದಾಗಿದೆ, ಕ್ರಿಸ್ತನು ಹಿಂದಿರುಗಿ ಬರುವ ಮುಂಚಿತವಾಗಿ ಇದು ಕಡೆಯದಾಗಿದೆ. ಮತ್ತಾಯ 24:30-31; 1 ಕೊರಿಂಥ 15:51-52; 1 ಥೆಸ 4:16 ಹೋಲಿಸಿರಿ. ಕಳೆದ ಅಧ್ಯಾಯಗಳಲ್ಲಿ ಪ್ರಕಟವಾದದ್ದನ್ನು ಮತ್ತು ಮುಂದಿನ ವಚನಗಳಲ್ಲಿ ಹೇಳಿರುವದನ್ನು ನೋಡುವುದಾದರೆ ಕ್ರಿಸ್ತವಿರೋಧಿಯು ಎದ್ದ ನಂತರ ಮತ್ತು ಮಹಾಹಿಂಸೆಯ ಸಮಯದ ನಂತರ ಈ ತುತೂರಿಯು ಊದಲ್ಪಡುತ್ತದೆ.

*"ಉಂಟಾಯಿತು"*– 7ನೇ ತುತೂರಿಯ ಅಡಿಯಲ್ಲಿ ನಡೆಯುವ ಕಡೇಯ ಘಟನೆಗಳ ಸಂದರ್ಭದಲ್ಲಿ ಹಿರಿಯರು ಎದ್ದು ನಿಲ್ಲುವದನ್ನು ಕಾಣತ್ತೇವೆ (19:11-16) ಮತ್ತು ಅದರ ಅಡಿಯಲ್ಲಿ ನಡೆದ ಸಂಗತಿಗಳನ್ನು ಹಿಂದೆ ತಿರುಗಿ ನೋಡುತ್ತಿದ್ದಾರೆ. ಅಥವಾ ಅವರು ಇಲ್ಲಿ ಅವರು ಕ್ರಿಯಾ ಪದದ ಉದ್ವಗ್ನತೆಯನ್ನು ಉಪಯೋಗಿಸಿಕೊಂಡು ಭವಿಷ್ಯ ಘಟನೆಗಳ ಪ್ರವಾದನೆಯನ್ನು ಹೇಳುತ್ತಿದ್ದಾರೆ (ಯೆಶಾಯ 55:10-11).

*"ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ...ಉಂಟಾಯಿತು"*– 19:15-16; ಮತ್ತಾಯ 6:10; 13:40-43; 19:28; 25:31; ಲೂಕ 1:32-33; ಅಪೊ 1:6-7; ಕೀರ್ತನೆ 2:1-12; ಯೆಶಾಯ 11:1-9; ದಾನಿ 2:44-45. ಇದು ಪ್ರಕಟನೆ ಪುಸ್ತಕದ ಒಂದು ಪ್ರಧಾನ ವಿಷಯವಾಗಿದೆ: ದೇವರು ತನ್ನ ಸಾಮ್ರಾಜ್ಯವನ್ನು ಬಹಿರಂಗವಾಗಿ ಈ ಭೂಮಿಯ ಮೇಲೆ ಸ್ಥಾಪಿಸುತ್ತಾನೆ. ಬೇರೆ ಎಲ್ಲಾ ಆಳ್ವಿಕೆ ಮತ್ತು ಅಧಿಕಾರಗಳು ಯಾವ ರೀತಿಯಲ್ಲಿ

ನಾಶವಾಗುತ್ತವೆಂದು ಮತ್ತು ಈ ಲೋಕವನ್ನು ಆಳುವ ಸ್ಥಳವನ್ನು ತೆಗೆದುಕೊಳ್ಳಲು ಕ್ರಿಸ್ತನು ಬರುತ್ತಾನೆಂದು ಈ ಪುಸ್ತಕವು ಪ್ರಕಟಿಸುತ್ತದೆ. ದೇವರ ರಾಜ್ಯದ ವಿಷಯವಾದ ಟಿಪ್ಪಣಿಗಾಗಿ ಮತ್ತಾಯ 4:17 ನೋಡಿರಿ.

*"ಯುಗಯುಗಾಂತರಗಳಲ್ಲಿಯೂ"*– ಯೆಶಾಯ 9:7; ದಾನಿ 7:14,27. ಎರಡು ಹಂತಗಳಲ್ಲಿ ಆತನ ಆಳ್ವಿಕೆಯು ಇರುತ್ತದೆಂದು ತೋರುತ್ತದೆ. 20:4,6; 1 ಕೊರಿಂಥ 15:24-25 ನೋಡಿರಿ. ಒಂದು ಸಾವಿರ ವರುಷದ ಆಳ್ವಿಕೆಯು ಆತನ ಆಳ್ವಿಕೆಯ ಪ್ರಾರಂಭವಾಗಿರುತ್ತದೆ. **16**

**11:16** *"ಹಿರಿಯರು"*– 4:4. **17**

**11:17** *"ಕೃತಜ್ಞತಾಸ್ತುತಿ"*– ಕೃತಜ್ಞತಾಸ್ತುತಿ ಸಲ್ಲಿಸಲು ಇದು ಕಾರಣವಾಗಿರುತ್ತದೆ – ಈ ಲೋಕದಲ್ಲಿ ಪಾಪದ ಆಳ್ವಿಕೆಯು ಮುಗಿದು ಹೋಗುತ್ತದೆ ಮತ್ತು ಕ್ರಿಸ್ತನು ಆಳುತ್ತಾನೆ. ಕೃತಜ್ಞತಾಸ್ತುತಿಯ ಬಗ್ಗೆ ಯಾಜಕ. 7:12-13; ಕೀರ್ತನೆ 7:17; 50:14-15; 56:12; ಎಫೆ 5:20; 1 ಥೆಸ 5:18 ನೋಡಿರಿ.

*"ಸದಾ ಇರುವಾತನೇ"*– 1:4,8; 4:8 ಹೋಲಿಸಿರಿ. 7ನೇ ತುತೂರಿಯ ಅಡಿಯಲ್ಲಿ ಆತನು ಬರುತ್ತಾನೆ. 7ನೇ ತುತೂರಿಯ ದಿನಗಳು (10:7) 19:11-16 ರಲ್ಲಿ ವಿವರಿಸಿದ ಘಟನೆಯವರೆಗೂ ವಿಸ್ತರಿಸಿದೆ.

*"ಆಳಿದ್ದರಿಂದ"*– ಈ ಭೂಮಿಯ ಮೇಲೆ ದೇವರು ಯಾವಾಗಲೂ ರಾಜನಾಗಿದ್ದಾನೆ (ಕೀರ್ತನೆ 47:2). 7ನೇ ತುತೂರಿಯ ಮುಂಚಿತವಾಗಿ ಆತನ ಆಳ್ವಿಕೆಯು ಭೂಲೋಕದ ಜನರ ಕಣ್ಣಿನಿಂದ ಮರೆಮಾಡಲ್ಪಟ್ಟಿದ್ದರೂ, ನಡೆಯುವ ಎಲ್ಲಾ ಘಟನೆಗಳ ಮೇಲೆ ಆತನು ಆಳ್ವಿಕೆ ನಡೆಸುತ್ತಿದ್ದಾನೆ. 7ನೇ ತುತೂರಿಯ ನಂತರ ಆತನು ಬಹಿರಂಗವಾಗಿ ಆಳುವನು. **18**

**11:18** *"ಜನಾಂಗಗಳು ಕೋಪಿಸಿಕೊಂಡವು"*– ದೇವರು ಮತ್ತು ಆತನ ಜನರ ಮೇಲೂ, ಜನಾಂಗಳ ಮೇಲೂ ಸೈತಾನನು ಕೋಪಗೊಳ್ಳುವದನ್ನು ಸೂಚಿಸುತ್ತದೆ. 12:12 ನೋಡಿರಿ. ಕ್ರಿಸ್ತವಿರೋಧಿಯ ಸಮಯದಲ್ಲಿ ಈ ಕೋಪವು ಸಂಪೂರ್ಣವಾಗಿ ತೋರಲ್ಪಡುತ್ತದೆ – 6:4,10; 13:7; 16:9,11; 19:19.

*"ನಿನ್ನ ಕೋಪವು ಪ್ರಕಟವಾಯಿತು"*– 6:17; 14:19; 15:1,7; 16:19; 19:15;

ಕೀರ್ತನೆ 2:4-5. 16ನೇ ಅಧ್ಯಾಯದಲ್ಲಿರುವ ಎಲ್ಲಾ ರೌದ್ರದ ಪಾತ್ರೆಗಳು 7ನೇ ತುತೂರಿಯ ಅಡಿಯಲ್ಲಿ ಬರುತ್ತದೆ.

*"ಸತ್ತವರು ತೀರ್ಪುಹೊಂದುವ ಸಮಯ ಬಂದದೆ"*– ಇಲ್ಲಿ "ಸತ್ತವರು" ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾದ ಮೂರು ವ್ಯಾಖ್ಯಾಯನಗಳಿವೆ: ರಕ್ಷಣೆ ಹೊಂದದೆ ಸತ್ತವರು ಅಥವಾ ಶಾರೀರಿಕವಾಗಿ ಜೀವಂತವಾಗಿದ್ದರೂ ಪಾಪದಲ್ಲಿ ಸತ್ತಿರುವವರು (ಎಫೆ 2:1), ಅಥವಾ ಕ್ರಿಸ್ತನಲ್ಲಿರುವ ವಿಶ್ವಾಸಿಗಳಾಗಿ ಸತ್ತವರು. ಮೊದಲನೆಯ ವ್ಯಾಖ್ಯಾನವು ಅಸಂಭವವಾಗಿದೆ – 20ನೇ ಅಧ್ಯಾಯದಿಂದ ನಿರ್ಣಯಿಸುವುದಾದರೆ ರಕ್ಷಣೆ ಹೊಂದದೆ ಸತ್ತಿರುವವರು ಕ್ರಿಸ್ತನ 1000 ವರ್ಷಗಳ ಆಳ್ವಿಕೆಯು ಅಂತ್ಯಗೊಳ್ಳುವವರೆಗೂ ಕಡೇಯ ನ್ಯಾಯತೀರ್ಪಿಗೆ ಒಳಗಾಗುವುದಿಲ್ಲ (20:7-15). ಎರಡನೆಯ ವ್ಯಾಖ್ಯಾಯನ, ಅಸಾಧ್ಯವಾಗದಿದ್ದರೂ, ಈ ಸಂದರ್ಭದಲ್ಲಿ ಅಸಂಭವವಾಗಿದೆ. ಮೂರನೆಯ ವ್ಯಾಖ್ಯಾಯನವು ಸಾಧ್ಯವೆಂದು ಹೆಚ್ಚಾಗಿ ತೋರುತ್ತದೆ.

*"ಪ್ರತಿಫಲವನ್ನು ಕೊಡುವ ಸಮಯ"*– ಕರ್ತನಾದ ಯೇಸು ಕ್ರಿಸ್ತನು ಈ ಭೂಮಿಗೆ ಹಿಂತಿರುಗಿ ಬಂದಾಗ ತನ್ನ ಸೇವಕರಿಗೆ ಪ್ರತಿಫಲವನ್ನು ಕೊಡುತ್ತಾನೆ – 22:12; ಮತ್ತಾಯ 16:27; 25:19-21; ಲೂಕ 19:15-17.

*"ನಾಮಕ್ಕೆ ಭಯಪಡುವುದು"*– ಇಬ್ರಿ 12:28; 2 ಕೊರಿಂಥ 7:1; ಆದಿ 20:11; ಕೀರ್ತನೆ 34:11-14; 111:10; ಜ್ಞಾನೋ 1:7.

*"ಲೋಕನಾಶಕರನ್ನು ನಾಶಮಾಡುವಿ"*– ಪಾಪಿಗಳಿಗೆ ಹೊಸ ಹೆಸರು. ಅವರು ದೇವರು ಮಾಡಿದ ಒಳ್ಳೆಯದನ್ನು ನಾಶಮಾಡುವವರಾಗಿದ್ದಾರೆ ಮತ್ತು ಒಂದು ಸಮಯ ಬರುತ್ತದೆ ದೇವರು ಅವರನ್ನು ನಾಶಮಾಡುತ್ತಾನೆ. 19

**11:19** *"ದೇವಾಲಯ"*– 7:15; 16:1.

*"ಮಂಜೂಷ"*– ವಿಮೋ 25:10-22; ಇಬ್ರಿ 9:4. ಈ ಭೂಮಿಯ ಮೇಲಿದ್ದ ಮಂಜೂಷವು ಪರಲೋಕದಲ್ಲಿರುವ ನಿಜವಾದ ಮಂಜೂಷದ ಪ್ರತಿಯಾಗಿದೆ (ಇಬ್ರಿ 8:1-2,5). "ಒಡಂಬಡಿಕೆಯ" ಮಂಜೂಷವು ಸಿನಾಯಿ ಬೆಟ್ಟದಲ್ಲಿ ದೇವರು ಇಸ್ರಾಯೇಲ್ಯರೊಂದಿಗೆ ಮಾಡಿದ ಒಡಂಬಡಿಕೆಯನ್ನು ಸೂಚಿಸುತ್ತದೆ (ವಿಮೋ 25:15; ಧರ್ಮೋ 10:1-5). ಇಲ್ಲಿ

ಹೇಳಲ್ಪಟ್ಟಿರುವ ಪರಲೋಕದಲ್ಲಿರುವ ಮಂಜೂಷವು ಇಸ್ರಾಯೇಲ್ಯರ ವಿಷಯವಾಗಿಯೂ ಮತ್ತು ದೇವರು ತನ್ನ ಜನರಿಗೆ ನಂಬಿಗಸ್ತನಾಗಿರುವುದನ್ನು ನಾವು ಯೋಚಿಸುವಂತೆ ಮಾಡುತ್ತದೆ. ಮುಂದಿನ ಅಧ್ಯಾಯದಲ್ಲಿ ಆತನು ಈ ಯುಗದ ಅಂತ್ಯದಲ್ಲಿ ಅವರಿಗೆ ತನ್ನ ನಂಬಿಗಸ್ತಿಕೆಯನ್ನು ಪ್ರಕಟಿಸುತ್ತಾನೆ.

*"ಮಿಂಚುಗಳೂ... ಆನೆಕಲ್ಲಿನ ಮಳೆಯೂ"*– 4:5; 8:5; 16:18.

# 12 1-5

**12:1-5** ಅಧ್ಯಾಯ 15,16 ರಲ್ಲಿ ಪ್ರಾರಂಭವಾಗುವ ಏಳು ರೌದ್ರದ ಪಾತ್ರೆಗಳ ಮುಂಚಿತವಾಗಿ ವಿವರಣೆಯಲ್ಲಿ ಒಂದು ವಿರಾಮದ ಮೂಲಕ ಇದು ಪ್ರಾರಂಭವಾಗುತ್ತದೆ. 7ನೇ ತುತೂರಿಯ ಸಮಯದಲ್ಲಿಯೇ ಈ ಯುಗದ ಅಂತ್ಯವಾಗುತ್ತದೆ, ಆದರೆ 12-14 ಅಧ್ಯಾಯಗಳು 7ನೇ ತುತೂರಿಯು ಊದಲ್ಪಡುವ ಮುಂಚೆ ನಡೆಯುವ ಘಟನೆಗಳನ್ನು ಹಿಂತಿರುಗಿ ನೋಡುತ್ತದೆ ಎಂದು ಸ್ಪಷ್ಟವಾಗುತ್ತದೆ ಮತ್ತು ಆ ದಿನಗಳ ವಿಷಯವಾಗಿ ಹೆಚ್ಚಿನ ಮಾಹಿತಿಗಳನ್ನು ಕೊಡುತ್ತದೆ. 1

**12:1** *"ಹೆಂಗಸು"*– ಈ ಪುಸ್ತಕದಲ್ಲಿರುವ ಅನೇಕ ಚಿನ್ಹೆಗಳಿಗೆ ಅನೇಕ ಅರ್ಥಗಳನ್ನು ವ್ಯಾಖ್ಯಾನಿಸಿದಂತೆ ಇದಕ್ಕೂ ಅನೇಕ ಅರ್ಥಗಳಿವೆ. ಆಕೆಯ ಬಗ್ಗೆ ಕೊಟ್ಟಿರುವ ವಿಷಯಗಳನ್ನು ನೋಡೋಣ. 11:19 ರಲ್ಲಿ ಒಡಂಬಡಿಕೆಯ ಮುಂಜೂಷವನ್ನು ಉಲ್ಲೇಖಿಸಿದ ತಕ್ಷಣ ಈಕೆಯನ್ನು ಕಾಣುತ್ತೇವೆ. ಆಕೆಯು ಒಂದು "ಚಿನ್ಹೆ" – ಇದು ನಮಗೆ ತಿಳಿಸುವದೇನಂರೆ ಆಕೆಯು ನಿಜವಾದ ವ್ಯಯಕ್ತಿಕ ಹೆಂಗಸಲ್ಲ ಆದರೆ ಬೇರೆ ಯಾವುದೋ ಒಂದರ ಪ್ರತಿನಿಧಿ ಎಂದು ತಿಳಿಯುತ್ತದೆ. ಆಕೆಯನ್ನು ವಿವರಿಸುವಲ್ಲಿ ಉಪಯೋಗಿಸಿರುವ ಇತರ ಚಿನ್ಹೆಗಳನ್ನು ನೋಡುವಾಗ ಆಕೆಯ ವಿಷಯವಾಗಿ ಮಾಡಿರುವ ವ್ಯಾಖ್ಯಾಯನವು ದೃಢಪಟ್ಟಿದೆ. ಆಕೆಯು "ಪರಲೋಕದಲ್ಲಿ" ಕಾಣಿಸಿಕೊಂಡಳು – "ಆಕಾಶದಲ್ಲಿ" ಎಂಬುದು ಸಹ ಸಾಧ್ಯವಾದ ಭಾಷಾಂತರವಾಗಿದೆ. ಇದು ಆಕೆಯ ಪರಲೋಕದ ಕರೆಯನ್ನು ತೋರಿಸುತ್ತದೆ – ಈ ಲೋಕದಲ್ಲಿರುವ ಜನಾಂಗಗಳಿಗಿತಲೂ ಆಕೆಯು ಉನ್ನತ ಸ್ಥಾನದಲ್ಲಿದ್ದಾಳೆ (ಧರ್ಮೋ 7:6 ಹೋಲಿಸಿರಿ). ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳ ಚಿನ್ಹೆಗಳು ಆಕೆಗೆ ಸಂಬಂಧಿಸಿದೆ (ಆದಿ 37:9-10 ಹೋಲಿಸಿರಿ). ಆಕೆಯು ಕಿರೀಟವನ್ನು ಧರಿಸಿದ್ದಾಳೆ, ಅದು ಆಳ್ವಿಕೆ ನಡೆಸಲು ಇರುವ ಅಧಿಕಾರವನ್ನು ಸೂಚಿಸುತ್ತದೆ (ಮತ್ತಾಯ 19:28; ಅಪೊ 1:6-7; ಯೆಶಾಯ

2:1-5 ಹೋಲಿಸಿರಿ). ಈ ಲೋಕವನ್ನು ಆಳುವ ಮಗುವಿಗೆ ಆಕೆಯು ಜನ್ಮ ನೀಡಿದಳು (ವ. 5 ಹೋಲಿಸಿರಿ 19:15,16). ಈ ಯುಗದ ಅಂತ್ಯದಲ್ಲಿ ಆಕೆಯು ಮಹಾ ಹಿಂಸೆಯನ್ನು ಎದುರಿಸುತ್ತಾಳೆ (ವ. 6,13-15. ಯೆರೆ 30:7-9; ದಾನಿ 12:1 ಹೋಲಿಸಿರಿ). ಅವಳಿಗೆ ಆಳುವ ತನ್ನ ಮಗನಲ್ಲದೆ ಆಕೆಯು ಸಂತತಿಯನ್ನು ಸಹ ಹೊಂದಿದ್ದಾಳೆ (ವ.17). ಈ ಎಲ್ಲಾ ಕಾರಣಗಳಿಂದಾಗಿ ಈ ಹೆಂಗಸು ಇಸ್ರಾಯೇಲ್ ಜನರನ್ನು ಪ್ರತಿಸಿಧಿಸುತ್ತಾಳೆಂದು ಈ ಟಿಪ್ಪಣಿಯ ಲೇಖಕನು ನಂಬುತ್ತಾನೆ. ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ ಜನಾಂಗವನ್ನುಯೆಹೋವ ದೇವರ "ಹೆಂಡತಿ" ಎಂದು ಕರೆಯಲಾಗಿದೆ. ಯೆಶಾಯ 54:5; ಯೆರೆ 3:14; 31:32 ನೋಡಿರಿ. ಇದರಿಂದಾಗಿ ಆಕೆಯು ಆಕಾಶದಲ್ಲಿ ತೇಜೋಮಯವಾಗಿ ಕಾಣಿಸಿಕೊಂಡಳು. 2

**12:2** ಈ ವಚನವು ಎರಡು ಸಾವಿರ ವರ್ಷಗಳ ಹಿಂದೆ ಕ್ರಿಸ್ತನ ಜನನವನ್ನು ಹಿಂತಿರುಗಿ ನೋಡುವುದು ಸ್ಪಷ್ಟವಾಗಿದೆ. 3

**12:3** *"ಘಟಸರ್ಪ"*– ಸೈತಾನನು (ವ.9). ಈ ಪುಸ್ತಕದಲ್ಲಿ ವಿವರಿಸಿರುವ ಚಿನ್ಹೆಗಳಲ್ಲಿ ಒಂದು (9:5 ಟಿಪ್ಪಣಿ).

*"ಏಳು ತಲೆಗಳೂ ಹತ್ತು ಕೊಂಬುಗಳೂ"*– 13:1 ಹೋಲಿಸಿರಿ. ಏಳು ತಲೆಗಳು ದುಷ್ಟ ಬುದ್ದಿವಂತಿಕೆಯ ಸಂಪೂರ್ಣತೆ ಮತ್ತು ನಾಯಕತ್ವದ ಬಗ್ಗೆ ಮಾತಾಡಬಹುದು; ಹತ್ತು ಕೊಂಬುಗಳು ಲೌಕಿಕ ಶಕ್ತಿಯ ಪರಿಪೂರ್ಣತೆಯನ್ನು ತೋರಿಸುತ್ತದೆ (17:12).

*"ಏಳು ಮಕುಟಗಳು"*– ಅಂಧಕಾರದ ಮತ್ತು ದುಷ್ಟ ಕ್ಷೇತ್ರವನ್ನು ಆಳಲು ಸಂಪೂರ್ಣ ಅಧಿಕಾರ (ಎಫೆ 6:12). "ಏಳು" ಎಂಬುದರ ವಿಷಯವಾಗಿ 1:4 ರಲ್ಲಿನ ಟಿಪ್ಪಣಿ. 4

**12:4** ಇದು ಸೈತಾನನ ಮತ್ತು ಅವನೊಂದಿಗೆ ದೇವರ ಅನೇಕ ದೇವದೂತರ ಮೂಲ ಪತನವನ್ನು ಹಿಂತಿರುಗಿ ನೋಡುವಂತಿದೆ

*"ನಕ್ಷತ್ರಗಳು"*– 9:1 ಹೋಲಿಸಿರಿ. ಸೈತಾನನನಿಗೂ ದೂತರಿದ್ದಾರೆ – ವ.7. ಅಥವಾ ಬಹುಶಃ ಸೈತಾನನು ತುಂಬಾ ದೊಡ್ಡವನು ಮತ್ತು ಶಕ್ತಿವಂತನು ಅವನು ಆಕಾಶದಲ್ಲಿರುವ ಮೂರನೇ ಒಂದು ಭಾಗ ನಕ್ಷತ್ರಗಳನ್ನು ಅವುಗಳ ನೈಸರ್ಗಿಕ ಸ್ಥಾನಗಳಿಂದ ಎಳೆದು ಹಾಕಬಲ್ಲನು ಎಂದು ಸೂಚಿಸುವ ಒಂದು ಚಿತ್ರಣ ವಿರಬಹದು. ಆದರೆ ಮೊದಲ ವ್ಯಾಖ್ಯಾಯನವು ಉತ್ತಮವಾದದ್ದೆನಿಸುತ್ತದೆ.

*“ಆಕೆಯ ಮಗುವನ್ನು ನುಂಗಿಬಿಡಲು”*– ಸೈತಾನನು ಸಾಧ್ಯವಾದರೆ ಕ್ರಿಸ್ತನನ್ನು ಹುಟ್ಟಿದ ಕೂಡಲೆ ನಾಶಮಾಡಬಕೆಂದುಕೊಂಡಿದ್ದನು. ನಿಶ್ಚಯವಾಗಿ ಅರಸನಾದ ಹೆರೋದನ ಪ್ರಯತ್ನದಲ್ಲಿ ಅವನೊಂದಿಗಿದ್ದನು (ಮತ್ತಾಯ 2:13-16). **5**

**12:5** ಯೇಸು ಇಸ್ರಾಯೇಲ್ಯರ ಯೂದ ಕುಲದಲ್ಲಿ ಹುಟ್ಟಿದನು (5:5; ರೋಮಾ 1:3; ಗಲಾ 4:4).

*“ಕಬ್ಬಿಣದ ಕೋಲು”*– 19:15; ಕೀರ್ತನೆ 2:9.

*“ಆತನ ಸಿಂಹಾಸನದ…ಎತ್ತಲ್ಪಟ್ಟಿತು”*– 3:21; 5:6; 7:17; ಅಪೊ 1:9; 2:32-36; ಇಬ್ರಿ 1:3-4. ಇದು ಬೇರೆ ಯಾವುದೋ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಾಗಿರಬಹುದೆಯೋ? **6**

**12:6** *“ಸಾವಿರದ ಇನ್ನೂರ ಅರವತ್ತು ದಿನಗಳು”*– ವ.14; 11:3; 13:5 (11:2 ರ ಟಿಪ್ಪಣಿ). ಈ ಸಮಯದ ಅವಧಿಯು ಅಕ್ಷರಶಃ ವಾಗಿದೆ ಎಂದು ಯೋಚಿಸದಿರಲು ಯಾವ ಒಳ್ಳೆಯ ಕಾರಣವಿಲ್ಲ. ಮತ್ತು ಇದು ಯುಗದ ಅಂತ್ಯದಲ್ಲಿ ಸೈತಾನನ್ನು ಪರಲೋಕದಿಂದ ದೊಬ್ಬಲ್ಪಡುವ ಸಮಯವನ್ನು ಸೂಚಿಸುತ್ತಿರಬಹುದೆಂದು ತೋರಿಸುತ್ತದೆ (ವ.9-13). ಈ ಅವಧಿ 1,260 ದಿನಗಳು ಕ್ರಿಸ್ತನು ಪರಲೋಕಕ್ಕೆ ಆರೋಹಣವಾದ ಮೇಲೆ ತಕ್ಷಣ ನಡೆಯಲಿಲ್ಲ. 1-5 ರಲ್ಲಿ ಆ ಹೆಂಗಸಿನ ವಿಷಯವಾಗಿ ಹೇಳಿದ ಕಾರ್ಯಗಳು ನಾವು ಆಕೆಯನ್ನು ಗುರುತಿಸಲು ಹೇಳಲ್ಪಟ್ಟಿವೆ. ಈ ಆಧಾರಗಳನ್ನು ಕೊಟ್ಟನಂತರ, ಆಕೆಯ ಚರಿತ್ರೆಯ ಬಗ್ಗೆ ಇನ್ನು ಹೇಳುವುದು ಅವಶ್ಯವಿಲ್ಲ, ಆದ್ದರಿಂದ ಆ ಹೆಂಗಸಿನ ಮುಂದಿನ ಮಹಾ ಘಟನೆಯ ಭವಿಷ್ಯವನ್ನು ನಮಗೆ ಕೊಡಲ್ಪಟ್ಟಿದೆ. ಮೊದಲನೆ ಶತಮಾನದಿಂದ ಕಡೆಯವರೆಗೂ ಮೌನವಾಗಿ ಹಾದು ಹೋಯಿತು ಯಾಕಂದರೆ ಈ ಪುಸ್ತಕದ ಉದ್ದೇಶಕ್ಕೆ ಇದು ಯಾವುದೇ ನೇರ ಪ್ರಭಾವ ಬೀರುವುದಿಲ್ಲ. ಪ್ರಕಟನೆಯ ಪುಸ್ತಕವು ಹಿಂದೆ ನಡೆದ ಚರಿತ್ರೆಯ ಪುಸ್ತಕವಲ್ಲ ಆದರೆ ಭವಿಷ್ಯದ ಪ್ರವಾದನೆಯಾಗಿದೆ. **7**

**12:7** *“ಪರಲೋಕದಲ್ಲಿ ಯುದ್ಧ”*– ಸೈತಾನನು ಮತ್ತು ದುಷ್ಟ ಆತ್ಮಗಳ ಜೀವಿಗಳು ಅವನೊಂದಿಗಿರುವವರು ಈಗ “ಪರಲೋಕದ ಕ್ಷೇತ್ರ” ದಲ್ಲಿದ್ದಾರೆ – ಎಫೆ 6:12 (ಎಫೆ 1:3 ರ ಟಿಪ್ಪಣಿ). ಇಲ್ಲಿ ವ್ಯಕ್ತಪಡಿಸಿರುವುದು “ಪರಲೋಕಕ್ಕೆ” ಸಮನಾಗಿದೆ. ಸೈತಾನನಿಗೆ ಪರಲೋಕಕ್ಕೆ ಹೋಗಲು ಪ್ರವೇಶವಿದೆ, ದೇವರ ಪ್ರಸನ್ನತೆಗೆ – ವ. 10; ಯೋಬ 1:6-7

(ಸೈತಾನನ ವಿಷಯದ ಟಿಪ್ಪಣಿ 1 ಪೂರ್ವ. 21:1). ಅವನನ್ನು ಹೊರ ಹಾಕಲು ನಡೆಯುವ ಯುದ್ಧವು ಈ ಯುಗದ ಅಂತ್ಯದಲ್ಲಿ ನಡೆಯುವುದೆಂದು ತೋರುತ್ತದೆ. ಸೈತಾನನ್ನು ಹೊರ ಹಾಕಿದ ನಂತರ ದೇವರ ರಾಜ್ಯವು ಬರುತ್ತದೆಂದು ಹೇಳಲ್ಪಟ್ಟಿದೆ (ವ.10) ಮತ್ತು "ಅವನಿಗೆ ಬಹಳ ಕಡಿಮೆ ಸಮಯ ಮಾತ್ರ ಉಳಿದಿದೆ" –ಎಂದು ಅವನಿಗೆ ತಿಳಿದಿದೆ (ವ.12). ಮತ್ತು ಅವನು ಆ ಹೆಂಗಸನ್ನು 1260 ದಿನಗಳು ಮಾತ್ರ ಹಿಂಸಿಸಬಹುದೆಂದು ನಾವು ಗಮನಿಸಬೇಕು.

*"ಮೀಕಾಯೇಲನು"*– ದಾನಿ 10:13,21; 12:1; ಯೂದ 9 ನೋಡಿರಿ. ಈ ಮಹಾ ದೇವದೂತನು ಇಸ್ರಾಯೇಲ್ ದೇಶದ ರಕ್ಷಕನಾಗಿದ್ದಾನೆ. **8**

**12:8** *"ಸೋತು ಹೋದರು"*– ಹಾಗಾದರೆ ಬಹಳ ಹಿಂದೆಯೇ ಸೈತಾನನನ್ನು ಪರಲೋಕದಿಂದ (ಅಥವಾ ಪರಲೋಕ ಕ್ಷೇತ್ರ) ಹೊರ ಹಾಕಬಹುದಾಗಿತ್ತು. ಹೌದು – ಇದನ್ನು ಮಾಡಲು ದೇವರ ಜ್ಞಾನವುಳ್ಳ ಉದ್ದೇಶದಲ್ಲಿ ಇದ್ದಿದ್ದರೆ ಮಾಡಬಹುದಿತ್ತು.

*"ಪರಲೋಕದೊಳಗೆ ಅವರಿಗೆ ಸ್ಥಾನವು ತಪ್ಪಿಹೋಯಿತು"*– ಭವಿಷ್ಯ ಕಾಲಕ್ಕೆ ದೇವರ ಉದ್ದೇಶವು ಪರಿಪೂರ್ಣತೆಗೆ ಬರುತ್ತದೆ ಮತ್ತು ಸೈತಾನನಿಗೆ ಅದರಲ್ಲಿ ಯಾವ ಪಾಲೂ ಇರುವುದಿಲ್ಲ. **9**

**12:9** *"ಸರ್ಪ"*– ಆದಿ 3:1-5; ಯೆಶಾಯ 17:1; 2 ಕೊರಿಂಥ 11:3.

*"ಪಿಶಾಚಿ"*– ಮತ್ತಾಯ 4:1-5; ಯೋಹಾನ 8:44.

*"ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ"*– ಸೈತಾನನು ಮಹಾ ವಂಚಕನಾಗಿದ್ದಾನೆ (20:3,8,10). ಲೋಕವನ್ನು ವಂಚಿಸುವ ಇನ್ನೆರಡು ಶಕ್ತಿಗಳಿಗಾಗಿ ಯೆರೆ 17:9; ಇಬ್ರಿ 3:13 ನೋಡಿರಿ. ನಾವು ಇದೆಲ್ಲವನ್ನು ನೋಡುವಾಗ ವಂಚನೆಯ ಸಾಧ್ಯತೆಯು ಮಿತಿಯಿಲ್ಲದೆ ಬಹಳ ಹೆಚ್ಚಾಗಿರುತ್ತದೆ ಎಂದು ಕಾಣುತ್ತದೆ (ಆದರೆ ಮತ್ತಾಯ 24:24 ಹೋಲಿಸಿರಿ). **10**

**12:10** *"ಈಗ"*–ಆ ನಿಖರ ಕ್ಷಣವನ್ನು ಎಂಬ ಅರ್ಥವಲ್ಲ, ಯಾಕಂದರೆ ಇನ್ನು ಸ್ವಲ್ಪ ಸಮಯ ಭೂಮಿಯ ಮೇಲೆ ತನ್ನ ಕೆಲಸವನ್ನು ಮಾಡಲು ಸೈತಾನನಿಗೆ ಅನುಮತಿ ಇರುತ್ತದೆ (ವ. 13-17). ಇಲ್ಲಿ "ಈಗ" –ಎಂದರೆ ದೇವರ ರಾಜ್ಯವು ಬಹಳ ಸಮೀಪವಾಗಿದೆ, ಬಾಗಿಲ ಬಳಿಯಲ್ಲಿಯೇ ಇದೆ ಎಂದರ್ಥ (11:15).

*“ಸಹೋದದರ ಮೇಲೆ ದೂರು ಹೇಳಿದ ದೂರುಗಾರನು”*– ಇದಕ್ಕೆ ಉದಾಹರಣೆ ಯೋಬ 1:9-11; 2:3-5; ಜೆಕರ್ಯ 3:1. ಯುಗದ ಉದ್ದಕ್ಕೂ ಇದು ಸೈತಾನನ ಒಂದು ಕೆಲಸವಾಗಿದೆ. “ಸೈತಾನ” ಎಂಬ ಪದಕ್ಕೆ ವಿರೋಧಿಸುವವನು ಎಂದರ್ಥ, “ಪಿಶಾಚಿ” ಎಂದರೆ ದೂರುವವನು.

*“ನಮ್ಮ ದೇವರ ಮುಂದೆ”*– ಪರಲೋಕದಲ್ಲಿ.

*“ಹಗಲಿರುಳು”*– ವಿಶ್ವಾಸಿಗಳ ಪಾಪಗಳನ್ನು ಮತ್ತು ತಪ್ಪುಗಳನ್ನು ತೋರಿಸುವುದರಲ್ಲಿ ಸೈತಾನನು ಆಸಕ್ತಿಯುಳ್ಳವನಾಗಿದ್ದಾನೆ. ದುರದೃಷ್ಟವಶಾತ್ ವಿಶ್ವಾಸಿಗಳಿಗಾಗಿ ತಂದೆಯ ಮುಂದೆ ಮಾತಾಡಲು ಒಬ್ಬ ವಕೀಲನಿದ್ದಾನೆ (1 ಯೋಹಾನ 2:1). 11

**12:11** *“ಜಯಿಸಿದರು”*– 2:7. ಸೈತಾನನ ಮೇಲೆ ಹೇಗೆ ಜಯ ಹೊಂದಬೇಕೆಂದು ಪರಲೋಕವು ನಮಗೆ ಹೇಳುತ್ತದೆ.

*“ರಕ್ತ”*– 1:5; 5:9; 7:14; ಮತ್ತಾಯ 26:28; ಇಬ್ರಿ 9:14; 1 ಯೋಹಾನ 1:7-9.

*“ಅನುಭವ ಸಾಕ್ಷಿ”*– ಮತ್ತಾಯ 10:32; ರೋಮಾ 10:9-10. ಕ್ರಿಸ್ತನನ್ನು ಅರಿಕೆ ಮಾಡದ ಕ್ರೈಸ್ತನು ಸೋಲಿಸಲ್ಪಟ್ಟವನಾಗಿದ್ದಾನೆ.

*“ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು”*– ಮತ್ತಾಯ 10:37-39; ಲೂಕ 14:26-27; ಅಪೊ 20:24. ಸೈತಾನನ್ನು ಜಯಿಸಿದವರೇ ನಿಜವಾದ ಶಿಷ್ಯರಾಗಿದ್ದಾರೆ. 12

**12:12** *“ಹರ್ಷಗೊಳ್ಳಿರಿ”*– ಸೈತಾನನು ಜಜ್ಜಲ್ಪಟ್ಟಿರುವುದರಿಂದ.

*“ದುರ್ಗತಿ”*– ಇದು ದುಃಖ, ನೋವು ಮತ್ತು ಕಷ್ಟವನ್ನು ಸೂಚಿಸುತ್ತದೆ.

*“ಮಹಾ ರೌದ್ರವುಳ್ಳವನಾಗಿ”*– ಇದು ಮಹಾ ಹಿಂಸೆಗೆ ಕಾರಣವಾಗುತ್ತದೆ (7:4; ಮತ್ತಾಯ 24:21). ಬರುವಂತ ಸಮಯದಲ್ಲಿ ಮನುಷ್ಯರ ಮೇಲೆ ಸುರಿಯುವುದು ದೇವರ ಕೋಪವಲ್ಲ, ಆದರೆ ಸೈತಾನನ ಮತ್ತು ದೇವ ಜನರ ವಿರುದ್ಧವಾಗಿರುವ ದುಷ್ಟ ಮನುಷ್ಯರ ಕೋಪವಾಗಿದೆ.

*“ಕಾಲವು ಸ್ವಲ್ಪವೆಂದು ತಿಳಿದು”*– ವ.6,14. 13

**12:13** ಸೈತಾನನು ಇಸ್ರಾಯೇಲ್ ದೇಶವನ್ನು ನಾಶಮಾಡಲು ಪ್ರಯತ್ನಿಸುತ್ತಾನೆ. 14

**12:14** ಇಲ್ಲಿ “ಗರುಡ ಪಕ್ಷಿಯ ಎರಡು ರೆಕ್ಕೆ” ಮತ್ತು “ಅರಣ್ಯದಲ್ಲಿರುವ ಸ್ಥಳ”

ಎನ್ನುವುದು ಯಾವ ಅರ್ಥವನ್ನು ಕೊಡುತ್ತದೆಂದು ನಮಗೆ ಗೊತ್ತಿಲ್ಲ. ಆದರೆ ದೇವರು ಹೇಗೋ, ಎಲ್ಲಿಯೋ ಇಸ್ರಾಯೇಲನ್ನು ತಪ್ಪಿಸುತ್ತಾನೆ ಮತ್ತು ಆಕೆಯನ್ನು ಕಾಪಾಡುತ್ತಾನೆಂದು ನಮಗೆ ತಿಳಿದದೆ (ವ.6; ಯೆರೆ 30:7).

*"ಒಂದು ಕಾಲ, ಎರಡು ಕಾಲ, ಅರ್ಧಕಾಲ"*– ವ. 6, 11:2-3. ದಾನಿ 7:25; 12:7 ಸಹ ನೋಡಿರಿ. **15-16**

**12:15-16** ಇಲ್ಲಿರುವ ವಿವರಣೆಯು ಅರ್ಥವಾಗುವುದಕ್ಕಾಗಿ ನಾವು ಇದರ ನೆರವೇರಿಕೆಗಾಗಿ ಕಾಯುತ್ತೇವೆ. ದೇವರ ಜನರನ್ನು ನಾಶಮಾಡಲು ಸೈತಾನನು ತನ್ನ ಎಲ್ಲಾ ಶಕ್ತಿಯನ್ನು ಉಪಯೋಗಿಸುತ್ತಾನೆ, ಆದರೆ ಅವನಿಂದ ಅದು ಅಸಾಧ್ಯವಾಗುತ್ತದೆ. **17-18**

**12:17-18** *"ಆಕೆಯ ಸಂತಾನದವರಲ್ಲಿ ಉಳಿದವರ ಮೇಲೆ"*– ಇವರು ಆಕೆಯಿಂದ ವಿಭಿನ್ನರಾದವರು ಆದ್ದರಿಂದ ಇದು ಬೇರೆ ಜನರ ಗುಂಪನ್ನು ಸೂಚಿಸುತ್ತದೆ. ಆ "ಹೆಂಗಸು" ಇಸ್ರಾಯೇಲ್ಯರಾದರೆ ಈ ಗುಂಪಿನವರು ಯಾರು? ಐಕ್ಯರಾದ ಕ್ರೈಸ್ತರು ಇಸ್ರಾಯೇಲಿನಿಂದ ಚಿಗುರೊಡದವರೆಂದು ನಾವು ಹೇಳಬಹುದೋ? ಈಗ ವಿಶ್ವಾಸಿಗಳ ಬೇರು ಹಳೆಯ ಒಡಂಬಡಿಕೆಯಲ್ಲಿದೆಯಲ್ಲವೇ? ಇಸ್ರಾಯೇಲ್ಯರಲ್ಲಿರುವ ದೇವಜನರು ಹೊಸ ಒಡಂಬಡಿಕೆಯ ಸಭೆಗಳಿಗೆ ಜನ್ಮ ಕೊಟ್ಟರಲ್ಲವೇ? "ಆಕೆಯ ಉಳಿದ ಸಂತತಿಯು" –ಈ ಯುಗದ ಅಂತ್ಯದಲ್ಲಿ ಜೀವಿಸುವ ಕ್ರೈಸ್ತರಲ್ಲ, ಅವರು ಯಾರಗಿರಬಹುದೆಂದು ಹೇಳುವುದು ನಿಜವಾಗಿಯೂ ಕಷ್ಟಕರವಾಗಿದೆ.

*"ಯೇಸುವಿನ ವಿಷಯವಾದ ಸಾಕ್ಷಿ"*–ವಿಶ್ವಾಸವುಳ್ಳ ಕಾರ್ಯಶೀಲರಾದ ಕ್ರೈಸ್ತರು "ಉಳಿದ ಸಂತತಿಯವರು" ಎಂದು ಹೇಳಲು ಇದು ಸಹ ಒಂದು ಬಲವಾದ ಸಾಕ್ಷಿಯಾಗಿದೆ. ಈ ಯುಗದ ಅಂತ್ಯದಲ್ಲಿ ಅವರನ್ನು ಸಹ ನಾಶಮಾಡಲು ಸೈತ್ತಾನನು ಪ್ರಯತ್ನಿಸುತ್ತಾನೆ.

# 13 1

**13:1** *"ಮೃಗ"*– 11:7 – ಈ ಪುಸ್ತಕದಲ್ಲಿ ಈ ಹೆಸರಿನಿಂದ ಸುಮಾರು 40 ಸಾರಿ ಕರೆಯಲ್ಪಟ್ಟಿದೆ. ದಾನಿಯೇಲ ಪುಸ್ತಕದಲ್ಲಿ "ಮೃಗಗಳು" ವಾಸ್ತವವಾಗಿ ರಾಜ್ಯಗಳನ್ನು ಮತ್ತು ಅವುಗಳನ್ನು ಆಳುವವರನ್ನು ಸೂಚಿಸುವ ಚಿನ್ಹೆಗಳಾಗಿವೆ (ದಾನಿಯೇಲ ಅಧ್ಯಾಯ 7 ಮತ್ತು 8). ನಿಸ್ಸಂದೇಹವಾಗಿ ಇಲ್ಲಿಯೂ ಸಹ "ಮೃಗಗಳು" –ಇದೇ ಅರ್ಥವನ್ನು

ಹೊಂದಿದೆ. ಕೆಲವು ವಿಷಯಗಳಲ್ಲಿ ಈ ಮೃಗವು 12:3 ರಲ್ಲಿನ ಕೆಂಪು ಘಟಸರ್ಪವನ್ನು ಹೋಲುವುದನ್ನು ಗಮನಿಸಿ. ಆದರೆ ಘಟಸರ್ಪದ ತಲೆಯ ಮೇಲೆ ಏಳು ಕೊಂಬುಗಳಿದ್ದವು. ಅವನ ಕ್ಷೇತ್ರದಲ್ಲಿ ಈ ಘಟಸರ್ಪಕ್ಕೆ ಸಂಪೂರ್ಣ ಅಧಿಕಾರವಿರುತ್ತದೆ. ಈ ಮೃಗದ ಅಧಿಕಾರವು ಹತ್ತು ರಾಜರು (17:12-13) ಮತ್ತು ಘಟಸರ್ಪದಿಂದ ಪಡೆಯಲಾಗಿದೆ.

*"ಹತ್ತು ಕೊಂಬುಗಳು"*– ದಾನಿ 7:7 ಸಹ ನೋಡಿರಿ.

*"ದೇವದೂಷಣನಾಮಗಳೂ"*– ವ. 5. 2 ಥೆಸ 2:4; 1 ಯೋಹಾನ 2:18,22 ಹೋಲಿಸಿರಿ. ದೇವದೂಷಣೆಯ ವಿಷಯದ ಟಿಪ್ಪಣಿ ಮತ್ತಾಯ 9:3. **2**

**13:2** *"ಚಿರತೆ...ಸಿಂಹದ ಬಾಯಿಯಂತೆಯೂ"*– ಈ ಮೃಗವು ದಾನಿ 7:2-8 ರಲ್ಲಿ ನೋಡುವ ನಾಲ್ಕು ಮೃಗಗಳ ಗುಣಲಕ್ಷಣವನ್ನು ಒಟ್ಟಾಗಿ ಹೊಂದಿದೆ, ಆದರೆ ನಾಲ್ಕನೆಯ ಮೃಗದೊಂದಿಗೆ ಗುರುತಿಸಿಕೊಳ್ಳುತ್ತದೆ. ಈ ಮೃಗವು ಒಂದು ರೀತಿಯಲ್ಲಿ ಪುನರುಜ್ಜೀವನಗೊಂಡ ರೋಮನ್ನರ ಸಾಮ್ರಾಜ್ಯವೆಂದು ಸ್ಪಷ್ಟವಾಗಿ ತೋರುತ್ತದೆ. ದಾನಿ 2:32-45; 7:7 ಟಿಪ್ಪಣಿಯನ್ನು ನೋಡಿರಿ. ಇದು ಲೋಕದಲ್ಲಿ ಅನ್ಯಜನರ ಕಡೇಯ ಶಕ್ತಿಯಾಗಿರುತ್ತದೆ. ಮತ್ತು ಅದು ಭಯಂಕರವಾದ ದುಷ್ಟ ಶಕ್ತಿಯಾಗಿರುತ್ತದೆ ಯಾಕಂದರೆ ಘಟಸರ್ಪವು ಅದರ ಹಿಂದಿರುತ್ತದೆ. ಯಾವ ರೀತಿಯಲ್ಲಿ ಸೈತಾನನು ಕಾಣದ ಅಧೋಲೋಕದಲ್ಲಿದ್ದುಕೊಂಡು ದೇವರ ವಿರುದ್ಧವಾಗಿದ್ದಾನೋ, ಹಾಗೆಯೇ ಈ ಮೃಗವು ಭೂಮಿಯ ಮೇಲೆ ಬಹಿರಂಗವಾಗಿ ಕಾಣುತ್ತದೆ. 2 ಥೆಸ 2:9-10. **3**

**13:3** 17:8-11 ನೋಡಿರಿ. ದಾನಿಯೇಲನ ಮೃಗಗಳ ದರ್ಶನದಲ್ಲಿ "ತಲೆಗಳು" ರಾಜ್ಯಗಳ ಮತ್ತು ಅದರ ಆಳುವವರ ಭಾಗಗಳನ್ನು ಸೂಚಿಸುತ್ತದೆ. ಇಲ್ಲಿ "ಮರಣಕರವಾದ ಗಾಯ" ಮುಂದೆ ಈ ಲೋಕದಲ್ಲಿ ಬರುವ ಸಾಮ್ರಾಜ್ಯದ ಒಂದು ಭಾಗ ಅಥವಾ ಅದನ್ನು ಆಳುವವರು ನಾಶವಾಗುತ್ತಾರೆ ಅಥವಾ ಸತ್ತು ಹೋಗುತ್ತಾರೆ. 11:7 ನೋಡಿರಿ – ಆ "ಮೃಗವು" "ಕೂಪದಿಂದ" ಮೇಲೆ ಬರುತ್ತದೆ. ಕೂಪವು ಸತ್ತ ವ್ಯಕ್ತಿಗಳ ಲೋಕವಾಗಿದೆ. ಕೆಲವು ಸಾರಿ "ಮೃಗ" ಎಂಬುದು ಸಾಮ್ರಾಜ್ಯವನ್ನು ಆಳುವ ಒಬ್ಬ ಮನುಷ್ಯನನ್ನು ಸೂಚಿಸುತ್ತದೆಂದು ಸ್ಪಷ್ಟವಾಗಿ ತೋರುತ್ತದೆ ಅವನನ್ನು "ಮೃಗ" ಎಂಬುದಾಗಿಯೂ ಕರೆಯಲಾಗುತ್ತದೆ (ವ.18; 17:8-13; 19:19-20; 20:10 ನೋಡಿರಿ). ಅವನು ಸಾಮ್ರಾಜ್ಯವನ್ನು ಪ್ರತಿನಿಧಿಸುತ್ತಾನೆ ಮತ್ತು ತನ್ನ ವ್ಯಕ್ತಿತ್ವದಲ್ಲಿ ಈ ಎಲ್ಲಾ "ಮೃಗಗಳ" ಗುಣಲಕ್ಷಣವನ್ನು ಹೊಂದಿರುತ್ತಾನೆ. 2

ಥೆಸ 2:3-4; 1 ಯೋಹಾನ 2:18,22 "ಪಾಪದ ಮನುಷ್ಯನು" ಮತ್ತು "ಕ್ರಿಸ್ತವಿರೋಧಿಯ" ಬಗ್ಗೆ ಮಾತಾಡುತ್ತದೆ. ಈ "ಮೃಗ" ಆ ವ್ಯಕ್ತಿ ಎಂದು ನಾವು ಸಂದೇಹ ಪಡಬಹುದೇ?

*"ವಾಸಿಯಾಯಿತು"*– ಸ್ಪಷ್ಟವಾಗಿ ಇದು ಒಂದು ದೊಡ್ಡ ಅದ್ಭುತವಾಗಿರುತ್ತದೆ "ಇಡೀ ಪ್ರಪಂಚವೇ" ಆಶ್ಚರ್ಯದಿಂದ ನೋಡುತ್ತದೆ. ಈ ಅದ್ಭುತವು ಒಬ್ಬ ಸತ್ತ ವ್ಯಕ್ತಿಯು ಪುನರುತ್ಥಾನ ಹೊಂದುವುದಾಗಿರುತ್ತದೆ. ಹಿಂದೆ ರೋಮನ್ ಸಾಮ್ರಾಜ್ಯವನ್ನು ಆಳಿದವರಲ್ಲಿ ಒಬ್ಬರಾಗಿರಲು ಸಾಧ್ಯವಿರಬಹುದು. 17:10-11 ನೋಡಿರಿ. **4**

**13:4** *"ಘಟಸರ್ಪನಿಗೆ ನಮಸ್ಕಾರ ಮಾಡುವವರಾದರು"*– ಈ ಯುಗದ ಅಂತ್ಯದಲ್ಲಿ ಜನರು ಸೈತಾನನ ಆರಾಧಕರಾಗುವರು. ಹೀಗೆ ಮಾಡಲು ಅವರಿಗಿರುವ ಒಂದು ಕಾರಣವೇನೆಂದರೆ ಸೈತಾನನು ಮತ್ತು ಆ ಮೃಗವು ದೇವರ ಮತ್ತು ದೇವಜನರ ಮೇಲೆ ಕಡೆಗೂ ಜಯ ಹೊಂದಿದರೆಂದು ಅಂದುಕೊಳ್ಳುವುದು. ಸೈತಾನನು ತನ್ನನ್ನು ಆರಾಧಿಸಬೇಕೆಂದು ಇಚ್ಛಿಸುತ್ತಾನೆ (ಮತ್ತಾಯ 4:8 ನೋಡಿರಿ), ಮತ್ತು ಅದನ್ನು ಕೆಲವು ಜನರಿಂದ ಹೊಂದಿಕೊಂಡಿದ್ದಾನೆ (9:20; ಯಾಜಕ 17:7; ಧರ್ಮೋ 32:17; ಕೀರ್ತನೆ 106:37; 1 ಕೊರಿಂಥ 10:20). ಅಂತಹ ಆರಾಧನೆಯು, ಈ ಯುಗದ ಅಂತ್ಯದಲ್ಲಿ ಹೆಚ್ಚು ಪ್ರಚಲಿತ ಮತ್ತು ಹೆಚ್ಚು ಮುಕ್ತವಾಗಿರುತ್ತದೆ.

*"ಘಟಸರ್ಪನು ಅಧಿಕಾರವನ್ನು ಕೊಟ್ಟನು"*– ಈ ಲೋಕದಲ್ಲಿರುವ ಎಲ್ಲಾ ರಾಜ್ಯಗಳನ್ನು ಕ್ರಿಸ್ತನಿಗೆ ಕೊಡಲು ಪ್ರಯತ್ನಿಸುವುದರ ಮೂಲಕ ಸೈತಾನನು ಕ್ರಿಸ್ತನನ್ನು ನಾಶಮಾಡಲು ಪ್ರಯತ್ನಿಸಿದನು. ಕ್ರಿಸ್ತನು ಅವನ ಕೊಡುಗೆಯನ್ನು ತಿರಸ್ಕರಿಸಿದನು. ಆದರೆ ಈ ಯುಗದ ಅಂತ್ಯದಲ್ಲಿ ಅದನ್ನು ಸ್ವೀಕರಿಸುವವನನ್ನು ಸೈತಾನನು ಕಂಡುಕೊಳ್ಳುತ್ತಾನೆ.

*"ಆ ಘಟಸರ್ಪನಿಗೆ ನಮಸ್ಕಾರ ಮಾಡುವವರಾದರು"*– ಈ ಯುಗದ ಅಂತ್ಯದಲ್ಲಿ ಮನುಷ್ಯರನ್ನು ಆರಾಧಿಸುವ ದೀರ್ಘಕಾಲದ ಪ್ರವೃತ್ತಿ ಅದರ ಪೂರ್ಣ ಬೆಳವಣಿಗೆಯನ್ನು ತಲುಪುತ್ತದೆ.

*"ಯುದ್ಧಮಾಡಲು ಯಾರು ಶಕ್ತರು"*– ಆ ಮೃಗಕ್ಕೆ ವಿಶ್ವವ್ಯಾಪಿ ಶಕ್ತಿ ಇರುತ್ತದೆ (ವ.7), ಮತ್ತು ಯಾವ ದೇಶವು ಅವನ ವಿರುದ್ಧವಾಗಿ ಯುದ್ಧಮಾಡಲಾರದು. **5**

**13:5** *"ಬಡಾಯಿ ಮಾತುಗಳನ್ನೂ ದೂಷಣೆಯ ಮಾತುಗಳನ್ನೂ"*– ವ. 1; ದಾನಿ 7:8; 11:36.

*“ನಲ್ವತ್ತೆರಡು ತಿಂಗಳುಗಳು”*– 11:2-3; 12:6,14; 17:12. ಅವನ ದೊಡ್ಡ ಹೆಗ್ಗಳಿಕೆಯ ಹೊರತಾಗಿಯೂ, ಇತಿಹಾಸದಲ್ಲಿ ಅನೇಕ ಸರ್ವಾಧಿಕಾರಿಗಳು ಕ್ರಿಸ್ತವಿರೋಧಿಗಿಂತಲೂ ಹೆಚ್ಚು ಕಾಲ ಆಳಿದರು. 6

**13:6** *“ದೇವದೂಷಣೆ”*– ಈ ವಚನಗಳಲ್ಲಿ ಇದನ್ನು ಮೂರು ಸಾರಿ ಉಲ್ಲೇಖಿಸಿರುವುದರಿಂದ ಇದು ಮೃಗದ ಗಮನಾರ್ಹವುಳ್ಳ ಗುಣಲಕ್ಷಣವೆಂದು ನಾವು ತೀರ್ಮಾನಿಸಬಹುದು. 7

**13:7** *“ದೇವಜನರು”*– ದಾನಿ 7:21,25. ಕರ್ತನಾದ ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳನ್ನು ಸೂಚಿಸಲು ಹೊಸ ಒಡಂಬಡಿಕೆಯ ಉದ್ದಕ್ಕೂ ಈ ಪದವನ್ನು ಉಪಯೋಗಿಸಲಾಗಿದೆ. ರೋಮಾ 1:7 ಹೋಲಿಸಿರಿ. ಹಳೆಯ ಒಡಂಬಡಿಕೆಯಲ್ಲಿಯೂ ವಿಶ್ವಾಸಿಗಳನ್ನು ಗೊತ್ತುಪಡಿಸಲು ಉಪಯೋಗಿಸಲಾಗಿದೆ.

*“ಅವರನ್ನು ಜಯಿಸಲು”*– 6:10; 7:14; 11:7; 12:17. ಆ “ಮಹಾಹಿಂಸೆಯು” ಅವನ ಚಟುಚಟಿಕಗಳ ಫಲವಾಗಿರುತ್ತದೆ. ಮೃಗವು ದೇವಜನರನ್ನು ಜಯಿಸುತ್ತದೆ, ಆದರೆ ಅದೇ ಸಮಯದಲ್ಲಿ ಅವರು ಅವನನ್ನು ಜಯಿಸುವರು. 15:2 ನೋಡಿರಿ. ಅವನು ದೈಹಿಕವಾಗಿ ಅವರನ್ನು ಜಯಿಸುತ್ತಾನೆ, ಅವರು ಬಹಳ ಮುಖ್ಯವಾದ ವಿಷಯದಲ್ಲಿ ಅವನನ್ನು ಸೋಲಿಸುವರು – ಆತ್ಮೀಕವಾಗಿ. ಅವನು ಅವರನ್ನು ಹಿಂಸಿಸುತ್ತಿರುವಾಗಲು ಅಥವಾ ಅವರನ್ನು ಕೊಲ್ಲುವಾಗಲು ಅವರು ಪರಿಪೂರ್ಣ ಜಯಶಾಲಿಗಳಾಗಿದ್ದಾರೆ.

*“ಸಕಲ ಕುಲ…ಜನಾಂಗಗಳ”*– ಕ್ರಿಸ್ತ ವಿರೋಧಿಯ ಸಾಮ್ರಾಜ್ಯವು ಇಡೀ ಭೂಗೋಳವನ್ನು ಸುತ್ತುವರಿದ ಮೊದಲ ಸಾಮ್ರಾಜ್ಯವಾಗಿರುವುದು. 8

**13:8** ವಚನ 4.

*“ಜೀವಬಾಧ್ಯರ ಪಟ್ಟಿ”*– 3:5.

*“ಜಗದುತ್ಪತ್ತಿಗೆ”*– ಈ ವಾಕ್ಯ ಭಾಗವನ್ನು “ಕೊಯ್ಯಲ್ಪಟ್ಟ ಕುರಿಯಾದಾತನ”, ಅಥವಾ, ಬಹುಶಃ, ಯಾರಾರ ಹೆಸರುಗಳು ಬರೆದಿರುವದಿಲ್ಲವೋ” ಎಂಬ ವಾಕ್ಯಗಳೊಂದಿಗೆ ತೆಗೆದುಕೊಳ್ಳಬಹುದು. 17:8 ಹೋಲಿಸಿರಿ. ದೇವರ ಯೋಜನೆಯಲ್ಲಿ ಜಗದುತ್ಪತ್ತಿಗೆ ಮುಂಚೆಯೇ ಕುರಿಯಾದಾತನು ಕೊಯ್ಯಲ್ಪಟ್ಟಿದ್ದನು (1 ಪೇತ್ರ 1:19-20), ಆದರೂ, ವಾಸ್ತವದಲ್ಲಿ ಇದು ನಿಜವಲ್ಲ. ಮತ್ತು ಆಗಲೇ ಕೆಲವರ ಹೆಸರುಗಳು ಪುಸ್ತಕದಲ್ಲಿ

ಬರೆಯಲಾಗಿದೆ ಎಂದು ಯೋಚಿಸಲು ನಮಗೆ ಕಾರಣವಿದೆ (ಉದಾಹರಣೆಗಾಗಿ, ಎಫೆ 1:4 ನೋಡಿರಿ). ಇಲ್ಲಿ ಬರೆದಿರುವವರ ಹೆಸರುಗಳು ಮತ್ತಾಯ 24:24 ರಲ್ಲಿ ಉಲ್ಲೇಖಿಸಿರುವ ದೇವರು ಆದುಕೊಂಡವರ ಹೆಸರುಗಳಾಗಿವೆ. ಅವರು ದೇವರನ್ನು ಪ್ರೀತಿಸುತ್ತಾರೆ ಮತ್ತು ಮೃಗದ ದುಷ್ಟ ಸ್ವಭಾವವನ್ನು ಗುರುತಿಸುತ್ತಾರೆ ಮತ್ತು ಲೋಕವು ಮಾಡುವಂಥದನ್ನು ಮಾಡಲು ನಿರಾಕರಿಸುತ್ತಾರೆ. 9

**13:9** *"ಕೇಳಲಿ"*– 2:7. 10

- **13:10** ಕೀರ್ತನೆ 7:15; 18:25-27; ಜ್ಞಾನೋ 22:8; ಗಲಾ 6:7. 11

**13:11** *"ಭೂಮಿಯೊಳಗಿಂದ"*–ಇದಕ್ಕೆ ತದ್ವಿರುದ್ಧವಾಗಿ ಮೊದಲನೆಯ ಮೃಗದ ಮೂಲವು "ಸಮುದ್ರದೊಳಗಿಂದ" ಎಂದು ಸ್ಪಷ್ಟವಾಗಿ ನೋಡುತ್ತೇವೆ. ಇಲ್ಲಿ "ಸಮುದ್ರ" ಎಂದರೆ ಮಾನವೀಯತೆಯ "ಸಮುದ್ರ" –ಎಂಬ ಸೂಚನೆಯಾಗಿರಬಹುದು (17:15 ಹೋಲಿಸಿರಿ). ಇದು ಹಾಗಿರುವುದಾದರೆ ಇದು ಬಹುಶಃ ಒಂದು ನಿರ್ದಿಷ್ಟವಾದ ದೇಶವಿರಬಹುದು, ಒಂದು ವೇಳೆ ಇಸ್ರಾಯೇಲ್ ದೇಶವಾಗಿರಬಹುದು.

*"ಟಗರಿಗಿರುವಂತೆ... ಘಟಸರ್ಪದಂತೆ"*– ಅವನ ತೋರಿಕೆಯು ಮೋಸಗೊಳಿಸುವಂತಿದೆ. ಅವನು ಒಂದು ವಿಧವಾಗಿ ಕಾಣಿಸಿಕೊಳ್ಳುತ್ತಾನೆ (ಮತ್ತು ನಿಸ್ಸಂದೇಹವಾಗಿ ನೋಡಲು ಬಯಸುತ್ತಾನೆ), ಆದರೆ ಅದಕ್ಕೆ ತದ್ವಿರುದ್ಧವಾಗಿರುತ್ತಾನೆ. ಆದರೆ ಅವನು ಯಾರೆಂದು ಅವನ ಮಾತುಗಳು ತೋರಿಸಿಕೊಡುತ್ತದೆ (ಮತ್ತಾಯ 12:34-35 ಹೋಲಿಸಿರಿ). 16:13; 19:20; 20:10 ರಲ್ಲಿ ಅವನನ್ನು "ಸುಳ್ಳು ಪ್ರವಾದಿ" ಎಂದು ಕರೆಯಲಾಗಿದೆ. ತಾನೇ ಮೆಸ್ಸೀಯನೆಂದು ಇಸ್ರಾಯೇಲ್ಯರಿಗೆ ಮನವರಿಕೆ ಮಾಡಲು ಅವನು ಪ್ರಯತ್ನಿಸಬಹುದು (ಯೋಹಾನ 5:43; ಜೆಕರ್ಯ 11:15-17; ಯೋಹಾನ 11:36-45 ಹೋಲಿಸಿರಿ). ಅವನು ಆ ಎಲ್ಲಾ ಸುಳ್ಳು ಪ್ರವಾದಿಗಳ ಮುಖ್ಯಸ್ಥನು ಮತ್ತು ಕ್ರಿಸ್ತನು ಮತ್ತಾಯ 24:23-26 ರಲ್ಲಿ ಎಚ್ಚರಿಸಿದ ಸುಳ್ಳು ಕ್ರಿಸ್ತನು ಆಗಿರುತ್ತಾನೆ. ಆದ್ದರಿಂದ ಈ ಯುಗದ ಅಂತ್ಯದಲ್ಲಿ ಇಡೀ ಪ್ರಪಂಚವು ಈ ಮೂರು ದುಷ್ಟರಿಂದ ಮೋಸಗೊಳಿಸಲ್ಪಡುತ್ತದೆ – ಘಟಸರ್ಪ, ಕ್ರಿಸ್ತವಿರೋಧಿ ಮತ್ತು ಸುಳ್ಳು ಪ್ರವಾದಿ. 12

**13:12** ಅವನು ಎಲ್ಲೇ ವಾಸಿಸಿದರೂ ಅವನು ಮೊದಲನೆಯ ಮೃಗದ ಪ್ರತಿನಿಧಿಯಾಗಿ ವರ್ತಿಸುತ್ತಾನೆ, ವಿಶ್ವ ಸಾಮ್ರಾಜ್ಯದ ಆಡಳಿತಗಾರ.

*“ಆರಾಧನೆ”*– ಸುಳ್ಳು ಪ್ರವಾದಿಯಾಗಿ ಅವನ ಕ್ಷೇತ್ರ ಧಾರ್ಮಿಕ ಕ್ಷೇತ್ರವಾಗಿರುತ್ತದೆ ಮತ್ತು ಒಬ್ಬನೇ ಸತ್ಯ ದೇವರನ್ನು ವಿರೋಧಿಸಿ ವಿಶ್ವವ್ಯಾಪ್ತಿ ಧಾರ್ಮಿಕ ಚಳುವಳಿಯನ್ನು ನಡೆಸುತ್ತಾನೆ ಮತ್ತು ಕ್ರಿಸ್ತವಿರೋಧಿಯನ್ನು ಆರಾಧನೆಯ ವಸ್ತುವಾಗಿ ಮಾಡುತ್ತಾನೆ. **13**

**13:13** ಮತ್ತಾಯ 24:24; ಧರ್ಮೋ 13:1-3 ರಲ್ಲಿ ಇರುವ ಎಚ್ಚರಿಕೆಗಳನ್ನು ನೋಡಿರಿ.

*“ಬೆಂಕಿಯು...ಆಕಾಶದಿಂದ”*– ಅಥವಾ, “ಆಕಾಶದಿಂದ” ನಿಜವಾದ ಪ್ರವಾದಿಯು ಎರಡು ಸಾರಿ ಮಾಡಿದ ಕಾರ್ಯವನ್ನು ಮಾಡುತ್ತಾನೆ (1 ಅರಸು 18:38; 2 ಅರಸು 1:10). **14**

**13:14** *“ಮರುಳುಗೊಳಿಸುವನು”*– 2 ಥೆಸ 2:9-12 ನೋಡಿರಿ. ಮನುಷ್ಯರಿಗೆ ಸತ್ಯವಾದ ಕ್ರಿಸ್ತನು ಬೇಡವಾಗುತ್ತಾನೆ (ಯೋಹಾನ 14:6), ಆದ್ದರಿಂದ ಅವರನ್ನು ಶಿಕ್ಷಸುವ ನಿಟ್ಟಿನಲ್ಲಿ “ಕ್ರಿಸ್ತವಿರೋಧಿ” –ಯನ್ನು ಅವರು ಸ್ವೀಕರಿಸುವಂತೆ ಮಾಡುತ್ತಾನೆ.

*“ವಿಗ್ರಹ”*– ಈ ಯಗವು ಅಂತ್ಯವಾಗುವಾಗ ಲೋಕವು ಸೃಷ್ಟಿ ಕರ್ತನನ್ನು ಆರಾಧಿಸುವ ಬದಲು ಎಲ್ಲಾ ಕಡೆಯಲ್ಲಿರುವ ಮನುಷ್ಯರು ಒಬ್ಬ ದುಷ್ಟ ವ್ಯಕ್ತಿಯನ್ನು ಅವನ ವಿಗ್ರಹವನ್ನು ಆರಾಧಿಸುತ್ತಾರೆ. **15**

**13:15** *“ಜೀವ ಕೊಡುವ ಸಾಮರ್ಥ್ಯ”*– ಜಗಕ್ಕೆ ಇದು ಅಲೌಕಿಕ ಶಕ್ತಿಯ ಮಹಾ ಪ್ರದರ್ಶನವೆಂದು ತೋರುತ್ತದೆ ಮತ್ತು ಹಾಗಿಯೇ ಆಗುತ್ತದೆ. ಸುಳ್ಳು ಪ್ರವಾದಿಗಳು “ದೊಡ್ಡ ಅದ್ಭುತ ಮತ್ತು ಸೂಚನೆಗಳನ್ನು” –ಮಾಡುತ್ತಾರೆಂದು ಯೇಸುವು ಹೇಳಿದನು, ಮತ್ತು ಈ ಪವಾಡಗಳು ಕೇವಲ ಒಂದು ರೀತಿಯ ತಂತ್ರಗಳಾಗಿರಬಹುದು ಎಂಬುದಕ್ಕೆ ಯಾವ ಸುಳಿವು ಇಲ್ಲ.

*“ಮರಣದಂಡನೆ ಆಗುವಂತೆ”*– 7:9,14 ರಲ್ಲಿ ನಾವು ನೋಡುವ ವಿಶ್ವಾಸಿಗಳು ಈ ಲೋಕವನ್ನು ಈ ರೀತಿಯಲ್ಲಿ ಬಿಡುತ್ತಾರೆಂದು ಹೇಳುವುದರಲ್ಲಿ ಯಾವ ಸಂದೇಹವು ಇಲ್ಲ. ದೇವರಿಗೆ ಅಪನಂಬಿಗಸ್ತರಾಗಿರುವ ಬದಲು ಮರಣವೇ ಒಳ್ಳೆಯದೆಂದು ಅಪೇಕ್ಷಿಸುತ್ತಾರೆ ಮತ್ತು ಇದರಲ್ಲಿ ಇವರು ಜ್ಞಾನಿಗಳಾಗಿರುತ್ತಾರೆ. ದಾನಿಯೇಲ ಅಧ್ಯಾಯ 3. **16-17**

**13:16-17** ನೋಡಿರಿ ಹೇಗೆ ಈ ಲೋಕದ ಜನರು ಮೃಗದ ಆರಾಧಕರಾಗುತ್ತಾರೆ – ಮೊದಲು ರಾಜಕೀಯ ಅಧಿಕಾರ ಮತ್ತು ಸೈನ್ಯಬಲ (ವ.4). ನಂತರ ವಂಚಿಸುವ ಪವಾಡಗಳು (ವ.13-15); ನಂತರ ಆರ್ಥಿಕ ಮುಗ್ಗಟ್ಟು. ಈ ಸಂದರ್ಭದಲ್ಲಿ ಅವರಿಗಿರುವ ಆಯ್ಕೆ

ಮೃಗವನ್ನು ಆರಾಧಿಸುವುದು ಅಥವಾ ಹಸಿವಿನಿಂದ ಕಷ್ಟಪಡುವುದು. ಆ ಸಮಯವು ಮನುಷ್ಯನ ಆತ್ಮಗಳನ್ನು ಸಂಪೂರ್ಣವಾಗಿ ಪ್ರಯತ್ನಿಸುವ ಸಮಯವಾಗಿರುತ್ತದೆ. **18**

**13:18** 666 ಈ ಸಂಖ್ಯೆಯ ಅರ್ಥವೇನು? ಇದು "ಮನುಷ್ಯನ ಸಂಖ್ಯೆ", ದೇವರ ಸ್ಥಾನವನ್ನು ಮನುಷ್ಯನು ತೆಗೆದುಕೊಳ್ಳುತ್ತಾನೆ, ನಾನೇ ದೇವರು ಮತ್ತು ದೇವರನ್ನು ಪ್ರಪಂಚದಿಂದ ಹೊರಹಾಕಲು ಪ್ರಯತ್ನಿಸುವುದನ್ನು ಸೂಚಿಸುತ್ತದೆ. 7 ಸಂಪೂರ್ಣತೆ ಮತ್ತು ಪರಿಪೂರ್ಣತೆಯನ್ನು ಸೂಚಿಸುವ ಸಂಖ್ಯೆಯಾದರೆ (1:4), 666 ಸಂಖ್ಯೆಯು ಶಕ್ತಿಯುಳ್ಳ ಮನುಷ್ಯನ ಬಗ್ಗೆ ಮಾತಾಡುತ್ತದೆ, ದೇವರ ಸ್ಥಾನವನ್ನು ತೆಗೆದುಕೊಳ್ಳುವ ಪ್ರಯತ್ನ ಆದರೆ ಎಂದಿನಂತೆ ಹೊಂದಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಸಂಖ್ಯೆಯ ಅರ್ಥ ಮತ್ತು ಇದು ಹೇಗೆ ಕ್ರಿಸ್ತವಿರೋಧಿಗೆ ಸಂಬಂಧಿಸಿದೆ ಎಂದು ಹೇಳುವುದರಲ್ಲಿ ಯಾವ ಸಂದೇಹವು ಇಲ್ಲ, ಈ ಅಧ್ಯಾಯದಲ್ಲಿರುವ ಘಟನೆಗಳು ನೆರವೇರುವಾಗ ಇದು ಸ್ಪಷ್ಟವಾಗುತ್ತದೆ. ಇಂದಿನ ದಿನಗಳಲ್ಲಿ ಈ "ಮೃಗದ" ಬರುವಿಕೆಗಾಗಿ ಜಗತ್ತಿನ ಆರ್ಥಿಕ, ಮಾನಸಿಕ, ರಾಜಕೀಯ ಮತ್ತು ಧಾರ್ಮಿಕ ಸ್ಥಿತಿಯನ್ನು ಸಿದ್ಧಪಡಿಸುತ್ತಿರುವ ಅನೇಕ ಶಕ್ತಿಗಳಿವೆ. ನಾವು ಎಚ್ಚರಿಕೆಯಾಗಿರೋಣ.

# 14[1]

**14:1** ಈ ಅಧ್ಯಾಯವು 12:1 ರಲ್ಲಿ ಪ್ರಾರಂಭವಾದ ಮುದ್ರೆಗಳು, ತುತೂರಿಗಳು ಮತ್ತು ಪಾತ್ರೆಗಳ ಕ್ರಮಬದ್ಧ ಪ್ರಗತಿಯ ಮುಂದುವರಿದ ದೀರ್ಘ ವಿರಾಮವಾಗಿದೆ. ರೌದ್ರವುಳ್ಳ ಪಾತ್ರೆಗಳ ಹೊಯ್ಯಲ್ಪಡುವುದಕ್ಕಿಂದ ಮುಂಚಿತವಾಗಿ ಅಂತ್ಯಕಾಲದಲ್ಲಿ ನಡೆಯುವ ಸಂಗತಿಗಳ ಹೆಚ್ಚಿನ ಮಾಹಿತಿಯನ್ನು ಕೊಡುತ್ತದೆ. ಈ ಭಾಗವು ಕಡೇಯ ತುತೂರಿಯು ಊದಲ್ಪಡುವ ಮುಂಚಿತವಾಗಿದ್ದ ಸಮಯವನ್ನು ಹಿಂದಿರುಗಿ ನೋಡುತ್ತದೆ.

*"ನೋಡಲಾಗಿ"*– ಅಕ್ಷರಶಃ "ನೋಡು".

*"ಚಿಯೋನ್ ಪರ್ವತ"*– ಇದು ಇಸ್ರಾಯೇಲಿನಲ್ಲಿರುವ ಯೆರೂಸಲೇಮನ್ನು (2 ಸಮು 5:6-9; ಕೀರ್ತನೆ 2:6; ಮತ್ತಾಯ 23:37-39), ಅಥವಾ ಪರಲೋಕದಲ್ಲಿರುವ ಯೆರೂಸಲೇಮನ್ನು ಸೂಚಿಸಬಹುದು (2:12; ಗಲಾ 4:25-26; ಇಬ್ರಿ 12:22-24). ಒಂದು ವೇಳೆ ಇದು ಈ ಚಿತ್ರವು ಭೂಮಿಯ ಮೇಲಿರುವ ಯೆರೂಸಲೇಮನ್ನು ಸೂಚಿಸುವುದಾದರೆ ಇದು ಕ್ರಿಸ್ತನು ಭೂಲೋಕಕ್ಕೆ ಹಿಂದಿರುಗಿ ಬಂದ ನಂತರದ

ಸಮಯದ್ದಾಗಿರಬಹುದು. ಆದರೆ ಇದು ಪರಲೋಕದ ಯೆರೂಸಲೇಮನ್ನು ಸೂಚಿಸುತ್ತಿರುವ ಸಾಧ್ಯತೆ ಇದೆ – ವ.3 ಈ ಅಭಿಪ್ರಾಯವನ್ನು ಕೊಡುತ್ತದೆ.

*"ಕುರಿಯಾದಾತನು"*– 5:6. ಈ ಅನುವಾದದೊಂದಿಗೆ ಬಳಸಿರುವ ಪತ್ಯದ ಗ್ರೀಕ್ ಭಾಷೆಯಲ್ಲಿ "ಆ" ಪದದ ಕೊರತೆ ಇದೆ, ಆದರೆ ಒಂದೇ ಒಂದು "ಕುರಿಯಾದಾತನಿದ್ದಾನೆ", ಮತ್ತು ಮತ್ತೊಂದು ಇರುವ ಸಾಧ್ಯತೆ ಇದೆ ಎಂದು ಯೋಚಿಸುವ ಅಗತ್ಯವಿಲ್ಲ.

*"ಒಂದು ಲಕ್ಷದ ನಾಲ್ವತ್ತು ನಾಲ್ಕು ಸಾವಿರ"*– ಇಲ್ಲಿಯೂ ಸಹ "ಆ" ಪದದ ಕೊರತೆ ಇದೆ. 1,44,000 ಮಂದಿಯ ಒಂದು ಗುಂಪನ್ನು 7:4 ರಲ್ಲಿ ಕಾಣುತ್ತೇವೆ. ಇದು ಅದೇ ಗುಂಪಿನವರಾ? ಅವರಲ್ಲವೆಂದು ಯೋಚಿಸಲು ಇಲ್ಲಿ ಕಾರಣವಿದೆ – 7 ಅಧ್ಯಾಯದಲ್ಲಿರುವವರು ಇಸ್ರಾಯೇಲಿನ ಕುಲದವರು ಮತ್ತು ಅವರು ಈ ಭೂಮಿಯ ಮೇಲಿದ್ದಾರೆ; ಇಲ್ಲಿರುವವರು "ಭೂಮಿಯಿಂದ" "ಮನುಷ್ಯರೊಳಗಿದ್ದವರು", ಮತ್ತು ಅವರ ಮುಂದಿನ ವಿವವರಣೆಯನ್ನು 7ನೇ ಅಧ್ಯಾಯದಲ್ಲಿ ಕೊಟ್ಟಿಲ್ಲ, ಮತ್ತು ಈ ವಿವರಣೆಯು ಇಸ್ರಾಯೇಲ್ಯರಿಂದ ಆರಿಸಿಕೊಂಡವರಿಗೆ ಅನ್ವಯಿಸುತ್ತದೆ ಎಂದು ಯೋಚಿಸಲು ಕಾರಣವಿಲ್ಲ.

*"ಅವರವರ ಹಣೆಯ ಮೇಲೆ ಬರೆಯಲಾಗಿತ್ತು"*– ಇದರ ಅರ್ಥ ಅವರು ದೇವರ ವಿಶೇಷವಾದ ಆಸ್ತಿಯಾಗಿದ್ದಾರೆ ಮತ್ತು ಆತನ ಸ್ವಭಾವವನ್ನು ಅವರಲ್ಲಿ ಕಾಣಬಹುದು. **2**

**14:2** *"ವೀಣೆಗಳು"*– 5:8; 15:2. **3**

**14:3** *"ಹೊಸ ಹಾಡು"*– 5:9.

*"ಕಲಿ"*– ಈ ಹಾಡನ್ನು ಯಾರು ಮೊದಲು ಹಾಡಿದರೆಂದು ಅಥವಾ 1,44,000 ಮಂದಿಗೆ ಯಾರು ಈ ಹಾಡನ್ನು ಹೇಳಿಕೊಟ್ಟರೆಂದು ಸಹ ನಮಗೆ ಹೇಳಲ್ಪಟ್ಟಿಲ್ಲ.

*"ಬಿಡುಗಡೆ ಹೊಂದಿದ"*– 1:5; 5:9; 1 ಪೇತ್ರ 1:18; ಇಬ್ರಿ 9:12; ಎಫೆ 1:7; ರೋಮಾ 3:24; ಮತ್ತಾಯ 20:28. **4**

**14:4** ಸ್ತ್ರೀ ಸಹವಾಸದಿಂದ ಮಲಿನರಾಗದವರು" – ಮದುವೆಯು ಮಲಿನವಲ್ಲ. ಇಬ್ರಿ 13:4; ಮತ್ತಾಯ 19:4-6 ನೋಡಿರಿ. ಆದರೆ ಮದುವೆಯ ಹೊರಗಡೆಯ ಸಹವಾಸವು ಮಲಿನವಾಗಿದೆ.

*"ಕನ್ಯೆಯರು"*– ಇದರ ಅರ್ಥವನ್ನು ಅಕ್ಷರಶಃವಾಗಿ ತೆಗೆದುಕೊಂಡರೆ ಇದು ಸ್ಪಷ್ಟವಾಗುತ್ತದೆ.

ಕೆಲವು ವ್ಯಾಖ್ಯಾನಕಾರರು ಇದನ್ನು ಸಾಂಕೇತಿಕವಾಗಿ ತೆಗೆದುಕೊಳ್ಳಲು ಇಚ್ಛಿಸುತ್ತಾರೆ. 2 ಕೊರಿಂಥ 11:2 ರಲ್ಲಿ ಸಾಕೇತಿಕವಾಗಿ ಉಪಯೋಗಿಸಿರುವ ಪದವನ್ನು ನೋಡಿರಿ. ಈ ರೀತಿಯಲ್ಲಿ ಇದನ್ನು ತೆಗೆದುಕೊಂಡರೆ 1,44,000 ಮಂದಿ ದೇವರಿಗೆ ಆತ್ಮೀಕ ಅಪನಂಬಿಕೆಯ ದೋಷವುಳ್ಳವರಾಗುವುದಿಲ್ಲ ಹೋಶೇಯ 1:2; 2:2; ಯೆರೆ 2:2,5 ಹೋಲಿಸಿರಿ).

*"ಹಿಂಬಾಲಿಸುವವರು"*– 7:7; ಯೋಹಾನ 10:27. ಇಲ್ಲಿ ಈಗ ಯಾರು ಒಳ್ಳೆ ಕುರುಬನನ್ನು ಹಿಂಬಾಲಿಸುತ್ತಾರೋ ಅವರು ಅಲ್ಲಿಯೂ ಮತ್ತು ನಂತರವೂ ಆತನನ್ನು ಹಿಂಬಾಲಿಸುತ್ತಾರೆ.

*"ಬಿಡಿಸಿದನು"*– ಇದೇ ಪದವನ್ನು ಕಾಣುವ, ಟಿಪ್ಪಣಿ 5:9 ನೋಡಿರಿ.

*"ಮನುಷ್ಯರೊಳಗಿಂದ"*– 7:4-8 ರಲ್ಲಿ ಉಲ್ಲೇಖಿಸಿರುವ ಇಸ್ರಾಯೇಲ್ಯ ದೇಶದವರ ಗುಂಪು ಮತ್ತು ಇಲ್ಲಿ ಉಲ್ಲೇಖಿಸಿರುವ ಗುಂಪಿನವರು ಒಂದೇ ಅಲ್ಲ ಎನ್ನುವುದಕ್ಕೆ ಈ ವಾಕ್ಯವು ಸಾಕ್ಷಿಯಾಗಿದೆ.

*"ಪ್ರಥಮ ಫಲ"*– ಕ್ರಿಸ್ತನು ಬರುವುದಕ್ಕೆ ಮುಂಚೆ ಇಸ್ರಾಯೇಲ್ ದೇಶದವರೆಲ್ಲರೂ "ಪ್ರಥಮ ಫಲ" ಎಂದು ಕರೆಯಲ್ಪಡುತ್ತಿದ್ದರು (ಯೆರೆ 2:3). ಕ್ರಿಸ್ತನು ಬಂದ ಮೇಲೆ ಹೊಸದಾಗಿ ಹುಟ್ಟಿರುವವರೆಲ್ಲರೂ "ಪ್ರಥಮ ಫಲ" ದವರಾಗಿದ್ದಾರೆ (ಯಾಕೋಬ 1:18). ಕೊಯ್ಯಲು ಇನ್ನೂ ಹೆಚ್ಚಿನ ಫಲವಿರುವುದನ್ನು ಪ್ರಥಮ ಫಲವು ಸೂಚಿಸುತ್ತದೆ. ಆತನ ಸಾವಿರ ವರ್ಷದ ಆಳ್ವಿಕೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಕ್ರಿಸ್ತನ ರಾಜ್ಯಕ್ಕೆ ಸೇರಿಸಬೇಕಾಗಿರುವುದನ್ನು ಇಲ್ಲಿ ಸೂಚಿಸುತ್ತಿರಬಹುದು (15:4; ಯೆಶಾಯ 2:2-4; 60:3-9; ಯೆರೆ 3:17; ಯೆಹೆಜ್ಕೇಲ 14:16). **5**

**14:5** *"ಸುಳ್ಳು ಸಿಕ್ಕಲಿಲ್ಲ"*– ಕೀರ್ತನೆ 15:1-5 ಹೋಲಿಸಿರಿ. ಸುಳ್ಳುಗಾರರು ತಮಗೆ ಬರಬೇಕಾದ ಭಾಗವನ್ನು ಬೇರೆ ಸ್ಥಳದಲ್ಲಿ ಹೊಂದಿಕೊಳ್ಳುತ್ತಾರೆ (21:8,27; 22:15). ಸತ್ಯ ದೇವರಿಗೆ ಸುಳ್ಳು ಹೇಳುವುದು ದೇವರಿಗೆ ವಿರುದ್ಧವಾದದ್ದು ಕೀರ್ತನೆ 31:5; ಜ್ಞಾನೋ 6:16-19.

*"ತಪ್ಪಿಲ್ಲದವನು"*– ಕೀರ್ತನೆ 15:2; 24:3-5; ಆದಿ 17:1; ಧರ್ಮೋ 18:13; ಎಫೆ 1:4; 5:27; ಫಿಲಿಪ್ಪಿ 1:10; 2:15; 2 ಪೇತ್ರ 3:14. **6**

**14:6** 12ನೇ ಅಧ್ಯಾಯದಲ್ಲಿದ್ದ ಸ್ತ್ರೀಯ ಹಾಗೆ ಮತ್ತು 13ನೇ ಅಧ್ಯಾಯದಲ್ಲಿ ಮೃಗದ ಹಾಗೆ ಈ ದೇವ ದೂತನು ಸಹ ಸಂಕೇತಿಕವಾಗಿರಬಹುದು. ಗ್ರೀಕ್ ಭಾಷೆಯಲ್ಲಿ ದೇವದೂತನೆಂದರೆ "ಸಂದೇಶಕನು" (1:20; ಮಾರ್ಕ 1:2; ಲೂಕ 7:24; 9:52), ಮತ್ತು ಇಲ್ಲಿ ಕ್ರಿಸ್ತನ ಸುವಾರ್ತೆಯನ್ನು ಈ ಯುಗವು ಸಮಾಪ್ತಿಯಾಗುವ ಮುಂಚಿತವಾಗಿ ವಿಶ್ವದಾದ್ಯಂತ ಸಾರುವುದನ್ನು ಪ್ರತಿನಿಧಿಸುತ್ತಿರಬಹುದು. ಮತ್ತಾಯ 24:14.

*"ಸಕಲ ಜನಾಂಗ...ಪ್ರಜೆಗಳು"*– 5:9; 7:9. 7

**14:7** *"ದೇವರಿಗೆ ಭಯಪಡಿರಿ"*– ಇದರ ಮುಖ್ಯತ್ವಕ್ಕಾಗಿ 15:4; 19:5; 1 ಪೇತ್ರ 1:17; 2:17; 2 ಕೊರಿಂಥ 5:11; ರೋಮಾ 3:18; ಇಬ್ರಿ 12:28; ಆದಿ 20:11; ಕೀರ್ತನೆ 34:11-14; 111:10; ಜ್ಞಾನೋ 1:7 ನೋಡಿರಿ. ದೇವರ ಭಯವು "ಶಾಶ್ವತವಾದ ಸುವಾರ್ತೆಗೆ" – ಸಂಬಂಧಿಸಿರುವುದನ್ನು ಗಮನಿಸಿ, ಮತ್ತು ಪಶ್ಚಾತ್ತಾಪದ ರೀತಿಯಲ್ಲಿ (ಅಪೊ 17:30), ಎಲ್ಲಾ ಕಡೆಯಲ್ಲಿರುವ ಜನರಿಗೆ ಇದು ಅಪ್ಪಣೆಮಾಡಲ್ಪಟ್ಟಿದೆ. ಪಶ್ಚಾತ್ತಾಪ ಪಡುವುದು ಮತ್ತು ಒಬ್ಬನೇ ಸತ್ಯ ದೇವರ ಕಡೆಗೆ ತಿರುಗುವುದು ಮತ್ತು ಆತನ ಸುವಾರ್ತೆಯು ಆತನು ಆಜ್ಞಾಪಿಸುವ ದೇವರ ಭಯವನ್ನು ಹುಟ್ಟಿಸುತ್ತದೆ. ಸುವಾರ್ತೆಯನ್ನು ನಿತ್ಯವಾದದೆಂದು ಕರೆಯಲಾಗಿದೆ ಯಾಕಂದರೆ ಮನುಷ್ಯರಿಗಾಗಿ ದೇವರು ಅನಾದಿ ಕಾಲದಲ್ಲಿ ಆತನ ಯೋಜನೆಯೊಂದಿಗೆ ಪ್ರಾರಂಭವಾಯಿತು ಮತ್ತು ಭವಿಷ್ಯದಲ್ಲಿ ನಿತ್ಯಕ್ಕೂ ಇರುವ ಫಲವನ್ನುಂಟುಮಾಡುತ್ತದೆ. ಇದು ಯಾವಾಗಲೂ ಮನುಷ್ಯರಿಗೆ ಶುಭವಾರ್ತೆಯಾಗಿರುತ್ತದೆ, ಎಂದೆಂದಿಗೂ ಕೇಳಿಸಿಕೊಂಡ ಶುಭವಾರ್ತೆ.

*"ಆತನನ್ನು ಘನಪಡಿಸಿರಿ"*– 16:9; 19:7; 1 ಕೊರಿಂಥ 10:31.

*"ನ್ಯಾಯತೀರ್ಪು"*– 11:18.

*"ಭೂಲೋಕ ಪರಲೋಕಗಳನ್ನು ಉಂಟುಮಾಡಿದಾತನಿಗೆ ನಮಸ್ಕರಿಸಿರಿ"*– ಮತ್ತಾಯ 4:10; ಅಪೊ 14:15; 1 ಕೊರಿಂಥ 8:5-6; ಯೆಶಾಯ 40:18-26; 42:5; 43:10-11; 45:18. ಜನರು ಸೃಷ್ಟಿಕರ್ತನನ್ನು ಆರಾಧಿಸಬೇಕು ಮತ್ತು ಯಾವುದನ್ನೂ ಮತ್ತು ಯಾರನ್ನೂ ಆರಾಧಿಸಬಾರದು. 8

**14:8** *"ಬಾಬೆಲೆಂಬ ಮಹಾನಗರಿ"*– 17:1-5; 18:2. ಇಲ್ಲಿ ಆಕೆಯು ಈಗಾಗಲೇ ಬಿದ್ದು ಹೋಗಿದ್ದಾಳೆಂದು ಹೇಳಲ್ಪಟ್ಟಿದೆ ಆದರೆ 18ನೇ ಅಧ್ಯಾಯದವರೆಗೂ ಆಕೆಯ

ಬಿದ್ದುಹೋಗುವಿಕೆಯನ್ನು ವಿವರಿಸಿಲ್ಲ.

*"ಜಾರತ್ವವೆಂಬ ದ್ರಾಕ್ಷಾರಸ"*– 18:3,9. **9-11**

**14:9-11** ಇದು "ಮೃಗ" ವನ್ನು ಆರಾಧಿಸುವುದರ ವಿರುದ್ಧದ ಈ ಎಚ್ಚರಿಕೆ (13:4,8,15) ಒಬ್ಬನೇ ಸತ್ಯ ದೇವರನ್ನು, ಸೃಷ್ಟಿ ಕರ್ತನನ್ನು ಆರಾಧಿಸುವುದರ ಬದಲಾಗಿ ಬೇರೆ ಯಾವುದನ್ನಾದರು ಮತ್ತು ಬೇರೆ ಯಾರನ್ನೇಯಾಗಲೀ ಆರಾಧಿಸುವವರ ವಿರುದ್ಧದ ಎಚ್ಚರಿಕೆಯನ್ನು ಸೂಚಿಸುತ್ತದೆ (ವ.7). ಬರಿ ಮೃಗವನ್ನು ಆರಾಧಿಸುವವರು ಮಾತ್ರವಲ್ಲದೆ, ಎಲ್ಲಾ ವಿಗ್ರಹಾರಾಧಕರು, ನಿತ್ಯ ಅಗ್ನಿಯ ಪ್ರತಿಕಾರವನ್ನು ಅನುಭವಿಸುವರು (21:8). **10**

**14:10** *"ಕೋಪವೆಂಬ...ರೌದ್ರ"*– ವ. 19; ಸಂಖ್ಯಾ 25:3; ಕೀರ್ತನೆ 90:7-11; ಯೆಶಾಯ 51:17; ಯೆರೆ 25:15; ಯೋಹಾನ 3:36; ರೋಮಾ 1:18; ಎಫೆ 5:6.

*"ಬೆಂಕಿ ಮತ್ತು ಗಂಧಕ"*– ಆದಿ 19:24; ಕೀರ್ತನೆ 11:6; ಯೂದ 7 ಹೋಲಿಸಿರಿ.

*"ಯಜ್ಞದ ಕುರಿಯಾದಾತನ ಮುಂದೆ"*– ಕರ್ತನಾದ ಯೇಸು ಕ್ರಿಸ್ತನು, ಮನುಷ್ಯರಿಗಾಗಿ ತನ್ನ ಪ್ರಾಣವನ್ನು ಕೊಟ್ಟಾತನು, ಈ ದುಷ್ಟ ಜನರ ಹಿಂಸೆಯನ್ನು ನೋಡುತ್ತಾನೆ ಮತ್ತು ಅವರ ಕಷ್ಟವನ್ನು ತಡೆಯಲು ಏನೂ ಮಾಡುವುದಿಲ್ಲ. ಪರಿಪೂರ್ಣ ನ್ಯಾಯದಲ್ಲಿ ಅವರಿಗೆ ಯಾತನೆಗಳು ಬರುತ್ತವೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ ಮತ್ತು, ಅದನ್ನು ನಿವಾರಿಸುವುದು, ಪರಲೋಕದ ನಿಯಮದ ಪ್ರಕಾರ ಇದು ಸರಿಯಲ್ಲ. **11**

**14:11** *"ಯುಗಯುಗಾಂತರಗಳಲ್ಲಿಯೂ"*– ಯೆಶಾಯ 33:14; ಮತ್ತಾಯ 25:46; ಮಾರ್ಕ 3:29; 9:48; ಲೂಕ 16:22-26. ವಾಸ್ತವವಾಗಿ ದುಷ್ಟ ಜನರಿಗೆ ಯಾತನೆಯು ಯುಗಯುಗಾಂತರಕ್ಕೂ ಇರುತ್ತದೆಂದು ಈ ವಚನವು ಹೇಳುವುದಿಲ್ಲ, ಅವರ ಯಾತನೆಯ ಹೊಗೆಯು ಯುಗಯುಗಾಂತರಗಳಲ್ಲಿಯೂ ಏರಿ ಹೋಗುತ್ತದೆ (19:3 ಹೋಲಿಸಿರಿ), ಆದರೆ ಪರಿಕಲ್ಪನೆ ಏನೆಂದರೆ ಹಿಂಸೆಯು ನಿರಂತರವಾಗಿರುವುದು. 20:10 ಹೋಲಿಸಿರಿ. ಹಗಲು ಮತ್ತು ಇರುಳು ಇರುವವರೆಗೂ ಮೃಗವನ್ನು ಆರಾಧಿಸುವವರು ವಿಶ್ರಾಂತಿಯಿಲ್ಲದೆ ಇರುವರು. ಈ ವಚನದಲ್ಲಿರುವ ಕ್ರಿಯಾ ಪದಗಳು ನಾವು ನೆನೆಸುವ ಪ್ರಕಾರ ಭವಿಷ್ಯತ್ಕಾಲದಲ್ಲಿ ಇಲ್ಲ, ಆದರೆ ವರ್ತಮಾನ ಕಾಲದಲ್ಲಿದೆ. **12**

- **14:12** 13:10; ಇಬ್ರಿ 6:12; 2 ಥೆಸ 1:4 ನೋಡಿರಿ. **13**

**14:13** *"ಇಂದಿನಿಂದ"*– ಮೃಗದ ಆಳ್ವಿಕೆಯಲ್ಲಿ ಕರ್ತನಲ್ಲಿ ಮರಣಿಸುವ ವಿಶ್ವಾಸಿಗಳೆಲ್ಲರಿಗೂ ಈ ಸತ್ಯವು ಪ್ರೋತ್ಸಾಹವನ್ನುಂಟು ಮಾಡುತ್ತದೆ (13:15). ಹೌದು ಕರ್ತನಲ್ಲಿ ಮರಣಿಸುವುದು ವಿಶ್ವಾಸಿಗಳಿಗೆ ಆಶೀರ್ವಾದದ ಕಾರ್ಯವಾಗಿದೆ (2 ಕೊರಿಂಥ 5:1-6; ಫಿಲಿಪ್ಪಿ 1:21-23; ಕೀರ್ತನೆ 116:15). ಆದರೆ ಮೃಗಕ್ಕೂ ಮತ್ತು ಸುಳ್ಳು ಪ್ರವಾದಿಗೆ ತಮ್ಮನ್ನು ಒಪ್ಪಿಸಿಕೊಡಲು ನಿರಾಕರಿಸಿದವರಿಗೆ ಇದು ವಿಶೇಷವಾಗಿ ಸತ್ಯವಾಗಿರುತ್ತದೆ.

*"ವಿಶ್ರಾಂತಿ"*– ವ.11 ಹೋಲಿಸಿರಿ.

*"ಅವರ ಸುಕೃತ್ಯಗಳು ಅವರೊಡನೆ ಬರುವವು"*– ದೊಡ್ಡ ಅಪಾಯದಲ್ಲಿಯೂ ಮತ್ತು ಹೆಚ್ಚಿನ ಒತ್ತಡದ ನಡುವೆಯೂ ವಿಶೇಷವಾದ ನಂಬಿಗಸ್ತಿಕೆಗೆ ವಿಶೇಷವಾದ ಪ್ರತಿಫಲವಿರುತ್ತದೆ. **14**

**14:14** *"ಮೇಘ"*– 1:7; ಮತ್ತಾಯ 24:30; 26:64; ಅಪೊ 1:9,11; 1 ಥೆಸ 4:16-17.

*"ಮನುಷ್ಯಕುಮಾರನಂತಿದ್ದವನೊಬ್ಬನು"*– 1:13 ರಲ್ಲಿ ಕರ್ತನಾದ ಯೇಸುವಿಗೆ ಇದೇ ಪದವಿನ್ಯಾಸವನ್ನು ಬಳಸಿದೆ. ಮೇಘದ ಮೇಲಿರುವವನು ಆತನೇ ಎಂದು ಯೋಚಿಸದಿರಲು ಯಾವುದಾದರು ಒಳ್ಳೆಯ ಕಾರಣವಿದೆಯಾ?

*"ಕಿರೀಟ"*– ದೇವದೂತರ ವಿಷಯದಲ್ಲಿ ಈ ಪದವನ್ನು ಉಪಯೋಗಿಸಲಿಲ್ಲ. ಇದಕ್ಕೆ ಗ್ರೀಕ್ ಪದ (ಸ್ಟೆಫಾನೋಸ್) ಜಯಹೊಂದಿದವನಿಗೆ ಕೊಡುವುದನ್ನು ಮಾತಾಡುತ್ತದೆ, ರಾಜರು ಧರಿಸುವ ರಾಜ ಕಿರೀಟವಲ್ಲ. 2:10; 1 ಕೊರಿಂಥ 9:25; ಇಬ್ರಿ 2:9 ಹೋಲಿಸಿರಿ. ಕ್ರಿಸ್ತನು ಅನೇಕ ರೀತಿಯ ಕಿರೀಟವನ್ನು ಧರಿಸಿಕೊಂಡು ಕಾಣಿಸಿಕೊಳ್ಳುತ್ತಾನೆ 19:12. ಅಲ್ಲಿ ಗ್ರೀಕ್ ಪದವು ರಾಜರು ಧರಿಸುವ ಕಿರೀಟವನ್ನು ಅರ್ಥೈಸುತ್ತದೆ. ಇಲ್ಲಿ ಕ್ರಿಸ್ತನು ಆಳ್ವಿಕೆ ನಡೆಸಲು ಇನ್ನು ಬರುವದಿಲ್ಲ ಆದರೆ "ಕೊಯ್ಲಿಗಾಗಿ" ಬರತ್ತಾನೆ. **15**

**14:15** ಮೇಘದ ಮೇಲಿರುವವನು ಕರ್ತನಾದ ಯೇಸುವಾಗಿದ್ದರೆ ದೇವದೂತರು ಬಂದು ಆತನಿಗೆ ಏನು ಮಾಡಬೇಕೆಂದು ಯಾಕೆ ಹೇಳಬೇಕು (ಯಾಕಂದರೆ ಯೇಸು ತಂದೆಯಾದ ದೇವರ ಅಧೀನತೆಯಲ್ಲಿ ಯಾವಾಗಲೂ ಇರುವವನಾಗಿದ್ದಾನೆ ಮತ್ತು ಆತನಿಂದ ಸೂಚನೆಗಳನ್ನು

ತೆಗೆದುಕೊಳ್ಳುತ್ತಾನೆ. (ಯೋಹಾನ 5:19; 6:38; 14:31 ಹೋಲಿಸಿರಿ). ಈ ದೇವದೂತನು ದೇವಾಲಯದೊಳಗಿಂದ ಬರುತ್ತಾನೆ – ದೇವರ ಸನ್ನಿಧಿಯಿಂದ – ಮತ್ತು ತಂದೆಯಿಂದ ಮಗನಿಗೆ ಸಂದೇಶವನ್ನು ತರುತ್ತಾನೆ. ಅಥವಾ ದೇವದೂತನು ತಂದೆ ಮತ್ತು ಮಗನ ನಡುವೆ ಹಾದು ಹೋಗುವ ಕೇವಲ ಸಂದೇಶದ ಸಂಕೇತಿಕವಾಗಿರಬಹುದು.

*"ಕೊಯ್ಯುವ ಕಾಲ ಬಂತು...ಹಾಕಿ ಕೊಯ್ಯಿ"*– ಮತ್ತಾಯ 3:12; ಮಾರ್ಕ 4:29 ಹೋಲಿಸಿರಿ. ಕ್ರಿಸ್ತನು ಸುಗ್ಗಿಯನ್ನು ಕೊಯ್ಯುವಾಗ ತನ್ನ ಕಾರ್ಯಕರ್ತರಾದ ದೇವದೂತರನ್ನು ಉಪಯೋಗಿಸುತ್ತಾನೆ – ಮತ್ತಾಯ 13:39; 24:31. **16**

**14:16** ಈ ಸುಗ್ಗಿ ಯಾವುದರ ಸುಗ್ಗಿ ಎಂದು ನಮಗೆ ತಿಳಿಯಪಡಿಸಿಲ್ಲ. ಆದಾಗ್ಯೂ, 17-20 ರಲ್ಲಿರುವ ಇದು "ಭೂಮಿಯ ದ್ರಾಕ್ಷೆ ಗೊಂಚಲಿನ" ಸುಗ್ಗಿಗೆ ವ್ಯತಿರಿಕ್ತವಾಗಿದೆ. ಅದು ದುಷ್ಟ ಜನರ ಸುಗ್ಗಿಯಾಗಿದೆ, ಆದ್ದರಿಂದ ಈ ಸುಗ್ಗಿಯು, ದೇವ ಜನರ ಸುಗ್ಗಿ ಎಂದು ತೋರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ವಚನಗಳು 14-16 ಒಂದು ವೇಳೆ ಸಾಂಕೇತಿಕವಾಗಿ ಸಭೆಯು ಎತ್ತಲ್ಪಡುವುದನ್ನು ಹೇಳುತ್ತಿರಬಹುದು (1 ಥೆಸ 4:16-17). ಬೇರೆ ಪಂಡಿತರು 4:1 ರಲ್ಲಿ ಎತ್ತಲ್ಪಡುವುದು ನಡೆಯುತ್ತದೆಂದು ಯೋಚಿಸುತ್ತಾರೆ; ಇನ್ನೂ ಕೆಲವರು 11:12 ಕೇವಲ ಆ ಘಟನೆಯನ್ನು ಸೂಚಿಸುತ್ತದೆಂದು ಮತ್ತು ಇನ್ನು ಕೆಲವರು 19ನೇ ಅಧ್ಯಾಯದಲ್ಲಿ ಯೇಸುವು ಕಾಣಿಸಿಕೊಂಡಾಗ ಮಾತ್ರ ಇದು ನಡೆಯುತ್ತದೆಂದು ಯೋಚಿಸುತ್ತಾರೆ. ಎತ್ತಲ್ಪಡುವ ಬಗ್ಗೆ (14:14-16) ವಚನಗಳು ಬಹುಶಃ ಸರಿಯಾಗಿ ಮಾತಾಡುತ್ತದೆ ಎಂದು ಈ ಟಿಪ್ಪಣಿಗಳ ಲೇಖಕನು ಯೋಚಿಸುತ್ತಾನೆ ಆದರೆ ಅನುಮಾನಾಸ್ಪದ ವಿಷಯಗಳ ಬಗ್ಗೆ ತತ್ವಾತ್ಮಕವಾಗಿರುವುದು ಬುದ್ಧಿವಂತಿಕೆಯಲ್ಲ ಎಂದು ಸಹ ಯೋಚಿಸುತ್ತಾನೆ. ಕ್ರಿಸ್ತನ ಬರೋಣಕ್ಕಾಗಿ ಮತ್ತು ಈ ಯುಗದ ಅಂತ್ಯದಲ್ಲಿ ನಡೆಯುವ ಘಟನೆಗಳಿಗೆ ನಾವು ಯಾವಾಗಲೂ ಸಿದ್ಧವಾಗಿರೋಣ. **17**

**14:17** *"ಮತ್ತೊಬ್ಬ"*– ವಾಸ್ತವವಾಗಿ ಈ ವಚನಗಳು ಹಿಂದಿನ ಸುಗ್ಗಿಗಿಂತಲೂ ಬೇರೆಯದನ್ನು ಸೂಚಿಸುತ್ತದೆ. ಇದು ನ್ಯಾಯತೀರ್ಪಿನ ಉದ್ದೇಶಕ್ಕಾಗಿ ಮತ್ತು ದುಷ್ಟ ಜನರ ಮೇಲಿನ ಕೋಪಕ್ಕಾಗಿ. **18**

**14:18** *"ಬೆಂಕಿಯ ಅಧಿಕಾರಿಯಾದ"*– ಬಹುಶಃ 8:3-5 ರಲ್ಲಿರುವ ದೇವದೂತನು. "ಯಜ್ಞವೇದಿ" 6:9; 8:5; 16:7.

*“ಭೂಮಿಯ ದ್ರಾಕ್ಷೆಗೊಂಚಲು”*– ದೇವರ ದ್ರಾಕ್ಷೆ ಬಳ್ಳಿಯಲ್ಲ. ಧರ್ಮೋ 32:32-33 (ಯೋಹಾನ 15:1-5 ಹೋಲಿಸಿರಿ).

*“ಮಾಗಿದೆ”*– ಮೃಗದ ಆಳ್ವಿಕೆಯಲ್ಲಿ ದುಷ್ಟತ್ವವು ಪೂರ್ಣಮಾಗಿದ ಹಣ್ಣಿಗೆ ಬಂದಿರುತ್ತದೆ.

**19**

**14:19** *“ರೌದ್ರ”*– ವ.10.

*“ದೇವರ ರೌದ್ರವೆಂಬ ದೊಡ್ಡ ತೊಟ್ಟಿ”*– ಯೆಶಾಯ 63:3-4; ಪ್ರಲಾ 1:15; ಯೋವೇಲ 3:13. **20**

**14:20** *“ತುಳಿದರು”*– ಕರ್ತನಾದ ಯೇಸು ತಾನೇ ಇದನ್ನು ಮಾಡುತ್ತಾನೆ – 19:15. ಅಂದರೆ, ಭೂಮಿಯ ಮೇಲಿರುವ ದುಷ್ಟ ಜನರ ಮೇಲೆ ದೇವರ ರೌದ್ರವನ್ನು ಕಾರ್ಯಗತಗೊಳಿಸಲು ಆತನನ್ನು ನೇಮಿಸಿದ್ದಾನೆ.

*“ಪಟ್ಟಣ”*– ಪ್ರತ್ಯೇಕವಾಗಿ ಹೇಳಲ್ಪಟ್ಟಿರುವ ಈ ವಾಕ್ಯಗಳು ಖಂಡಿತವಾಗಿ ಬಹುತೇಕ ಯೆರೂಸಲೇಮನ್ನು ಸೂಚಿಸುತ್ತದೆ (11:2,8,13). ಖಂಡಿತವಾಗಿಯೂ ಅಂತ್ಯದಿನಗಳಲ್ಲಿ ಯೆರೂಸಲೇಮ್ ದೇವರಿಂದ ಭಯಾನಕವಾದ ತೀರ್ಪಿಗೆ ಒಳಗಾಗುವ ದೃಷ್ಯವನ್ನು ಕಾಣುತ್ತೇವೆ (ಯೋವೇಲ 3:12-16; ಜೆಕರ್ಯ 14:1-3.

*“ಇನ್ನೂರು ಮೈಲಿ”*– (1600 ಪರ್ಲಾಂಗುಗಳು) – ಹೆಚ್ಚು ಕಡಿಮೆ 300 ಕಿಲೋಮೀಟರುಗಳು, ಅಂದರೆ ಹೆಚ್ಚು ಕಡಿಮೆ ದಕ್ಷಿಣ ಮರುಳುಗಾಡಿನ ಎಲ್ಲೆಯಿಂದ ಉತ್ತರ ಇಸ್ರಾಯೇಲಿನ ಹೆಚ್ಚು ಜನಸಂಖ್ಯೆಯ ಪ್ರದೇಶದಷ್ಟು ಉದ್ದವಾಗಿತ್ತು. ತುಂಬಾ ರಕ್ತವು ಮನುಷ್ಯರ ಅಗಾಧ ಹತ್ಯೆಯನ್ನು ಸೂಚಿಸುತ್ತದೆ. 19:17-18 ಹೋಲಿಸಿರಿ.

# 15[1]

**15:1** 12:1 ರಿಂದ ಪ್ರಾರಂಭವಾದ ಉದ್ದವಾದ ವಿವರಣೆಯ ಭಾಗವು ಇಲ್ಲಿಗೆ ಮುಗಿಯಿತು, ಮತ್ತು ಮುದ್ರೆಗಳ, ತುತೂರಿಗಳ ಮತ್ತು ಪಾತ್ರೆಗಳ ವಿವರಣೆಯ ಮುಖ್ಯವಾದ ಎಳೆಯು ಇಲ್ಲಿ ಪ್ರಾರಂಭವಾಗುತ್ತದೆ. ಏಳು ಪಾತ್ರೆಗಳು 7ನೇ ತುತೂರಿಯ ಅಡಿಯಲ್ಲಿ ಬರುತ್ತದೆ ಮತ್ತು ಎಲ್ಲವೂ 7ನೇ ಮುದ್ರೆಯಿಂದ ಬರುತ್ತದೆ.

*"ಇವುಗಳಲ್ಲಿ ದೇವರ ರೌದ್ರವು ಮುಗಿದಿರುವುದು"*– 6:16-17; 11:18; 14:10,19. **2**

**15:2** ದೇವದೂತರು ರೌದ್ರದ ಪಾತ್ರೆಗಳನ್ನು ಹೊಯ್ಯುವುದಕ್ಕಿಂತ ಮುಂಚೆ, ಸುಂದರ ಮತ್ತು ಆಶೀರ್ವಾದವುಳ್ಳ ದೃಶ್ಯವು ಕಾಣಿಸುತ್ತದೆ.

*"ಬೆಂಕಿ"*– ಟಿಪ್ಪಣಿ ವಿಮೋ 3:2. ಭೂಮಿಯ ಮೇಲೆ ದೇವರ ನ್ಯಾಯತೀರ್ಪನ್ನು ಕಾರ್ಯಗತಗೊಳಿಸಲು ಪರಲೋಕವು ಸಿದ್ಧವಾಗುತ್ತದೆ.

*"ಮೃಗದ ಮೇಲೆ ಜಯಹೊಂದಿದವರು"*–ವಾಸ್ತವವಾಗಿ ಇವರು ಮೃಗವನ್ನು ಜಯಗಳಿಸಿದವರು ಮತ್ತು ಕೊಲ್ಲಲ್ಪಟ್ಟವರು (13:7,15). ದುಷ್ಟತ್ವದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕಿಂತಲೂ ಅವರು ಸಾಯಲು ಬಯಸುತ್ತಾರೆ. ಮತ್ತು ಎಲ್ಲೀಯಾಗಲೀ, ಯಾವುದೇ ಸಮಯದಲ್ಲಿ ಯಾಗಲಿ ಇದು ದೊಡ್ಡ ಆತ್ಮಿಕ ಜಯವಾಗಿದೆ. ಮೃಗವು ಜಯಗಳಿಸಿದಂತೆ ಕಾಣತ್ತದೆ ಮತ್ತು ದೈಹಿಕವಾದ ಜಯಗಳಿಸಿದೆ ಆದರೆ ಈ ವಿಶ್ವಾಸಿಗಳಿಗೆ ಇದು ಆತ್ಮಿಕ ಜಯ, ಶಾಶ್ವತವಾದ ಜಯ. ಅವರ ಜಯವು ಇದಾಗಿರುತ್ತದೆ: ಅವರು ಮೃಗವನ್ನು ಆರಾಧಿಸಲು ನಿರಾಕರಿಸುತ್ತಾರೆ ಅಥವಾ ಅವನ ಗುರುತನ್ನು ಹಾಕಿಸಿಕೊಳ್ಳುವುದಿಲ್ಲ, ಆದ್ದರಿಂದ ಅದು ಸಂಗೀತ ಮತ್ತು ಹಾಡನ್ನು ಹಾಡುವ ಸಮಯವಾಗಿರುತ್ತದೆ.

*"ಗಾಜಿನ ಸಮುದ್ರ"*– 4:6. **3**

**15:3** *"ಮೋಶೆಯ ಹಾಡು"*– ಹಳೆಯ ಒಡಂಬಡಿಕೆಯಲ್ಲಿ ಮೋಶೆಯ ಎರಡು ಹಾಡುಗಳಿವೆ – ವಿಮೋ 15:1-18 ಮತ್ತು ಧರ್ಮೋ 32:1-43. ಈ ಸಂದರ್ಭದಲ್ಲಿ ಯಾವುದಾದರೂ ಒಂದು ಸೂಕ್ತವಾಗಿದೆ. ಒಂದನೆಯದು ಪರೋಹ ಮತ್ತು ಅವನ ಸೈನ್ಯದಿಂದ ಬಿಡುಗಡೆಯ ಬಗ್ಗೆ ಮಾತಾಡುತ್ತದೆ (ಕೆಲವೊಂದು ರೀತಿಯಲ್ಲಿ ಪರೋಹನು "ಮೃಗದ" –ಒಳ್ಳೆಯ ಚಿತ್ರವಾಗಿದ್ದಾನೆ), ಇನ್ನೊಂದು ಕಡೆಯಲ್ಲಿ ದುಷ್ಟರನ್ನು ಉರುಳಿಸುವದನ್ನು ವಿವರಿಸುತ್ತದೆ (ಧರ್ಮೋ 32:16-19,22,32,35,41-43).

*"ಕುರಿಯಾದಾತನು"*– 5:9. ಮುಂದೆ ಬರುವಂತದ್ದು ಯಜ್ಞದ ಕುರಿಯಾದಾತನ ಹಾಡಾಗಿದೆ.

*"ನಿನ್ನ ಕೃತ್ಯಗಳು ಮಹತ್ತಾದವುಗಳು"*– ವಿಮೋ 15:11; ಕೀರ್ತನೆ 92:5; 111:2.

*"ನಿನ್ನ ಮಾರ್ಗಗಳು ನ್ಯಾಯವೂ ಸತ್ಯವೂ ಆಗಿವೆ"*– 16:5,7; 19:2; ಧರ್ಮೋ 32:4; ಕೀರ್ತನೆ 33:5; 89:14; 145:17. **4**

**15:4** *"ಭಯಪಡದವರು"*– ಇದರ ಅರ್ಥ ಕ್ರಮೇಣವಾಗಿ ಭೂಮಿಯ ಎಲ್ಲಾ ಜನರು ಆತನಿಗೆ ಭಯಪಡುವರು ಮತ್ತು ಆತನನ್ನು ಮಹಿಮೆಪಡಿಸುವರು. ಭಯಯದ ಬಗ್ಗೆ ಬೇರೆ ಉಲ್ಲೇಖಗಳನ್ನು 14:7 ರಲ್ಲಿ ನೋಡಿ.

*"ನೀನೊಬ್ಬನೇ ಪರಿಶುದ್ಧನು"*– ಲೂಕ 1:35; ಅಪೊ 2:27; 3:14 ರಲ್ಲಿ ಕರ್ತನಾದ ಯೇಸುವಿನ ಬಗ್ಗೆ ಏನು ಹೇಳಿದೆ ಎಂದು ಹೋಲಿಸಿ ನೋಡಿರಿ (ಅಲ್ಲಿಯ ಟಿಪ್ಪಣಿ). ದೇವರ ಪರಿಶುದ್ಧತೆಯ ಬಗ್ಗೆ ಟಿಪ್ಪಣಿ ಯಾಜಕ 20:7.

*"ಎಲ್ಲಾ ಜನಾಂಗಗಳು"*– ಕೀರ್ತನೆ 66:4; 86:9; ಯೆಶಾಯ 66:23; ಜೆಫ 2:11; ಜೆಕರ್ಯ 14:16-17; ಮಲಾಕಿ 1:11.

*"ನಿನ್ನ ನೀತಿಯುಳ್ಳ ಕೃತ್ಯಗಳು"*– ದುಷ್ಟ ಜನರ ಮೇಲೆ ಆತನ ರೌದ್ರವನ್ನು ಹೊಯ್ಯುವುದರ ಮೂಲಕ ಇದನ್ನು ಪ್ರದರ್ಶಿಸಿದನು. **5**

**15:5** *"ಪವಿತ್ರಸ್ಥಾನ"*– 7:15; 11:19.

*"ಸಾಕ್ಷಿಯ ದೇವದರ್ಶನಗುಡಾರ"*– ವಿಮೋ 38:21; ಸಂಖ್ಯಾ 1:50; ಇಬ್ರಿ 8:2,5 – ಹಳೆಯ ಒಡಂಬಡಿಕೆಯಲ್ಲಿ ಹೀಗೆ ಕರೆಯಲ್ಪಟ್ಟಿತು ಯಾಕಂದರೆ "ಸಾಕ್ಷಿ" (ದಶಾಜ್ಞೆಗಳು) ಯನ್ನು ಮಂಜೂಷದಲ್ಲಿ ಇಡಲಾಗಿತ್ತು. ಹೊಸ ಒಡಂಬಡಿಕೆಯಲ್ಲಿ ಈ ಹೆಸರು ಇಲ್ಲಿ ಮಾತ್ರ ಕಾಣಿಸಿಕೊಂಡಿದೆ – ಲೋಕವು ಆತನ ಆಜ್ಞೆಗಳನ್ನು ಅದರ ಕಾಲಿನ ಕೆಳಗೆ ತುಳಿದು ಹಾಕಿರುವುದರಿಂದ ದೇವರು ತನ್ನ ಸಂಪೂರ್ಣ ಕೋಪವನ್ನು ಲೋಕದ ಮೇಲೆ ಹೊಯ್ಯಲಿರುವುದರಿಂದ ಇಲ್ಲಿ ಕಾಣಿಸಿಕೊಂಡಿರಬಹುದು. **6**

**15:6** *"ಪವಿತ್ರಸ್ಥಾನದೊಳಗಿಂದ"*– ದೇವರ ಸನ್ನಿಧಾನದಿಂದ. **7**

**15:7** *"ನಾಲ್ಕು ಜೀವಿಗಳು"*– 4:6-8.

*"ರೌದ್ರ"*– 14:10 ರಲ್ಲಿನ ಉಲ್ಲೇಖಗಳು. **8**

**15:8** *"ಹೊಗೆ"*– ವಿಮೋ 19:18; ಕೀರ್ತನೆ 18:8; ಯೆಶಾಯ 6:4; 30:27.

*"ಪ್ರವೇಶಿಸುವುದಕ್ಕೆ ಯಾರಿಂದಲೂ ಆಗಲಿಲ್ಲ"*– ವಿಮೋ 40:34; 1 ಅರಸು 8:10-11.

# 16[1]

**16:1** *"ಪವಿತ್ರಸ್ಥಾನದಿಂದ ಬಂದ ಮಹಾ ಶಬ್ದ"*– ದೇವರ ಸ್ವರವಾಗಿರಬಹುದು. ಈ

ಸಮಯದಲ್ಲಿ ಪ್ರವೇಶಿಸುವದಕ್ಕೆ ಯಾರಿಂದಲೂ ಸಾಧ್ಯವಾಗಲಿಲ್ಲ (15:8).

*"ಪಾತ್ರೆಗಳು"*– ಏಳು ಮುದ್ರೆಗಳು ದೇವರ ಕೈಯಲ್ಲಿರುವ ಸುರುಳಿಯು ಸಂಪೂರ್ಣವಾಗಿ ಮುದ್ರಿಸಿದೆ (5:1). ಮುಂದೆ ಬರುವಂತ ನಾಶನಗಳ ಸಂಪೂರ್ಣ ಎಚ್ಚರಿಕೆಯನ್ನು ಏಳು ತುತೂರಿಗಳು ಕೊಡುತ್ತವೆ. ಈ ಏಳು ಪಾತ್ರೆಗಳು ಇಡೀ ಲೋಕದ ವಿರುದ್ಧವಾಗಿ ದೇವರ ರೌದ್ರವನ್ನು ಸಂಪೂರ್ಣ ಆಳತೆಯಲ್ಲಿ ತುಂಬಿಕೊಂಡಿವೆ. ಅವುಗಳ ಅಡಿಯಲ್ಲಿ ಬರುವ ವಿಪತ್ತುಗಳು ತುತೂರಿಯ ಅಡಿಯಲ್ಲಿ ಬರುವ ವಿಪತ್ತುಗಳಿಗೆ ಸಮನಾಗಿವೆ, ಆದರೆ ಅದಕ್ಕಿಂತಲೂ ಘೋರ ಮತ್ತು ತೀಕ್ಷ್ಣವಾಗಿರುತ್ತವೆ. **2**

**16:2** *"ಉರಿ ಹುಣ್ಣು"*– ವಿಮೋ 9:9-11 ಹೋಲಿಸಿರಿ. **3**

**16:3** *"ಸಮುದ್ರ"*– 8:8-9. 2ನೇ ತುತೂರಿಯ ಅಡಿಯಲ್ಲಿ ಮೂರನೇ ಒಂದು ಭಾಗದ ಸಮುದ್ರದ ಮತ್ತು ಅದರಲ್ಲಿರುವ ಜೀವಿಗಳ ಮೇಲೆ ಪರಿಣಾಮ ಭೀರಿತು. **4**

**16:4** 8:10-11 ಹೋಲಿಸಿರಿ – 3ನೇ ತುತೂರಿಯ ಅಡಿಯಲ್ಲಿ ಮೂರನೇ ಒಂದು ಭಾಗದ ನದಿಗಳು ಮತ್ತು ಬುಗ್ಗೆಗಳ ಮೇಲೆ ಪರಿಣಾಮ ಭೀರಿತು. **5-7**

**16:5-7** 15:3 ರಲ್ಲಿನ ಉಲ್ಲೇಖಗಳನ್ನು ನೋಡಿರಿ. ದುಷ್ಟ ಮನುಷ್ಯರ ಮೇಲೆ ಆತನ ಕೋಪವು ಹೊಯ್ಯಲ್ಪಟ್ಟ ದೇವರ ನೀತಿಯನ್ನು ಮೂರು ಸಾರಿ ಪ್ರಕಟಿಸಿದೆ. 2 ಥೆಸ 1:5-7 ಮತ್ತು ಕೀರ್ತನೆ 47:2 ರ ಟಿಪ್ಪಣಿಯನ್ನು ಸಹ ನೋಡಿರಿ. ಜನರು ಇದನ್ನು ನಂಬಲು ಕಷ್ಟಪಡುವುದರಿಂದ, ಒಂದು ವೇಳೆ ಇದನ್ನು ಒತ್ತಿ ಹೇಳಿದಂತಿದೆ. ಈಗ ಈ ವಿಪ್ಪತ್ತುಗಳು ಭೂಮಿಯ ಮೇಲೆ ಬಂದರೆ, ಏನೂ ಅರಿಯದ ಮುಗ್ಧ ಮಾನವರ ಮೇಲೆ ಆತನು ಅನೀತಿಯಿಂದ ಕಾರ್ಯಮಾಡಿದನೆಂದು ದೇವರನ್ನು ಕೆಲವರು ದೂರುತ್ತಾರೆ. ಇದು ಯಾಕಂದರೆ ಅವರಿಗೆ ಈ ಕಾರ್ಯಗಳ ಬಗ್ಗೆ ಸಂಪೂರ್ಣವಾಗಿ ತಪ್ಪಾದ ನೋಟವನ್ನು ಹೊಂದಿರುತ್ತಾರೆ. ಈ ಯುಗದ ಅಂತ್ಯದಲ್ಲಿ ಈ ಲೋಕದ ಮೇಲೆ ಬಹಳ ಘೋರವಾದ ವಿಪತ್ತುಗಳು ಒಂದು ವೇಳೆ ಬಂದರೆ, ಇವುಗಳನ್ನು ಕಳಿಸಿದ ದೇವರು ಪರಿಪೂರ್ಣವಾದ ನ್ಯಾಯವನ್ನು ಮಾಡಿದ್ದಾನೆಂದು ಪರಲೋಕದಲ್ಲಿರುವವರೆಲ್ಲರೂ ಒಪ್ಪುತ್ತಾರೆ. **6**

**16:6** ಇಲ್ಲಿ ಪರಿಪೂರ್ಣ ಪ್ರತೀಕಾರದ ನಿಯಮವು ಕೆಲಸ ಮಾಡುತ್ತಿದೆ. ಯಾಜಕ 26:23-24; ಸಂಖ್ಯಾ 31:1-3; ಧರ್ಮೋ 32:35,41,42.

*"ಇದಕ್ಕೆ ಅವರು ಪಾತ್ರರು"*– ಸಂಪೂರ್ಣವಾಗಿ ಪಾತ್ರರಾಗದ ಹೊರತು ದೇವರಿಂದ ಯಾರೂ

ಸಹ ಯಾವ ಶಿಕ್ಷೆಯನ್ನು ಹೊಂದುವುದಿಲ್ಲ. **7**

**16:7** *"ಯಜ್ಞವೇದಿ"*– 6:9-10. **8**

**16:8** *"ಸೂರ್ಯ"*– 8:12 ಹೋಲಿಸಿರಿ ಎಲ್ಲಿ ಸೂರ್ಯನ ಮೂರನೇ ಒಂದು ಭಾಗ ಮಾತ್ರ ಪರಿಣಾಮ ಬೀರಿತು, ಮುಂತಾದವುಗಳು ಪರಿಣಾಮ ಬೀರಿದ್ದವು. **9**

**16:9** *"ದೇವರ ನಾಮವನ್ನು ದೂಷಿಸಿದನು"*– ಇದು ಮೂರು ಸಾರಿ ಪುನರಾವರ್ತಿತವಾಗಿದೆ (ವಚನಗಳು 11,21). ಇದು ಮನುಷ್ಯರ ದುಷ್ಟತನ, ಕಾಠಿಣ್ಯತೆ, ಮೂರ್ಖತನವನ್ನು ಒತ್ತಿ ಹೇಳುತ್ತದೆ. ಅವರ ಮೇಲೆ ಈ ವಿಪತ್ತುಗಳನ್ನು ತರುವ ತಮ್ಮ ಪಾಪಗಳನ್ನು ಬಿಟ್ಟು ಅರಿಕೆಮಾಡುವ ಬದಲು, ನೀತಿಯಿಂದ ಅವರನ್ನು ಕಳುಹಿಸಬೇಕಾದ ದೇವರ ವಿರುದ್ಧವಾಗಿ ಅವರು ದಂಗೆ ಏಳುತ್ತಾರೆ. ರೋಮಾ 8:7; ಯೋಹಾನ 7:7.

*"ಮಾನಸಾಂತರ ಪಡಲಿಲ್ಲ"*– 9:20-21. **10**

**16:10** *"ಮೃಗದ ಸಿಂಹಾಸನ"*– ಈ ಸಿಂಹಾಸನ ಬಗ್ಗೆ ಈ ಪುಸ್ತಕದಲ್ಲಿ ಮಾತ್ರ ಉಲ್ಲೇಖಿಸಿದೆ (ದೇವರ ಸಿಂಹಾನವನ್ನು 40 ಸಾರಿ ಉಲ್ಲೇಖಿಸಲ್ಪಟ್ಟಿದೆ). ಎಲ್ಲಾ ಕಾರ್ಯಗಳು ಅವನ ಹತೋಟಿಯಲ್ಲಿದೆ ಎಂದು ಮೃಗವು ಅಂದುಕೊಳ್ಳುತದೆ ಮತ್ತು ಪರಲೋಕವು ಆಳುತ್ತಿದೆ ಎಂದು ಬಹು ತಡವಾಗಿ ಅರಿತುಕೊಳ್ಳುತ್ತದೆ (ದಾನಿ 4:26).

*"ಕತ್ತಲಾಯಿತು"*– ವಿಮೋ 10:21-23 ಹೋಲಿಸಿರಿ.

*"ಕಷ್ಟದ ದೆಸೆಯಿಂದ"*– ಹಿಂದಿನ ವಿಪತ್ತುಗಳಿಂದ ಉಂಟಾದ ಸುಡಿವಿಕೆಯಿಂದ. **12-16**

**16:12-16** 9:14-19 ಹೋಲಿಸಿರಿ. **12**

**16:12** *"ಯೂಫ್ರೇಟೀಸ್"*– 9:14 ಟಿಪ್ಪಣಿ. ಈ ನದಿಯ ಪೂರ್ವಕ್ಕೆ ಇರಾನ್, ಆಫ್ಘಾನಿಸ್ತಾನ, ಪಾಕಿಸ್ತಾನ, ಭಾರತ, ಚೈನಾ, ಮುಂತಾದ ದೇಶಗಳಿವೆ. ನೀರು ಬತ್ತಿಹೋಗುವುದು ಬಹುಶಃ ಈ ಎಲ್ಲಾ ದೇಶಗಳನ್ನು ಆಳುವವರು ಪಶ್ಚಿಮ ಏಷ್ಯಾದ ಕಡೆಗೆ ಪ್ರಯಾಣಿಸಲು ಇರುವ ಅಡಚಣೆಗಳನ್ನು ತೆಗೆದು ಹಾಕುವ ಸೂಚನೆಯಾಗಿರಬಹುದು. **13-14**

**16:13-14** ಕಾರಣಗಳು ಮತ್ತು ಸೈನ್ಯಗಳ ಕಾರ್ಯತಂತ್ರವು ಈ ಯುಗದ ಅಂತ್ಯದಲ್ಲಿ ಬಹು ದೊಡ್ಡ ಸೈನ್ಯಗಳ ಚಲನೆಗೆ ಮೂಲ ಕಾರಣಗಳಾಗಿರುವುದಿಲ್ಲ. ಯೆಹೆಜ್ಕೇಲ 38:4; 39:2 ಹೋಲಿಸಿರಿ. ಆಡಳಿತಗಾರರು ವಂಚಿಸಲ್ಪಡುತ್ತಾರೆ ಮತ್ತು ದೆವ್ವಗಳಿಂದ

ಪ್ರಚೋದಿಸಲ್ಪಡುತ್ತಾರೆ. ಈ ದೆವ್ವಗಳ ಮೂಲವನ್ನು ಗಮನಿಸಿರಿ – ಸೈತಾನನು, ಬರಲಿರುವ ಕ್ರಿಸ್ತವಿರೋಧಿ ಮತ್ತು ಸುಳ್ಳು ಪ್ರವಾದಿ (13ನೇ ಅಧ್ಯಾಯದಲ್ಲಿರುವ ಎರಡನೆಯ "ಮೃಗ"). ದೆವ್ವಗಳ ಬಗ್ಗೆ ಟಿಪ್ಪಣಿ ಮತ್ತಾಯ 4:24. **14**

**16:14** *"ಸರ್ವಶಕ್ತನಾದ ದೇವರ ಮಹಾದಿನದಲ್ಲಾಗುವ ಯುದ್ಧ"*– 6:17; 19:19; ಯೆಶಾಯ 42:13; ಯೋವೇಲ 3:9-13; ಜೆಫ 1:14-18; ಜೆಕರ್ಯ 14:3 ಹೋಲಿಸಿರಿ. **15**

**16:15** *"ಕಳ್ಳನು ಬರುವಂತೆ"*– 3:3; ಮತ್ತಾಯ 24:42-44; 1 ಥೆಸ 5:2; 2 ಪೇತ್ರ 3:10.

*"ಎಚ್ಚರವಾಗಿದ್ದು"*– 1 ಥೆಸ 5:4-8.

*"ನಿರ್ವಾಣನಾಗಿ"*– 3:17-18. **16**

**16:16** *"ಅವು"*– ದೆವ್ವಗಳು (ವ.13,14).

*"ಹರ್ಮಗೆದೋನ್"*– ಮೆಗಿದ್ದೋವಿನ ಬೆಟ್ಟ ಅಥವ ಪರ್ವತ ಎಂಬ ಅರ್ಥವನ್ನು ಕೊಡುತ್ತದೆ. ಪರ್ವತ ಅಥವ ಬೆಟ್ಟ ಎಂಬುದಕ್ಕೆ ಇಬ್ರಿಯ ಭಾಷೆಯ ಪದ "ಹರ್". ಮೆಗಿದ್ದೋ ಎಂಬುದು ಇಸ್ರಾಯೇಲಿನ ನಜರೇತಿನ ದಕ್ಷಿಣಕ್ಕೆ ಮತ್ತು ಗಲಿಲಾಯದ ಬೆಟ್ಟಗಳ ಮತ್ತು ಕಾರ್ಮೇಲ್ ಬೆಟ್ಟದ ಪೂರ್ವದಲ್ಲಿರುವ ದೊಡ್ಡ ಬಯಲು (2 ಪೂರ್ವ 35:22; ಜೆಕರ್ಯ 12:11). ಇದನ್ನು ಎಸ್ಡ್ರಾಲಿಯೋನ್ ಅಂಗಳ ಮತ್ತು ಜಸರೀಲ್ ಕಣಿವೆ ಎಂದು ಕರೆಯುತ್ತಾರೆ. ತಾಬೋರಿನ ಬೆಟ್ಟವು ಈಶಾನ್ಯದಲ್ಲಿದೆ ಮತ್ತು ಗಲ್ಬೋವ ಬೆಟ್ಟವು ಈ ಅಂಗಳದ ಆಗ್ನೇಯ ದಿಕ್ಕಿನಲ್ಲಿದೆ. ಪ್ರಾಚೀನವಾದ ಮತ್ತು ಕೋಟೆಗಳಿಂದ ಕೂಡಿದ ಮೆಗಿದ್ದೋ ಪಟ್ಟಣವು ಅದರ ದಕ್ಷಿಣದ ತುದಿಯಲ್ಲಿದೆ (ನ್ಯಾಯ 1:27; 1 ಅರಸು 9:15). **17**

**16:17** *"ದೇವಾಲಯ"*– ವ.1.

*"ಸಿಂಹಾಸನದ ಕಡೆಯಿಂದ"*– 19:5; 21:3. **18**

**16:18** 4:5; 8:5; 11:19.

*"ಭೂಕಂಪವಾಯಿತು"*– ಈ ಪುಸ್ತಕದಲ್ಲಿ ಈ ಪದವನ್ನು ಏಳು ಸಾರಿ ಉಪಯೋಗಿಸಲಾಗಿದೆ.

ಇದು ಚರಿತ್ರೆಯಲ್ಲಿಯೇ ತುಂಬಾ ಕೆಟ್ಟದ್ದಾಗಿರುತ್ತದೆ. **19**

**16:19** *"ಮಹಾ ಪಟ್ಟಣ"*– ಭೂಕಂಪದ ಉಲ್ಲೇಕನದ ನಂತರ ತಕ್ಷಣವೇ ಬಾಬೇಲಿನ ಉಲ್ಲೇಖನವು ಬಾಬೇಲನ್ನು ಸಂಕೇತಿಸುವುದನ್ನು ಇಲ್ಲಿ ಅರ್ಥೈಸಲಾಗಿದೆ ಎಂದು ಯೋಚಿಸಲು ಕಾರಣವನ್ನು ನೀಡುತ್ತದೆ (17:9,18). ಹಾಗೂ 18ನೇ ಅಧ್ಯಾಯದಲ್ಲಿ ಆಕೆಯ ಬೀಳುವಿಕೆಯ ವಿವರಣೆಯು ಮಹಾ ಭೂಕಂಪದ ಸಮಯದಲ್ಲಿ ಏನು ನಡೆಯುತ್ತದೆಂಬುದರ ಸೂಚಕವಾಗಿದೆ (18:8-10,21. ಅನೇಕ ವೇಳೆ ಬೆಂಕಿಯು ಭೂಕಂಪದ ಪರಿಣಾಮವಾಗಿದೆ).

*"ಜನಾಂಗಗಳ ಪಟ್ಟಣಗಳು ಬಿದ್ದವು"*– ಈ ಭೂಕಂಪವು ಸ್ಥಳೀಯವಾದದ್ದಲ್ಲ (11:13 ರಂತೆ). ಯೆಶಾಯ 24:18-20; ಇಬ್ರಿ 12:26-27).

*"ಉಗ್ರಕೋಪವೆಂಬ ದ್ರಾಕ್ಷಾರಸದ ಪಾತ್ರೆ"*– 14:10 ನೋಡಿರಿ. **20**

**16:20** ನೋಡಿರಿ – 6:14 **21**

**16:21** *"ದೇವರನ್ನು ದೂಷಿಸಿದರು"*– ವ.9,11

*"ಆನೆಕಲ್ಲಿನ ಮಳೆ"*– ವಿಮೋ 9:22-26 ಹೋಲಿಸಿರಿ.

# 17 1

**17:1** *"ಜಾರಸ್ತ್ರೀ"*– ದೇವರಿಗೆ ಅಪನಂಬಿಗಸ್ತರಾಗಿ ಬೇರೆ ದೇವರುಗಳನ್ನು ಸೇವಿಸುವಂತ ದೇವಜನರಿಗೆ ಈ ಪದವನ್ನು ಅನೇಕ ವೇಳೆ ಸತ್ಯವೇದದಲ್ಲಿ ಉಪಯೋಗಿಸಲ್ಪಟ್ಟಿದೆ. ಯೆಶಾಯ 1:21; ಯೆರೆ 2:20; 3:1; ಯೆಹೆಜ್ಕೇಲ 16:15-34; ಹೋಶೇಯ 9:1. ಇದನ್ನು ಸಾಂಕೇತಿಕವಾಗಿ ಉಪಯೋಗಿಸಿದಾಗ, ಇಲ್ಲಿ ಉಪಯೋಗಿಸಿದಂತೆ ಇದರ ಸಾಧಾರಣ ಅರ್ಥವು ಇದಾಗಿರುತ್ತದೆ. ಒಂದು ಜಾಗದಲ್ಲಿ ತೂರ್ ಪಟ್ಟಣದ ವ್ಯಾಪಾರಸ್ಥರಿಗೆ ಇದನ್ನು ಉಪಯೋಗಿಸಲಾಗಿದೆ (ಯೆಶಾಯ 23:15-17), ಮತ್ತು ಇನ್ನೊಂದು ಸಾರಿ ನಿನೆವೆಯ ಕುರಿತು (ನಹೂ 3:4), ಈ ಎರಡು ಪಟ್ಟಣಗಳು ವಿಗ್ರಹಾರಾಧನೆಯ ಪಟ್ಟಣಗಳು. ಆಂತಹ ಸಂದರ್ಭದಲ್ಲಿ ಅವರು ಸತ್ಯ ದೇವರನ್ನು ನಿರ್ಲಕ್ಷಿಸಿ ಈ ಲೋಕದ ಸಂಪತ್ತಿನ ಹಿಂದೆ ಹೋಗುವುದನ್ನು ಅರ್ಥೈಸುತ್ತದೆ. ಈ ಅಧ್ಯಾಯದಲ್ಲಿರುವ "ಜಾರಸ್ತ್ರೀ" –ಒಂದು ಪಟ್ಟಣ – ವ.18. ಆದರೆ ಅದು ಬಹು ದೊಡ್ಡ ಧಾರ್ಮಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು

ಪ್ರತಿನಿಧಿಸುತ್ತದೆ ಎಂದು ನಾವು ಯೋಚಿಸುವುದರಲ್ಲಿ ತಪ್ಪೇ ಇಲ್ಲ.

*"ಬಹಳ ನೀರುಗಳ"*– ವ.15. 2

**17:2** *"ಕುಡಿದು ಮತ್ತರಾದರು"*–ಸುಳ್ಳು ಧಾರ್ಮಿಕ ಮತ್ತು ವಾಣಿಜ್ಯಯಿಂದ ಜನರು ಕುಡಿಯುತ್ತಾರೆ ಮತ್ತು ಅವರ ಸರಿಯಾದ ಮನಸ್ಸಿನಿಂದ ಹೊರಗೆ ಉಳಿಯುತ್ತಾರೆ. ಅವರು ಆಕೆಯ ತನ್ನ ದುಷ್ಟತ್ವವನ್ನು ಹಂಚಲು ಆಕೆಯು ತನ್ನ "ದ್ರಾಕ್ಷಾರಸವನ್ನು" –ಉಪಯೋಗಿಸಿ ಅವರನ್ನು ಮರಳುಗೊಳಿಸುತ್ತಾಳೆ.

*"ಜಾರತ್ವ"*– ದೇವಜನರೆಂದು ಕರೆಸಿಕೊಂಡವರು ಆತ್ಮಿಕ ವಿಷಯಗಳಲ್ಲಿ ಅಪನಂಬಿಗಸ್ತರಾದಾಗ ಅದನ್ನು ಸೂಚಿಸಲು ಈ ಪದವನ್ನು ಹಳೆಯ ಒಡಂಬಡಿಕೆಯಲ್ಲಿ ಅನೇಕ ಸಾರಿ ಉಪಯೋಗಿಸಲ್ಪಟ್ಟಿದೆ. ಯೆರೆ 3:6,8,9; ಯೆಹೆಜ್ಕೇಲ 23:37,43; ಹೋಶೇಯ 1:2; 2:4-5 ನೋಡಿರಿ. ನಿಜವಾಗಿಯೂ, ಇದನ್ನಲ್ಲದೆ ಬೇರೆಯಾವುದನ್ನೂ ಸಾಂಕೇತಿಕವಾಗಿ ಎಲ್ಲಿಯೂ ಉಪಯೋಗಿಸಿಲ್ಲ. ಹಳೆಯ ಒಡಂಬಡಿಕೆಯಲ್ಲಿ ಬಿದ್ದು ಹೋದವರ ಬಗ್ಗೆ, ಧರ್ಮಭ್ರಷ್ಟರಾದ ಇಸ್ರಾಯೇಲ್ಯರ ಬಗ್ಗೆ ಯಾವಾಗಲೂ ಮಾತಾಡುತ್ತದೆ. ಇಲ್ಲಿ ಅಂತ್ಯಕಾಲದಲ್ಲಿ ಬಿದ್ದು ಹೋದ, ಧರ್ಮಭ್ರಷ್ಟವಾದ ಕ್ರೈಸ್ತತ್ವದ ಬಗ್ಗೆ ಮಾತನಾಡುತ್ತಿರುವುದು ಬಹುತೇಕ ಖಚಿತವಾಗಿದೆ ಎಂದು ಅರ್ಥವಾಗುತ್ತದೆ (ಮತ್ತಾಯ 24:10-12; 2 ತಿಮೊ 3:1-5; 4:3-4; 2 ಪೇತ್ರ 2:1-3 ಹೋಲಿಸಿರಿ). ಇದರ ಅರ್ಥ ಇದಾಗದಿದ್ದರೆ, ಆಗ ಲೋಕದ ಮೇಲೆ ದೇವರ ನ್ಯಾಯತೀರ್ಪಿನ ಬಗ್ಗೆ ವಿವರಿಸುವ ಈ ಅಧ್ಯಾಯಗಳಲ್ಲಿ ಧರ್ಮಭ್ರಷ್ಟವಾದ ಕ್ರೈಸ್ತತ್ವದ ಬಗ್ಗೆ ಎಲ್ಲಿಯೂ ಉಲ್ಲೇಖಿಸಿಲ್ಲ. ಮತ್ತು ಇದು ನಿಜವಾಗಿಯೂ ಬಹಳ ವಿಚಿತ್ರವೆನಿಸುತ್ತದೆ. ಆ "ರಾಜರು" ಆ "ಸ್ತ್ರೀ" ಯೊಂದಿಗೆ ವ್ಯಭಿಚಾರ ಮಾಡಿದ್ದಾರೆ ಎಂದು ಹೇಳುವಾಗ ಇದರ ಅರ್ಥ ತಮ್ಮ ಲಾಭಕ್ಕಾಗಿ ಅಥವಾ ಸಂತೋಷಕ್ಕಾಗಿ ಆಕೆಯೊಂದಿಗೆ ನಿಕಟ ವ್ಯವಹಾರವನ್ನು ಹೊಂದಿದ್ದಾರೆಂದು ಅರ್ಥ. 3

**17:3** *"ಅಡವಿ"*– ಒಂದು ವೇಳೆ ಆ ಸ್ತ್ರೀಯು ಆತ್ಮೀಕ ಮರುಭೂಮಿಯನ್ನು ಪ್ರತಿನಿಧಿಸುತ್ತಿರಬಹುದು.

*"ಸ್ತ್ರೀ"*– ಸತ್ಯವೇದದಲ್ಲಿ ಕೆಲವು ಸಾರಿ ಧಾರ್ಮಿಕ ಸಭೆಯನ್ನು ಸೂಚಿಸಲು ಸ್ತ್ರೀಯನ್ನು ಸಾಕೇತಿಕವಾಗಿ ಉಪಯೋಗಿಸಲಾಗಿದೆ (ಯೆಶಾಯ 54:5-6; ಯೆರೆ 3:1; ಎಫೆ 5:23-32; ಪ್ರಕ 12:1; 19:7-8).

*“ಮೃಗ”*– 13:1. ಮೃಗವು ರಾಜ್ಯವನ್ನು ಮತ್ತು ಅದನ್ನು ಆಳುವವರನ್ನು ಇಬ್ಬರನ್ನೂ ಸೂಚಿಸುತ್ತದೆ. ಆದ್ದರಿಂದ ಸ್ತ್ರೀಯು ಅವರಲ್ಲಿ ಯಾರನ್ನೂ ಪ್ರತಿನಿಧಿಸುವುದಿಲ್ಲ. ಆದರೆ ಮೃಗದ ಮೇಲೆ ಕುಳಿತುಕೊಂಡಿರುವುದು ಮೃಗದ ಆಳ್ವಿಕೆಯ ಪ್ರಾರಂಭದಲ್ಲಿ ಆಕೆಯನ್ನು ಮೃಗವು ಬೆಂಬಲಿಸುವುದನ್ನು ಮತ್ತು ಅದನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಪ್ರಯತ್ನಿಸುವುದನ್ನು ತೋರಿಸುತ್ತದೆ. ನಂತರ ಮೃಗವು ಆಕೆಯನ್ನು ನಾಶಮಾಡುತ್ತದೆ – ವ.16. **4**

**17:4** *“ಧೂಮ್ರವರ್ಣದ ವಸ್ತ್ರಗಳನ್ನು ರಕ್ತಾಂಬರವನ್ನೂ”*– ಕೆಲವು ವ್ಯಾಖ್ಯಾಯನಕಾರರು ಈ ಬಣ್ಣಗಳು ಐಷಾರಾಮಿ ಮತ್ತು ವೈಭವ ಅಥವಾ ರಾಜವೈಭವವನ್ನು ಮಾತ್ರ ಸೂಚಿಸುತ್ತದೆಂದು ಹೇಳುತ್ತಾರೆ. ಬೇರೆ ಕೆಲವರು ರೋಮನ್ ಕ್ಯಾಥೋಲಿಕ್ ಸಭೆಯ ಪ್ರಧಾನ ಧರ್ಮಾಧ್ಯಕ್ಷರನ್ನು ಹಾಗೂ ಬೇರೆ ಬಣ್ಣಗಳನ್ನು ಧರಿಸುವ ಬೇರೆ ಸಭೆಗಳ ಮುಖ್ಯ ಅಧಿಕಾರಿಗಳನ್ನು ಸೂಚಿಸುತ್ತದೆ ಎಂದು ಹೇಳುತ್ತಾರೆ.

*“ಚಿನ್ನ…ರತ್ನ”*– ಅಪಾರ ಸಂಪತ್ತನ್ನು ಸೂಚಿಸುತ್ತದೆ.

*“ಚಿನ್ನದ ಬಟ್ಟಲು”*– ಹೊರ ನೋಟಕ್ಕೆ ಶ್ರೀಮಂತ ಮತ್ತು ಆಕರ್ಷಕ (ಮತ್ತಾಯ 23:25-26 ಹೋಲಿಸಿರಿ).

*“ಅಸಹ್ಯವಾದವುಗಳು”*– ಹಳೆಯ ಒಡಂಬಡಿಕೆಯಲ್ಲಿ ಅಸಹ್ಯವಾದವುಗಳು ಆಗಾಗ್ಗ ವಿಗ್ರಹ ಮತ್ತು ವಿಗ್ರಹಾರಾಧನೆಯನ್ನು ಅರ್ಥೈಸುತ್ತದೆ (ಯೆರೆ 7:30 ರ ಟಿಪ್ಪಣಿ). **5**

**17:5** *“ಹಣೆಯ ಮೇಲೆ…ಹೆಸರು”*– ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಆ ಹೆಸರು ಆಕೆ ಯಾರೆಂಬುದನ್ನು ನಿಖರವಾಗಿ ವರ್ಣಿಸುತ್ತದೆ.

*“ಗೂಢಾರ್ಥ”*– ಇದರ ಅರ್ಥ ದೇವರು ಆಕೆಯ ರಹಸ್ಯವನ್ನು ಪ್ರಕಟಿಸದಿದ್ದರೆ ಆ ರಹಸ್ಯವನ್ನು ಯಾರಿಂದಲೂ ಪರಿಹರಿಸಲು ಸಾಧ್ಯವಿಲ್ಲ (ಮತ್ತಾಯ 13:11; ರೋಮಾ 16:25 ಹೋಲಿಸಿರಿ).

*“ಬಾಬೇಲೆಂಬ ಮಹಾನಗರಿ”*–ಆಕೆಯು ಅಕ್ಷರಶಃ ಬಹಳ ಹಿಂದೆ ನಾಶವಾದ ಬಾಬೆಲ್ ನಗರವಲ್ಲ (ವ. 18; ಯೆರೆ 50:39-40 ನೋಡಿರಿ). ಆಕೆಯು “ನಿಗೂಢವಾದ” ಬಾಬೇಲ್ ಆಗಿದ್ದಾಳೆ. ಆದರೆ ಕೆಲವು ವಿಧದಲ್ಲಿ ಆಕೆಯು ಆ ಬಾಬೇಲ್ ನಂತೆಯೇ ಇದ್ದಾಳೆ. ಬಾಬೇಲ್ ಪಟ್ಟಣವು ಸುಳ್ಳು ಧರ್ಮದ ಪಟ್ಟಣವಾಗಿತ್ತು. ಮೂಲತಃ ಅದನ್ನು ದೇವರಿಗೆ ಸವಾಲಾಗಿ

ಕಟ್ಟಲ್ಪಟ್ಟ ಪಟ್ಟಣವಾಗಿತ್ತು (ಆದಿ 9:1,7; 11:1-4). ಅದು ಸಂಪೂರ್ಣ ವಿಗ್ರಹಗಳಿಂದ ತುಂಬಿದ ಪಟ್ಟಣವಾಗಿತ್ತು (ಯೆರೆ 50:38), ಮತ್ತು ಬಹು ದೊಡ್ಡ ಧಾರ್ಮಿಕ ವ್ಯವಸ್ಥೆಯ ಕೇಂದ್ರವಾಗಿತ್ತು. ಆ ವ್ಯವ್ಯಸ್ಥೆಯ ಪ್ರಧಾನ ಯಾಜಕನನ್ನು "ಪರಮ ಮಠಾದೀಶ" ಎಂದು ಕರೆಯಲಾಗಿತ್ತಿತ್ತು (ಕಾಲಕ್ರಮೇಣವಾಗಿ ರೋಮನ್ನರ ಚಕ್ರವರ್ತಿಗಳು ಈ ಪದವಿಯನ್ನು ತೆಗೆದುಕೊಂಡರು, ನಂತರದ ದಿನಗಳಲ್ಲಿ ರೋಮನ್ ಕ್ಯಾಥೋಲಿಕ್ ಸಭೆಯ ಧರ್ಮಾಧಿಕಾರಿಗಳು ಮತ್ತು ಮುಖ್ಯ ಧರ್ಮಾಧ್ಯಕ್ಷರುಗಳು ಈ ಪವಿಯನ್ನು ತೆಗೆದುಕೊಂಡರು. ಇದರ ಅರ್ಥ "ಮುಖ್ಯ ಸೇತುವೆಗಾರ". "ಧರ್ಮಾಧಿಕಾರಿ" ಎಂಬ ಪದವು ಈ ದಿನಗಳಲ್ಲಿ ಪೋಪ್ಗಳಿಗೆ ಉಪಯೋಸಲಾಗುತ್ತಿದೆ ಇದರ ಅರ್ಥ "ಸೇತುವೆಗಾರ").

*"ಜಾರ ಸ್ತ್ರೀಯ ತಾಯಿ"*– ಇದರ ಅರ್ಥ ಆಕೆಯ ಹಾಗೆ (ವ.1), ಆತ್ಮೀಕ ಮತ್ತು ಧಾರ್ಮಿಕ ವಿಷಯಗಳಲ್ಲಿ ದೇವರಿಗೆ ಅಪನಂಬಿಗಸ್ತರಾಗಿರುವ ಗುಂಪುಗಳನ್ನು ಹುಟ್ಟುಹಾಕುವ ಮುಖ್ಯಸ್ಥೆ. ಈ ಸ್ತ್ರೀಯು ಪ್ರಾಚೀನ ಬಾಬೇಲಿನ ಮೂಲವನ್ನು ಹೊಂದಿರುವ ಸುಳ್ಳು ಧಾರ್ಮಿಕ ವ್ಯವಸ್ಥೆ ಮತ್ತು ರೋಮಿನಲ್ಲಿರುವ ಪ್ರಧಾನ ಕಛೇರಿಯೊಂದಿಗೆ ಅಂತಿಮ ಧರ್ಮಭ್ರಷ್ಟವಾದ ಧರ್ಮದಲ್ಲಿ ಅದರ ಅಂತ್ಯವನ್ನು ಕಾಣುತ್ತದೆ.

*"ಭೂಮಿಯ ಮೇಲಿರುವ ಅಸಹ್ಯವಾದ ಕಾರ್ಯಗಳು"*– ಧಾರ್ಮಿಕ ಜನರು ಒಬ್ಬನೇ ಸತ್ಯ ದೇವರನ್ನು ಬಿಟ್ಟುಬಿಡುವುದರಿಂದ ಅಸಹ್ಯವಾದ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ. **6**

**17:6** *"ದೇವಜನರ ರಕ್ತ"*– ಮೊದಲನೇ ಶತಮಾನದಲ್ಲಿ ರೋಮನ್ ಚಕ್ರವರ್ತಿಗಳು ಕೆಲವು ಸಾರಿ ಕ್ರೈಸ್ತರನ್ನು ಹಿಂಸಿಸುತ್ತಿದ್ದರು. ಅದರ ನಂತರ ಅನೇಕ ಶತಮಾನಗಳಿಗೆ ನಿಜವಾದ ವಿಶ್ವಾಸಿಗಳನ್ನು ಹಿಂಸಿಸುವ ಮಹಾ ಧಾರ್ಮಿಕ ಹಿಂಸಕರು ರೋಮನ್ ಕ್ಯಾಥೋಲಿಕ್ ಸಭೆಯಾಗಿದೆ ಮತ್ತು ಆಕೆಯು ಗುಣಿಸಲಾಗದ ಸಾವಿರಾರು ವಿಶ್ವಾಸಿಗಳನ್ನು ಕೊಂದಿದ್ದಾಳೆ (ಒಬ್ಬ ಪಂಡಿತರ ಎಣಿಕೆಯಂತೆ ಐದು ಕೋಟಿ – 50 ಮಿಲಿಯನ್). ಈ ಯುಗದ ಅಂತ್ಯದಲ್ಲಿ ಮೃಗವು (ಬಹುಶಃ ಪುನಶ್ಚೇತನಗೊಂಡ ರೋಮನ್ ಚಕ್ರವರ್ತಿ – 13:2 ರ ಟಿಪ್ಪಣಿ) ಹಿಂಸಕನಾಗಿರುತ್ತಾನೆ – 13:7,15 ಆದರೆ ಇಲ್ಲಿ ಆ ಸ್ತ್ರೀಯು ಮೃಗದ ಮೇಲೆ ಸವಾರಿ ಮಾಡುವುದನ್ನು ಕಾಣುತ್ತೇವೆ. **7-18**

**17:7-18** ಈ ವಚನಗಳಲ್ಲಿ ದೇವದೂತರು ಯೋಹಾನನಿಗೆ (ಮತ್ತು ನಮಗೆ) ಮೃಗದ ಮತ್ತು ಆ ಹೆಂಸಿನ ವಿಷಯವಾಗಿ ಮೂಲ ಭಾಷೆಯಲ್ಲಿ ನೇರವಾದ ವಿವರಣೆಯನ್ನು ಕೊಡುತ್ತಾನೆ. ನಾವು ಈ ವಿವರಣೆಯನ್ನು ಸ್ವೀಕರಿಸಬೇಕು ಮತ್ತು ಇದನ್ನು ಬೇರೆ ರೀತಿಯಲ್ಲಿ

ವಿವರಿಸಲು ಪ್ರಯತ್ನಿಸಬಾರದು – ನಾವು ಈ ಮೂಲ ಭಾಷೆಯ ವಿವರಣೆಯನ್ನು ತೆಗೆದುಕೊಂಡು ಅದನ್ನು ಸಾಂಕೇತಿಕವಾಗಿಸಲು ಪ್ರಯತ್ನಿಸಿದರೆ ಮಾಡಬಹುದು. ಆದರೂ ಅವನ ಕೆಲವು ಮಾತುಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಬುದ್ಧಿವಂತಿಕೆ ಬೇಕು (ವ.9). 8

**17:8** ವ್ಯಾಖ್ಯಾಯನಕಾರರನ್ನು ಚಿಕಿತಗೊಳಿಸಿದ ಒಂದು ಪ್ರಶ್ನೆ ಇದಾಗಿದೆ: ಇಲ್ಲಿ "ಮೃಗ" ಎಂಬ ಪದವು ಯಾವುದನ್ನು ಪ್ರತಿನಿಧಿಸುತ್ತದೆ ಒಬ್ಬ ವ್ಯಕ್ತಿಯನ್ನೋ ಅಥವಾ ಸಾಮ್ರಾಜ್ಯವನ್ನೋ? ಇದಕ್ಕೆ ಉತ್ತರ ಇದು ಸಾಮ್ರಾಜ್ಯಕ್ಕೆ ಅಧಿಪತಿಯಾದ ಒಬ್ಬ ವ್ಯಕ್ತಿಯನ್ನು ಪ್ರತಿನಿಧಿಸುತ್ತದೆ. ("ನಾನೇ ರಾಜ್ಯ" ಎಂದು ಫ್ರಾನ್ಸ್ ರಾಜನು ಹೇಳಿದಂತೆ).

*"ಮೊದಲು ಇತ್ತು, ಈಗ ಇಲ್ಲ"*– "ಮೃಗ" ಮತ್ತು "ಸ್ತ್ರೀ" ಈ ಎರಡು ಸಹ ರೋಮ್ ನಗರಕ್ಕೆ ಸಂಬಂಧಿಸಿದೆ (ವ.9,18). ದೇವದೂತನು ಯೋಹಾನನಿಗೆ ಈ ವಿವರಣೆಯನ್ನು ಕೊಟ್ಟಾಗ ರೋಮ್ ನಗರವು ಅಭಿವೃದ್ಧಿ ಹೊಂದಿದ ಬಹು ಬಲವುಳ್ಳ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಪಟ್ಟಣ ಅಥವಾ ಸಾಮ್ರಾಜ್ಯವೆಂದು ಎರಡನ್ನೂ ದೇವದೂತನು ಹೇಳಿರುವುದಿಲ್ಲ ಯಾಕಂದರೆ ಯೋಹಾನನ ದಿನಗಳಲ್ಲಿ "ಅದು ಇಲ್ಲ". ಆದರೆ ಅವನು ಒಬ್ಬ ವ್ಯಕ್ತಿಯ ಬಗ್ಗೆ ಹೇಳಬಹುದಾಗಿತ್ತು.

*"ಅಧೋಲೋಕದಿಂದ ಏರಿ ಬಂದು"*– 11:7 ನೋಡಿರಿ. ಅಧೋಲೋಕವು ಸತ್ತವರ ಕಾಣದ ಲೋಕವಾಗಿದೆ (9:1 ರ ಟಿಪ್ಪಣಿ). ಭವಿಷ್ಯದಲ್ಲಿ ಕ್ರಿಸ್ತವಿರೋಧಿಯ ಮುಖ್ಯಸ್ಥನು ಅಲ್ಲಿಂದ ಬರುವನು. ಮತ್ತು ಈ ಪ್ರಕಟನೆಯು ಯೋಹಾನನ ದಿನಗಳಿಗೆ ಭವಿಷ್ಯವಾಗಿತ್ತು (ಈಗಲೂ ಭವಿಷ್ಯವಾಗಿದೆ).

*"ನಾಶಕ್ಕೆ"*– 19:20.

*"ಜೀವಬಾಧ್ಯರ ಪಟ್ಟಿ"*– 13:18; 3:5; 20:12.

*"ಆಶ್ಚರ್ಯಪಡುವರು"*– 13:3 ನೋಡಿರಿ. ಅಲ್ಲಿ ಆಶ್ಚರ್ಯಪಡುವುದಕ್ಕೆ ಕಾರಣವೇನೆಂದರೆ ಒಬ್ಬರ ಸಾವು ಮತ್ತು ಜೀವಂತವಾಗುವ ಒಂದು ತಲೆ. 9

**17:9** ಏಳು ತಲೆಗಳು ಎರಡು ಚಿನ್ಹೆಗಳಾಗಿರುವುದರಿಂದ ಬುದ್ಧಿವಂತಿಕೆಯ ಅಗತ್ಯವಿದೆ.

*"ಸ್ತ್ರೀ ಕೂತುಕೊಂಡಿರುವ ಏಳು ಬೆಟ್ಟಗಳೇ"*– ಆ ಕಾಲದಲ್ಲಿ ಏಳು ಬೆಟ್ಟಗಳ ಮೇಲಿರುವ ಪಟ್ಟಣವೆಂದು ರೋಮ್ ಪಟ್ಟಣವು ಹೆಸರುವಾಸಿಯಾಗಿತ್ತು. ಅದಲ್ಲದೆ ಯೋಹಾನನಿಗೆ ಭೂಮಿಯಲ್ಲಿ ಬೇರೆ ಯಾವ ಸ್ಥಳವನ್ನು ಊಹಿಸಲಾಗಲಿಲ್ಲ (ಮತ್ತು ಒಬ್ಬ ದೇವದೂತನು ಅವನಿಗೆ ಅರ್ಥವಾಗುವ ಹಾಗೆ ವಿವರಿಸುತ್ತಿದ್ದಾನೆಂದು, ಅವನನ್ನು ಗಲಿಬಿಲಿಗೊಳಿಸಲು

ಪ್ರಯತ್ನಿಸುತ್ತಿಲ್ಲವೆಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು). ವ.18 ರಲ್ಲಿಯೂ ದೇವದೂತನ ಮಾತುಗಳು ಸತ್ಯವಾಗಿದೆ. ಇಲ್ಲಿ ಗ್ರೀಕ್ ಭಾಷೆಯಿಂದ ಭಾಷಾಂತರಿಸಿರುವ "ಬೆಟ್ಟ" ಎಂಬ ಪದವು ಪರ್ವತ ಎಂಬ ಅರ್ಥವನ್ನು ಸಹ ಕೊಡುತ್ತದೆ. 10

**17:10** ಇದು ಮೃಗದ ಏಳು ತಲೆಗಳ ಇನ್ನೊಂದು ವಿವರಣೆಯಾಗಿದೆ. ರೋಮ್ ಮತ್ತು ಅದರ ಸಾಮ್ರಾಜ್ಯವು ಅದರ ಮೊದಲ ಪ್ರಭಲ ಚಕ್ರವರ್ತಿಗಳ ಮೇಲೆ ದೃಢವಾಗಿ ನಿಂತಿತ್ತು, ಜೂಲಿಯಸ್ ಸೀಸರನಿಂದ ಪ್ರಾರಂಭವಾಗುತ್ತದೆ. ಯೋಹಾನನ ದಿನಗಳಲ್ಲಿ ಐವರು "ಬಿದ್ದು" ಹೋಗಿದ್ದರು. ಹಿಂಸೆಯಿಂದ ಸಾಯುತ್ತಾರೆಂಬ ಅರ್ಥವಿರಬಹುದು. ಸೀಸರನ ದಿನಗಳಿಂದ ಯೋಹಾನನ ದಿನಗಳವರೆಗೂ (ಯೋಹಾನನು ಇದನ್ನು ಕ್ರಿ. ಶ. 96 ರಲ್ಲಿ ಬರೆದಿದ್ದರೆ, ಸುಮಾರು 140 ವರ್ಷಗಳು) ಹನ್ನೊಂದು ಚಕ್ರವರ್ತಿಗಳಿದ್ದರು. ಅವರಲ್ಲಿ ಎಂಟು ಚಕ್ರವರ್ತಿಗಳು ಕೊಲೆಯಾಗಿ ಅಥವಾ ಆತ್ಮಹತ್ಯೆ ಮಾಡಿಕೊಂಡು ಸತ್ತು ಹೋದರು ಆದರೆ ಆ ಎಂಟು ಚಕ್ರವರ್ತಿಗಳಲ್ಲಿ ಐದು ಚಕ್ರವರ್ತಿಗಳು ಪ್ರಭಲವುಳ್ಳವರಾಗಿದ್ದರು ಇವರ ಮೇಲೆ ರೋಮ್ ಕುಳಿತ್ತಿದ್ದೆಂದು ಹೇಳಬಹುದು. ಜೂಲಿಯಸ್ ಸೀಸರನನ್ನು ಸೇರಿಸಿಕೊಳ್ಳುವುದಾದರೆ, ಅವರಲ್ಲಿ ಸೀಸರನು, ತಿಬೇರಿಯನು, ಕಲಿಗುಲ, ಕ್ಲೌಡಿಯಸ್ ಮತ್ತು ನೀರೋ. ಇನ್ನು ಮೂರು ಚಕ್ರವರ್ತಿಗಳು (ಗಾಲ್ಬ, ಒತೋ ಮತ್ತು ವಿಟಿಲಿಯಸ್) ಮುಖ್ಯವಲ್ಲದವರಾಗಿದ್ದರು ಮತ್ತು ಅವರೊಳಗೆ, ಅವರು 2 ವರ್ಷಗಳು ಮಾತ್ರ ಆಳಿದರು.

*"ಒಬ್ಬನು ಇದ್ದಾನೆ"*– ಯೋಹಾನನ ಕಾಲದಲ್ಲಿದ್ದ ಚಕ್ರವರ್ತಿ ಡೊಮಿಟಿಯನ್. ಅಥವಾ, ಯೋಹಾನನು ವಾಸ್ತವವಾಗಿ ಕ್ರಿ.ಶ 54-68 ರಲ್ಲಿ ಬರೆದಿದ್ದರೆ (ಕೆಲವರು ಯೋಚಿಸುವ ಹಾಗೆ) ಆ ದಿನಗಳಲ್ಲಿ ನೀರೋ ಚಕ್ರವರ್ತಿಯಾಗಿದ್ದನು (ಈ ಸಂದರ್ಭದಲ್ಲಿ ಆ ದೃಶ್ಯದಿಂದ ಹೊರ ಬಂದ ಚಕ್ರವರ್ತಿಗಳು – ಅಗತ್ಯವಾಗಿ ಹಿಂಸೆಯಿಂದಲ್ಲ-ಜೂಲಿಯಸ್ ಸೀಸರ್, ಔಗುಸ್ತನು, ತಿಬೇರಿಯಸ್, ಕಾಲಿಗುಲ ಮತ್ತು ಕ್ಲೌಡಿಯಸ್. ನೀರೋ ಆರನೆಯವನು).

*"ಮತ್ತೊಬ್ಬನು ಇನ್ನೂ ಬಂದಿಲ್ಲ"*– ಅವನು ಏಳನೆಯ ರಾಜನು ಅವನ ಸ್ಥಾನವನ್ನು "ಎಂಟನೆಯವನು" ತೆಗೆದುಕೊಳ್ಳುತ್ತಾನೆ (ವ.11), ಅಧೋಲೋಕದಿಂದ ಏರಿ ಬರುವವನು ಆ ಒಬ್ಬನಾಗಿದ್ದಾನೆ (ವ.8). ರೋಮನ್ ಸಾಮ್ರಾಜ್ಯವು 400 ವರ್ಷಗಳ ನಂತರ ಬೀಳುವ ತನಕ ಡೊಮಿಟಿಯನ್ (ಅಥವಾ ನೀರೋ) ನಂತರ ಅನೇಕ ಚಕ್ರವರ್ತಿಗಳಿದ್ದರು. ಆದರೆ ಆ ಎಲ್ಲಾ ಸಮಯವು ಮೌನವಾಗಿ ಹಾದು ಹೋಗಿದೆ ಆದ್ದರಿಂದ ಅದು ಈ ಪುಸ್ತಕದ ಉದ್ದೇಶಕ್ಕೆ

ಯಾವ ಪರಿಣಾಮವನ್ನು ಬೀರುವುದಿಲ್ಲ. ಪ್ರಕಟನೆಯ ಪುಸ್ತಕವು ರೋಮನ್ ಸಾಮ್ರಾಜ್ಯದ ಚರಿತ್ರೆಯನ್ನು ಕೊಡುವುದಿಲ್ಲ, ಆದರೆ ಈ ಯುಗದ ಅಂತ್ಯದ ಚಿತ್ರಣವನ್ನು ಕೊಡುತ್ತದೆ. ವ.10,11 ರಲ್ಲಿ ಪುನಶ್ಚೇತನಗೊಂಡ ರೋಮ್ ಸಾಮ್ರಾಜ್ಯವನ್ನು ಆಳುವುದಕ್ಕೆ ಒಬ್ಬ ವ್ಯಕ್ತಿಯು ಬರುವುದರ ಮೂಲವನ್ನು ವಿವರಿಸಿದ ನಂತರ ದೇವದೂತನು ಕಡೆಯ ದಿನಗಳಿಗೆ ಹಾದು ಹೋಗುತ್ತಾನೆ.

*"ಸ್ವಲ್ಪ ಕಾಲ"*– 13:5. 11

**17:11** ದೇವದೂತನ ಅಕ್ಷರಶಃ ವಿವರಣೆಯನ್ನು ಗಮನಿಸಿ "ಆ ಮೃಗವು…ಎರಡನೆಯ ಅರಸು". ದೇವದೂತನು ಯೋಹಾನನಿಗೆ ಮಾತಾಡುವುದಕ್ಕಿಂತ ಮುಂಚೆ ಜೀವಿಸಿದ್ದನು ಆದರೆ ಆಗ ಅವನು ಜೀವಿಸುತ್ತಿರಲಿಲ್ಲ. ಅವನು ನಂತರದಲ್ಲಿ ಅಧಿಕಾರಕ್ಕೆ ಬರುವನು.

*"ಅವನು ಏಳು ಮಂದಿ ಅರಸುಗಳಿಗೆ ಸೇರಿದವನು"*– ಅವನು ಅಧೋಲೋಕದಿಂದ ಬರುವವನಾದ್ದರಿಂದ (ವ.8; 11:7), ಅವನು ಮರಣದಿಂದ ಪುನುರುತ್ಥಾನ ಹೊಂದಿದಂತೆ ತೋರುತ್ತದೆ. (13:3 ಹೋಲಿಸಿರಿ). 12

**17:12** *"ಹತ್ತು ಕೊಂಬುಗಳು"*– ವ. 3; 13:1; ದಾನಿ 7:7. ಮತ್ತೊಮ್ಮೆ ನಮಗೆ ಈ ವಿವರಣೆಯು ಮೂಲ ಭಾಷೆಯಲ್ಲಿದೆ ಈ ಹತ್ತು ರಾಜರು ಯೋಹಾನನ ಕಾಲಕ್ಕೆ ಭವಿಷ್ಯದಲ್ಲಿ ಬರುವವರು ಮತ್ತು ಮೃಗಕ್ಕೆ ತಮ್ಮ ಸಹಾಯವನ್ನು ಇನ್ನೂ ಮಾಡದವರಾಗಿದ್ದಾರೆ. ಎಲ್ಲರೂ ಎಲ್ಲವನ್ನೂ ಏಕ ಸಮಯದಲ್ಲಿ ಮಾಡುವುದರಿಂದ ಅವರು ರೋಮ್ ಅಲ್ಲದೆ ಬೇರೆ ಕಡೆಯಲ್ಲಿ ಆಳುವವರಾಗಿರಬಹುದು. ರೋಮ್ಗೆ ಏಕ ಕಾಲದಲ್ಲಿ ಹನ್ನೊಂದು ರಾಜರು ಇರುವುದಿಲ್ಲ.

*"ಒಂದು ಗಳಿಗೆ"*– ಅತ್ಯಂತ ದೃಢವಾಗಿ ಅಲ್ಪ ಸಮಯಾವಧಿ. 13:5 ಹೋಲಿಸಿರಿ. 13

**17:13** *"ಒಂದೇ ಅಭಿಪ್ರಾಯವುಳ್ಳವರಾಗಿದ್ದು"*– ಬಹುಶಃ ಮೃಗದ ನಾಯಕತ್ವದಲ್ಲಿ ವಿಶ್ವವ್ಯಾಪ್ತಿಯ ಶಕ್ತಿ – 13:7. 14

**17:14** *"ಅವರು ಯಜ್ಞದ ಕುರಿಯಾದಾತನ ಮೇಲೆ ಯುದ್ಧಮಾಡುವರು"*– 13:7. ಯಜ್ಞದ ಕುರಿಯಾದಾತನ ಜನರ ಮೇಲೆ ಯುದ್ಧಮಾಡುವುದು, ಯಜ್ಞದ ಕುರಿಯಾದಾತನ ಮೇಲೆ ಯುದ್ಧಮಾಡುವುದು ಒಂದೇಯಾಗಿದೆ. ಅಪೊ 9:4-5 ಹೋಲಿಸಿರಿ.

*"ಯಜ್ಞದ ಕುರಿಯಾದಾತನು ಅವರನ್ನು ಜೈಸುವನು"*– 19:19-21.

*“ರಾಜಾಧಿರಾಜನೂ”*– 19:16.

*“ಆತನ ಕಡೆಯವರು”*– 19:14. **15**

**17:15** *“ನೀರುಗಳನ್ನು”*– ವ.1. ಆ ಜಾರ ಸ್ತ್ರೀಯು ರೋಮಿನಲ್ಲಿ “ಕುಳಿತಿರುವುದೇ” –ಆದರೆ ಆಕೆಯು ಅನೇಕ ಜನರ ಮೇಲೆ ಏಕ ಕಾಲದಲ್ಲಿ ಕುಳಿತುಕೊಳ್ಳಲು ಹೇಗೆ ಸಾಧ್ಯ? ರೋಮ್ ಆಕೆಯ ವಾಸಸ್ಥಳ, ಅವಳ ಚಟುವಟಿಕೆಗಳ ಮುಖ್ಯ ಕಛೇರಿ. ಆದರೆ ಅವಳು ಅನೇಕ ದೇಶಗಳಲ್ಲಿನ ಜನರ ಮೇಲೆ ತನ್ನ ಪ್ರಾಬಲ್ಯ ಅಥವಾ ಪ್ರಭಾವ ಬೀರುತ್ತಾಳೆ. **16**

**17:16** *“ಆ ಜಾರ ಸ್ತ್ರೀಯನ್ನು ದ್ವೇಶಿಸಿ”*– ಆಕೆಯು ಅವರ ಮೇಲೆ “ಕುಳಿತು” –ಕೊಳ್ಳುತ್ತಾಳೆ ಆದರೆ ಅವರು ಈ ವಿಷಯದಲ್ಲಿ ಸಂತೋಷಿಸುವುದಿಲ್ಲ, ಮತ್ತು ಅವಕಾಶ ಸಿಕ್ಕಿದಾಗ ಅವಳಿಗೆ ವಿರುದ್ಧವಾಗಿ ಬಿದ್ದು ಅವಳನ್ನು ನಾಶಮಾಡುತ್ತಾರೆ.

*“ಅವಳ ಮಾಂಸವನ್ನು ತಿಂದು”*– ಆಕೆಯ ಸಂಪತ್ತನ್ನು ತಮಗಾಗಿ ತೆಗೆದುಕೊಳ್ಳುವುದನ್ನು ಸೂಚಿಸುತ್ತದೆ.

*“ಅವಳನ್ನು ಬೆಂಕಿಯಿಂದ ಸುಟ್ಟುಬಿಟ್ಟರು”*– ಇಡೀ ನಗರವನ್ನೇ ಆವರಿಸಿರುವ ಮತ್ತು ಕೈಗೆ ಎಟುಕದ ರೀತಿಯಲ್ಲಿರುವ ಅವಳ ಆಸ್ತಿ ಮತ್ತು ಸ್ವತ್ತುಗಳನ್ನು ಅಕ್ಷರಶಃ ಸುಡುವುದು (18:8-9). ಸಂಪತ್ತುಳ್ಳ ವ್ಯಾಪಾರ ಕೇಂದ್ರವಾದ ಅವಳನ್ನು ಹತ್ತು ರಾಜರು ಮತ್ತು ಮೃಗವು ದ್ವೇಶಿಸುವುದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಆಕೆಯನ್ನು ಮತ್ತು ಧಾರ್ಮಿಕ ವ್ಯವಸ್ಥೆಯನ್ನು ಅವರು ದ್ವೇಶಿಸುವುದು ಸ್ಪಷ್ಟವಾಗಿದೆ – ಆಕೆಯು ಅವರೊಂದಿಗೆ ಸ್ಪರ್ಧೆಯಲ್ಲಿರುತ್ತಾಳೆ. **17**

**17:17** *“ದೇವರ ಅಭಿಪ್ರಾಯವನ್ನು”*– 4:2 ರಲ್ಲಿ ದೇವರು ಸಿಂಹಾಸನದ ಮೇಲೆ ಕುಳಿತ್ತಿದ್ದಾನೆ, ಮತ್ತು ಆತನ ಸಿಂಹಾಸವನ್ನು ನಾಲ್ವತ್ತು ಸಾರಿ ಈ ಪುಸ್ತಕದಲ್ಲಿ ಉಲ್ಲೇಖಿಸಿದೆ. ಲೋಕದೆಡೆಗೆ ತನ್ನ ಆತನ ಉದ್ದೇಶವನ್ನು ನೆರವೇರಿಸಲು ಲೋಕದ ಕತ್ತಲೆಯ ಯುಗದಲ್ಲಿಯೂ ನಡೆಯುವ ಎಲ್ಲಾ ಘಟನೆಗಳನ್ನು ಆತನು ನಿಯಂತ್ರಿಸುತ್ತಾನೆ. ಬಾಬಿಲೋಲಿನಿನ ಹಿಂದೆ ಇದ್ದ ರಾಜನು ಕಲಿತನು – ದಾನಿ 4:35.

*“ಅವರ ಹೃದಯಗಳನ್ನು ಪ್ರೇರಿಸಿದನು”*– ಜ್ಞಾನೋ 16:9; 21:1; ಆದಿ 45:5 ಹೋಲಿಸಿರಿ. ದುಷ್ಟ ಜನರು ಆತನನ್ನು ಎಷ್ಟೇ ದ್ವೇಶಿಸಿದರೂ, ದೇವರು ತನ್ನ ಉದ್ದೇಶವನ್ನು ನೆರವೇರಿಸುತ್ತಾನೆ.

*“ದೇವರು ತನ್ನ ವಚನವು ನೆರವೇರುವ ತನಕ”*– 10:7; ಮತ್ತಾಯ 5:18. ದೇವರು ಹೇಳಿದ್ದು ನೆರವೇರುತ್ತದೆ ಮತ್ತು ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. **18**

**17:18** ದೇವದೂತನು ಅಕ್ಷರಶಃ ವಿವರಣೆಗಳನ್ನು ಕೊಡುವಾಗ ಯೋಹಾನನಿಗೆ ಗೊತ್ತಿದ್ದ ಭೂಲೋಕದ ಭಾಗಗಳ ಮೇಲೆ ರೋಮ್ ಪಟ್ಟಣವು ಆಳುತ್ತಿತ್ತು. ಆ ಒಂದು ಪಟ್ಟಣ ಮಾತ್ರ ಎಂದು ಅವನ ಅರ್ಥವಾಗಿತ್ತು. ವ. 9 ಮತ್ತು 18:20 ಸಹ ನೋಡಿರಿ. ರೋಮ್ ಪಟ್ಟಣವು ಧರ್ಮಭ್ರಷ್ಟ ಕ್ರೈಸ್ತರ, ಮುಂತಾದ ಚಟುವಟಿಕೆಗಳ ಕೇಂದ್ರವಾಗುತ್ತದೆಂದು ಅವನಿಗೆ ಆಗ ತಿಳಿದಿರಲಿಲ್ಲ ಎಂದು ನಾವು ತಿಳಿದುಕೊಳ್ಳಬೇಕು, ಆದರೆ ಯುಗದ ಅಂತ್ಯದಲ್ಲಿ ಅದು ಅನೇಕ ಮುಖ್ಯ ಘಟನೆಗಳ ಕೇಂದ್ರವಾಗುತ್ತದೆಂದು ಅವನಿಗೆ ತಿಳಿದಿತ್ತು. ಆ ಸ್ತ್ರೀ, ನಂತರ, ರೋಮ್ ಪಟ್ಟಣ ಅಂದರೆ ಅದು ಧಾರ್ಮಿಕ (ಮತ್ತು ಇತರ) ಗುಣಲಕ್ಷಣಗಳನ್ನು ಪ್ರತಿನಿಧಿಸುವ ಪಟ್ಟಣವಾಗಿದೆ.

# 18[1]

**18:1** *“ಮತ್ತೊಬ್ಬ ದೇವದೂತನು”*– ಒಬ್ಬ ದೇವದೂತನು ಯೋಹಾನನೊಂದಿಗೆ ಈಗಾಗಲೇ ಮಾತಾಡುತ್ತಿದ್ದನು. “ಆ ಮಹಾ ಜಾರ ಸ್ತ್ರೀಗೆ ಆಗುವ ನ್ಯಾಯತೀರ್ಪು” –ಏನೆಂಬುದನ್ನು ಯೋಹಾನನಿಗೆ ತೋರಿಸುವುದೇ ಅವನ ಉದ್ದೇಶವಾಗಿತ್ತು (17:1). ಇದನ್ನು ವ.16 ರಲ್ಲಿ ಅವನು ಮಾಡಿದನು. ಹಾಗಾದರೆ ಯಾಕೆ ಅದನ್ನು ಪ್ರಕಟಿಸಲು ಮತ್ತೊಬ್ಬ ದೇವದೂತನು ಬರಬೇಕಾಯಿತು? ಅದು ಹೀಗಿರಬಹುದು ಯಾಕಂದರೆ ಈ ಅಧ್ಯಾಯವು ಅವಳ ಬೀಳುವಿಕೆಯ ವಿಭಿನ್ನ ಅಂಶಗಳನ್ನು ಪ್ರಕಟಿಸುತ್ತದೆ ಅಥವಾ ಅವರ ಬೀಳುವಿಕೆಯು ಎರಡು ಹಂತಗಳಲ್ಲಿರಬಹುದು. **2**

**18:2** *“ಬಿದ್ದಳು ಬಿದ್ದಳು”*– 14:8; ಯೆಶಾಯ 21:9. “ಬಿದ್ದಳು” –ಎಂಬ ಪದ ಯಾಕೆ ಪುನರಾವರ್ತಿಸಲ್ಪಟ್ಟಿದೆ? ಬಹುಶಃ ಒತ್ತುನೀಡಲು ಅಥವಾ ಬಹುಶಃ ಆಕೆಯ ಧಾರ್ಮಿಕ ಉನ್ನತ ಸ್ಥಾನದಿಂದ ಮತ್ತು ನಂತರ ಅವಳ ವಾಣಿಜ್ಯ ಸ್ಥಾನದಿಂದ ಬೀಳುವುದರಿಂದ. ಒಂದನ್ನು ನಾಶಮಾಡುವುದರ ಮೂಲಕ (17:16) ಇನ್ನೊಂದನ್ನು ಸಹ ನಾಶಮಾಡಿದ್ದಾನೆಂದು ಮೃಗಕ್ಕೆ ಗೊತ್ತಾಗುತ್ತದೆ. ಅಥವಾ ಇದರ ಅರ್ಥ ಹೀಗಿರಬಹುದು, ಬಾಬೇಲ್ ನಗರವಾದ ಈ ಸ್ತ್ರೀಯು ಮೊದಲು ಆತ್ಮೀಕವಾಗಿ, ನೈತಿಕವಾಗಿ ಮತ್ತು

ಧರ್ಮಸಿದ್ಧಾಂತದಲ್ಲಿ ಬಿದ್ದು ಹೋದಳು ಮತ್ತು ನಂತರ ಅಕ್ಷರಶಃ ನಾಶನದಲ್ಲಿ ಬಿದ್ದು ಹೋದಳು.

*"ದೆವ್ವಗಳ ವಾಸಸ್ಥಾನ"*– ಇದು ದೇವರ ಮಾರ್ಗದಿಂದ, ಆತ್ಮೀಕ ವಿಷಯದಲ್ಲಿ ಬಿದ್ದು ಹಾಗೆನಿಸುತ್ತದೆ (ದೆವ್ವಗಳ ಬಗ್ಗೆ ಟಿಪ್ಪಣಿ ಮತ್ತಾಯ 4:24). ಹಳೆಯ ನಿಜವಾದ ಬಾಬೇಲ್ ಪಟ್ಟಣವು ನಾಶವಾದ ನಂತರ ಅದು ನರಿಗಳ ಮತ್ತು ತೋಳಗಳ ಹಕ್ಕೆಯಾಗುದು (ಯೆಶಾಯ 13:19-22; ಯೆರೆ 50:39; 51:37). ರಹಸ್ಯವಾದ ಬಾಬೇಲ್ ಇದಕ್ಕಿಂತಲೂ ಮೋಸದಿಂದ ತುಂಬಿರುತ್ತದೆ. 3

**18:3** *"ಅವಳ ಅತಿಜಾರತ್ವವೆಂಬ ದ್ರಾಕ್ಷಾರಸ"*– 17:2. ಇಲ್ಲಿ ದ್ರಾಕ್ಷಾರಸವು "ಬೆಂಕಿಹೊತ್ತಿಸು" –ವಂತದ್ದಾಗಿದೆ. ಯೆರೆ 51:7 ಹೋಲಿಸಿರಿ.

*"ವರ್ತಕರು"*– ವಚನಗಳು 11,15,23. ಇವರ ವಿಷಯವಾಗಿ ಈ ಪುಸ್ತಕದಲ್ಲಿ ಉಲ್ಲೇಖಿಸಿರುವುದು ಇದೇ ಮೊದಲು. 17ನೇ ಅಧ್ಯಾಯದ "ಜಾರಸ್ತ್ರೀಯು" ದೊಡ್ಡ ಮತ್ತು ಶಕ್ತಿಯುತ ಧಾರ್ಮಿಕ ವ್ಯವಸ್ಥೆಯನ್ನು ಪ್ರತಿನಿಧಿಸುವ ನಗರವಲ್ಲದೆ ಬೇರೆ ಯಾವುದು ಇರಲಾರದೆಂದು ಯೋಚಿಸಲು ಇಲ್ಲಿಯವರೆಗೆ ಯಾವುದೇ ಕಾರಣವಿರಲಿಲ್ಲ.

*"ಸುಖಭೋಗ"*– ವಚನಗಳು 7,9. 4

**18:4** *"ಪರಲೋಕದಿಂದ ಬಂದ ಮತ್ತೊಂದು ಶಬ್ದ"*- ಇಬ್ರಿ 12:25 ಹೋಲಿಸಿರಿ.

*"ಬಿಟ್ಟುಬನ್ನಿರಿ"*– ಯೆಶಾಯ 52:11; ಯೆರೆ 51:45; 2 ಕೊರಿಂಥ 6:17 ಹೋಲಿಸಿರಿ. ಕಡೇಯ ದಿನಗಳಲ್ಲಿ ಈ "ರಹಸ್ಯ ಬಾಬೇಲ್" ನಲ್ಲಿ ಕೆಲವು ದೇವಜನರು ಸಹ ಇರುತ್ತಾರೆ. ಆಕೆಯನ್ನು ಬಿಟ್ಟುಬರುವುದು ಎಂದರೆ ದೈಹಿಕವಾಗಿ ರೋಮ್ ಪಟ್ಟಣವನ್ನು ಬಿಟ್ಟುಬರುವುದು ಎಂದರ್ಥವಲ್ಲ. ಅದರ ಅರ್ಥ ಆ ಪಟ್ಟಣವು ಪ್ರತಿನಿಧಿಸುವ ವ್ಯವಸ್ಥೆಯಿಂದ ಮತ್ತು ಈ ಅಧ್ಯಾಯದಲ್ಲಿ ಪ್ರಕಟವಾಗಿರುವ ಲಾಭಕ್ಕಾಗಿ ಅದರ ದುರಾಶೆಯಿಂದ ಹೊರಬರುವುದು. 1 ತಿಮೊ 6:11.

*"ಅವಳ ಪಾಪದಲ್ಲಿ ಪಾಲುಗಾರರಾಗಬಾರದು"*– ಆಕೆಯ ಪಾಪದಲ್ಲಿ ಪಾಲುಗಾರರಾಗುವುದೆಂದರೆ ಆಕೆಯ ಶಿಕ್ಷೆಯಲ್ಲಿಯೂ ಪಾಲುಗಾರರಾಗುವುದು. ದುಷ್ಟತ್ವದೊಂದಿಗೆ ರಾಜಿ ಮಾಡಿಕೊಳ್ಳುವುದು ತುಂಬಾ ಅಪಾಯಕಾರಿ. 5

**18:5** *"ಆಕಾಶದ ಪರ್ಯಂತರಕ್ಕೂ"*– ಯೆರೆ 51:9. ಮೂಲತಃ ಬಾಬೆಲನ್ನು ಕಟ್ಟಿದಾಗ

ಜನರಿಗೆ ಆಕಾಶವನ್ನು ಮುಟ್ಟುವ ಒಂದು ಗೋಪುರ ಬೇಕಾಗಿತ್ತು (ಆದಿ 11:4). ಆದರೆ ಕಡೇಯಲ್ಲಿ ಆಕಾಶವನ್ನು ಮುಟ್ಟಿದ್ದು ಅವರ ಪಾಪಗಳು.

*"ಜ್ಞಾಪಿಸಿಕೊಂಡನು"*– 16:19. **6**

**18:6** *"ಅವಳು ಮಾಡಿದ ಪ್ರಕಾರ ಅವಳಿಗೆ ಮಾಡಿರಿ"*– ದೇವರು ತನ್ನ ವಾಕ್ಯದ ಉದ್ದಕ್ಕೂ ಪ್ರಕಟಿಸುವ ನೀತಿಯ ಪರಿಪೂರ್ಣ ತತ್ವವು ಇಲ್ಲಿದೆ (ವಿಮೋ 21:23-25; ಯಾಜಕ 24:20; 26:23-24; ಎಸ್ತೇರ 7:10; ಕೀರ್ತನೆ 18:25-27; ಯೆಶಾಯ 59:18; ಯೆರೆ 51:56; ರೋಮಾ 2:5-11; ಗಲಾ 6:7-9).

*"ಪಾತ್ರೆ"*– 17:4. ಅವಳು ಆಕೆಯ "ಪಾತ್ರೆಯನ್ನು" ಬೇರೆಯವರನ್ನು ನಾಶಪಡಿಸಲು ಉಪಯೋಗಿಸಿದಳು; ಆದರೆ ನೀತಿಯು ಆಕೆಯನ್ನು ನಾಶಪಡಿಸುತ್ತದೆ. **7**

**18:7** ಮೂರು ಪಾಪಗಳನ್ನು (ವ.5) ಈ ವಚನದಲ್ಲಿ ಪಟ್ಟಿ ಮಾಡಲಾಗಿದೆ. ತನ್ನನ್ನು ಘನಪಡಿಸಿಕೊಳ್ಳುವುದು, ಭೋಗದಲ್ಲಿ ಜೀವಿಸುವುದು ಮತ್ತು ಹೆಮ್ಮೆಯಿಂದ ಕೊಚ್ಚಿಕೊಳ್ಳುವುದು.

*"ಅವಳು ತನ್ನನ್ನು ಘನಪಡಿಸಿಕೊಂಡಳು"*– ಅವಳು ಮಾಡಿದ್ದೆಲ್ಲವೂ ತನ್ನ ಸ್ವಂತಕ್ಕಾಗಿಯೇ ಹೊರತು ಎಲ್ಲರೂ ಘನಪಡಿಸಬೇಕಾಗಿರುವ ದೇವರಿಗಲ್ಲ.

*"ಭೋಗದಲ್ಲಿ"*– ಇದು ಅವಳ ಪಾಪಗಳಲ್ಲಿ ಒಂದಾಗಿದೆ, ಇದಕ್ಕಾಗಿ ದೇವರು ಅವಳನ್ನು ಶಿಕ್ಷಿಸುತ್ತಾನೆ. ಪ್ರಪಂಚದಲ್ಲಿ ಅನೇಕರು ಕಡು ಬಡತನದಲ್ಲಿ ಜೀವಿಸುತ್ತಿದ್ದರೂ, ಭೋಗದಲ್ಲಿ ಜೀವಿಸುವುದು ತಪ್ಪು. ಇದರಲ್ಲಿ ಪಾಲ್ಗೊಳ್ಳುವವರಿಗೆ ಅವರ ಹೃದಯದಲ್ಲಿ ದೇವರಿಗೆ ಸ್ಥಳವಿಲ್ಲ (ಲೂಕ 16:19-21 ಹೋಲಿಸಿರಿ). ಮತ್ತು ಈ ತಪ್ಪನ್ನು ಮಾಡುವವರನ್ನು ದೇವರು ಶಿಕ್ಷಿಸುತ್ತಾನೆ – ಯಾಕೋಬ 5:1-5).

*"ರಾಣಿ"*– ರಹಸ್ಯ ಬಾಬೇಲ್ ತಾನು ಈಗ ಆಳುತ್ತಿದ್ದೇನೆ ಮತ್ತು ಯಾವುದೇ ವಿಪತ್ತು ಆಕೆಯನ್ನು ನಾಶಪಡಿಸಲು ಸಾಧ್ಯವಿಲ್ಲವೆಂದು ಯೋಚಿಸುತ್ತಾಳೆ. ಆದರೆ ಜ್ಞಾನೋ 11:2; 16:18 ಅವಳ ವಿಷಯದಲ್ಲಿ ಸತ್ಯವಾಗಿದೆ (ಆ ವಚನಗಳ ರೀತಿಯಲ್ಲಿ ಯಾವಾಗಲೂ). **8**

**18:8** *"ಒಂದೇ ದಿನದಲ್ಲಿ"*– ಇದ್ದಕ್ಕಿಂದಂತೆ ಮತ್ತು ತ್ವರಿತವಾಗಿ. ಅವಳ ನಾಶನದಲ್ಲಿ ಎರಡು ಹಂತವಿರುತ್ತದೆಂದು ತೋರುತ್ತದೆ ಮತ್ತು ಮೂರು ಇರಬಹುದು. ಮೊದಲು ಮರಣ,

ದುಃಖ ಮತ್ತು ಕ್ಷಾಮ, ನಂತರ ಬೆಂಕಿ, ನಂತರ (ಸಾಧ್ಯವಾದರೆ) ಹಿಂಸೆ, ದೊಡ್ಡ ಹಾನಿ (ವ.21). ಕ್ಷಾಮವು ಪ್ರಗತಿ ಹೊಂದಲು ಮತ್ತು ಪಟ್ಟಣದ ಮೇಲೆ ಪರಿಣಾಮ ಬೀರಲು ಸಮಯ ತೆಗೆದುಕೊಳ್ಳುತ್ತದೆ.

*"ಅವಳಿಗೆ ದಂಡನೆಯನ್ನು ವಿಧಿಸಿದ ದೇವರು"*– 16:5,7. **9**

**18:9** *"ಭೂರಾಜರು"*– ವ.3; 17:2. ಸ್ಪಷ್ಟವಾಗಿ ಇವರು 17:12,16 ರಲ್ಲಿರುವ ರಾಜರಿಗಿಂತ ಬೇರೆಯವರಾಗಿದ್ದಾರೆ (ಅವರೇ ಆಗಿದ್ದ ಪಕ್ಷದಲ್ಲಿ ರೋಮಿನ ಆರ್ಥಿಕ ವ್ಯವಸ್ಥೆಯನ್ನು ಅವರು ನಾಶಮಾಡುತ್ತಿರಲಿಲ್ಲ ಆದರೆ ಧಾರ್ಮಿಕ ವ್ಯವಸ್ಥೆಯನ್ನು ಮಾತ್ರ ನಾಶಮಾಡುತ್ತಿದ್ದರು). ಅವರು ಮೃಗ ಮತ್ತು ಸ್ತ್ರೀಗಿಂತಲೂ ಭಿನ್ನರಾಗಿದ್ದಾರೆ.

*"ಗೋಳಾಡುತ್ತಾ"*– ಯಾಕಂದರೆ ಅವರ ಶಕ್ತಿಯ ಮತ್ತು ಪ್ರಭಾವದ ಮುಖ್ಯವಾದ ಮೂಲವು ನಾಶವಾಗಿದೆ. **10**

**18:10** *"ಭಯಪಟ್ಟು"*– ಅವರ ಸ್ವಂತ ಭವಿಷ್ಯವು ಕಠೋರವಾಗಿಯೂ ಮತ್ತು ಭಯದಿಂದಲೂ ಇರುವಂತೆ ಕಾಣಿಸುತ್ತದೆ.

*"ಬಲಿಷ್ಠವಾದ ನಗರಿಯೇ"*– 17:18. **11**

**18:11** *"ವರ್ತಕರು"*– ವ.3. ರೋಮ್ ನಗರವು ಬಹುದೊಡ್ಡ ಆರ್ಥಿಕ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ ಎಂದು ಸ್ಪಷ್ಟವಾಗುತ್ತದೆ (ವ.23). ಪ್ರಪಂಚದ ವಿವಿಧ ರಾಷ್ಟ್ರಗಳ ಆರ್ಥಿಕತೆಯನ್ನು ಹೆಚ್ಚು ಹೆಚ್ಚಾಗಿ ಒಟ್ಟಾಗಿ ಜೋಡಿಸಲಾಗಿತ್ತದೆ. ಒಂದು ದೊಡ್ಡ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದಾಗ ಅದು ಇಡೀ ಪ್ರಪಂಚದ ಮೇಲೆ ಪರಿಣಾಮ ಬೀರುತ್ತದೆ.

*"ಗೋಳಾಡುತ್ತಾ"*– ಈ ಲೋಕದಲ್ಲಿ ಸಂಪತ್ತನ್ನು ಹೊಂದಿರುವವರು (ಪರಲೋಕದಲ್ಲಿ ಇಡುವ ಬದಲು – ಮತ್ತಾಯ 6:19-21) ಅದನ್ನು ಕಳೆದುಕೊಳ್ಳುವ ಬೆದರಿಕೆ ಇದ್ದಾಗ ಗಾಬರಿ ಮತ್ತು ದುಃಖಕ್ಕೆ ಒಳಗಾಗುತ್ತಾರೆ. **13**

**18:13** *"ಮಾನುಷಪ್ರಾಣ"*– "ಬಾಬೇಲ್" –ಜನರ ಬಗ್ಗೆ ಯಾವುದೇ ಕಾಳಜಿ ವಹಿಸುವುದಿಲ್ಲ ಆದರೆ ಅವರಿಂದ ಪಡೆಯಲು ಮಾತ್ರ ಬಯಸುತ್ತದೆ. ಅವಳ ವ್ಯವಹಾರವು ಪ್ರತಿಯೊಂದು ರೀತಿಯ ಬಂಧನ ಮತ್ತು ಗುಲಾಮತನಕ್ಕೆ ಕಾರಣವಾಗುತ್ತದೆ. ಅವಳ ನಾಯಕರು ಮನುಷ್ಯರನ್ನು ದನಗಳಂತೆ ಮಾರುತ್ತಾರೆ. **15**

**18:15** *"ಭಯ"*– ಅವರಿಗೂ ಸಹ ಅದೇ ರೀತಿಯ ಕಾರ್ಯವಾಗುತ್ತದೆಂಬ ಭಯವಿರುತ್ತದೆ.

17-19

**18:17-19** ನಾವಿಕರು ಮತ್ತು ಅವರ ಯಜಮಾನರು ಈ ಗೋಳಾಟದಲ್ಲಿ ಪಾಲುಗೊಳ್ಳುವರು. ರೋಮ್ ನಗರದ ಪತನವು ಸಮುದ್ರ ವಾಣಿಜ್ಯಕ್ಕೆ ಗಂಭೀರ ಹೊಡೆತವಾಗುತ್ತದೆ. 18

**18:18** *"ಈ ಮಹಾ ಪಟ್ಟಣಕ್ಕೆ ಸಮಾನವಾದದ್ದು ಯಾವುದು"*– ರೋಮ್ ಭವಿಷ್ಯದಲ್ಲಿ ವಾಣಿಜ್ಯ ಕೇಂದ್ರ ಮಾತ್ರವಲ್ಲದೆ ರಾಜಕೀಯ ಕೇಂದ್ರವಾಗಿ ದೊಡ್ಡ ಅಭಿವೃದ್ಧಿಯನ್ನು ಹೊಂದುತ್ತದೋ? ಈ ಪ್ರಶ್ನೆಗನುಗುಣವಾಗಿ ಮತ್ತು ಈ ಅಧ್ಯಾಯದಲ್ಲಿರುವಂತೆ ಇದು ಸಾಧ್ಯವಾಗಬಹುದು. ಅಥವಾ ಅದು ಸ್ವಯಂ ಏನಾಗುತ್ತದೋ ಅದನ್ನು ಕಾಣುವ ಬದಲು ಇಲ್ಲಿ ಅದನ್ನು ಪ್ರತಿನಿಧಿಸುವುದನ್ನು ಹೆಚ್ಚಾಗಿ ಕಾಣುತ್ತಿದ್ದೇವೋ? 19

**18:19** *"ಐಶ್ವರ್ಯವಂತರನ್ನಾಗಿ"*– ರಾಜರು ಅವಳ ಶಕ್ತಿಯ ಬಗ್ಗೆ ಯೋಚಿಸುತ್ತಾರೆ (ವ.10), ವರ್ತಕರು ಮತ್ತು ನಾವಿಕರು ಅವಳ ಸಂಪತ್ತಿನ ಬಗ್ಗೆ ಯೋಚಿಸುತ್ತಾರೆ. 20

**18:20** ಈ ಮಾತುಗಳನ್ನು 4ನೇ ವಚನದಿಂದ ಮಾತಾಡುತ್ತಿದ್ದ ಪರಲೋಕದಿಂದ ಬಂದ ಶಬ್ದವು ಮಾತಾಡಿತು. ಒಂದೇ ಘಟನೆಯ ಬಗ್ಗೆ ದೇವರ ಯೋಚನೆಗೂ ಅವಿಶ್ವಾಸಿಗಳ ಯೋಚನೆಗೂ ಇರುವ ವ್ಯತ್ಯಾಸವನ್ನು ನೋಡಿರಿ. ರಹಸ್ಯ ಬಾಬಿಲೋನಿನ ಪತನವು ಲೋಕದ ಜನರ ದುಃಖಕ್ಕೆ ಕಾರಣವಾಗುತ್ತದೆ, ಆದರೆ ದೇವರಿಗೂ ಮತ್ತು ಆತನ ಜನರಿಗೆ ಸಂತೋಷವನ್ನುಂಟುಮಾಡುತ್ತದೆ. ಲೂಕ 16:15; ಯೆಶಾಯ 55:8-9 ಹೋಲಿಸಿರಿ. ಹಣದ ವ್ಯಾಮೋಹ, ವಂಚನೆ ಮತ್ತು ದುರಾಸೆಯನ್ನೊಳಗೊಂಡ ವ್ಯವಸ್ಥೆಯ ಅಂತ್ಯವೆಂದು ಅರ್ಥವಾಗುತ್ತದೆ; ಅಧಿಕಾರಕ್ಕಾಗಿ ಆಸೆಪಡುವ ವ್ಯವಸ್ಥೆಯು ಮನುಷ್ಯರ ಬಗ್ಗೆ ಕಾಳಜಿ ವಹಿಸುವುದಿಲ್ಲ. ದೇವರನ್ನು ಅಲಕ್ಷಿಸಿ, ಪ್ರಾಪಂಚಿಕ ಸುಖ ಭೋಗಗಳ ಮತ್ತು ಆತನಿಲ್ಲದ ತೃಪ್ತಿಯನ್ನು ಪಡೆಯುವ ವ್ಯವಸ್ಥೆಯಾಗಿದೆ. ಅಂತಹ ವ್ಯವಸ್ಥೆಯು ನಾಶವಾಗಲು ಅರ್ಹವಾಗಿದೆ, ಮತ್ತು ನಾಶವಾಗುತ್ತದೆ.

*"ಅಪೋಸ್ತಲರೇ, ಪ್ರವಾದಿಗಳೇ, ಇವಳು ನಿಮಗೆ ಅನ್ಯಾಯಮಾಡಿದ್ದಕ್ಕಾಗಿ ದೇವರು ಇವಳಿಗೆ ಪ್ರತಿದಂಡನೆಯನ್ನು ಮಾಡಿದ್ದರಿಂದ ಆನಂದ ಪಡಿರಿ"*– ವ.24; 17:6; 19:2. ಆ ಸ್ತ್ರೀ ಎಂದರೆ ರೋಮ್ ಎಂದು ಸ್ಪಷ್ಟವಾಗುತ್ತದೆ. ಪೌಲನನ್ನು, ಪೇತ್ರನನ್ನು ಮತ್ತು ಎಣಿಸಲಾಗದ ಅನೇಕ ವಿಶ್ವಾಸಿಗಳನ್ನು ಕೊಂದದ್ದು ರೋಮ್ ಮತ್ತು ಯೋಹಾನನ್ನು ಹಿಂಸಿಸಿತು ಮತ್ತು

ಪತ್ಮೋಸ್ ದ್ವೀಪಕ್ಕೆ ಗಡಿಪಾರು ಮಾಡಿತು. **21-22**

**18:21-22** ರಹಸ್ಯ ಬಾಬೇಲಿನ ಅಂತ್ಯ ವಿನಾಶವು ಆಕಸ್ಮಿಕವಾದ ಭಯಾನಕ ಹಿಂಸಾಚಾರದ ಕೃತ್ಯದಿಂದ ಉಂಟಾಗುತ್ತದೆ. **21**

**18:21** *"ಇನ್ನೆಂದಿಗೂ ಕಾಣಿಸುವುದಿಲ್ಲ"*– ಮನುಷ್ಯನು ರೋಮ್ ನಗರಕ್ಕೆ ಕೊಟ್ಟಿರುವ ಒಂದು ಹೆಸರು "ಶಾಶ್ವತವಾಗಿರುವ ಪಟ್ಟಣ". ಈ ಶಿರ್ಷಿಕೆ ಸುಳ್ಳೆಂದು ಸಾಬೀತಾಗುತ್ತದೆ. **23**

**18:23** *"ಭೂಮಿಯ ಪ್ರಭುಗಳು"*– ವ. 11,14,15. ಮತ್ತೊಮ್ಮೆ ಈ ಪಟ್ಟಣವು ಬಹು ಐಶ್ವರ್ಯವಂತರು ಮತ್ತು ಶಕ್ತಿಯುಳ್ಳ ಹಣವಂತರು ಮತ್ತು ಕೈಗಾರಿಕಾ ಉದ್ಯಮಿಗಳು ಇರುವ ವಾಣಿಜ್ಯ ನಗರವೆಂದು ನೋಡುತ್ತೇವೆ.

*"ಮರುಳಾದರು"*– 12:9. ಇಲ್ಲಿ ಇದರ ಅರ್ಥ ದೇವರನ್ನು ಬಿಟ್ಟು ಅನಾಚಾರಕ್ಕೆ ನಡೆಸಲ್ಪಟ್ಟರು. ಸೈತಾನನು ಈ ಉದ್ದೇಶಕ್ಕಾಗಿಯೇ ಅವಳನ್ನು ಉಪಯೋಗಿಸುತ್ತಾನೆ.

*"ಮಾಟದಿಂದ"*– ನಹೂ 3:4 ರಲ್ಲಿ ನಿನೆವೆಯ ವಿಷಯವಾಗಿ ಏನು ಹೇಳಲ್ಪಟ್ಟಿದೆ ಎಂಬುದನ್ನು ಹೋಲಿಸಿರಿ. **24**

**18:24** *"ಕೊಲ್ಲಲ್ಪಟ್ಟವರೆಲ್ಲರ ರಕ್ತವು"*– ಯಾವುದೇ ಒಂದು ನಗರದ ಬಗ್ಗೆ ಇದನ್ನು ಹೇಗೆ ಹೇಳಬಹುದು? ಇದೇ ರೀತಿಯ ವಿಷಯಕ್ಕಾಗಿ ಮತ್ತಾಯ 23:34-35 ಮತ್ತು ಟಿಪ್ಪಣಿಯನ್ನು ನೋಡಿರಿ. ರಹಸ್ಯ ಬಾಬಿಲೋನ್ ಅವಳ ನಡವಳಿಕೆ ಮತ್ತು ನಡತೆಯಿಂದ ತಾನು ಚರಿತ್ರೆಯಲ್ಲಿಯೇ ತೀವ್ರವಾಗಿ ಹಿಂಸಿಸುವವಳೆಂದು ಮತ್ತು ಎಲ್ಲರ ದೋಷವನ್ನು ಹಂಚಿಕೊಳ್ಳುವವಳು ಮತ್ತು ಬಾಧ್ಯತೆ ಹೊಂದುವವಳು ಎಂದು ತನ್ನನ್ನು ಪ್ರಕಟಿಸಿಕೊಳ್ಳುವವಳಾಗಿದ್ದಾಳೆ. ಅವಳು ಸ್ವಇಚ್ಚೆಯಿಂದ ತಮ್ಮ ಆತ್ಮವನ್ನು ಲೀನ ಮಾಡಿಕೊಂಡವರ ಉತ್ತರಾಧಿಕಾರಿಯಾಗಿದ್ದಾಳೆ.

# 19 1

**19:1** *"ಹಲ್ಲೆಲೂಯ"*– ಈ ಪದವು ಹೊಸ ಒಡಂಬಡಿಕೆಯಲ್ಲಿ ಈ ಅಧ್ಯಾಯದ ಮೊದಲ ಆರು ವಚನಗಳಲ್ಲಿ ಮಾತ್ರ ಕಾಣುತ್ತದೆ. ಈ ಪದವು ಇಬ್ರಿಯ ಭಾಷೆಯ ಎರಡು ಪದಗಳನ್ನು ಜೋಡಿಸುತ್ತದೆ – "ಹಲ್ಲೆಲ್" ಅಂದರೆ ಸ್ತೋತ್ರ, ಮತ್ತು "ಜಃ" (ಯಃ) ಅದರ ಅರ್ಥ ಯೆಹೋವ ದೇವರು. ಇದನ್ನು "ಕರ್ತನಿಗೆ ಸ್ತೋತ್ರ" "ಯೆಹೋವನಿಗೆ ಸ್ತೋತ್ರ" ಅಥವಾ "ಯೆಹೋವನನ್ನು ಸ್ತುತಿಸಿರಿ" –ಎಂದು ಭಾಷಾಂತರಿಸಬಹುದು.

*“ಜಯವೂ ಪ್ರಭಾವವೂ ಶಕ್ತಿಯೂ ನಮ್ಮ ದೇವರಲ್ಲಿ ಉಂಟು”*– 4:11; 5:12; 7:10,12. **2**

**19:2** *“ಸತ್ಯವೂ ನ್ಯಾಯವೂ”*– 15:3; 16:5,7.

*“ಜಾರತ್ವ”*– 17:2,5.

*“ಪ್ರತಿದಂಡನೆಯನ್ನು ಮಾಡಿದ್ದಾನೆ”*– 6:10; 17:6; 18:20. ಮುಯ್ಯಿತೀರಿಸುವುದು ನಮ್ಮ ಕೆಲಸವಲ್ಲ, ಆದರೆ ದೇವರು ಅದನ್ನು ಮಾಡಿದಾಗ ಪರಲೋಕವು ಬಹಳವಾಗಿ ಸಂತೋಷಿಸುತ್ತದೆ. ವಿಶ್ವದ ಒಳಿತಿಗಾಗಿ ದೇವರು ಪರಿಪೂರ್ಣವಾದ ರೀತಿಯಲ್ಲಿ ನ್ಯಾಯತಿರಿಸಿದನೆಂದು ಅವರೆಲ್ಲರೂ ಗ್ರಹಿಸುವರು. 19:3 ಅವರು ದೇವರನ್ನು ಸ್ತುತಿಸುತ್ತಾರೆ ಯಾಕಂದರೆ ರಹಸ್ಯ ಬಾಬೇಲ್ ಶಾಶ್ವತವಾಗಿ ನಾಶಮಾಡಲ್ಪಡುತ್ತದೆ. ಅವಳು ಎಂದಿಗೂ ಭೂಮಿಯನ್ನು ಭ್ರಷ್ಟಗೊಳಿಸಲು ಅಥವಾ ನಿಜವಾದ ವಿಶ್ವಾಸಿಗಳನ್ನು ಹಿಂಸಿಸಲು ಮತ್ತೆ ಏಳುವುದಿಲ್ಲ.

*“ಯುಗಯುಗಾಂತರಗಳಲ್ಲಿಯೂ”*– 14:11. **4**

**19:4** *“ಹಿರಿಯರೂ…ಜೀವಿಗಳೂ”*– 4:4,6-8.

*“ಆಮೆನ್”*– 1:6. **5**

**19:5** *“ಸಿಂಹಾಸನದ ಕಡೆಯಿಂದ”*– 16:17; 21:3.

*“ದೇವರಿಗೆ ಸ್ತೋತ್ರ”*– ಟಿಪ್ಪಣಿ ಕೀರ್ತನೆ 33:1-3.

*“ಆತನಿಗೆ ಭಯಪಡಿರಿ”*– 14:7; 15:4; ಟಿಪ್ಪಣಿ ಆದಿ 20:11; ಯೋಬ 28:28; ಕೀರ್ತನೆ 34:11-14; 86:11; 111:10; ಜ್ಞಾನೋ 1:7; ರೋಮಾ 3:18; 1 ಪೇತ್ರ 1:17; 2:17. ಈ ವಚನಗಳನ್ನು ಗಮನಿಸುವುದಾದರೆ ದೇವರ ಸೇವಕರು ಮತ್ತು ಆತನಿಗೆ ಭಯಪಡುವವರು ಒಂದೇ ವ್ಯಕ್ತಿಗಳಾಗಿದ್ದಾರೆ. ಸರಿಯಾದ ಕರ್ತನ ಭಯವಿಲ್ಲದಿದ್ದರೆ ನಿಜವಾದ ದೇವರ ಸೇವಕನಾಗಲು ಸಾಧ್ಯವಿಲ್ಲ. ಒಬ್ಬ ಮನುಷ್ಯನಿಗೆ ದೇವರ ಮೇಲೆ ಗೌರವಯುತ ವಿಸ್ಮಯ ಮತ್ತು ಗೌರವವನ್ನು ಹೊಂದಿರದಿದ್ದರೆ, ಅವನನ್ನು ಅಪರಾಧ ಮಾಡುವ ಮತ್ತು ಅಪಮಾನಿಸುವ ಭಯದಿಂದ ನಿಜವಾಗಿಯೂ ದೇವರ ಸೇವೆಯನ್ನು ಮಾಡಲು ಹೇಗೆ ಸಾಧ್ಯ? **6**

**19:6** ‘ಆಳುತ್ತಾನೆ” – 11:15. ಇಲ್ಲಿ ಸಂತೋಷಿಸುವುದಕ್ಕೂ ಮತ್ತು ಸ್ತೋತ್ರಿಸುವುದಕ್ಕೂ ದೊಡ್ಡ ಕಾರಣವಿದೆ. ಭೋಮಂಡಲದ ಮೇಲೆ ದೇವರು ದೊಡ್ಡ ರಾಜನಾಗಿದ್ದಾನೆ ಮತ್ತು ಭೂಮಿಯ ಮೇಲಿರುವ, ಧಾರ್ಮಿಕ ಅಥವಾ ಲೌಕಿಕವಾದ ಭ್ರಷ್ಟ ಮತ್ತು ದೈವನಿಷ್ಠೆಯಿಲ್ಲದ ಶಕ್ತಿಯನ್ನು ನಾಶ ಮಾಡುವುದರ ಮೂಲಕ ಇದನ್ನು ಪ್ರದರ್ಶಿಸುತ್ತಾನೆ. **7**

**19:7** “ಮಹಾ ಜಾರಳಿಗೆ” –ಸರಿಯಾದ ತೀರ್ಪಾಗಿದೆ ಮತ್ತು ನಾಶವಾಗಿದ್ದಾಳೆ. ಈಗ, ಆಕೆಯು ಮಾಡಿದ ಎಲ್ಲಾ ಕಾರ್ಯಗಳಿಗೆ ಬಹು ವ್ಯತಿರಿಕ್ತವಾಗಿ ಕುರಿಯಾದಾತನ ಕನ್ಯೆಯು ಪ್ರತ್ಯಕ್ಷವಾಗಿದ್ದಾಳೆ.

*“ಮದುವೆ”*– ಬಹಿರಂಗ ಪ್ರದರ್ಶನ ಮತ್ತು ಈ ಯುಗದ ಉದ್ದಕ್ಕೂ ಆತನ ಎಲ್ಲಾ ವಿಶ್ವಾಸಿಗಳು ಆಚರಿಸುತ್ತಿದ್ದದ್ದು ನಿಜವಾಗಿದೆ. ಈಗಲೂ ಎಲ್ಲಾ ವಿಶ್ವಾಸಿಗಳು ಆತನಲ್ಲಿ ಐಕ್ಯವಾಗಿದ್ದಾರೆ. ರೋಮಾ 12:4-5; 1 ಕೊರಿಂಥ 12:12; ಎಫೆ 1:23; 5:23; ಕೊಲೊ 1:18 ಇವುಗಳಲ್ಲಿ ಕ್ರಿಸ್ತನ “ದೇಹ” ಎಂದು ಕರೆಯಲ್ಪಟ್ಟಿರುವುದು ಇದೇ “ಮದಲಗಿತ್ತಿ”. ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ ದೇಶವು ಯೆಹೋವನ “ಹೆಂಡತಿ” – ನೋಡಿರಿ ಯೆಶಾಯ 54:5-7; ಯೆರೆ 3:14,20; 31:32; ಹೋಶೇಯ 2:16,19,20. ಪರಮಗೀತ ಟಿಪ್ಪಣಿಯನ್ನು ಮತ್ತು ಕೀರ್ತನೆ 45:8-17 ಸಹ ನೋಡಿರಿ.

*“ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಮಾಡಿಕೊಂಡಿದ್ದಾಳೆ”*– ಎಫೆ 5:26-27 ಹೋಲಿಸಿರಿ. ಅಲ್ಲಿ ಕ್ರಿಸ್ತನು ಕನ್ಯೆಯನ್ನು ಸಿದ್ಧಪಡಿಸುತ್ತಾನೆಂದು ನೋಡುತ್ತೇವೆ. ಹಾಗಾದರೆ ಆಕೆಯು ತನ್ನನ್ನು ಹೇಗೆ ಸಿದ್ಧಮಾಡಿಕೊಳ್ಳುತ್ತಾಳೆ? ಆತನೊಂದಿಗೆ ಸಹಕರಿಸುವುದರ ಮೂಲಕ ಮತ್ತು ಆತನು ಆಜ್ಞಾಪಿಸಿದ್ದನ್ನು ಮಾಡುವುದರ ಮೂಲಕ. **8**

**19:8** *“ಸತ್ಕಾರ್ಯಗಳು”*– ವಿಶ್ವಾಸಿಗಳು ಕ್ರಿಸ್ತನ ನೀತಿಯನ್ನು ಹೊಂದಿದ್ದಾರೆ (ರೋಮಾ 3:21-26; 1 ಕೊರಿಂಥ 1:30; 2 ಕೊರಿಂಥ 5:21; ಫಿಲಿಪ್ಪಿ 3:9), ಆದರೆ ಇದನ್ನು ಅವರು ಮಾಡುವ ಸತ್ಕಾರ್ಯಗಳಿಂದ ಸಾಬೀತುಪಡಿಸುತ್ತಾರೆ. ಈ ವಿಷಯವಾಗಿ ಮತ್ತಾಯ 5:6; 25:34-40; ರೋಮಾ 2:6-10; ಯಾಕೋಬ 2:14-26. ಸತ್ಕಾರ್ಯಗಳು ಇಲ್ಲದಿದ್ದರೆ ಅದರ ಅರ್ಥ ನಿಜವಾದ ನಂಬಿಕೆ ಇಲ್ಲ ಮತ್ತು ಕರ್ತನನ್ನು ಎದುರುಗೊಳ್ಳಲು ಸಿದ್ಧರಿಲ್ಲವೆಂದರ್ಥ. **9**

**19:9** *“ಧನ್ಯರು”*– ಟಿಪ್ಪಣಿ ಆದಿ 12:1-3; ಸಂಖ್ಯಾ 6:22-27; ಕೀರ್ತನೆ 1:1; ಮತ್ತಾಯ 5:3.

*“ಕರೆಸಿಕೊಂಡವರು”*– ಆಹ್ವಾನವನ್ನು ಸ್ವೀಕರಿಸದ ಅನೇಕರಿಗೆ ನೀಡಿದ ಮುಕ್ತ ಆಹ್ವಾನವನ್ನು ಉಲ್ಲೇಖಿಸುವುದಿಲ್ಲ (ಹೋಲಿಸಿರಿ ಮತ್ತಾಯ 22:2-7; ಲೂಕ 14:16-24). ಭೂಮಿಯಲ್ಲಿ ಈಗಾಗಲೇ ಸ್ವೀಕರಿಸಿದವರಿಗೆ ಪರಲೋಕದಿಂದ ವಿಶೇಷವಾದ ಆಹ್ವಾನ ಎಂದು ಅರ್ಥ (ನೋಡಿ ರೋಮಾ 8:30). ಅವರು ಯಾರು? ಅವರು ವಧು ಎಂಬುದಾಗಿ ಯಾವುದೇ ಸಂದೇಹವಿದೆಯೇ? ವಧು ಎಂಬ ಚಿನ್ಹೆಯು ಅವರನ್ನು ಒಟ್ಟಾಗಿ ವೀಕ್ಷಿಸುತ್ತದೆ; “ಕರೆಸಿಕೊಂಡವರು” ಎಂಬ ಪದವು ಅವರನ್ನು ವಯಕ್ತಿಕವಾಗಿ ವೀಕ್ಷಿಸುತ್ತದೆ. ಮತ್ತಾಯ 22:2-14 ರ ಸಾಮ್ಯದಲ್ಲಿ ರಾಜನ ಆಹ್ವಾನವನ್ನು ಸ್ವೀಕರಿಸಿದವರು ಮತ್ತು ಅವನು ಕೊಟ್ಟ ಮದುವೆಯ ಅಂಗಿಯನ್ನು ಧರಿಸಿದವರು, ಇವರೆಲ್ಲರೂ ಒಟ್ಟಾಗಿ ಸೇರಿ “ರಾಜಕುಮಾರನ” ವಧುವಾಗುತ್ತಾರೆ. ಅವನ ಆಹ್ವಾನವನ್ನು ಸ್ವೀಕರಿಸಿಕೊಳ್ಳುವುದರ ಮೂಲಕ ತಾವೆಲ್ಲರೂ ವಧುವಿನ ಭಾಗವಾಗಿದ್ದೇವೆಂದು ತೋರಿಸುತ್ತಾರೆ.

*“ಈ ಮಾತುಗಳು ದೇವರ ಸತ್ಯವಚನಗಳಾಗಿವೆ”*– ದೇವದೂತನ ಸ್ವಂತ ಆಹ್ವಾನವಲ್ಲ. ಸತ್ಯವೇದದ ಎಲ್ಲಾ ಕಡೆಯಲ್ಲಿ ದೇವರು ಮಾತಾಡಿದ್ದಾನೆ (ಇಬ್ರಿ 1:1-2). ಆತನ ಪ್ರಕಟವಾದ ಮಾತುಗಳಲ್ಲಿ ವಿಶ್ವಾಸಿಗಳು ವಿಶ್ರಾಂತಿ ಮತ್ತು ಆಶೀರ್ವಾದವನ್ನು ಹೊಂದಬಹುದು. **10**

**19:10** ಈ ದೇವದೂತನು 18:1 ರಲ್ಲಿರುವ ಒಬ್ಬನಾಗಿರುವುದಾದರೆ ಒಂದು ವೇಳೆ ಯೋಹಾನನು ಅವನ ವೈಭವ ಮತ್ತು ಅಧಿಕಾರ ಮತ್ತು ಆಶೀರ್ವಾದದ ಮಾತುಗಳಿಂದ ಹೊರಬಂದು ಅವನನ್ನು ಕ್ರಿಸ್ತನೆಂದು ತಪ್ಪಾಗಿ ಭಾವಿಸಿದನು.

*“ಮಾಡಬೇಡ”*– ಯಾವ ಒಳ್ಳೆ ದೇವದೂತನಿಗಾಗಲಿ ಅಥವ ಮನುಷ್ಯನಿಗಾಗಲಿ ಸೈತಾನನಿಗಿರುವ ಆಸೆ ಅವರಿಗೆ ಇರುವುದಿಲ್ಲ (ಆರಾಧನೆಯನ್ನು ಸ್ವೀಕರಿಸಲು – ಮತ್ತಾಯ 4:9 ನೋಡಿರಿ). ಅವರೆಲ್ಲರೂ ಆರಾಧನೆಯನ್ನು ನಿರಾಕರಿಸುತ್ತಾರೆ ಮತ್ತು ತಮ್ಮಿಂದ ದೂರವಾಗುವಂತೆ ಹೇಳಿ ದೇವರನ್ನು ತೋರಿಸುತ್ತಾರೆ. ಯಾರಾದರು ಆರಾಧನೆಯನ್ನು ಸ್ವೀಕರಿಸಿದರೆ ಅವರು ಅವರ ದುಷ್ಟತೆಯನ್ನು ತೋರಿಸುತ್ತಿದ್ದಾರೆ.

*“ಪ್ರವಾದನೆಯ ಆತ್ಮ”*– ಕ್ರಿಸ್ತನ ವಿಷಯವಾಗಿ ನಿಜವಾದ ಸಾಕ್ಷಿಯನ್ನು ಯಾರಾದರು

ಕೊಡುವುದಾದರೆ ಅದು ನಿಜವಾದ ಪ್ರವಾದನೆಯ ಸಾಕ್ಷಿಯಾಗಿರುತ್ತದೆ. ಅದು ದೇವರು ತಾನೇ ಪ್ರಕಟಿಸಿದ ಸತ್ಯವನ್ನು ಮಾತಾಡುತ್ತಿದೆ ಮತ್ತು ಅದು ವರ್ತಮಾನ ಮತ್ತು ಭವಿಷ್ಯತ್ಕಾಲಗಳಿಗೆ ಸಂಬಂಧಿಸಿರುತ್ತದೆ. 11

**19:11** ಆ ಮಹಾ ಜಾರ ಸ್ತ್ರೀಗೆ ನ್ಯಾಯತೀರ್ಪಾಗಿದೆ. ಈಗ ಆ ದುಷ್ಟ ಆಡಳಿತ ನಡೆಸುವ ತ್ರೀಮೂರ್ತಿಗಳು – ಘಟಸರ್ಪ, ಮೃಗ ಮತ್ತು ಸುಳ್ಳು ಪ್ರವಾದಿ – ಇವರ ದುಷ್ಟತ್ವದ ಗುಲಾಮಗಿರಿಯಿಂದ ಭೂಮಿಯನ್ನು ಬಿಡಿಸಲು ಇವರನ್ನು ಸೋಲಿಸಲೇಬೇಕಾಗಿದೆ. ಇದನ್ನು ಕ್ರಿಸ್ತನು ತನ್ನ ಹಿಂದಿರುಗುವಿಕೆಯಲ್ಲಿ ಮಾಡುತ್ತಾನೆ (ವ.20; 20:1-3). ಈ ವಚನದಲ್ಲಿರುವ ಚಿತ್ರವು ಕ್ರಿಸ್ತನು ಇದ್ದಕ್ಕಿದ್ದಂತೆ ಈ ಭೂಮಿಗೆ ಹಿಂದಿರುಗಿ ಬರುವುದು. ಮೊದಲನೆಯ ಯುಗದಿಂದಲೂ ವಿಶ್ವಾಸಿಗಳು ಈಗಿನವರೆಗೂ ಈ ಒಂದು ಘಟನೆಗಾಗಿ ಮುನ್ನೋಡುತ್ತಿದ್ದಾರೆ. 1:7 ರ ಉಲ್ಲೇಖಗಳನ್ನು ನೋಡಿರಿ.

*“ಕಾಣಿಸಿತು”*– ಅಕ್ಷರಶಃ, “ನೋಡು”.

*“ಬಿಳಿ ಕುದುರೆ”*– ಈ ಕುದುರೆಯ ಸವಾರನು 6:2 ರಲ್ಲಿ ಇರುವವನಿಗಿಂತಲೂ ಬಹಳ ವ್ಯತ್ಯಾಸವಾಗಿರುವನು.

*“ನಂಬಿಗಸ್ತನೂ ಮತ್ತು ಸತ್ಯವಂತನೂ”*– 1:5; 3:14 – ಆತನು ಕರ್ತನಾದ ಯೇಸುವಲ್ಲದೆ ಬೇರೆ ಯಾರು ಅಲ್ಲ. ಆತನು ಅಪನಂಬಿಗಸ್ತನಲ್ಲ ಮತ್ತು ಜಾರ ಸ್ತ್ರೀ, ಮೃಗ ಮತ್ತು ಅವನ ಪ್ರವಾದಿಯು ಸಾಬೀತು ಪಡಿಸಿದಂತೆ ಆತನು ಸುಳ್ಳಲ್ಲ.

*“ಯುದ್ಧಮಾಡುತ್ತಾನೆ”*– 17:14; ವಿಮೋ 15:3; ಯೆಹೋ 10:42; 23:3; ಕೀರ್ತನೆ 45:3-7; ಯೆಶಾಯ 11:4. ಕ್ರಿಸ್ತನು ತನ್ನ ಲೋಕಕ್ಕಾಗಿ ಮತ್ತು ತನ್ನ ಜನರಿಗಾಗಿ ಯುದ್ಧ ಮಾಡುತ್ತಾನೆ ಮತ್ತು ಆತನು ಗೆಲ್ಲುತ್ತಾನೆ. ಇಲ್ಲಿ ಆತನ ಬರೋಣಕ್ಕೂ ಮತ್ತು ಆತನ ಮೊದಲ ಬರೋಣರವನ್ನು ಹೋಲಿಸಿರಿ (ಲೂಕ 2:7), ಮತ್ತು ಯೆರೂಸಲೇಮಿಗೆ ಕತ್ತೆಯ ಮೇಲೆ ಆತನು ಪ್ರವೇಶಿಸಿದ್ದು (ಮತ್ತಾಯ 21:1-5). 12

**19:12** *“ಬೆಂಕಿ”*– 1:14.

*“ಅನೇಕ ಮುಕುಟಗಳು”*– ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನು ರಾಜ ಕಿರೀಟವನ್ನು (ಮುಕುಟ) ಧರಿಸಿದ್ದಾನೆಂದು ಹೇಳಿರುವ ಏಕೈಕ ಸ್ಥಳ ಇದು ಮತ್ತು ಆತನು ಭೂಮಿಯನ್ನು ಆಳಲು ಹಿಂತಿರುಗಿ ಬರುವಾಗ.

*“ಅದು ಆತನಿಗೆ ಹೊರತು ಮತ್ತಾರಿಗೂ ತಿಳಿಯದು”*– 2:17; ಮತ್ತಾಯ 11:27 ಹೋಲಿಸಿರಿ. ಕ್ರಿಸ್ತನು ಏನೆಂದು ದೇವರು ಮಾತ್ರ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬಲ್ಲನು. **13**

**19:13** *“ರಕ್ತ”*– ಪಾಪಿಗಳ ಬಿಡುಗಡೆಗಾಗಿ ತನ್ನ ರಕ್ತವನ್ನು ಸುರಿಸಿದ ಕ್ರಿಸ್ತನನ್ನು ಸೂಚಿಸುತ್ತಿರಬಹುದು (ಮತ್ತಾಯ 26:28; ರೋಮಾ 3:24-25; ಎಫೆ 1:7). ಕ್ರಿಸ್ತನನ್ನು ಯೋಧನೆಂಬುದಾಗಿ ಮತ್ತು ತನ್ನ ವೈರಿಗಳನ್ನು ಸೋಲಿಸುವನೆಂಬುದಾಗಿ ಇದು ಮಾತಾಡುತ್ತದೆಂದು ಕೆಲವರು ಯೋಚಿಸುತ್ತಾರೆ. ಆದರೆ ಇದು ವಚನ 15 ರಲ್ಲಿ ಬರುತ್ತದೆ.

*“ದೇವರ ವಾಕ್ಯ”*– ಯೋಹಾನ 1:1,14. **14**

**19:14** *“ಪರಲೋಕದಲ್ಲಿರುವ ಸೈನ್ಯದವರು”*– ಸ್ಪಷ್ಟವಾಗಿ ಆತನ ದೇವದೂತರು (ಮತ್ತಾಯ 16:27; 25:31; 2 ಥೆಸ 1:7), ಮತ್ತು ಬಹುಶಃ ಆತನ ವಿಶ್ವಾಸಿಗಳು ಸಹ (17:14; ಟಿಪ್ಪಣಿ 1 ಥೆಸ 3:13 ನೋಡಿರಿ). ಈ ಪುಸ್ತಕದಲ್ಲಿ ದೇವದೂತರಿಗೂ ಮತ್ತು ವಿಶ್ವಾಸಿಗಳಿಗೂ ಬಿಳಿನಾರುಮಡಿ ಬಟ್ಟೆಯು ಇವರಿಬ್ಬರೂ ಧರಿಸುವ ಬಟ್ಟೆಯಾಗಿದೆ (ವ.8; 15:6). **15**

- **19:15** ಟಿಪ್ಪಣಿ 1:16.

*“ಹೊಡೆಯುವದಕ್ಕಾಗಿ”*– 2 ಥೆಸ 2:8; ಯೆಶಾಯ 11:4.

*“ಕಬ್ಬಿಣದ ಕೋಲು”*– 2:27; ಕೀರ್ತನೆ 2:9. ಬಹು ಸ್ಪಷ್ಟವಾಗಿ, ಆತನ ಎರಡನೇ ಬರೋಣದ ನಂತರವೇ ಆತನು ಭೂಮಿಯ ಎಲ್ಲಾ ದೇಶಗಳನ್ನು ಆಳುವನು.

*“ಉಗ್ರಕೋಪವೆಂಬ ದ್ರಾಕ್ಷೆಯ…ತುಳಿಯುವನು”*– 14:19; ಯೆಶಾಯ 63:1-4. **16**

**19:16** *“ರಾಜಾಧಿ ರಾಜನೂ ಕರ್ತರ ಕರ್ತನೂ”*– ರಾಜರೂ ಅಥವಾ ಕರ್ತರೆಂದು ಕರೆಸಿಕೊಂಡವರೆಲ್ಲರಿಗಿಂತಲೂ ಉನ್ನತನೂ ಮತ್ತು ಹೆಚ್ಚಿನವನಾಗಿದ್ದಾನೆಂದು ಅರ್ಥ. ದೇವರ ಸ್ವಭಾವವನ್ನು ಹಂಚಿಕೊಳ್ಳದ ಮತ್ತು ದೇವರಲ್ಲದ ಯಾರಾದರೂ ಇದನ್ನು ಹೇಳಬಹುದೇ? ಹೋಲಿಸಿರಿ ಧರ್ಮೋ 10:17; ಕೀರ್ತನೆ 136:2-3; ದಾನಿ 2:47. 1 ತಿಮೊ 6:15 ನೋಡಿರಿ ಅಲ್ಲಿ ದೇವರು ತಾನೇ ಈ ಹೆಸರನ್ನು ಹೇಳುತ್ತಾನೆ. ಹಳೆಯ ಒಡಂಬಡಿಕೆಯಲ್ಲಿ ಕರ್ತನು (ಯೆಹೋವ ದೇವರು) ದೊಡ್ಡ ರಾಜನಾಗಿದ್ದಾನೆ (ಕೀರ್ತನೆ

47:2). ಇಲ್ಲಿ ಕರ್ತನಾದ ಯೇಸು ದೊಡ್ಡ ರಾಜನಾಗಿದ್ದಾನೆ. ಯೇಸು ಯೆಹೋವ ದೇವರ ಅವತಾರವಾಗಿದ್ದಾನೆ (2:11 ರ ಟಿಪ್ಪಣಿ ಮತ್ತು ಬೇರೆ ಉಲ್ಲೇಖಗಳನ್ನು ನೋಡಿರಿ). ಆತನು ಹಿಂತಿರುಗಿ ಬರುವಾಗ ಕ್ರಿಸ್ತನ ಮೇಲೆ "ಬರೆದಿರುವ" ಈ ಹೆಸರು ತೋರಿಸುವುದೇನಂದರೆ ಆತನು ತಾನೇ ರಾಜಾಧಿ ರಾಜನೂ ಮತ್ತು ಕರ್ತರ ಕರ್ತನೂ ಆಗಿದ್ದಾನೆ – 17:14. ಆತನು ಬೇರೆಯವರಿಗೆ ಸಲ್ಲಬೇಕಾದ ಹೆಸರನ್ನು ಇಟ್ಟುಕೊಳ್ಳುವದಿಲ್ಲ. ಇದು "ನಮ್ಮ ದೇವರು ಮತ್ತು ರಕ್ಷನಾದ ಯೇಸು ಕ್ರಿಸ್ತನು ಮಹಿಮೆಯೊಡನೆ ಕಾಣಿಸಿಕೊಳ್ಳುವುದಾಗಿದೆ" –ಎಲ್ಲಾ ವಿಶ್ವಾಸಿಗಳಿಗೆ ಆಶೀರ್ವಾದದ ನಿರೀಕ್ಷೆಯಾಗಿದೆ (ತೀತ 2:13). ಕ್ರಿಸ್ತನ ದೈವತ್ವದ ಇತರ ಉಲ್ಲೇಖಗಳು ಫಿಲಿಪ್ಪಿ 2:6 ರಲ್ಲಿ. **17-18**

**19:17-18** ಪಕ್ಷಿ, ಮಾಂಸ, ಕುದುರೆಗಳ ಮತ್ತು ಮನುಷ್ಯರ ಉಲ್ಲೇಖವು ಅಕ್ಷರಶಃ ಯುದ್ಧದಲ್ಲಿ ಮತ್ತು ಅನೇಕರು ಸತ್ತಿರುವುದನ್ನು ಸೂಚಿಸುತ್ತದೆ. ಈ "ಮಹಾ ಭೋಜನ" ಮತ್ತು "ಕುರಿಯಾದಾತನ ವಿವಾಹ ಔತಣ" ಇವೆರಡಕ್ಕೂ ಬಹಳ ವ್ಯತ್ಯಾಸವಿದೆ (ವ.9). ಅದು ಕ್ರಿಸ್ತನ ನೀತಿಯುಳ್ಳ ಜನರಿಗಾಗಿ; ಇದು ಕ್ರಿಸ್ತನ ವಿರೋಧಿಗಳಿಗೆ. ಸತ್ತದ್ದನ್ನು ತಿನ್ನುವ ರಣಹದ್ದುಗಳಿಗೆ ದೇವರು ಈ ಭೋಜನವನ್ನು ಒದಗಿಸುತ್ತಾನೆ. ಯೆಹೆಜ್ಕೇಲ 39:17-20 ಹೋಲಿಸಿರಿ. **18**

**19:18** *"ಎಲ್ಲಾ ರೀತಿಯ ಜನರು"*– ಮೃಗದ ಗುರುತನ್ನು ಹಾಕಿಸಿಕೊಂಡ ಎಲ್ಲಾ ದೇಶಗಳ ಜನರು ಮತ್ತು ವ.19 ರಲ್ಲಿ ಉಲ್ಲೇಖಿಸಿರುವ ಸೈನ್ಯದೊಂದಿಗೆ ಸೇರಿದವರು. **19**

**19:19** *"ಮೃಗ"*– 13:4 ನೋಡಿರಿ. ಅವನ ವಿರುದ್ದವಾಗಿ ಯುದ್ಧಮಾಡುವ ಒಬ್ಬನು ಈಗ ಕಾಣಿಸಿಕೊಂಡನು.

*"ಭೂರಾಜರೂ"*– 6:15; 16:12,14,16; 17:2,18; 18:3; 21:24.

*"ಕೂಡಿ ಬಂದರು"*– 16:14,16. ಇದು ಈ ಯುಗದ ಕಡೇಯ ಯುದ್ಧವಾಗಿರುತ್ತದೆ. ಈ ಯುದ್ಧಕ್ಕೆ ಸೈನ್ಯಗಳು ಬರುವುದು ಸಮಂಜಸವೆಂದು ಭಾವಿಸಿದರೂ ಇಲ್ಲದಿದರೂ ಅವರೆಲ್ಲರೂ ಈ ಯುಧ್ಧಕ್ಕೆ ಕೂಡಿ ಬರುತ್ತಾರೆ (ಯೆಹೆಜ್ಕೇಲ 38:4; 39:2) ಹೋಲಿಸಿರಿ). ಭೂರಾಜರೆಲ್ಲರ ಮೇಲೆ ಕ್ರಿಸ್ತನು ಸರ್ವಾಧಿಕಾರಿಯಾಗಿದ್ದಾನೆ – 1:5. ಮತ್ತು ಫರೋಹನ ಸೈನ್ಯವನ್ನು ಕೆಂಪು ಸಮುದ್ರಕ್ಕೆ ಕರೆತಂದವನು ಮತ್ತು ಅವರನ್ನು ನಾಶಮಾಡಿದವನು (ವಿಮೋ 14:4,23-28) ಭೂಲೋಕದ ಸೈನ್ಯಗಳನ್ನು ಈ ಕಡೇ ಯುದ್ಧಕ್ಕೆ ಬರಮಾಡುವನು. ಮತ್ತು

ಆತನು ಖಂಡಿತವಾಗಿ ಮಾಡುತ್ತಾನೆ. ಮೃಗವು ಮತ್ತು ಈ ರಾಜರು ಏನು ಯೋಚಿಸುತ್ತಾರೆಂದು ನಮಗೆ ತಿಳಿಸಲಿಲ್ಲ – ಪರಲೋಕದ ಕರ್ತನ ವಿರುದ್ಧವಾಗಿ ಯುದ್ಧ ಮಾಡಲು ಪ್ರಯತ್ನಿಸುತ್ತಿರುವರೆಂದು ಅವರು ಅರಿತುಕೊಳ್ಳುವರೋ ಏನೋ. ನಮಗೆ ತಿಳಿದಿರುವಂತೆ ಇದು ಬಾಹ್ಯಾಕಾಶದಿಂದ ಆಕ್ರಮಣವಾಗಿದೆ ಅದರಿಂದ ಭೂಮಿಯನ್ನು ರಕ್ಷಿಸಬೇಕೆಂದು ಭಾವಿಸುತ್ತಾರೆ. ಆದರೆ ದೇವಕುಮಾರನ ವಿರುದ್ಧ ಹೋರಾಡಲು ಅವರು ಪ್ರಜ್ಞಾಪೂರ್ವಕ ಪ್ರಯತ್ನವನ್ನು ಮಾಡುತ್ತಿದ್ದಾರೆನ್ನುವುದನ್ನು ನಾವು ತಳ್ಳಿಹಾಕಬಾರದು. ಸೈತಾನನಿಂದ ಶಕ್ತಿಯುತರಾಗಿ ಮನುಷ್ಯರ ಉದ್ದೇಶಪೂರ್ವಕ ಮತ್ತು ಮೊಂಡುತನದ ಅಂಧಃಪತನಕ್ಕೆ ಯಾವುದೇ ಮಿತಿಯಿಲ್ಲ. ಸೈತಾನನು ಮತ್ತು ಅವನ ದೂತರು ಪರಲೋಕದಲ್ಲಿಯೂ ಸಹ ಯುದ್ಧಮಾಡುತ್ತಿದ್ದಾರೆಂದು ಜ್ಞಾಪಕವಿರಲಿ (12:7). ಮತ್ತು ದೇವರಿಂದ ಬರುವ ತೀರ್ಪನ್ನು ಮನುಷ್ಯರು ತಿಳಿದುಕೊಳ್ಳಬಹುದು ಮತ್ತು ಆತನ ವಿರುದ್ಧದ ದಂಗೆಯಲ್ಲಿ ಮುಂದುವರಿಯಬಹುದು (ರೋಮಾ 1:32). **20**

**19:20** *"ಸುಳ್ಳು ಪ್ರವಾದಿ"*– 16:13; 20:10.

*"ಮಹತ್ಕಾರ್ಯಗಳು"*– 13:13-15.

*"ಬೆಂಕಿಯ ಕೆರೆ"*– 20:10,14,15; 21:8. ಅವರನ್ನು ಜೀವಂತವಾಗಿ ಬೆಂಕಿಯ ಕೆರೆಯಲ್ಲಿ ಎಸೆಯುವುದು ಮೃಗ ಮತ್ತು ಸುಳ್ಳು ಪ್ರವಾದಿ ವ್ಯಕ್ತಿಗಳೆಂದು ಸಾಬೀತಾಗುತ್ತದೆ. ರಾಜ್ಯಗಳು ಮತ್ತು ಸಾಮ್ರಾಜ್ಯಗಳನ್ನು ಅಲ್ಲಿ ಎಸೆಯುವ ಬಗ್ಗೆ ಸತ್ಯವೇದವು ಏನನ್ನೂ ಹೇಳುವುದಿಲ್ಲ. **21**

**19:21** *"ಕೂತಿದ್ದವನ ಬಾಯಿಂದ…ಕತ್ತಿ"*– ಕ್ರಿಸ್ತನು ಮಾತಾಡುತ್ತಾನೆ ಮತ್ತು ನಾಶನವು ಅದರ ಫಲಿತಾಂಶವಾಗಿರುತ್ತದೆ.

# 20 1-3

**20:1-3** ಈ ಘಟನೆಯ ಮುಂಚಿತವಾಗಿ ಕ್ರಿಸ್ತನು ಆ ಜಾರ ಸ್ತ್ರೀಯನ್ನು, ಮೃಗವನ್ನು ಮತ್ತು ಸುಳ್ಳು ಪ್ರವಾದಿಯನ್ನು ವಿಚಾರಿಸಿದ್ದಾನೆ. ಆದರೆ ಆತನ ಮಹಿಯುಳ್ಳ ಬರೋಣಕ್ಕಾಗಿ ಭೂಮಿಯು ಸಿದ್ಧವಾಗುವುದಕ್ಕಿಂತ ಮುಂಚೆ ಇನ್ನು ಒಬ್ಬ ವ್ಯಕ್ತಿಯನ್ನು ತೆಗೆದು ಹಾಕಬೇಕು. ಅದನ್ನೇ ನಾವು ಇಲ್ಲಿ ನೋಡುತ್ತೇವೆ. **1**

**20:1** *"ಅಧೋಲೋಕ"*– ಟಿಪ್ಪಣಿ 9:1. **2**

**20:2** *“ಘಟಸರ್ಪ”*– 12:3,9.

*“ಸೈತಾನನು”*– ಟಿಪ್ಪಣಿ 1 ಪೂರ್ವ 21:2; ಮತ್ತಾಯ 4:1-10; ಯೋಹಾನ 8:44.

*“ಬಂಧನದಲ್ಲಿಟ್ಟನು”*– ಒಂದು ವಿಧದಲ್ಲಿ ಕ್ರಿಸ್ತನು ತನ್ನ ಮೊದಲ ಬರೋಣದಲ್ಲಿಯೇ ಸೈತಾನನನ್ನು ಬಂಧಿಸಿದನು (ಮತ್ತಾಯ 12:29). ಸೈತಾನನನ್ನು ಈ ಯುಗದ ಉದ್ದಕ್ಕೂ ಬಂಧಿಸಲಾಗಿದೆ ಎಂದು ಕೆಲವರು ಬೋಧಿಸುತ್ತಾರೆ ಮತ್ತು ಈ ಪುಸ್ತಕದಲ್ಲಿರುವ ಈ ವಚನಗಳು ಇದನ್ನು ಸೂಚಿಸುತ್ತದೆ. ಆದಾಗ್ಯೂ, ಅದು ನಿಜವಾಗಿದ್ದರೆ ಸೈತಾನನು ಬಹಳ ಉದ್ದವಾದ ಸರಪಣಿಯಿಂದ ಕಟ್ಟಲ್ಪಟ್ಟಿರಬೇಕು ನೋಡಿರಿ 12:10,12,13,17; 1 ಪೇತ್ರ 5:8; ಎಫೆ 2:2; 6:11-12! ಇಲ್ಲಿರುವುದು ಒಬ್ಬ ದೇವದೂತ, ಕ್ರಿಸ್ತನಲ್ಲ ಎಂದು ನಾವು ಗಮನಿಸಬೇಕು. ಮತ್ತು ಅವನನ್ನು ಬಂಧಿಸಿ ಅಧೋಲೋಕದಲ್ಲಿ ಅವನನ್ನು ದೊಬ್ಬಿದ್ದಾನೆ. ಮತ್ತು ಈ ಎಲ್ಲಾ ಶತಮಾನಗಳು ಸೈತಾನನು ಅಧೋಲೋಕದಲ್ಲಿದ್ದಾನೆ ಮತ್ತು ಜನಾಂಗಗಳನ್ನು ಮೋಸಗೊಳಿಸಲು ಸಾಧ್ಯವಿಲ್ಲ ಎಂಬುದರ ವಿಷಯವಾಗಿ ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ಇದರ ಬಗ್ಗೆ ಒಂದು ಪದವೂ ಇಲ್ಲ.

*“ಒಂದು ಸಾವಿರ ವರುಷಗಳು”*– ವ.4,6. ಅಕ್ಷರಶಃ ಇದು ಸಾವಿರ ವರುಷಗಳು ಬೇರೇನು ಅಲ್ಲ ಎಂದು ಅರ್ಥೈಸಲು ಅನೇಕ ಪ್ರಯತ್ನಗಳು ನಡೆದಿವೆ, ಆದರೆ ಈ ಟಿಪ್ಪಣಿಗಳ ಲೇಖಕನ ದೃಷ್ಟಿಯಲ್ಲಿ ಈ ಎಲ್ಲಾ ಪ್ರಯತ್ನಗಳು ವಿಫಲವಾಗಿವೆ. 3

**20:3** ಅವನನ್ನು ಅಧೋಲೋಕದಲ್ಲಿ ದೊಬ್ಬಿ ಬಾಗಿಲು ಮುಚ್ಚಿ ಅದಕ್ಕೆ ಮುದ್ರೆ ಹಾಕಿದನು”- ಯೆಶಾಯ 24:21-23 ಹೋಲಿಸಿರಿ. ಇದು ಅವನನ್ನು ನಿಶ್ಚಯವಾಗಿ ಬಂಧಿಸಿರುವುದನ್ನು ಮತ್ತು ಇದರಿಂದಾಗಿ ಅವನು ಅದೋಲೋಕದಿಂದ ಹೊರ ಬಂದು ಭೂಮಿಯ ಮೇಲೆ ತನ್ನ ಪಾದಗಳನ್ನು ಒಂದು ಕ್ಷಣಕ್ಕೂ ಇಡಲಾರನೆಂಬುದನ್ನು ಸೂಚಿಸುತ್ತದೆ.

*“ಇನ್ನೂ ಜನಗಳನ್ನು ಮರುಳುಗೊಳಿಸದ ಹಾಗೆ”*– ಇದು ಭವಿಷ್ಯದಲ್ಲಿ ನಡೆಯುವ ಘಟನೆ ಎಂದು ನಾವು ಖಚಿತವಾಗಿ ಹೇಳಬಹುದು, ಯಾಕಂದರೆ ಜನಾಂಗಗಳನ್ನು ಮೋಸಗೊಳಿಸುವ ಕೆಲಸವನ್ನು ಸೈತಾನನು ನಿರಂತರವಾಗಿ ಮಾಡುತ್ತಾ ಬಂದಿದ್ದಾನೆ (12:9). 2 ಕೊರಿಂಥ 4:4; 11:3,14,15; 2 ಥೆಸ 2:9; 1 ತಿಮೊ 4:1 ಸಹ ನೋಡಿರಿ.

*“ಸ್ವಲ್ಪಕಾಲ”*– ವ. 7. 4

**20:4** *“ಸಿಂಹಾಸನಗಳು”*– ಅವು ಎಲ್ಲಿವೆ ಎಂದು ಹೇಳಲಿಲ್ಲ, ಆದರೆ ವ.1 ರಿಂದ ವ.9 ವರೆಗಿನ ಇಡೀ ದೃಷ್ಯವು ಭೂಮಿಯ ಮೇಲೆ ನಡೆಯುತ್ತದೆಂದು ಸ್ಪಷ್ಟವಾಗುತ್ತದೆ. ಒಬ್ಬ ದೇವದೂತನು “ಪರಲೋಕದಿಂದ ಇಳಿದುಬರುವುದನ್ನು ಕಂಡೆನು” –ಎಂದು ವಚನ 1 ಹೇಳುತ್ತದೆ. ಮತ್ತು ವಚನಗಳು 8,9 ಯಲ್ಲಿನ ಘಟನೆಗಳು ಭೂಮಿಯ ಮೇಲೆ ನಡೆಯುತ್ತವೆ.

*“ನ್ಯಾಯ ತೀರಿಸುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿತು”*– ಮತ್ತಾಯ 19:28 ಹೋಲಿಸಿರಿ.

*“ತಲೆಹೊಯಿಸಿಕೊಂಡವರ ಆತ್ಮಗಳನ್ನೂ…”*– 6:9.

*“ಮೃಗ”*– ಈ ಯುಗದ ಅಂತ್ಯದವರೆಗೂ ಕ್ರಿಸ್ತವಿರೋಧಿಯು ಕಾಣಿಸಿಕೊಳ್ಳುವುದಿಲ್ಲ ಮತ್ತು ಕ್ರಿಸ್ತನು ತಾನೇ ಅವನು ಬರುವಾಗಿ ಅವನನ್ನು ವಿಚಾರಿಸಿಕೊಳ್ಳುತ್ತಾನೆ (19:20; 2 ಥೆಸ 2:3-8). ಇಲ್ಲಿ ಈ ವಚನದಲ್ಲಿ ಪ್ರಕಟವಾಗಿರುವ ಘಟನೆಗಳು ಅದರ ನಂತರ ಸಂಭವಿಸುತ್ತದೆಂದು ಸಂಪೂರ್ಣವಾಗಿ ಸ್ಪಷ್ಟವಾಗುತ್ತದೆ.

*“ಜೀವಿತರಾಗಿ ಎದ್ದು”*– ಮುಂದಿನ ವಚನದಲ್ಲಿ ಇದನ್ನು ಪುನುರುತ್ಥಾನ ಎಂದು ಕರೆಯಲಾಗಿದೆ; ಅಂದರೆ ಮುಂಚೆ ಅವರಲ್ಲಿದ್ದ ಆತ್ಮಗಳು ಅವರ ದೇಹವನ್ನು ಸೇರಿಕೊಳ್ಳುವುದು ಮತ್ತು ದೇಹವು ತಿರುಗಿ ಜೀವಂತವಾಗುವುದು.

*“ಕ್ರಿಸ್ತನೊಂದಿಗೆ ಆಳಿದರು”*– ಕ್ರಿಸ್ತನು ವಾಗ್ದಾನ ಮಾಡಿದ ಹಾಗೆ (2:26-27; 3:21). ಮೃಗದಿಂದ ತಲೆಯಹೊಯಿಸಕೊಂಡವರು ಆಳುವುದನ್ನು ಇಲ್ಲಿ ಮಾತಾಡಲಾಗಿದೆ ಆದರೆ ಬೇರೆ ವಿಶ್ವಾಸಿಗಳು ಕ್ರಿಸ್ತನೊಂದಿಗೆ ಆಳುವುದಿಲ್ಲ ಎಂದು ಅರ್ಥವಲ್ಲ. ಅವರು ಆಳುವುದನ್ನು ಬೇರೆ ವಾಕ್ಯಗಳಲ್ಲಿಯೂ ಮುಂಚೆಯೇ ಪ್ರಕಟವಾಗಿದೆ ಮತ್ತು ಆ ಸತ್ಯವನ್ನು ಮತ್ತೊಮ್ಮೆ ಇಲ್ಲಿ ಹೇಳುವ ಅವಶ್ಯವಿಲ್ಲ. 5:10; 2 ತಿಮೊ 2:12; ರೋಮಾ 8:17 ನೋಡಿರಿ; ಲೂಕ 19:15-17,19 ಹೋಲಿಸಿರಿ.

*“ಸಾವಿರ ವರುಷ”*– ಈ ಸಮಯದಲ್ಲೆಲ್ಲಾ ಸೈತಾನನು ಅಧೋಲೋಕದಲ್ಲಿರುತ್ತಾನೆ. ಈ ಭೂಮಿಯ ಮೇಲೆ ಕ್ರಿಸ್ತನು ತನ್ನ ಭಕ್ತರೊಂದಿಗೆ ಆಳುವ ಸಮಯದ ಅವಧಿಯನ್ನು ಸತ್ಯವೇದದ ಈ ಸ್ಥಳದಲ್ಲಿ ಮಾತ್ರ ಹೇಳಲ್ಪಟ್ಟಿದೆ. ಆದರೆ ಈ ಪುಸ್ತಕವು ದೇವರಿಂದ ವಿಶೇಶವಾದ ಪ್ರಕಟನೆಯಾಗಿದೆ, ಮತ್ತು ಮೊದಲು ಪ್ರಕಟವಾಗಿರದ ಸತ್ಯಗಳು ಇದರಲ್ಲಿ ಇದೆ ಎಂಬುದು ನಮ್ಮನ್ನು ಆಶ್ಚರ್ಯಪಡಿಸಬಾರದು. ಕ್ರಿಸ್ತನ ಬರೋಣದ ನಂತರ ಈ ಭೂಮಿಯ

ಮೇಲೆ ವಾಸ್ತವಾಗಿ ಕ್ರಿಸ್ತನ ಆಳ್ವಿಕೆ ಇರುವುದಿಲ್ಲವೆಂದು ಕೆಲವು ಕ್ರೈಸ್ತ ಪಂಡಿತರು ಹೇಳುತ್ತಾರೆ. ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರಿಗೆ ಮಾಡಿರುವ ಮಹಿಯುಳ್ಳ ವಾಗ್ದಾನಗಳು ಮತ್ತು ಆಶೀರ್ವಾದಗಳು ಈ ಪ್ರಸ್ತುತ ಯುಗದ ಸಭೆಗಳಲ್ಲಿ ನೆರವೇರುತ್ತಿದೆ ಎಂದು, ಸೈತಾನನು ಬಂಧಿಸಲ್ಪಟ್ಟಿದ್ದಾನೆ ಮತ್ತು ಈಗ ಭಕ್ತರು ಕ್ರಿಸ್ತನೊಂದಿಗೆ ಆಳುವರು ಎಂದು ಇನ್ನು ಕೆಲವರು ಬೋಧಿಸುತ್ತಿದ್ದಾರೆ. ಮತ್ತು ಕೆಲವು ಪಂಡಿತರು ಈ “ಸಾವಿರ ವರುಷದ” ಆಳ್ವಿಕೆಯು ಈ ಭೂಮಿಗೆ ಸಂಬಧಪಟ್ಟಿದ್ದಲ್ಲ, ಆದರೆ ಪರಲೋಕದಲ್ಲಿ ಭಕ್ತರು ಆಳುವುದನ್ನು ಸೂಚಿಸುತ್ತದೆ ಎಂದು ಬೋಧಿಸುತ್ತಾರೆ. ಇವುಗಳಿಗೆ ಅವರು ಕೊಡುವ ಕಾರಣಗಳು ಈ ಟಿಪ್ಪಣಿಯ ಲೇಖಕನನ್ನು ತೃಪ್ತಿಪಡಿಸಿಲ್ಲ. ಹಳೆಯ ಒಡಂಬಡಿಕೆಯಲ್ಲಿ ಕ್ರಿಸ್ತನ ಆಳ್ವಿಕೆಯ ಪ್ರವಾದನೆಯನ್ನು ಯೆಶಾಯ 2:1-4; 9:6-7; 11:4-16; 24:23; 32:1-5; 35:1-10; ದಾನಿ 2:34-35,44,45; ಜೆಕರ್ಯ 14:8-21. **5**

**20:5** ಇದರ ಪ್ರಕಾರ ನೋಡುವುದಾದರೆ ಎರಡು ಪುನುರುತ್ಥಾನಗಳಿವೆ.

*“ಮಿಕ್ಕ ಸತ್ತವರು”*– ಅವರ ಪಾಪದಲ್ಲಿ ಸತ್ತ ಅವಿಶ್ವಾಸಿಗಳು. ಯೋಹಾನ 5:28-29 ಹೋಲಿಸಿರಿ. ಟಿಪ್ಪಣಿ ಫಿಲಿಪ್ಪಿ 3:11; ಲೂಕ 20:35 ನೋಡಿರಿ. ವಿಶ್ವಾಸಿಗಳ ಪುನುರುತ್ಥಾನದ ಬಗ್ಗೆ ಇತರ ವಾಕ್ಯ ಭಾಗಗಳು 1 ಕೊರಿಂಥ 15:20-25,42-44,51-53. 1 ಥೆಸ 4:14-17. **6**

**20:6** ಧನ್ಯರು ಮತ್ತು ಪರಿಶುದ್ಧರು ಎನ್ನುವುದು ಈ ಯುಗ ಉದ್ದಕ್ಕೂ ಇರುವ ಕ್ರಿಸ್ತನಲ್ಲಿರುವ ಎಲ್ಲಾ ನಿಜ ವಿಶ್ವಾಸಿಗಳಿಗೆ ಅನ್ವಯಿಸುತ್ತದೆ – ಮತ್ತಾಯ 5:3; ಆದಿ 12:1-3; ಸಂಖ್ಯಾ 6:22-27; ಯೋಹಾನ 17:17; ರೋಮಾ 1:7; ಎಫೆ 1:4; 2:21; ಕೊಲೊ 1:2; 3:12; ಇಬ್ರಿ 10:10,14; 1 ಪೇತ್ರ 2:9.

*“ಎರಡನೆಯ ಮರಣ”*– ವ.14

*“ಯಾಜಕರು”*– 1:6; 5:10; 1 ಪೇತ್ರ 2:5,9.

*“ಕ್ರಿಸ್ತನೊಂದಿಗೆ ಆಳುವರು”*– ಇಲ್ಲಿ ಕ್ರಿಸ್ತನ ಆಳ್ವಿಕೆಯ ಯಾವ ವಿವರಣೆಯನ್ನು ಕೊಟ್ಟಿಲ್ಲ. ಅದನ್ನು ಇಲ್ಲಿ ಕೊಡುವ ಅವಶ್ಯವಿಲ್ಲ ಯಾಕಂದರೆ ದೇವರು ಆಗಲೇ ಸತ್ಯವೇದದ ಬೇರೆ ಭಾಗಗಳಲ್ಲಿ ಇದನ್ನು ಪ್ರಕಟಿಸಿದ್ದಾನೆ. ಉದಾಹರಣೆಗಾಗಿ ಯೆಶಾಯ 2:1-4 ಮತ್ತು ಇಂಥಹ ಇತರ ವಾಕ್ಯ ಭಾಗಗಳನ್ನು ನೋಡಿರಿ. **7**

**20:7** *"ಸೆರೆಯಿಂದ ಬಿಡುಗಡೆಯಾಗುವುದು"*– ಇದು "ಸ್ವಲ್ಪ ಸಮಯ" ವ.1 ರಲ್ಲಿ ಉಲ್ಲೇಖಿತವಾಗಿದೆ. 12:12 ರಲ್ಲಿರುವ ಸ್ವಲ್ಪ ಸಮಯಕ್ಕಿಂತಲೂ ಇದು ಬೇರೆಯಾಗಿದೆ. ಅಲ್ಲಿ ಸೈತಾನನು ಪರಲೋಕದಿಂದ ದೊಬ್ಬಲ್ಪಟ್ಟನು; ಇಲ್ಲಿ ಅಧೋಲೋಕದಿಂದ ಬಿಡುಗಡೆಯಾಗುವನು – ಬಹಳ ದೊಡ್ಡ ವ್ಯತ್ಯಾಸ. 8

**20:8** *"ಮರುಳುಗೊಳಿಸಿ"*– ತಕ್ಷಣವೇ ಅವನು ತನ್ನ ಹಳೆಯ ತಂತ್ರಗಳನ್ನು ಉಪಯೋಗಿಸಲು ಪ್ರಾರಂಭಿಸುತ್ತಾನೆ ಮತ್ತು ಅದರಲ್ಲಿ ಒಳ್ಳೆಯ ಸಫಲತೆಯನ್ನು ಹೊಂದುತ್ತಾನೆ. ಒಂದು ಸಾವಿರ ವರುಷದ ಸಾರ್ವತ್ರಿಕ ನ್ಯಾಯ ಮತ್ತು ನೀತಿ, ಸಮಾಧಾನ, ಸಮೃದ್ಧಿ ಮತ್ತು ಪರಿಪೂರ್ಣತೆಯ ಸರ್ಕಾರದ ನಂತರವೂ ಮನುಷ್ಯರ ಹೃದಯವು ಯಾವಾಗಲು ಇದ್ದ ಹಾಗೆಯೇ ಬಂಡಾಯ ಮತ್ತು ವಂಚಿಸುವ ಹೃದಯವಾಗಿದೆ. ಇವರು ಈ ಸಾವಿರ ವರುಷಗಳ ಆಳ್ವಿಕೆಯಲ್ಲಿ ಹುಟ್ಟಿ ದೊಡ್ಡವರಾದವರು. ಅವರ ಬಂಡಾಯವು ಮಾನವ ಹೃದಯದ ಅಧಃಪತನದ ಬಗ್ಗೆ ದೇವರು ಕಲಿಸಲು ಸಂತೋಷಪಡುವ ಇತರ ಪಾಠಗಳನ್ನು (ಅಥವಾ ಆಳವಾದ ಸತ್ಯಗಳನ್ನು) ಬಹಿರಂಗಪಡಿಸುತ್ತದೆ.

*"ಗೋಗ್ ಮಾಗೋಗ್"*– ಯೆಹೆಜ್ಕೇಲ 38:2. ಯೆಹೆಜ್ಕೇಲದಲ್ಲಿ ಗೋಗ್ ಎನ್ನುವವನು ಮಾಗೋಗ್ ನ ಮುಖ್ಯ ರಾಜಕುಮಾರ ಮತ್ತು ಇಸ್ರಾಯೇಲ್ಯರ ವಿರುದ್ಧವಾಗಿ ಬರುವ ಮಾಗೋಗ್ ಮತ್ತು ಇತರ ದೇಶಗಳು ಇಸ್ರಾಯೇಲಿನ ಉತ್ತರದಲ್ಲಿರುವ ದೂರ ದೇಶಗಳು (ಯೆಹೆಜ್ಕೇಲ 38:6,15; 39:2). ಮತ್ತು ಈ ಯುಗದ ಅಂತ್ಯದ ಮುಂಚಿತವಾಗಿ, ಸಾವಿರ ವರುಷದ ಆಳ್ವಿಕೆಯ ಮುಂಚಿತವಾಗಿ ಅವರು ಇಸ್ರಾಯೇಲನ್ನು ಆಕ್ರಮಣ ಮಾಡುವರು (ಟಿಪ್ಪಣಿ ಯೆಹೆಜ್ಕೇಲ 38:1,8). ಇಲ್ಲಿ ಈ ಪುಸ್ತಕದಲ್ಲಿ ಗೋಗ್ ಮತ್ತು ಮಾಗೋಗ್ "ಭೂಲೋಕದ ನಾಲ್ಕು ಮೂಲೆಗಳಲ್ಲಿರುವ" ದೇಶಗಳು. ಮತ್ತು ಈ ಆಕ್ರಮಣವು ಸಾವಿರ ವರುಷದ ಆಳ್ವಿಕೆಯ ನಂತರವೂ ನಡೆಯುತ್ತದೆ. ಯಾಕೆ ಈ ಎಲ್ಲಾ ದೇಶಗಳನ್ನು ಗೋಗ್ ಮಾಗೋಗ್ ಎಂದು ಕರೆಯುತ್ತಾರೆ? ಬಹುಶಃ ಅವರ ಗುಣಲಕ್ಷಣಗಳನ್ನು ಬಹಿರಂಗಪಡಿಸಲು ಇರಬಹುದು – ಅವರು ಬಂಡಾಯ ಮತ್ತು ದೃಢ ನಿಶ್ಚಯ ಹೊಂದಿರುತ್ತಾರೆ, ಮುಂತಾದವು. ಯೆಹೆಜ್ಕೇಲ 38,39 ನೇ ಅಧ್ಯಾಯಗಳಲ್ಲಿರುವಂತೆ. 9

**20:9** *"ಸಂಖ್ಯೆಯು ಸಮುದ್ರದ ಮರಳಿನಷ್ಟಿರುವುದು"*– ಇದು ಯೆಹೆಜ್ಕೇಲ ಅಧ್ಯಾಯಗಳು 38 ಮತ್ತು 39 ರಲ್ಲಿರುವ ಆಕ್ರಮಣಕಾರರ ಬಗ್ಗೆ ಹೇಳಿರುವುದಲ್ಲ (ಯೆಹೆಜ್ಕೇಲ

38:6,15; 39:2).

*“ಪ್ರೀಯ ಪಟ್ಟಣ”*– ಕೀರ್ತನೆ 87:2.

*“ಪರಲೋಕದಿಂದ ಬೆಂಕಿ... ”*– ಯೆಹೆಜ್ಕೇಲ 38:22; 39:6; ಕೀರ್ತನೆ 11:6-7. 10

**20:10** *“ಅವರನ್ನು”*– ಇಲ್ಲಿ ಕ್ರಿಯಾ ಪದವು ಬಹುವಚನದಲ್ಲಿದೆ, ಅದರ ಅರ್ಥ ಇಲ್ಲಿ ಉಲ್ಲೇಖಿಸಿರುವ ಮೂರು ವ್ಯಕ್ತಿಗಳೂ ಯಾತನೆಪಡುವರು. ಇದರಲ್ಲಿ ಇಬ್ಬರು 1000 ವರುಷಗಳು ಇದ್ದವರು (19:20). ವಾಸ್ತವವಾಗಿ ಬೆಂಕಿಯ ಕೆರೆಯಲ್ಲಿ ದೊಬ್ಬಲ್ಪಡುವುದೆಂದರೆ ಸರ್ವನಾಶ, ಜೀವನದ ಅಳಿವು ಎಂದು ಅರ್ಥವಲ್ಲ.

*“ಹಗಲಿರುಳು ಯುಗಯುಗಾಂತರಗಳಲ್ಲಿಯೂ”*– 14:11. 11-15

**20:11-15** “ಮನುಷ್ಯರ ಕಡೇಯ ನ್ಯಾಯತೀರ್ಪು ಮತ್ತು ಈಗಿರುವ ಭೂಮ್ಯಾಕಾಶಗಳ ಅಂತ್ಯ. ದೇವರ ಸಿಂಹಾಸನ ಈಗ ಕೃಪೆಯ ಸಿಂಹಾಸನವಾಗಿದೆ – ಇಬ್ರಿ 4:16. ದೇವರ ಕೃಪೆಯನ್ನು ನಿರಾಕರಿಸಿದವರು ಅವರು ಮಾಡಿರುವ ಪಾಪಗಳಿಗೆ ದೇವರ ನ್ಯಾಯತೀರ್ಪಿಗೆ ಒಳಗಾಗುವರು. ಈ ನ್ಯಾಯತೀರ್ಪು 1000 ವರುಷಗಳ ಮುಗಿನಂತರ ಅಥವಾ ಅದಕ್ಕೂ ಮುಂಚೆಯೇ ನಡೆಯುತ್ತದೆಯೋ? ಇಲ್ಲಿನ ವಾಕ್ಯವು ಅದನ್ನು ಸ್ಪಷ್ಟವಾಗಿ ಹೇಳುವುದಿಲ್ಲ. ಇಲ್ಲಿ ನ್ಯಾಯತೀರ್ಪಿನ ತತ್ವವು ಪ್ರಕಟವಾಗಿದೆ ಮತ್ತು ಅದರ ಸಮಯವನ್ನಲ್ಲ. ನಾವು ಹೇಳಬಹುದಾದದೆಲ್ಲಾ ಏನೆಂದರೆ ಈ ವಾಕ್ಯಗಳ ಅನುಸಾರವಾಗಿ ನೋಡುವುದಾದರೆ ಇದು ಕ್ರಿಸ್ತನ 1000 ವರುಷಗಳ ಆಳ್ವಿಕೆಯ ನಂತರ ಸಂಭವಿಸುವುದು. 11

**20:11** *“ಅದರ ಮೇಲೆ ಕೂತಿದ್ದಾತನು”*– ಕ್ರಿಸ್ತನು; ಯೋಹಾನ 5:22; ಅಪೊ 17:31.

*“ಇನ್ನು ಕಾಣಿಸದ ಹಾಗಾದವು”*– 21:1. 12

**20:12** “ಜೀವಬಾಧ್ಯರ ಪಟ್ಟಿ – ಟಿಪ್ಪಣಿ 3:5.

*“ಸತ್ತವರಿಗೆ”*– ಸಾಂಭಾವ್ಯವಾಗಿ ಸತ್ತವರಿಂದ ಎಬ್ಬಿಸಲ್ಪಟ್ಟವರು ಎರಡನೇ ಪುನುರುತ್ಥಾನ ಹೊಂದಿದವರು (ವ.5). ಅವರು ಎಬ್ಬಿಸಲ್ಪಡುವರು, ಆದರೂ “ಸತ್ತವರು” ಎಂದು ಕರೆಯಲ್ಪಡುವರು, ಯಾಕಂದರೆ ಅವರು ಆತ್ಮೀಕ ಜೀವನವಿಲ್ಲದವರಾಗಿರುತ್ತಾರೆ. ಎಫೆ 2:1; 1 ತಿಮೊ 5:6.

*"ನ್ಯಾಯತೀರ್ಪಾಯಿತು"*– ಕೀರ್ತನೆ 9:7-8; 82:8; 94:2; 96:10-13; ದಾನಿ 7:9-10.

*"ಪುಸ್ತಕಗಳು"*–ಜೀವಬಾಧ್ಯರ ಪಟ್ಟಿಗಿಂತಲೂ ಇದು ವ್ಯತ್ಯಾಸವಾಗಿದೆ ಮತ್ತು ಸತ್ತವರು ಭೂಲೋಕದಲ್ಲಿದ್ದಾಗ ಮಾಡಿರುವ ಎಲ್ಲ ಕೃತ್ಯಗಳ ದಾಖಲೆಯನ್ನು ಹೊಂದಿರುತ್ತದೆ. **13**

**20:13** *"ಸಮುದ್ರವು"*– ಇದನ್ನು ಸೂಚಿಸವ ಕಾರಣವೇನೆಂದರೆ ಸತ್ತ ಮೇಲೆ ದೇಹವು ಆಳದ ಸಮುದ್ರದಲ್ಲಿ ಮುಳುಗಿ ಹೋಗುತ್ತದೆ ಅಥವಾ ಸಮುದ್ರದ ಮೀನುಗಳು ಅವರ ದೇಹವನ್ನು ಗುರುತು ಸಿಗದ ರೀತಿಯಲ್ಲಿ ತಿಂದುಹಾಕುತ್ತವೆ ಎಂದು ಕೆಲವರು ಯೋಚಿಸುತ್ತಾರೆ. ಆದರೆ ಅವರು ಸಹ ಎದ್ದೇಳುತ್ತಾರೆ ಮತ್ತು ನ್ಯಾಯಸ್ಥಾನದ ಮುಂದೆ ನಿಲ್ಲುತ್ತಾರೆ.

*"ಮೃತ್ಯುವು"*– ಮನುಷ್ಯರ ಆತ್ಮಗಳನ್ನು ದೇಹದಿಂದ ಬೇರ್ಪಡಿಸುವ ಶಕ್ತಿ. ಆದರೆ ಮರಣಕ್ಕೆ ದೇಹವನ್ನು ಮತ್ತು ಆತ್ಮವನ್ನು ಬೇರೆ ಬೇರೆಯಾಗಿ ಇಡಲು ಸಾಧ್ಯವಾಗುವುದಿಲ್ಲ.

*"ಪಾತಾಳವೂ"*– ಲೂಕ 16:23 ನೋಡಿರಿ. ದೇವರ ಕಡೇಯ ನ್ಯಾಯತೀರ್ಪಿನ ದಿನದವರೆಗೂ ಅವಿಶ್ವಾಸಿಗಳು ಅಲ್ಲಿ ಇಡಲ್ಪಟ್ಟಿರುತ್ತಾರೆ. **14**

**20:14** ಇನ್ನು ಮರಣವು ಆತ್ಮವನ್ನು ದೇಹದಿಂದ ಬೇರ್ಪಡಿಸಲು ಸಾಧ್ಯವಿಲ್ಲ ಆದರೆ ದೇವರು ಅಂತಿಮವಾಗಿ ದುಷ್ಟರ ಪ್ರತ್ಯೇಕತೆಯಲ್ಲಿ ವಿಲೀನರಾಗುತ್ತಾರೆ. ನ್ಯಾಯತೀರ್ಪಾಗುವವರೆಗೂ ಪಾತಾಳವು ಇನ್ನು ದುಷ್ಟರನ್ನು ಇಡುವ ಸ್ಥಳವಾಗಿರುವುದಿಲ್ಲ. ಎಲ್ಲಾ ದುಷ್ಟರಿಗೆ ನ್ಯಾಯತೀರ್ಪಾಗುತ್ತದೆ ಮತ್ತು ಪಾತಾಳವು ನರಕದೊಂದಿಗೆ ವಿಲೀನವಾಗುತ್ತದೆ.

*"ಎರಡನೆಯ ಮರಣ"*– ಅಂದರೆ ಆಶೀರ್ವಾದ, ಸಂತೋಷ ಮತ್ತು ಸಮಾಧಾನದ ಮೂಲವಾಗಿರುವ ದೇವರಿಂದ ಶಾಶ್ವತವಾಗಿ ಬೇರ್ಪಡುವುದು ಎಂದರ್ಥ (ಮತ್ತಾಯ 25:41; 2 ಥೆಸ 1:8-9). **15**

**20:15** ಯಾರ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದಿಲ್ಲವೋ ಅವರಿಗೆ ಆತ್ಮೀಕ ಜೀವಿತವಿರುವುದಿಲ್ಲ (ಯೋಹಾನ 1:12-13; ಎಫೆ 2:5) ಮತ್ತು ಅವರು 21:8 ರಲ್ಲಿ ಪಟ್ಟಿಮಾಡಿರುವ ಪಾಪಗಳನ್ನು ಅಭ್ಯಾಸಿಸುತ್ತಾರೆ. ಮತ್ತು ಅವರಿಗೆ ಸಲ್ಲತಕ್ಕದ್ದನ್ನು ಅವರು ಹೊಂದಿಕೊಳ್ಳುತ್ತಾರೆ. ಈ ನ್ಯಾಯತೀರ್ಪು ಮತ್ತು ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಇರುವ ಒಂದೇ ಮಾರ್ಗವನ್ನು ಜ್ಞಾಪಿಸಿಕೊಳ್ಳೋಣ – ಯೋಹಾನ 5:24; ರೋಮಾ 8:1.

# 21 1

**21:1** *"ಹೊಸ"*– ಯೆಶಾಯ 65:17; 66:22; 2 ಪೇತ್ರ 3:13

*"ಇಲ್ಲದೆ ಹೋದವು"*– 20:11; ಮತ್ತಾಯ 24:29; 2 ಪೇತ್ರ 3:10.

*"ಇನ್ನು ಸಮುದ್ರವೂ ಇಲ್ಲ"*– ಈಗಿರುವ ಸಂಗತಿಗಳಿಗಿಂತಲೂ ಬಹಳ ದೊಡ್ಡ ಬದಲಾವಣೆಯನ್ನು ಕಾಣುತ್ತೇವೆ. **2**

**21:2** *"ಹೊಸ ಯೆರೂಸಲೇಮು"*– ಗಲಾ 4:26; ಇಬ್ರಿ 11:10; 12:22; 13:14; ಫಿಲಿಪ್ಪಿ 3:20; ಯೋಹಾನ 14:2.

*"ಪರಲೋಕದಿಂದ ದೇವರ ಬಳಿಯಿಂದ ಇಳಿದುಬರುವುದನ್ನು ಕಂಡೆನು"*– ಬಿಡುಗಡೆ ಹೊಂದಿರುವ ಮಾನವನ ಕಡೆಯ ವಾಸಸ್ಥಳವು ಹೊಸ ಭೂಮಂಡಲವಾಗಿರುತ್ತದೆ, ಪರಲೋಕದಲ್ಲಿ ಅಲ್ಲ. ಅಥವಾ ಪರಲೋಕವು ಭೂಮಂಡಲವಾಗುತ್ತದೆ ಮತ್ತು ಭೂಮಂಡಲವು ಪರಲೋಕವಾಗುತ್ತದೆ ಅನ್ನೋಣವೇ.

*"ಮದಲಗಿತ್ತಿಯಂತೆ"*– ವಚನಗಳು 9,10. **3**

**21:3** *"ಪರಲೋಕದಿಂದ"*– 4:2; 16:17; 19:5 – ಜಗತ್ತಿನ ಅಧಿಕಾರದ ಕೇಂದ್ರ ಸ್ಥಾನ.

*"ದೇವರ ನಿವಾಸವು ಮುನಷ್ಯರಲ್ಲಿ ಅದೆ"*– ಅದು, ನೂತನ ಭೂಮಂಡಲದಲ್ಲಿ. ನೂತನ ಭೂಮಂಡಲವು ಪರಲೋಕವಾಗುತ್ತದೆ, ಯಾಕಂದರೆ ಅಲ್ಲಿ ದೇವರು ಮನಷ್ಯರೊಂದಿಗೆ ವಾಸಿಸುವನು. ಇದು ಇಡೀ ಸತ್ಯವೇದದ ಪರಾಕಷ್ಟೆಯಾಗಿದೆ, ಆದಿಯಿಂದಲೂ ಮಾನವನಿಗಾಗಿ ದೇವರ ಉದ್ದೇಶದ ನೆರವೇರುವಿಕೆ. ಟಿಪ್ಪಣಿ ಮತ್ತು ಉಲ್ಲೇಖಗಳು ವಿಮೋ 25:8.

*"ಅವರು ಆತನ…ದೇವರು ಅವರೊಡನೆ ವಾಸಮಾಡುವನು"*– 2 ಕೊರಿಂಥ 6:16; ಯಾಜಕ 26:11-12; ಯೆಹೆಜ್ಕೇಲ 37:27; 2 ಕೊರಿಂಥ 6:16; 1 ಪೇತ್ರ 2:9. **4**

**21:4** *"ಕಣ್ಣುಗಳು"*– 7:17.

*"ಇನ್ನು ಮರಣವಿರುವುದಿಲ್ಲ"*– 20:14 – ಇನ್ನು ದೈಹಿಕವಾದ ಮರಣವಿರುವುದಿಲ್ಲ, ದೇಹ ಮತ್ತು ಆತ್ಮಗಳ ಬೇರ್ಪಡುವಿಕೆ, ಮತ್ತು ಇನ್ನು ಆತ್ಮೀಕ ಮರಣವಿರುವುದಿಲ್ಲ ಅಂದರೆ ದೇವರಿಂದ ಬೇರ್ಪಡುವಿಕೆ.

*"ಇಲ್ಲದೆ ಹೋಯಿತು"*– ಸಾವು, ಶೋಕ, ಅಳುವುದು ಮತ್ತು ನೋವಿನ ಮೂಲ ಕಾರಣ ಮಾನವನು ಪಾಪದಲ್ಲಿ ಬಿದ್ದದ್ದು (ರೋಮಾ 5:12). ಈ ಲೋಕದಿಂದ ಪಾಪವು

ತೆಗೆದುಹಾಕಲ್ಪಟ್ಟಾಗ ಆದರೊಂದಿಗಿರುವ ಈ ಎಲ್ಲಾ ಕಾರ್ಯಗಳು ಅದರೊಂದಿಗೆ ಕಣ್ಮರೆಯಾಗುತ್ತದೆ. **5**

**21:5** *“ಹೊಸದು”*– ಈ ಕೆಲಸವನ್ನು ಮಾಡಲು ಆತನು ಆಗಲೇ ಪ್ರಾರಂಭಿಸಿದ್ದಾನೆ. 2 ಕೊರಿಂಥ 5:17 ನೋಡಿರಿ; ಎಫೆ 2:10. ದೇವರು ಈ ಪ್ರಸ್ತುತ ಭೂಮಿ ಮತ್ತು ಇದರ ವ್ಯವಸ್ಥೆಯನ್ನು ಉಂಟುಮಾಡಿದ ಉದ್ದೇಶವು ನೆರವೇರಿದ ನಂತರ, ಇವುಗಳನ್ನು ಪಕ್ಕಕ್ಕಿಡುತ್ತಾನೆ ಮತ್ತು ಹೊಸದನ್ನು ಮಾಡುತ್ತಾನೆ.

*“ನಂಬತಕ್ಕವುಗಳೂ ಸತ್ಯವಾದವುಗಳೂ”*– 19:9; 22:6. ಈ ಸಂಗತಿಗಳು ಕಾಲ್ಪನಿಕ ಅಥವಾ ಊಹಾತ್ಮಕವಾದುದಲ್ಲ, ಆದರೆ ಶಾಶ್ವತವಾದ ವಾಸ್ತವತೆಗಳು. **6**

**21:6** *“ಎಲ್ಲಾ ನೆರವೇರಿತು”*– ಒಂದು ಕಾರ್ಯವು ಮುಗಿಯಿತು ಎಂದು ದೇವರು ಹೇಳಿದರೆ ಅದರ ಅರ್ಥ ಅದು ನಿರ್ಬಂಧವಿಲ್ಲದೆ ಖಂಡಿತವಾಗಿ ನೆರವೇರುತ್ತದೆ, ಆದರೂ ಅದು ಮಾತಾಡುವ ಕ್ಷಣದಲ್ಲಿ ನೆರವೇರದೆ ಇರಬಹುದು. ಯೆಶಾಯ 46:10; ರೋಮಾ 4:17.

*“ಆದಿಯೂ ಅಂತ್ಯವೂ”*– 1:8; 22:13.

*“ಜೀವಜಲ”*– ಇಲ್ಲಿ ಜೀವಜಲವನ್ನು ಕೊಡುವಾತನು ದೇವರಾಗಿದ್ದಾನೆ; ಯೋಹಾನ 4:10,41 ರಲ್ಲಿ ಅದನ್ನು ಕರ್ತನಾದ ಯೇಸುವು ಕೊಡುವವನಾಗಿದ್ದಾನೆ. ಅದನ್ನು ಉಚಿತವಾಗಿ ಕೊಡುತ್ತಾನೆಂಬುದನ್ನು ಗಮನಿಸಿ. ನೋಡಿರಿ 22:17; ಯೆಶಾಯ 55:1; ರೋಮಾ 6:23. **7**

**21:7** *“ಅವನು”*– ದೇವರು.

*“ಜಯಹೊಂದುವವನು”*– 2:7 ರ ಟಿಪ್ಪಣಿಯನ್ನು ನೋಡಿರಿ.

*“ಬಾಧ್ಯನಾಗುವನು”*– 1 ಯೋಹಾನ 3:1-3; ರೋಮಾ 8:15-16,19,23,29. ಇದನ್ನು ಓದುವ ಪ್ರತಿಯೊಬ್ಬರೂ ಜಯಹೊಂದಬೇಕೆಂದು ನಿರ್ಧರಿಸಿರುವವರೊಳಗೆ ಒಬ್ಬರಾಗಿರಬೇಕೆನ್ನುವವರಿಗೆ ವಾಗ್ದಾನವಾಗಿದೆ ಮತ್ತು ಪ್ರಸ್ತುತ ಲೋಕದಲ್ಲಿ ಯಾವುದೇ ಬಾಧ್ಯತೆಯನ್ನು ಹೊಂದುವೆನೆನ್ನುವ ಹೆಚ್ಚಿನ ಕಾಳಜಿ ಇರಬಾರದು. ಆದರೆ ದೇವರ ಮಕ್ಕಳಾಗುವುದು ಜಯಹೊಂದುವುದರ ಪ್ರತಿಫಲವೆಂದು ಈ ವಚನದ ಮೂಲಕ ನಾವು ಯೋಚಿಸಬಾರದು. ದೇವರ ಮಕ್ಕಳಾಗುವುದು ದೇವರ ಕೃಪೆಯ ಕೊಡುಗೆಯಾಗಿದೆ (ಯೋಹಾನ 1:1,13,14; ಗಲಾ 4:4-7; ಎಫೆ 2:8-10; 1 ಪೇತ್ರ 1:3-5).

ಜಯಹೊಂದುವುದು ದೇವರ ಮಕ್ಕಳಾಗಿರುವ ಪ್ರತಿಫಲವಾಗಿದೆ, ಇದು ಹೊಸದಾಗಿ ಹುಟ್ಟಿರುವದಕ್ಕೆ ಸಾಕ್ಷಿಯಾಗಿದೆ (1 ಯೋಹಾನ 5:4-5). ಆದಾಗ್ಯೂ, ಜಯಹೊಂದುವುದು ದೇವರ ಮಕ್ಕಳು ಆ ಕಾರ್ಯದಲ್ಲಿ ಭಾಗವಹಿಸದೆ ಸ್ವಯಂಚಾಲಿತವಾಗಿ ನಡೆಯುವ ಕಾರ್ಯವಲ್ಲ. ಜಯಹೊಂದುವುದು, ನಂಬಿಕೆಯಲ್ಲಿ ಮುಂದುವರಿಯುವುದು, ಈ ಕಾರ್ಯಗಳನ್ನು ಮಾಡಲು ವಿಶ್ವಾಸಿಗಳಲ್ಲಿ ದೇವರು ತನ್ನ ಶಕ್ತಿಯ ಮೂಲಕ ಆತ್ಮೀಕ ಪ್ರಯತ್ನದ ಅವಶ್ಯವಿದೆ. 8

**21:8** ಎರಡು ವರ್ಗದ ಜನರು ಮಾತ್ರ ಇರುತ್ತಾರೆ – ರಕ್ಷಿಸಲ್ಪಟ್ಟವರು ಮತ್ತು ಕಳೆದುಹೋದವರು; ಆತನು ವಾಸಿಸುವ ದೇವಜನರು (ವ.3), ಮತ್ತು ದೇವಜನರಾಗಲು ನಿರಾಕರಿಸಿದವರು.

*"ಹೇಡಿಗಳು"*– ಈ ಸನ್ನಿವೇಶದಲ್ಲಿ ಕ್ರಿಸ್ತನನ್ನು ನಂಬದವರು ಮತ್ತು ಜನರ ಭಯದಿಂದ ಆತನನ್ನು ಅರಿಕೆಮಾಡವದರು ಎಂದು ಅರ್ಥ.

*"ನಂಬಿಕೆಯಿಲ್ಲದವರು"*– ಬೆಳಕಿನ ಬದಲು ಕತ್ತಲೆಯನ್ನು, ಕ್ರಿಸ್ತನ ಬದಲು ತಮ್ಮನ್ನು, ಪರಲೋಕದ ಬದಲು ಭೂಲೋಕವನ್ನು ಇಷ್ಟಪಟ್ಟರು ಆದ್ದರಿಂದ ಕ್ರಿಸ್ತನನ್ನು ನಂಬಲು ನಿರಾಕರಿಸಿದರು (ಯೋಹಾನ 3:19-20,36; 5:40; 2 ಥೆಸ 2:10-11). ನಂಬದಿರುವುದು ಒಂದು ಸಾಧಾರಣ ಸಂಗತಿಯಲ್ಲ, ಕೆಲವು ದುರ್ದೈವದ ಸಂಗತಿ, ಸುಲಭವಾಗಿ ಕ್ಷಮಿಸಬಹುದಾದ ಕಾರ್ಯವಲ್ಲ. ಎಲ್ಲಾದಕ್ಕಿಂತಲೂ ಇದು ಮನುಷ್ಯರನ್ನು ಬೆಂಕಿಯ ಕೆರೆಗೆ ಖಂಡಿಸುವ ಪಾಪವಾಗಿದೆ. ಇಲ್ಲಿ ಇದನ್ನು ಕೊಲೆ ಮತ್ತು ಜನರನ್ನು ದುಷ್ಟರನ್ನಾಗಿ ಮಾಡುವ ಪಾಪದೊಂದಿಗೆ ಸೇರಿಸಲಾಗಿದೆ.

*"ಜಾರರು"*– ಇದರ ಗ್ರೀಕ್ ಪದದ ಮೂಲ ಅರ್ಥ (ಎಫೆ 5:5; 1 ತಿಮೊ 1:10; ಇಬ್ರಿ 13:4; ಪ್ರಕ 22:15 ರಲ್ಲಿ ಸಹ ಉಪಯೋಗಿಸಿದೆ) ಪುರುಷರು ಲೈಂಗಿಕತೆಯನ್ನು ಖರೀಧಿಸುವಲ್ಲಿ ತೊಡಗಿಸಿಕೊಳ್ಳುವುದು, ಆದರೆ ವಿವಿಧ ಸ್ಥಳಗಳಲ್ಲಿನ ವಿವಿಧ ಆವೃತ್ತಿಗಳಲ್ಲಿ "ವ್ಯಭಿಚಾರ ಮಾಡುವವರು" ಅಥವ ಲೈಗಿಕವಾಗಿ ಅನೈತಿಕ ವ್ಯಕ್ತಿ ಎಂದು ಅನುವಾದಿಸಲಾಗಿದೆ. ನಿಶ್ಚಯವಾಗಿ ಎಲ್ಲಾ ರೀತಿಯ ಅನೈತಿಕತೆಯನ್ನು ಸತ್ಯವೇದದ ಅನೇಕ ಕಡೆಗಳಲ್ಲಿ ಖಂಡಿಸಲಾಗಿದೆ. 1 ಕೊರಿಂಥ 6:9-10; ಎಫೆ 5:5-6; ಕೊಲೊ 3:5-6 ನೋಡಿರಿ.

*"ಮಾಟಗಾರರು"*– 9:21; 18:23; 22:15; ಅಪೊ 8:11; ಧರ್ಮೋ 18:9-14. ಇದರ

ಅರ್ಥ ಜನರನ್ನು ಮೋಸಗೊಳಿಸುವ ಉದ್ದೇಶದಿಂದ ಮಾಟಮಂತ್ರವನ್ನು ಅಭ್ಯಾಸ ಮಾಡುವವರು ಮತ್ತು ಅದರ ಪರಿಣಾಮವಾಗಿ ಅವರನ್ನು ದೇವರ ಸತ್ಯದಿಂದ ದೂರವಿಡುವುದು.

*“ವಿಗ್ರಹಾರಾಧಕರು”*– ಸತ್ಯವೇದದ ಎಲ್ಲಾ ಕಡೆಯಲ್ಲಿ ಖಂಡಿಸಲ್ಪಟ್ಟಿರುವ ಪಾಪ ಮತ್ತು ದೇವರು ಕೊಟ್ಟ ದಶಾಜ್ಞೆಗಳಲ್ಲಿ ನಿಷೇಧಿಸಲಾಗಿರುವ ಒಂದು ಆಜ್ಞೆ (ವಿಮೋ 20:4-6). ಯಾವ ವಿಗ್ರಹಾರಾದಕರು ದೇವಜನರೊಂದಿಗೆ ಇರಲು ಸಾಧ್ಯವಿಲ್ಲ – ಅವನು ಅಥವ ಅವಳು ಪಶ್ಚಾತ್ತಾಪ ಪಟ್ಟು ಎಲ್ಲಾ ವಿಗ್ರಹಗಳನ್ನು ಮತ್ತು ದೇವರುಗಳನ್ನು ಬಿಡದ ಹೊರತು.

*“ಸುಳ್ಳುಗಾರರು”*– ವ.27; 22:15 ಸಹ ನೋಡಿರಿ. ಇದನ್ನು ಕೊನೆಯಲ್ಲಿ ನಮೂದಿಸಿರುವುರಿಂದ ಇದು ಮುಖ್ಯವಲ್ಲವೆಂದು ನಾವು ಯೋಚಿಸಬಾರದು. ಸುಳ್ಳುಗಾರರನ್ನು “ನಾಯಿ” ಮತ್ತು ಕೊಲೆಗಾರರ ವರ್ಗಕ್ಕೆ ಸೇರಿಸಲಾಗಿದೆ. ಸುಳ್ಳು ಹೇಳುವುದು ಲೇಸಾದ ಕಾರ್ಯವಲ್ಲ. ಅದು ಜನರನ್ನು ಕಡೆಯ ನರಕದ ಬೆಂಕಿಯ ಕೆರೆಗೆ ನಡೆಸುವ ಮರಣಕರವಾದ ಪಾಪವಾಗಿದೆ. ದೇವರು ಅದನ್ನು ತನ್ನ ವಾಕ್ಯದ ಎಲ್ಲಾ ಕಡೆಯಲ್ಲಿ ಖಂಡಿಸುವವನಾಗಿದ್ದಾನೆ – ವಿಮೋ 20:16; ಕೀರ್ತನೆ 5:6; 15:2; 31:5; ಜ್ಞಾನೋ 6:16-19; 12:22; 19:5,9,22; ಮತ್ತಾಯ 19:18; ಎಫೆ 4:15,25; ಕೊಲೊ 3:9. ಸುಳ್ಳುಗಾರರು ಸೈತಾನನ ಮಕ್ಕಳು (ಯೋಹಾನ 8:44), ಮತ್ತು ಸೈತಾನನು ಹೋಗುವ ಕಡೆಗೆ ಹೋಗುವವನಾಗಿದ್ದಾನೆ (20:10). “ಎಲ್ಲಾ” ಸುಳ್ಳುಗಾರರು ಬೆಂಕಿಯ ಕೆರೆಗೆ ಹೋಗುವರೆಂದು ದೇವರು ಹೇಳುವುದನ್ನು ಗಮನಿಸಿ – ಯಾವುದೇ ರೀತಿಯ ಸುಳ್ಳನ್ನು ಮತ್ತು ವಂಚನೆಯನ್ನು ಅಭ್ಯಾಸಿಸುವವರು ಒಂದು ವೇಳೆ ಅವರು ದೇವಜನರೆಂದು ಅಥವಾ ಕ್ರೈಸ್ತರೆಂದು ಅಥವಾ ಕ್ರೈಸ್ತ ಸೇವೆಯನ್ನು ಮಾಡುವವರು ಎಂದು ಹೇಳಿಕೊಳ್ಳುವವರಾಗಿರಲಿ ಅಥವಾ ಯಾರೇ ಆಗಲಿ. ಈ ಆತ್ಮವನ್ನು ನಾಶಪಡಿಸುವ ಪಾಪದಿಂದ ನಾವು ಪಾರಾಗೋಣ.

*“ಬೆಂಕಿ ಗಂಧಕಗಳನ್ನು…ಎರಡನೆಯ ಮರಣ”*– 19:20; 20:6,10,14,15. **9**

**21:9** *“ಕಡೇಯ ಉಪದ್ರವ”*– 15:1.

*“ಮದಲಗಿತ್ತಿ”*– 19:7. **10**

**21:10** ವ.9 “ಯಜ್ಞದ ಕುರಿಯಾದಾತನಿಗೆ ಹೆಂಡತಿಯಾಗತಕ್ಕ ಮದಲಗಿತ್ತಿ” ಯನ್ನು ತೋರಿಸುತ್ತೇನೆಂದು ದೇವದೂತನು ಹೇಳುತ್ತಾನೆ. ಆದರೆ ಯೋಹಾನನಿಗೆ ದೇವಜನರನ್ನು ತೋರಿಸುವ ಬದಲು ದೇವರ ಪಟ್ಟಣವನ್ನು ತೋರಿಸುತ್ತಾನೆ. ಈ ಪಟ್ಟಣವು ದೇವಜನರ

ವಾಸಸ್ಥಳವಾಗುತ್ತದೆ. (ವ.17) ಮತ್ತು ಅವರನ್ನು ಪ್ರತಿನಿಧಿಸುತ್ತದೆ. ಅಧ್ಯಾಯ 17 ರಲ್ಲಿರುವ ಮಹಾ ಪಟ್ಟಣವೆಂದು ಸಹ ಹೇಳಲ್ಪಟ್ಟಿರುವ ಜಾರಸ್ತ್ರೀಯನ್ನು ಹೋಲಿಸಿರಿ (17:18). ಪಟ್ಟಣವೆಂದರೆ ಕಟ್ಟಡಗಳು ಮತ್ತು ರಸ್ತೆಗಳಷ್ಟೇ ಅಲ್ಲ. ಅದರಲ್ಲಿ ವಾಸಿಸುವ ಜನರು, ಮತ್ತು ಅದು ಸಂಪೂರ್ಣ ಧಾರ್ಮಿಕ ವ್ಯವಸ್ಥೆಯನ್ನು ಪ್ರತಿನಿಧಿಸಬಹುದು. ಮತ್ತಾಯ 23:37-39 ಹೋಲಿಸಿರಿ. ಪ್ರವಾದಿಗಳನ್ನು ಕೊಂದದ್ದು ಕಟ್ಟಡಗಳು ಅಥವಾ ರಸ್ತೆಗಳಲ್ಲ ಆದರೆ ಅಕ್ಷರಶಃ ಯೆರೂಸಲೇಮಿನಲ್ಲಿ ವಾಸಿಸುತ್ತಿದ್ದ ಇಸ್ರಾಯೇಲಿನ ಜನರು. ಹಳೆಯ ಯೆರೂಸಲೇಮು ಯೆಹೂದ್ಯರನ್ನು ಪ್ರತಿನಿಧಿಸಿದಂತೆ ಹೊಸ ಯೆರೂಸಲೇಮು ಬಿಡುಗಡೆ ಹೊಂದಿದ ದೇವಜನರನ್ನು ಪ್ರತಿನಿಧಿಸುತ್ತದೆ. ಮತ್ತು ಅವರು ದೇವರ ಸಂಪೂರ್ಣ ಪರಿಶುದ್ಧತೆ, ಮಹಿಮೆ ಮತ್ತು ವೈಭವವನ್ನು ಹಂಚಿಕೊಳ್ಳುತ್ತಾರೆ. 11

**21:11** *"ದೇವರ ತೇಜಸ್ಸು"*– ವ. 23. ಯೋಹಾನ 17:22,24; ರೋಮಾ 2:10; 5:2; 8:17-18,30.

*"ಅತ್ಯಮೂಲ್ಯ ರತ್ನ"*– 4:3. 12

**21:12** *"ಹನ್ನೆರಡು ಕುಲಗಳು"*– 7:5-8. ಈ ಪಟ್ಟಣವು ಇಸ್ರಾಯೇಲ್ ಮತ್ತು ಶಾಸ್ವತವಾಗಿ ಐಕ್ಯತೆಯಿಂದಿರುವ ಹೊಸ ಒಡಂಬಡಿಕೆಯ ಸಭೆಯನ್ನು (ವ.14) ಸ್ಪಷ್ಟವಾಗಿ ಪ್ರತಿನಿಧಿಸುತ್ತದೆ. ಎಫೆ 2:14-22; ರೋಮಾ 11:17-24 ಹೋಲಿಸಿರಿ. ಈ ಪಟ್ಟಣವು ಕ್ರಿಸ್ತನ ಮದಲಗಿತ್ತಿಯನ್ನು ಪ್ರತಿನಿಧಿಸುವುದರಿಂದ (ವ.9) ಬಿಡುಗಡೆ ಹೊಂದಿದ ಇಸ್ರಾಯೇಲ್ ಸಹ ಮದಲಗಿತ್ತಿಯ ಭಾಗವಾಗಿದೆ. 14

**21:14** *"ಹನ್ನೆರಡು ಮಂದಿ ಅಪೋಸ್ತಲರು"*– ಮತ್ತಾಯ 10:2-4. ಇಸ್ಕರಿಯೂತ ಯೂದನು ಅಪೋಸ್ತಲನಾಗಿ ತನ್ನ ಸ್ಥಳವನ್ನು ಕಳೆದುಕೊಂಡನು – ಅಪೊ 2:15-20. ಮಿಕ್ಕ ಹನ್ನೊಂದು ಮಂದಿಯೊಂದಿಗೆ ಇಲ್ಲಿ ಯಾರ ಹೆಸರಿಬಹುದೆಂದು ನಾವು ಅನುಮಾನ ಪಡಬಹುದೇ? ರೋಮಾ 1:1; 1 ಕೊರಿಂಥ 15:7-10; ಗಲಾ 2:8-9 ನೋಡಿರಿ. 16

**21:16** *"ಹನ್ನೆರಡು ನೂರು ಮೈಲಿ"*– ಸುಮಾರು 2,200 ಕಿಲೋ ಮೀಟರುಗಳು. ಈ ಪಟ್ಟಣವು ಬಹಳ ದೊಡ್ಡ ಗಾತ್ರವುಳ್ಳದ್ದಾಗಿರುತ್ತದೆ ಮತ್ತು ಆಕಾಶಕ್ಕೆ ಮುಟ್ಟುವಂತಿರುತ್ತದೆ. ಸ್ಪಷ್ಟವಾಗಿ ಅಲ್ಲಿ ವಾಸಿಸುವ ಬಿಡುಗಡೆ ಹೊಂದಿದ ಬಹಳ ದೊಡ್ಡ ಜನಸಮೂಹವು ಅಲ್ಲಿ ವಾಸಿಸುವದನ್ನು ಪ್ರತಿಸಿಧಿಸುವುದರಿಂದ ಈ ಪಟ್ಟಣವು ಆ

ಗಾತ್ರವನ್ನು ಹೊಂದಿರಬೇಕಾಗುತ್ತದೆ. 7:9 ಹೋಲಿಸಿರಿ. 17

**21:17** *"ನೂರನಾಲ್ವತ್ತುನಾಲ್ಕು ಮೊಳ"*– ಸುಮಾರು 66 ಮೀಟರುಗಳು. ಗೋಡೆಯ ಅವಶ್ಯವೇನು? ಅಲ್ಲಿಗೆ ಸೇರದಿರುವವರನ್ನು ಹೊರಗೆ ಇಡುವುದನ್ನು ಸೂಚಿಸುವ ಸಂಕೇತವಾಗಿರಬಹುದು – ವ.27; 22:15. 18

**21:18** ಪಾರದರ್ಶಕವಾದ ಚಿನ್ನವು ಮನುಷ್ಯರಿಗೆ ಈಗ ಇನ್ನೂ ಗೊತ್ತಿಲ್ಲದ ವಸ್ತುವಾಗಿದೆ (ಅಥವಾ ಪಟ್ಟಣದ ಬಾಗಿಲುಗಳ ದೊಡ್ಡ ಗಾತ್ರದ ಅಮೂಲ್ಯ ರತ್ನಗಳು – ವ.21). ಸೃಷ್ಟಿ ಕರ್ತನಾದ ದೇವರು ಭೂಮಿಯ ಮೇಲೆ ಮನಗೆ ತಿಳಿದಿರುವ ಅಸಭ್ಯ ಮತ್ತು ಘನ ವಸ್ತುಗಳಿಗೆ ಸೀಮಿತವಾಗಿಲ್ಲ. 19-20

**21:19-20** ಈ ಕೆಲವು ರತ್ನಗಳ ಗ್ರೀಕ್ ಹೆಸರುಗಳು ಇಂದು ಏನನ್ನು ಪ್ರತಿನಿಧಿಸುತ್ತವೆ ಎಂದು ನಮಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲ. 21

**21:21** ಯಾವ ಕಪ್ಪೆಚಿಪ್ಪುಗಳೂ ಈ ರತ್ನಗಳನ್ನು ಉಂಟುಮಾಡಲಿಲ್ಲ, ಆದರೆ ಎಲ್ಲವನ್ನೂ ಉಂಟುಮಾಡಿದಾತನು ಎಲ್ಲವನ್ನೂ ಹೊಸದಾಗಿ ಮಾಡುತ್ತಾನೆ – ವ.5. 22

**21:22** ವಸ್ತುಗಳಿಂದ ಕಟ್ಟಲ್ಪಟ್ಟ ದೇವಾಲಯವು ಇನ್ನು ಬೇಕಾಗಿರುವುದಿಲ್ಲ. ಹಳೆಯ ಒಡಂಬಡಿಕೆಯಲ್ಲಿ ದೇವಾಲಯವು (ಮತ್ತು ಮೂಂಜೂಷ) ದೇವರು ವಾಸಿಸುವ ಸ್ಥಳವಾಗಿತ್ತು (ವಿಮೋ 25:8), ಮತ್ತು ಇಸ್ರಾಯೇಲಿನ ಮಹಾ ಯಾಜಕನನ್ನು ಬಿಟ್ಟು ಬೇರೆಯಾರಿಗೂ ಆತನ ಪ್ರಸನ್ನತೆಯನ್ನು ಪ್ರವೇಶಿಸುವ ಹಾಗಿರಲಿಲ್ಲ (ಇಬ್ರಿ 9:7; ಯಾಜಕ 16:1-2). ಬೇರೆ ಎಲ್ಲರನ್ನು ಹೊರಗಿಡಲಾಗಿತ್ತು. ಹೊಸ ಯೆರೂಸಲೇಮಿನಲ್ಲಿ ದೇವರು ಮತ್ತು ಕ್ರಿಸ್ತನು ತನ್ನ ಜನರ ದೇವಾಲವಾಗಿರುತ್ತಾರೆ ಮತ್ತು ಆತನ ಜನರು ಆತನ ಪ್ರಸನ್ನತೆಯಲ್ಲಿ ಮತ್ತು ಆತನಲ್ಲಿ ವಾಸಿಸುತ್ತಾರೆ (ವ. 3; 3:12; ಯೋಹಾನ 17:20-23). 23

**21:23** *"ಸೂರ್ಯನಾಗಲೀ ಚಂದ್ರನಾಗಲೀ"*– ನಮ್ಮ ಪ್ರಸ್ತುತ ಸೂರ್ಯ ಚಂದ್ರರ ರೀತಿಯಲ್ಲಿರುತ್ತದೋ ಏನೋ ನಮಗೆ ತಿಳಿಯದು – 20:11.

*"ಯಜ್ಞದ ಕುರಿಯಾದಾತನೇ ಅದರ ದೀಪವು"*– ಯೋಹಾನ 8:12; 2 ಕೊರಿಂಥ 4:6; 1 ಯೋಹಾನ 1:5-6. ಈ ಲೋಕದಲ್ಲಿ ಆತನ ಬೆಳಕಿನಲ್ಲಿ ನಡೆಯುವವರು ಮಾತ್ರ ಮುಂದಿನ

ಲೋಕದಲ್ಲಿ ಜೀವಿಸುತ್ತಾರೆ. **24-26**

**21:24-26** ಈ ಚಿತ್ರವು ಹೊಸ ಭೂಮಿಯಲ್ಲಿ ಬಿಡುಗಡೆ ಹೊಂದಿದವರು ತಮ್ಮ ವಯಕ್ತಿಕ ಆಡಳಿತಗಾರರೊಂದಿಗೆ ವಿಭಿನ್ನವಾದ ಭೂಮಿಯನ್ನು ಹೊಂದಿರಬಹುದು ಮತ್ತು ಪಟ್ಟಣಕ್ಕೆ ಬಂದು ಹೋಗಬಹುದು. ಆದರೆ ಇದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. **27**

**21:27** ವಚನಗಳು 24-26 ರಲ್ಲಿರುವ ರಾಜರು ಮತ್ತು ಜನಾಂಗಗಳು ದೇವರ ಜನರು ಮತ್ತು ಆತನ ಆತ್ಮನಿಂದ ಹುಟ್ಟಿದವರು ಎಂದು ಇದು ಸ್ಪಷ್ಟ ಪಡಿಸುತ್ತದೆ.

*"ಹೊಲೆಯಾದ್ದೊಂದೂ ಸೇರುವುದಿಲ್ಲ"*– ನಾವು ವಾಸಿಸುವ ಲೋಕವನ್ನು ಪಾಪವು ಹಾಳುಮಾಡಿದೆ. ಆದರೆ ಆ ಲೋಕವನ್ನು ನಾಶಮಾಡಲು ಸಾಧ್ಯವಿಲ್ಲ. ಅದು, ಕಳಂಕ ಅಥವಾ ಕಲೆ ಇಲ್ಲದ ಶಾಶ್ವತ ಶುದ್ಧತೆ ಮತ್ತು ಪವಿತ್ರತೆಯಿಂದಿರುತ್ತದೆ!

*"ಸುಳ್ಳಾದದ್ದನ್ನು ನಡಿಸುವವನು"*– ವಿಶೇಶ ಉಲ್ಲೇಖಕ್ಕಾಗಿ ಪ್ರತ್ಯೇಕಿಸಲಾಗಿದೆ (ವ.8 ನೋಡಿರಿ). ಹೊಸ ಯೆರೂಸಲೇಮಿನಲ್ಲಿ ಒಂದು ಸುಳ್ಳನ್ನೂ ಹೇಳಲಾಗದು – ಬಹುತೇಕ ಇದುವೇ ಸ್ವರ್ಗ ಎಂದು ನಾವು ಈಗಲೇ ಯೋಚಿಸಬಹುದು!

*"ಜೀವಬಾಧ್ಯರ ಪಟ್ಟಿ"*– 20:12,15.

# 22 1

**22:1** *"ಜೀವಜಲದ ನದಿ"*– 21:6 . ಕೀರ್ತನೆ 46:4; ಯೆಹೆಜ್ಕೇಲ 46:4 ಹೋಲಿಸಿರಿ. ವಿಶ್ವಾಸಿಗಳು ನಿತ್ಯಕ್ಕೂ ಅನುಭವಿಸುವ ನಿತ್ಯಜೀವವಾಗಿದೆ.

*"ಸಿಂಹಾಸನದಿಂದ"*– ಸಿಂಹಾಸನವು ದೇವರು ಮತ್ತು ಕುರಿಯಾದಾತನ ನಡುವೆ ಹಂಚಿಕೆಯಾಗಿದೆ ಮತ್ತು ಈ ಸಿಂಹಾಸನವು ಹೊಸ ಭೂಮಂಡಲದ ಮೇಲಿರುವ ಪಟ್ಟಣದಲ್ಲಿರುವುದು. ಹೊಸ ಭೂಮಂಡಲವು ದೇವರು ಜಗತ್ತನ್ನು ಆಳುವ ಸ್ಥಳವಾಗಿರುತ್ತದೆ. **2**

**22:2** *"ಜೀವವೃಕ್ಷ"*– 2:7. ಮಾನವಕುಲದ ಇತಿಹಾಸವು ಜೀವವೃಕ್ಷದ ಉಲ್ಲೇಖದೊಂದಿಗೆ ಪ್ರಾರಂಭವಾಗುತ್ತದೆ (ಆದಿ 2:9) ಮತ್ತು ಪಾಪದ ನಿಮಿತ್ತವಾಗಿ ಮನುಷ್ಯನನ್ನು ಅದರಿಂದ ತಡೆಯಲಾಯಿತು (ಆದಿ 3:22-24). ಕೊನೆಯ ದೃಶ್ಯವು ಮನುಷ್ಯನು ಪಾಪದಿಂದ ಬಿಡುಗಡೆಯಾಗುವುದು ಮತ್ತು ಈ ಮರಕ್ಕೆ ಹೋಗಲು ಉಚಿತ ಪ್ರವೇಶವನ್ನು ಹೊಂದುವುದು.

*“ಹನ್ನೆರಡು ತರಹದ ಫಲಗಳು”*– ಆ ಒಂದು ಹಣ್ಣಿನ ಒಂದು ರುಚಿಯು ಈ ಪಾಪ ಪಾಪಮಯವಾದ ಭೂಮಿಯ ಮೇಲೆ ಯುಗಯುಗಾಂತರಗಳಿಂದಲೂ ದೇವಜನರನ್ನು ಪೀಡಿಸಿದ ಎಲ್ಲದರ ಅಂತ್ಯವನ್ನು ಅರ್ಥೈಸುತ್ತದೆ. **3**

**22:3** *“ಶಾಪಗ್ರಸ್ತವಾದದ್ದು”*– ಆದಿ 3:17; ಯೆಶಾಯ 24:6. ಹಳೆಯ ಒಡಂಬಡಿಕೆಯು ಶಾಪದ ಎಚ್ಚರಿಕೆಯೊಂದಿಗೆ ಮುಕ್ತಾಯವಾಗುತ್ತದೆ – ಮಲಾಕಿ 4:6. ಸತ್ಯವೇದವು ಆ ಶಾಪವನ್ನು ನಿತ್ಯಕ್ಕೂ ತೆಗೆಯಲ್ಪಟ್ಟ ವಾಗ್ದಾನದೊಂದಿಗೆ ಮುಕ್ತಾಯವಾಗುತ್ತದೆ.

*“ಆತನಿಗೆ ಯಾಜಕ ಸೇವೆ ಮಾಡುವರು”*– 7:15 ನೋಡಿರಿ. ವಿಶ್ವಾಸಿಗಳ ಸೇವೆಯು ಶಾಶ್ವತವಾದ ಯುಗವನ್ನು ಪ್ರವೇಶಿಸಿದ ನಂತರ ಮುಕ್ತಾಯವಾಗುವುದಿಲ್ಲ. ದೇವರಿಗೆ ನಿತ್ಯಕ್ಕೂ ಸೇವೆಮಾಡುವ ಭಾಗ್ಯ ಮತ್ತು ಸಂತೋಷವಿರುತ್ತದೆ. ಈ ಸೇವೆಯು ಪಾಪವಿಲ್ಲದ ಅಥವಾ ತಪ್ಪಿಲ್ಲದ, ವಿರೋಧವಿಲ್ಲದ, ಆಯಾಸವಿಲ್ಲದ ಸೇವೆಯಾಗಿರುತ್ತದೆ. **4**

**22:4** *“ಆತನ ಮುಖದರ್ಶನವಾಗುವುದು”*– ಮತ್ತಾಯ 5:8; 1 ಕೊರಿಂಥ 13:12; ಇಬ್ರಿ 12:14; ಯೆಶಾಯ 33:17.

*“ಅವರ ಹಣೆಗಳ…ಆತನ ಹೆಸರು ಇರುವುದು”*– 14:1. ಅವರು ಆತನವರಾಗುತ್ತಾರೆ ಮತ್ತು ಆತನಂತಯೇ ಇರುತ್ತಾರೆ – ರೋಮಾ 8:29; 1 ಯೋಹಾನ 3:1-2. **5**

**22:5** *“ರಾತ್ರಿ ಇರುವದಿಲ್ಲ”*– 21:25.

*“ಬೆಳಕು”*– 21:2.

*“ಅವರು ಯುಗಯುಗಾಂತರಗಳಲ್ಲಿಯೂ ಆಳುವರು”*– ಕ್ರಿಸ್ತನ 1000 ವರುಷಗಳ ಆಳ್ವಿಕೆಯ ಮುಕ್ತಾಯದ ನಂತರವೂ ಅವರ ಆಳ್ವಿಕೆಯು ನಿಂತುಹೋಗುವದಿಲ್ಲ – 20:4. ಕ್ರಿಸ್ತನ ಆಳ್ವಿಕೆಯ ರೀತಿಯಲ್ಲಿಯೇ ಅವರ ಆಳ್ವಿಕೆಯಲ್ಲಿಯೂ ಎರಡು ಹಂತಗಳಲ್ಲಿರುತ್ತದೆ. ಅವರು ಯಾಜಕರಾಗಿರುವರು ಎಂಬುದರ ಬಗ್ಗೆ ಇಲ್ಲಿ ಏನೂ ಹೇಳಲಾಗಿಲ್ಲ (20:6 ರಲ್ಲಿರುವ ಹಾಗೆ). **6**

**22:6** *“ಸತ್ಯವಾದವುಗಳು”*– 19:9; 21:5.

*“ಪ್ರವಾದಿಗಳ ಆತ್ಮಗಳನ್ನು ಪ್ರೇರೇಪಿಸುವ ದೇವರಾದ ಕರ್ತನು”*– ಸತ್ಯವೇದದಲ್ಲಿರುವ ಪ್ರವಾದಿಗಳನ್ನು ಪ್ರೇರೇಪಿಸಿದ್ದು ದೇವರು (2 ಪೇತ್ರ 1:21) ಈ ಪುಸ್ತಕವನ್ನು ಸಹ

ಪ್ರೇರೇಪಿಸಿದನು.

*"ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳು"*– 1:1 ನೋಡಿರಿ. 7

**22:7** ಇವು ಕರ್ತನಾದ ಯೇಸುವಿನ ಮಾತುಗಳು – ವಚನಗಳು 12,20; 3:11. ದೇವದೂತನು ಒಂದು ವೇಳೆ ಯೇಸುವಿನ ಮಾತುಗಳನ್ನು ಇಲ್ಲಿ ಉಲ್ಲೇಖಿಸಿತ್ತಿದ್ದನು, ಅಥವಾ ಕರ್ತನು ತಾನೇ ಮಾತನಾಡಿರಬಹುದು.

*"ಬೇಗನೆ"*– ಟಿಪ್ಪಣಿ 1:1 ನೋಡಿರಿ.

*"ಪ್ರವಾದನೆಯ ಮಾತುಗಳನ್ನು...ಧನ್ಯನು"*– 1:3. ಈ ಆಶೀರ್ವಾದಗಳನ್ನು ಯಾರು ಪಡೆಯುತ್ತಾರೆಂದು ನೋಡಿ – ಈ ಪುಸ್ತಕವನ್ನು ವ್ಯಾಖ್ಯಾಯಿಸುವವರಲ್ಲ ಅಥವಾ ಇದರ ಚಿನ್ಹೆಗಳ, ಮುಂತಾದವುಗಳ ಬಗ್ಗೆ ಊಹಿಸುವವರಲ್ಲ, ಆದರೆ ಇಲ್ಲಿ ಪ್ರಕಟಿಸಲ್ಪಟ್ಟಿರುವ ಸತ್ಯಗಳಿಗೆ ವಿಧೇಯರಾಗುವವರಿಗೆ. 8

**22:8** *"ಯೋಹಾನನೆಂಬ ನಾನೇ"*– 1:9.

*"ದೇವದೂತನಿಗೆ ನಮಸ್ಕಾರಮಾಡಬೇಕೆಂದು...ಪಾದಕ್ಕೆ ಬಿದ್ದೆನು"*– 19:10 ನೋಡಿರಿ. 9

**22:9** *"ಮಾಡಬೇಡ"*– ಇದರಿಂದ ನಾವು ದೇವದೂತರ ಮತ್ತು ದೆವ್ವಗಳ ಸ್ವಭಾವವನ್ನು ಕಲಿಯುತ್ತೇವೆ. ದೇವರ ದೂತರು ಅವರನ್ನು ಆರಾಧಿಸುವುದನ್ನು ತಿರಸ್ಕರಿಸುತ್ತಾರೆ ಮತ್ತು ಸೈತಾನನ ದೂತರು ಅದಕ್ಕಾಗಿ ತವಕಿಸುತ್ತಾರೆ.

*"ದೇವರಿಗೇ ನಮಸ್ಕಾರಮಾಡು"*– ಹಾಗಾದರೆ ಪೂಜೆ ಅಥವಾ ಯಾವುದೇ ದೇವದೂತರನ್ನು, ಅಥವಾ ಆತ್ಮಗಳನ್ನು, ಅಥವಾ ಮನುಷ್ಯರನ್ನು, ಅಥವಾ ಯಾವುದೇ ರೀತಿಯ ವಸ್ತುಗಳನ್ನು ಆರಾಧಿಸಬೇಕೆಂದು ಬೋಧಿಸುವ ವ್ಯಕ್ತಿಗಳಿಂದ ನಿಮ್ಮ ಜೀವಕ್ಕಾಗಿ ಪಲಾಯನ ಮಾಡಿರಿ. ಈ ರೀತಿಯ ಬೋಧನೆಯು ಪೈಶಾಚಿಕ ಕೃತ್ಯವಾಗಿದೆ. 10

**22:10** *"ಗುಪ್ತವಾಗಿಡಬೇಡ"*– 10:4 ಹೋಲಿಸಿರಿ. ಪುಸ್ತಕವನ್ನು ಗುಪ್ತವಾಗಿಡಬೇಡ ಎನ್ನುವುದರ ಅರ್ಥ ಎಲ್ಲರೂ ನೋಡುವ ಹಾಗೆ, ಯಾವುದನ್ನೂ ಗುಪ್ತವಾಗಿಡದೆ ಅದನ್ನು ಬರೆದಿಡಬೇಕು. ದಾನಿ 12:4 ಹೋಲಿಸಿರಿ. ದಾನಿಯೇಲನ ಪ್ರವಾದನೆಗಳು ನಂತರದ ಸಮಯದವರೆಗೂ ಅರ್ಥಮಾಡಿಕೊಳ್ಳಲು ಸಾಧ್ಯವಾಗದ ರೀತಿಯಲ್ಲಿ ಕೊಡಲಾಗಿತ್ತು. ಆದರೆ ಯೋಹಾನನ ಮುಖಾಂತರ ಕೊಡಲ್ಪಟ್ಟಿರುವ ಈ ಪ್ರವಾದನೆಗಳು ಈಗಿನ ದೇವರ ಸೇವಕರು ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಕೊಡಲ್ಪಟ್ಟಿದೆ (1:1-13).

*“ಇವು ನೆರವೇರುವ ಸಮಯವು ಹತ್ತಿರವಾಗಿದೆ”*– 1:3. 11

**22:11** ಇಲ್ಲಿ ಇದರ ಅರ್ಥ ಇದಾಗಿರಬಹುದೆಂದು ತೋರುತ್ತದೆ: ಗುಪ್ತವಾಗಿರದ ಈ ಪುಸ್ತಕದ ಬೆಳಕಿನಲ್ಲಿ ಇದರ ವಿವರಣೆಗಳು ಮತ್ತು ಮಹಿಮೆಯುಳ್ಳ ವಾಗ್ದಾನಗಳು ಮತ್ತು ಇವುಗಳ ಭಯಂಕರವಾದ ಶಿಕ್ಷೆ, ಯಾವನಾದರು ತಪ್ಪುಮಾಡಲು ಆರಿಸಿಕೊಂಡರೆ ಮತ್ತು ಕೆಟ್ಟವನಾಗಿರಲು ಬಯಸಿದರೆ, ಅವರು ಹಾಗೆ ಇರಲಿ. ಅಂತಹ ವ್ಯಕ್ತಿಯನ್ನು ಅವನ ದೃಢ ನಿಶ್ಚಯದ ಹಾದಿಯಿಂದ ಸರಿಸಲು ಯಾವುದೇ ರೀತಿಯ ಬಲವಂತವನ್ನು ತರಲಾಗುವದಿಲ್ಲ. ಈ ಶಿಕ್ಷೆಯ ಒಂದು ಭಾಗವು ಅವನ ಕೆಟ್ಟತನಕ್ಕೆ ಮತ್ತು ತಪ್ಪಿಗೆ ಅವನನ್ನು ಬಿಟ್ಟುಬಿಡುವುದು ಭಯಾನಕವಾಗಿರುತ್ತದೆ. ಅದು ಹಾಗಾಗದಂತೆ ಮಾಡುಬಹುದು ಎಂಬುದು ಸಹ ಸತ್ಯವಾಗಿದೆ. ಈ ಪುಸ್ತಕದ ಬೆಳಕಿನಲ್ಲಿ ಪರಿಶುದ್ಧರು ಮತ್ತು ನೀತಿಯುಳ್ಳವರು ಅದೇ ಹಾದಿಯಲ್ಲಿ ಮುಂದುವರಿಯಬೇಕು. 12

**22:12** *“ಬೇಗ”*– “ಶೀಘ್ರ” –ಕ್ಕಿಂತಲೂ ಉತ್ತಮವಾದ ಭಾಷಾಂತರ – 1:1 ಮುಂತಾದುವನ್ನು ನೋಡಿರಿ.

*“ನನ್ನ ಪ್ರತಿಫಲ”*– ಮತ್ತಾಯ 16:27; 1 ಕೊರಿಂಥ 3:12-15; ಕೊಲೊ 3:24. 13

**22:13** *“ಆದಿಯೂ ಮತ್ತು ಅಂತ್ಯವೂ”*– 1:8; 21:6 ಹೋಲಿಸಿರಿ. ಕರ್ತನಾದ ಯೇಸು ತಾನು ದೇವರಾಗಿದ್ದೇನೆಂದು ಇದಕ್ಕಿಂತಲೂ ಹೆಚ್ಚು ಸರಳವಾಗಿ ಹೇಳಲು ಸಾಧ್ಯವಿಲ್ಲ. ಆ ಹೆಸರು ತನಗೆ ಸೇರದ ಹೊರತು ಆತನು ದೇವರ ಹೆಸರನ್ನು ತನಗಾಗಿ ತೆಗೆದುಕೊಳ್ಳುವುದಿಲ್ಲ. ಫಿಲಿಪ್ಪಿ 2:6; ಲೂಕ 2:11 ಉಲ್ಲೇಖಗಳನ್ನು ಸಹ ನೋಡಿರಿ.

*“ಮೊದಲನೆಯವನೂ ಕಡೆಯವನೂ”*– 21:6.

*“ಪ್ರಾರಂಭವೂ ಸಮಾಪ್ತಿಯೂ”*– 1:17. 14

**22:14** *“ಧನ್ಯರು”*– ಈ ಪದವು ಈ ಪುಸ್ತಕದಲ್ಲಿ ಎಂಟು ಸಾರಿ ಕಾಣಿಸಿಕೊಂಡಿದೆ – ಇಲ್ಲಿ, ವ.7; 1:3 (ಎರಡು ಸಾರಿ); 14:3; 16:15; 19:9; 20:6.

*“ಆತನ ಆಜ್ಞೆಗಳನ್ನು ಕೈಕೊಳ್ಳಿರಿ”*– 1 ಯೋಹಾನ 2:3-6; ಯಾಕೋಬ 2:14-26; ಅಪೊ 22:10 ಟಿಪ್ಪಣಿ ನೋಡಿರಿ. 15

**22:15** *“ಹೊರಗಿರುವರು”*– ಇದರ ಅರ್ಥ ಅವಕಾಶ ದೊರೆತರೆ ಜಾರಿಕೊಂಡು ಒಳಕ್ಕೆ ಹೋಗುವ ಆಶೆಯೊಂದಿಗೆ ಬಾಗಿಲಿನ ಹೊರಗೆ ಸುತ್ತಾಡುತ್ತಿರುವುದಲ್ಲ. ಈ ರೀತಿಯ ಜನರು

ಎಲ್ಲರುವರು ಎಂದು ನಮಗೆ ಈಗಾಗಲೇ ಹೇಳಲ್ಪಟ್ಟಿದೆ – 21:8.

*"ಜಾರರು"*– 21:8 ಟಿಪ್ಪಣಿ ರ ನೋಡಿರಿ. **16**

**22:16** *"ನನ್ನ ದೂತನು"*– 1:1.

*"ಬುಡದಿಂದ ಹುಟ್ಟಿದ ಚಿಗುರೂ"*– 5:5; ಮತ್ತಾಯ 1:1; ರೋಮಾ 1:3; ಯೆಶಾಯ 11:10; ಕೀರ್ತನೆ 110:1.

*"ಉದಯಸೂಚಕವಾದ ನಕ್ಷತ್ರ"*– 2:28; ಸಂಖ್ಯಾ 24:17. **17**

**22:17** ಸತ್ಯವೇದದಲ್ಲಿ ಇದು ಮಹತ್ವದ ಕಡೆಯ ಆಮಂತ್ರಣವಾಗಿದೆ, ಮತ್ತು ಸತ್ಯವೇದದ ಉದ್ದಕ್ಕೂ ದೇವರು ಕೊಟ್ಟಿರುವ ವಾಗ್ದಾನಗಳ ಜ್ಞಾಪಕಾರ್ಥವಾಗಿ ನಿಲ್ಲುತ್ತದೆ. ಆತನ ಬಳಿಗೆ ಬರಲು ದೇವರಾತ್ಮನು ಜನರನ್ನು ಕರೆಯುತ್ತಾನೆ. ಸಭೆ, ಕ್ರಿಸ್ತನ ಮದಲಗಿತ್ತಿಯು ಈ ಆಮಂತ್ರಣವನ್ನು ಪ್ರತಿದ್ವನಿಸುತ್ತಾಳೆ. ಅದನ್ನು ಕೇಳಿಸಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯು ಅದನ್ನು ಇತರರಿಗೆ ಪುನರಾವರ್ತಿಸಬೇಕು.

*"ಬಾಯಾರಿದವನು"*– ಯೆಶಾಯ 55:1; ಮತ್ತಾಯ 5:6.

*"ಇಷ್ಟವುಳ್ಳವನು"*– ಯೋಹಾನ 3:16,36; 7:37; 1 ತಿಮೊ 2:4; 2 ಪೇತ್ರ 3:9; ಯೆಶಾಯ 55:7; ಯೆಹೆಜ್ಕೇಲ 18:32.

*"ಜೀವಜಲ"*– ವ. 1; 21:26; ಯೋಹಾನ 4:14. ಈ ಜೀವಜಲವು ದೇವರು ತಾನೇ ಆಗಿದ್ದಾನೆ (ಯೆರೆ 2:13; 17:13). ಆತನ ಬಳಿಗೆ ಬರಬೇಕೆಂದು ಮತ್ತು ಆತನಿಂದ ಕುಡಿಯಬೇಕೆಂದು ಮತ್ತು ನಿತ್ಯಜೀವವನ್ನು ಹೊಂದಿಕೊಳ್ಳಬೇಕೆಂದು ಆತನು ಎಲ್ಲರನ್ನು ಆಮಂತ್ರಿಸುತ್ತಾನೆ.

*"ಉಚಿತವಾಗಿ"*– ರೋಮಾ 5:16-17; 6:23; ಎಫೆ 2:8-9. **18-19**

**22:18-19** ಸತ್ಯವೇದದಲ್ಲಿ ಇದು ಬಹಳ ತೀವ್ರವಾದ ಕಡೆಯ ಎಚ್ಚರಿಕೆ. ಈ ಪುಸ್ತಕವು ಎಷ್ಟು ಮುಖ್ಯವೆಂದು ನೋಡಿರಿ. ಇಲ್ಲಿ ಪದಗಳಿಗೆ ಹೆಚ್ಚು ಒತ್ತು ಕೊಡಲಾಗಿದೆ. ಅವುಗಳಲ್ಲಿ ಯಾವುದನ್ನಾದರೂ ಉದ್ದೇಶಪೂರ್ವಕವಾಗಿ ಸೇರಿಸುವುದು ಅಥವಾ ತೆಗೆದು ಹಾಕುವುದು ದೇವರು ಪ್ರಕಟಿಸಿದ ಸತ್ಯವನ್ನು ವಿರೂಪಗೊಳಿಸುವ ಪ್ರಯತ್ನವಾಗುತ್ತದೆ. ಧರ್ಮೋ 12:32; ಜ್ಞಾನೋ 30:6 ಹೋಲಿಸಿರಿ. ಖಂಡಿತವಾಗಿಯೂ, ಇದು ಬೇಕೆಂದು ಪಾಪಮಾಡುವುದನ್ನು

ಸೂಚಿಸುತ್ತದೆ, ತಪ್ಪುಗಳನ್ನು ನಕಲುಮಾಡುವುದು ಅಥವಾ ತಪ್ಪುಗಳನ್ನು ಮುದ್ರಿಸುವುದಕ್ಕಲ್ಲ, ಯಾಕಂದರೆ ಈ ಪದಗಳು ಬಹಳ ಮುಖ್ಯವಾದವುಗಳಾಗಿವೆ. ಧರ್ಮೋ 4:2; 12:32; ಕೀರ್ತನೆ 12:6; 119:160; ಜ್ಞಾನೋ 30:6; ಯೆರೆ 1:9; 15:16 ಹೋಲಿಸಿರಿ. ದೇವರ ವಾಕ್ಯದ ಹೊಸ ಭಾಷಾಂತರಗಳನ್ನು ಮಾಡಬಹುದು, ಭಾಷೆಗಳು ಮತ್ತು ಬರೆಯುವ ಶೈಲಿಗಳು ಬದಲಾದಂತೆ ಮಾಡಬೇಕು, ಆದರೆ ಮೇಲಿನಿಂದ ನಮಗೆ ಬಂದ ಗ್ರೀಕ್ ಮತ್ತು ಇಬ್ರಿಯ ಭಾಷೆಗಳ ಹಸ್ತಪ್ರತಿಗಳ ಪದಗಳನ್ನು ತೆಗೆಯುವುಕ್ಕೆ ಅಥವಾ ಸೇರಿಸುವುದಕ್ಕೆ ಯಾರೂ ಪ್ರಯತ್ನಿಸಬಾರದು. ಯಾವುದೇ ನಿಜವಾದ ವಿಶ್ವಾಸಿಯು ಇವುಗಳೊಂದಿಗೆ ಅನಗತ್ಯವಾಗಿ ಕೈಹಾಕುವುದನ್ನು ತಪ್ಪಿಸಲು ಈ ಪ್ರೇರಿತವಾದ ಎಚ್ಚರಿಕೆಯು ಖಂಡಿತವಾಗಿಯೂ ಸಾಕಾಗುತ್ತದೆ. 20

**22:20** ಇದು ಸತ್ಯವೇದದ ಕಡೆಯ ತತ್ವವಾಗಿದೆ. ಈ ಬೋಧನೆಯನ್ನು ಹೊಸ ಒಡಂಬಡಿಕೆಯ 25 ವಚನಗಳ ಒಂದು ವಚನದಲ್ಲಿ ಇದನ್ನು ಉಲ್ಲೇಖಿಸಲಾಗಿದೆ. ಯೇಸುವು ವಯಕ್ತಿಕವಾಗಿ, ಕಾಣುವ ಹಾಗೆ, ಜಯವೀರನಾಗಿ ಮತ್ತು ಇದ್ದಕ್ಕಿಂದ್ದಂತೆ ಬುರುತ್ತಾನೆ. ಆತನ ಬರುವಿಕೆಯ ಶೀಘ್ರತೆ ಮತ್ತು ವೇಗವನ್ನು ಕೊನೆಯ ಅಧ್ಯಾಯದಲ್ಲಿ 3 ಸಾರಿ ಕಲಿಸಲಾಗಿದೆ.

*"ಕರ್ತನಾದ ಯೇಸುವೇ, ಬಾ"*– ಸತ್ಯವೇದದ ಈ ಕಡೆಯ ಪ್ರಾರ್ಥನೆಯು ಮೊದಲಿನಿಂದ ಇಲ್ಲಿಯವರೆಗೆ ಆತನ ಸಭೆಯ ಬಯಕೆಯ ಭಾವವಾಗಿದೆ. ನಮ್ಮ ಎಲ್ಲಾ ನಿರೀಕ್ಷೆಯು ಆತನಲ್ಲಿದೆ. ಆತನ ಮಹಿಮೆಯನ್ನು ನಾವು ನೋಡಲು ಬಯಸುತ್ತೇವೆ. 21

**22:21** ಸತ್ಯವೇದವು ಬೋಧಿಸುವ ಎಲ್ಲಾ ವಿಷಯಗಳಿಗೂ ಇದು ಸತ್ಯವೇದದ ಸರಿಯಾದ ಕೊನೆಯ ಆಶೀರ್ವಾದದ ಮುಕ್ತಾಯವಾಗಿದೆ. ಕರ್ತನಾದ ಯೇಸುವಿನ ಕೃಪೆಯು ಪಾಪ ಮತ್ತು ಮರಣವನ್ನು ಜಯಗಳಿಸುವಂತದ್ದಾಗಿದೆ ಮತ್ತು ಇದು ಮಾತ್ರವೇ ಜನರನ್ನು ದೇವರ ಜನರನ್ನಾಗಿ ಮಾಡಲು ಮತ್ತು ದೇವರು ಮಾಡಿದ ಎಲ್ಲಾ ವಾಗ್ದನಗಳಿಗೂ ಬಾಧ್ಯರಾಗುವಂತೆ ಅವರನ್ನು ಸಾಧ್ಯವಾಗಮಾಡುತ್ತದೆ.

*"ಆಮೆನ್"*– 1:6. ಮತ್ತು ಇಲ್ಲಿಗೆ ಸತ್ಯವೇದವು ಮುಕ್ತಾಯವಾಗುತ್ತದೆ. ಹಾಗೆಯೇ ಆಗಲಿ. ಪ್ರತಿಯೊಂದು ಪುಸ್ತಕ ಮತ್ತು ಪ್ರತಿಯೊಂದು ಪದ ಮತ್ತು ಪ್ರತಿಯೊಂದು ಲವಲೇಶ ಮತ್ತು ಶಿರೋನಾಮೆಗಳಿಗೆ, ನಾವೆಲ್ಲರೂ "ಆಮೆನ್" ಎಂದು ಹೇಳಬೇಕು. ದೇವರು ಹೇಳಿರುವ ಎಲ್ಲಾ ವಿಷಯಗಳಿಗೆ ತನ್ನ ಹೃದಯದಾಳದಿಂದ "ಆಮೆನ್" ಎಂದು ಹೇಳುವ ಮನುಷ್ಯನು ಧನ್ಯನು.